॥ ಶ್ರೀಃ ಹರಿಃ ಓಂ ॥

॥ ಶ್ರೀ ಗರುಡವಾಹನ ಲಕ್ಷ್ಮೀನಾರಸಿಂಹಾಯ ನಮಃ ॥

# ಗುಣತಾರತಮ್ಯಸಂಧಿ ಪ್ರಾರಂಭ

## (ಸಂಧಿ-೨೦)

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮ ಭಗವದ್ಭಕ್ತರಿದನಾದರದಿ ಕೇಳುವುದು ॥ಪ॥

## ಪದ್ಯ-೧

**ಮೂಲ :–**

ಶ್ರೀಧರಾ ದುರ್ಗಾಮನೋರಮ ।
ವೇಧಮುಖ ಸುಮನಸಗಣ ಸಮಾ ।
ರಾಧಿತ ಪದಾಂಭೋಜ ಜಗದಂತರ್ಬಹಿರ್ವ್ಯಾಪ್ತ ॥
ಗೋಧರ ಫಣಿವರಾತಪತ್ರ ನಿ ।
ಷೇಧದೂರ ವಿಚಿತ್ರಕರ್ಮ ಸು ।
ಬೋಧ ಸುಖಮಯಗಾತ್ರ ಪರಮಪವಿತ್ರ ಸುಚರಿತ್ರ ॥ ॥೧॥

**ಅವತರಣಿಕೆ :–**

ಶ್ರೀ–ಭೂ–ದುರ್ಗಾ–ಎಂಬ ರೂಪತ್ರಯಯುಕ್ತರಾದ ಶ್ರೀಲಕ್ಷ್ಮೀ ದೇವಿ, ಬ್ರಹ್ಮದೇವರೇ ಮೊದಲಾದ ದೇವತಾವರ್ಗದಿಂದ ಆರಾಧಿತ

ಪಾದ ಪದ್ಮನಾದ ಶ್ರೀಪರಮಾತ್ಮನು, ಈ ಜಗತ್ತಿನಲ್ಲಿ ಸರ್ವತ್ರವ್ಯಾಪ್ತನಾಗಿದ್ದು, ಭೂಧರನಾದ ಶೇಷದೇವರನ್ನೇ ತನ್ನ ಛತ್ರಿಯನ್ನಾಗಿ ಉಳ್ಳ, ಸರ್ವದೋಷ ವಿದೂರನಾದ ಜ್ಞಾನಾನಂದಮಯನು, ಪರಮಪವಿತ್ರನೆಂದು ತಿಳಿಸುತ್ತಾ, ಪ್ರಸಕ್ತ ಸಂಧಿಗತ **ಗುಣತಾರತಮ್ಯ** ವಿಷಯವನ್ನು ಉಪಕ್ರಮಿಸುತ್ತಾರೆ. ॥೧॥

**ಪ್ರತಿಪದಾರ್ಥ :–**

**ಶ್ರೀ** = ಶ್ರೀದೇವಿ, **ಧರಾ** = ಭೂದೇವಿ, **ದುರ್ಗಾ** = ದುರ್ಗಾದೇವಿ, **ಮನೋರಮ** = ಈ ರೂಪತ್ರಯಗಳಿಂದ ಯುಕ್ತರಾದ ಶ್ರೀ ಲಕ್ಷ್ಮೀದೇವಿಯರ ಮನಸ್ಸಿಗೆ ಆನಂದಪ್ರದನಾದ, **ವೇಧ** = ಬ್ರಹ್ಮದೇವರು, **ಮುಖ** = ಆದಿಯಾಗಿ, **ಸುಮನಸಗಣ** = ದೇವತಾವರ್ಗದಿಂದ, **ಸಮಾರಾಧಿತ** = ಚೆನ್ನಾಗಿ ಪೂಜಿಸಲ್ಪಟ್ಟ, **ಪದಾಂಭೋಜ** = ಪಾದ ಕಮಲಗಳುಳ್ಳ (ಪದ + ಅಂಭೋಜ), **ಜಗದಂತರ್ಬಹಿರ್ವ್ಯಾಪ್ತ** = ಬ್ರಹ್ಮಾಂಡದಲ್ಲಿ ಒಳಗೂ ಹೊರಗೂ ಸರ್ವತ್ರವ್ಯಾಪ್ತನಾಗಿರುವ, **ಗೋಧರ** = ಭೂಮಿಯನ್ನು ಶಿರದಲ್ಲಿ ಧರಿಸಿರುವ, **ಫಣಿವರ** = ಸರ್ವಶ್ರೇಷ್ಠರಾದ ಶ್ರೀಶೇಷದೇವರೇ, **ಆತಪತ್ರ** = ಛತ್ರಿಯನ್ನಾಗಿ ಉಳ್ಳ, **ನಿಷೇಧದೂರ** = ಸರ್ವದೋಷರಹಿತನಾದ, (ವಿಧಿ ನಿಯಮಾತೀತನಾದ), **ವಿಚಿತ್ರಕರ್ಮ** = ಲೋಕವನ್ನೇ ಆಶ್ಚರ್ಯಗೊಳಿಸುವ ವ್ಯಾಪಾರವಿಶೇಷಗಳುಳ್ಳ, **ಸುಬೋಧ** = ನಿರ್ದೋಷವಾದ ಜ್ಞಾನ, **ಸುಖ** = ಆನಂದ, **ಮಯಗಾತ್ರ** = ಇವುಗಳನ್ನೇ ಸ್ವರೂಪವನ್ನಾಗಿ ಉಳ್ಳ (ಜ್ಞಾನಾನಂದಸ್ವರೂಪನಾದ), **ಪರಮಪವಿತ್ರ** = ಅತ್ಯಂತ ಪವಿತ್ರವಸ್ತುವಾದ (ಗುಣಪೂರ್ಣ ಹಾಗೂ ದೋಷವಿದೂರ), **ಸುಚರಿತ್ರ** = ಮನೋಹರವಾದ ಚರಿತ್ರೆಯುಳ್ಳವನು– ಶ್ರೀಪರಮಾತ್ಮನೆಂದು ಸ್ತೋತ್ರ ಮಾಡುತ್ತಾರೆ. ॥೧॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಅವತಾರಿಕಾ :– ಗುಣಪೂರ್ಣನಾದ ಪರಮಾತ್ಮನ್ನ ಸರ್ವೋತ್ತಮೋತ್ತಮ– ಎಂತ ತಿಳಿದು ಉಪಾಸನ ಮಾಡಿದರೆ, ಕರ್ಮವಿಮೋಚನ ಆಗತದೆ– ಎಂತ ಹಿಂದಿನ ಸಂಧಿಯಲ್ಲಿ ಹೇಳಿದರು. ಸರ್ವೋತ್ತಮತ್ವ ಹ್ಯಾಂಗೆಂದರೆ- ಅದಕ್ಕಾಗಿ ಪರಮಾತ್ಮನಲ್ಲಿ ವಿದ್ಯಮಾನವಾದ ಗುಣಗಳಿಗೂ ತದನ್ಯರಲ್ಲಿ ವಿದ್ಯಮಾನವಾದ ಗುಣಗಳಿಗೂ ತಾರತಮ್ಯ ಹೇಳೋಣವಲ್ಲದೆ, ಶ್ರೀದೇವೇರಾರಭ್ಯ ತೃಣಜಡಗಳ ಪರಿಯಂತ ತಾರತಮ್ಯ ತಿಳೀಬೇಕೆಂತಲೂ-

**ಸರ್ವೇಷಾಂ ಚ ಹರಿರ್ನಿತ್ಯಂ ನಿಯಂತಾ ತದ್ವಶಾ ಪರೇ ।**
**ತಾರತಮ್ಯಂ ತತೋ ಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ ।**
**ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ ಕಥಂಚನ ॥**

–ಎಂತ ಭಾರತತಾತ್ಪರ್ಯನಿರ್ಣಯ ಪ್ರಥಮಾಧ್ಯಾಯೋಕ್ತ ಪ್ರಕಾರ ಗುಣ– ಪೂರ್ಣನಾದ ಶ್ರೀಪರಮಾತ್ಮನ ಆರಂಭಿಸಿ, ಯಾವತ್ತೂ ವಿಷ್ಣುಭಕ್ತರಾದ ದೇವತೆಗಳ ಗುಣತಾರತಮ್ಯವನ್ನೂ, ಶ್ರೀಪರಮಾತ್ಮ ಎಂಥಾವನೆಂದೂ ಹೇಳತಾರೆ.

ಟೀಕಾ :– ಶ್ರೀದೇವೇರು, ಭೂದೇವೇರು, ದುರ್ಗಾದೇವೇರು-ಈ ಮೂರು ಲಕ್ಷ್ಮೀರೂಪಗಳಿಗೆ, ಇನ್ನೂ ಅನೇಕವಾದ ಲಕ್ಷ್ಮೀ ಅಂಶರೂಪಗಳಿಗೆ ಮನೋಹರುಷಕನಾದವ. ಸರ್ವಜೀವೋತ್ತಮರಾದ ಮುಖ್ಯರಾದ ಬ್ರಹ್ಮದೇವರು, ತದನ್ಯರಾದ ದೇವತೆಗಳ ಸಮೂಹದಿಂದ ಚಂದಾಗಿ ಆರಾಧಿತವಾದ ಪಾದಕಮಲಗಳುಳ್ಳವ. ನಿರ್ಲಿಪ್ತನಾಗಿ ಜಗತ್ತಿನಲ್ಲಿ ಅಂತರ್ಬಹಿರ್ವ್ಯಾಪ್ತನಾಗಿರತಕ್ಕವ. ಭೂಮಿಯನ್ನು ಶಿರದಲ್ಲಿ ಧರಿಸಿದ ಸರ್ವಶ್ರೇಷ್ಠ

ರಾದ ಶೇಷದೇವರೇ ಛತ್ರಿಯಾಗಿ ಉಳ್ಳವ. ನಿಷದ್ಧಸ್ವರೂಪರಾದ ದೈತ್ಯರಿಗೆ ಹೃದಯಾಕಾಶದಲ್ಲಿ ಪ್ರತ್ಯಕ್ಷನಾಗದೆ ದೂರನಾಗಿರತಕ್ಕವ. ಅವತಾರಗಳ ಮಾಡಿ ಮಾನುಷಾದಿವತ್ ಪ್ರದರ್ಶನನಾಗಿ ಲೋಕವನ್ನು ಆಶ್ಚರ್ಯಗೊಳಿಸತಕ್ಕ ಕರ್ಮರೂಪವಾದ ವ್ಯಾಪಾರಗಳ ಮಾಡಿದವ. ನಿರ್ದೋಷವಾದ ಜ್ಞಾನವೇನು, ಆನಂದವೇನು, ಈ ಎರಡು ಪ್ರಾಚುರ್ಯವಾದ ತನ್ಮಯುವಾದ ಶರೀರವುಳ್ಳವ. ಅತ್ಯಂತ ಶ್ರೇಷ್ಠರಾದ ಮುಕ್ತಿಯೋಗ್ಯರ ದೋಷಗಳನ್ನ ದೂರ ಮಾಡಿ ಪವಿತ್ರರನ್ನಾಗಿ ಮಾಡಿದವ. ಸಮೀಚೀನವಾದ ಮನೋಹರವಾದ ಚರಿತ್ರೆಗಳುಳ್ಳವ, ಶ್ರೀಪರಮಾತ್ಮನೆಂದು ತಾತ್ಪರ್ಯ.

**ವಿಶೇಷಾರ್ಥ :–**

ಶ್ರೀದೇವೇರಿಗೆ ಪತಿಯಾದ ವಿಷ್ಣುರೂಪದಿಂದಲೂ, ಭೂದೇವೇರಿಗೆ ಪತಿಯಾದ ಬ್ರಹ್ಮರೂಪದಿಂದಲೂ, ದುರ್ಗಾದೇವೇರಿಗೆ ಪತಿಯಾದ ರುದ್ರರೂಪದಿಂದಲೂ ಹರುಷ ಕೊಡತಾನೆ. ಮತ್ತು ವಿಷ್ಣುರೂಪದಿಂದ ಜಗತ್ಸೃಷ್ಟಿ ಮಾಡತಾನೆ. ವೇದಮುಖ ಸುಮನಸಗಣ ಸಮಾರಾಧಿತ ಪದಾಂಭೋಜ ಎಂದರೆ, ಜೀವೋತ್ತಮರಾದ ಬ್ರಹ್ಮದೇವರು ಎಂತ ಅರ್ಥ. ಮತ್ತು ಬ್ರಹ್ಮದೇವರೇ ಮೊದಲಾದ ಸುಮಸರೆಂಬ ದೇವತೆಗಳು– ಎಂತಲೂ ಅರ್ಥ. ಮತ್ತು ಸಮನಸ ಎಂದರೆ, ಸು – ಸಮೀಚೀನವಾದ, ಮನಸ– ಮನಸ್ಸಿನಿಂದ ಯುಕ್ತರಾದ (ಭೇದಜ್ಞಾನ ಸ್ವರೂಪದಲ್ಲಿವುಳ್ಳ ಯಾವತ್ತೂ ಮುಕ್ತಿಯೋಗ್ಯರನ್ನು ಗ್ರಹಣ ಮಾಡಬೇಕು), ಗಣ ಎಂದರೆ, ಈ ಯಾವತ್ತೂ ಮುಕ್ತಿಯೋಗ್ಯರ ಸಮೂಹದಿಂದ ಚಂದಾಗಿ ಧ್ಯಾನ ಪೂಜಾದಿಗಳು ಮಾಡಿಸಿಕೊಳ್ಳಲ್ಪಟ್ಟ ಪದಾಂಭೋಜ–ಪಾದಗಳೆಂಬ ಕಮಲಗಳುಳ್ಳವ. ಎಂದರೆ, ಮನೋರಮತ್ವ ಮುಕ್ತಿಯೋಗ್ಯರಿಗೇನು, ಆರಾಧಕತ್ವ ರಮಾದೇವೇರಿಗೇನು ಇಲ್ಲವೆ-ಎಂದರೆ ಉಭಯರಿಗೂ ಉಭಯವೂ ಉಂಟು. ಅದರಲ್ಲಿ ಕ್ರಮ ಪ್ರತ್ಯೇಕ. ದಾವದೆಂದರೆ, ರಮಾದೇವೇರಿಗೆ ತ್ರಿಗುಣಬಂಧವಿಲ್ಲದ ಕಾರಣ, ಸದಾ ಸರ್ವಕಾಲವೂ ಸ್ವರೂಪಸಂಬಂಧವಾದ ಹರುಷವನ್ನು

ವ್ಯಕ್ತ್ಯಮಾಡಿಕೊಡತಕ್ಕವ. ಈಕಿಗೆ ಪರಮಾತ್ಮ ಆರಾಧನೆ ಮಾಡಿ ಬಂಧ ನಿವೃತ್ತಿ ಮಾಡಿಕೊಂಡು ಸ್ವರೂಪಸುಖವ್ಯಕ್ತಿ ಎಂಬುದು ಇಲ್ಲವಾದ್ದರಿಂದ, ಆರಾಧನಿಶಬ್ದ ರಮಾದೇವೇರಿಗೆ ಪ್ರಯೋಗವಿಲ್ಲ. ಬ್ರಹ್ಮಾದಿ ತೃಣಾಂತ ವರಿಗೂ ಆರಾಧನಿ ಮಾಡಿಸಿಕೊಂಡು, ಲಿಂಗಭಂಗಾನಂತರದಲ್ಲಿ ಸ್ವರೂಪ ಸಂಬಂಧಹರುಷವನ್ನ ಕೊಡುವನಾಗತಾನೆ. ಆದ್ದರಿಂದ **ಮನೋರಮ** ಶಬ್ದ ಬ್ರಹ್ಮದೇವರಿಗೆ ಪ್ರಯೋಗವಿಲ್ಲ. ಇದು ಕಾರಣ, ಉಭಯರಿಗೂ ಆರಾಧನಿಯೂ ಮನೋರಮತ್ವವೂ ಉಂಟು. ಅದರಲ್ಲಿ ಮುಕ್ತ್ಯನಂತರ ಸದಾ ಸರ್ವಕಾಲದಲ್ಲಿ ಬ್ರಹ್ಮಾದಿಗಳಿಗೆ ಉಂಟು. ರಮಾದೇವೇರಿಗೆ ಈ ನೇಮ ಎಂಬುದು ಇಲ್ಲ. ನಿತ್ಯಮುಕ್ತರಾದ ಕಡಿಯಿಂದ ರಮಾದೇವೇರಿಗೆ ಹರುಷ ಕೊಡತಕ್ಕವ– ಎಂಬೋಣದರಿಂದ ರಮಾದೇವೇರಿಗೆ ಅಸ್ವತಂತ್ರವೂ, ಪರಮಾತ್ಮಗೆ ಸ್ವತಂತ್ರವೂ ಸಿದ್ಧಿಸೋದಾಯಿತು. ಆದ್ದರಿಂದ ಪರಮಾತ್ಮ ಲಕ್ಷ್ಮೀದೇವೇರಿಗಿಂತಲೂ ಉತ್ತಮ ಎಂತಲೂ, ರಮಾದೇವೇರು ಅವರರು- ಎಂತಲೂ ತಾರತಮ್ಯ ಸಿದ್ಧಿಸೋದಾಯಿತು. ಮತ್ತು ಬ್ರಹ್ಮಾದಿಗಳು ಬಂಧನಿವೃತ್ತಿ ಉದ್ದಿಶ್ಯ ಪರಮಾತ್ಮನ್ನ ಆರಾಧನಿ ಮಾಡತಾರೆ. ರಮಾ ದೇವೇರು ಅಂಥಾ ಬಂಧ ನಿವೃತ್ತಿಗಾಗಿ ಆರಾಧನಿ ಮಾಡೋದಿಲ್ಲ. ಆಕಿಗೆ ಬಂಧವೂ ಇಲ್ಲ. ಅಂದಮ್ಯಾಲೇ ರಮಾದೇವೇರಿಗೂ ಬ್ರಹ್ಮಾದಿಗಳಿಗೂ ತಾರ ತಮ್ಯ ಸಿದ್ಧಿಸಿ, ರಮಾದೇವೇರು ಉತ್ತಮ ಎಂತಲೂ, ತದ್ಯರು ಅವರರು, ಎಂತಲೂ ತಾರತಮ್ಯ ಸಿದ್ಧಿಸೋದಾಯಿತು. ಮತ್ತು ಪರಮಾತ್ಮನ ವ್ಯಾಪ್ತಿ ಎಂಥಾದ್ದೆಂದರೆ, ಚರಾಚರ ಯಾವತ್ತೂ ಜಗತ್ತಿನಲ್ಲಿ ಒಳಗೂ ಹೊರಗೂ ವ್ಯಾಪ್ತನಾದವ. ಇಂಥಾ ವ್ಯಾಪ್ತಿ ರಮಾದೇವೇರಿಗೂ ಉಂಟು. ಪರಮಾತ್ಮ ನಲ್ಲಿ ಏನು ವೈಶಿಷ್ಟ್ಯವೆಂದರೆ-ಪರಮಾತ್ಮನರೂಪಗಳು ಅಣುರೂಪ ಒಂದು, ಮಹದ್ರೂಪ ಒಂದು–ಇವೆರಡರಿಂದ ವ್ಯಾಪ್ತನಾಗಿದ್ದಾನೆ. ಜಗದಂತರ್ಗತ ರೂಪ ಅಣುರೂಪ, ಬ್ರಹ್ಮಾಂಡದ ಹೊರಗಿನ ರೂಪ ಮಹದ್ರೂಪ. ಅಂತೂ ಎರಡು ರೂಪಗಳು ಈ ಎರಡು ಸ್ಥಳಗಳಲ್ಲಿ ರಮಾದೇವೇರ ವ್ಯಾಪ್ತಿ ಇಲ್ಲ. ತದ್ವ್ಯತಿರಿಕ್ತ ಸ್ಥಳಗಳಲ್ಲಿ ರಮಾದೇವೇರ ವ್ಯಾಪ್ತಿ ಉಂಟು. ಹ್ಯಾಂಗೆಂದ್ದರೆ, ಸರ್ವಜೀವಾಂತರ್ಗತರಾಗಿ ರಮಾದೇವೇರು ಅವಿಯೋಗಿ

ನಿಯರಾಗಿ ಅಣುರೂಪರಾಗಿ ಇದ್ದಾರೆ. ಅಣುರೂಪರಾದ ರಮಾದೇವೇರಿಗೆ ತದಪೇಕ್ಷಯಾ ಅಣುರೂಪದಿಂದ ಪರಮಾತ್ಮ ನಿಯಾಮಕನಾಗಿ ಬಿಂಬನಾಗಿ ಇದ್ದಾನೆ. ರಮಾದೇವೇರಿಗೆ ತಮ್ಮ ಅಣುರೂಪಕ್ಕೆ ಬಿಂಬನಾದ ಪರಮಾತ್ಮ ನಲ್ಲಿ ವ್ಯಾಪ್ತಿ ಇಲ್ಲ. ತದ್ವತ್ ಬ್ರಹ್ಮಾಂಡನಮಾವರಣ ದಾಟಿ ಆದರ ಆ ಬೇಲಿ ಕೂಡಾ ರಮಾದೇವೇರು ಸ್ಥೂಲರೂಪದಿಂದ ವ್ಯಾಪ್ತರಾಗಿ ಇದ್ದಾರೆ. ಆ ಸ್ಥೂಲರೂಪಕ್ಕೆ ಬಿಂಬನಾದ ಸ್ಥೂಲರೂಪಿ ಪರಮಾತ್ಮ ಸ್ಥೂಲಾಕಾರ ದಿಂದ ಬಿಂಬನಾಗಿ ನಿಯಾಮಕನಾಗಿದ್ದಾನೆ. ಆದ್ದರಿಂದ ಈ ಸ್ಥೂಲದಲ್ಲಿ ರಮಾದೇವೇರ ವ್ಯಾಪ್ತಿ ಇಲ್ಲ. ಆತ ಏವ ಅಂತರ್ಬಹಿರ್ವ್ಯಾಪ್ತಿ ಪರಮಾತ್ಮಗೆ ಎಂಬ ವಿಶೇಷಣ ಪ್ರಯೋಗವು. ಆದರೆ ರಮಾದೇವೇರು ನಿತ್ಯಾವಿಯೋಗಿನಿ ಎಂತ ಹೇಳತಕ್ಕ ಪ್ರಮಾಣಕ್ಕೆ ಗತಿ ಏನು ಅಂದರೆ, ಪರಮಾತ್ಮನ್ನ ಬಿಟ್ಟು ಇರೋದಿಲ್ಲ- ಎಂತ ಪ್ರಮಾಣ ಹೇಳತದೇ ಹೊರ್ತು, ಅಪರಿಚ್ಛಿನ್ನವ್ಯಾಪ್ತ ನಾದ ಪರಮಾತ್ಮಗೆ ಸದೃಶರಾಗಿ ಅಪರಿಚ್ಛಿನ್ನವ್ಯಾಪ್ತರು ಅಂತ ಹೇಳಲಿಲ್ಲ. ಗುಣತಃ ಅಸಮಳು, ಅಂತ ಹೇಳಿದ ಮ್ಯಾಲೆ, ರಮಾವ್ಯಾಪ್ತಿ ಇಲ್ಲದಂಥಾ ಗುಣವುಳ್ಳವ ಎಂತಲೇ ಸಿದ್ಧಿಸೋದಾಗತದೆ. ಗುಣ ಹೇಳಿದ ಕಡಿ ರೂಪ ಗಳು, ರೂಪ ಹೇಳಿದ ಕಡಿ ದೇಶ, ದೇಶ ಹೇಳಿದ ಕಡಿ ಕಾಲ, ಇಷ್ಟು ಹೇಳಿದ ಕಡಿ ಅವನ ಗುಣದ ಕಾರ್ಯ ಹೇಳಬೇಕು. ಆದ್ದರಿಂದ ಪರಮಾತ್ಮ ಅನ್ಯ ಪ್ರವೇಶ ಇಲ್ಲದ, **ಸ್ವಾಖ್ಯಪ್ರದೇಶ** ಉಳ್ಳವ- ಎಂತ ತಾತ್ಪರ್ಯ. ಆತ ಏವ, ಅಂಥಾವ್ಯಾಪ್ತಿ ರಮಾದೇವೇರಿಗೆ ಇಲ್ಲ ಎಂತ ತಾತ್ಪರ್ಯವು. ಮತ್ತು ನಿರ್ಲಿಪ್ತ ಎಂದರೆ, ರಮಾದೇವೇರು ಆರಂಭ ಮಾಡಿ ತ್ರಿವಿಧಜೀವರು ಪರಮಾತ್ಮನಿಂದ ಲಿಪ್ತರು ಎಂದರೆ, ಪರಮಾತ್ಮನ್ನ ಹೊಂದಿದವರು, ಪರಮಾತ್ಮನಾದರೋ ದಾರಿಂದಲೂ ಲಿಪ್ತನಲ್ಲ ಎಂತ-ತಾತ್ಪರ್ಯ. ಗೋಧರ ಫಣಿವರಾತಪತ್ರ, ಎಂದರೆ ಗೋ ಎಂದರೆ ಭೂಮಿ, ಭೂಮಿಧರಾ ಎಂದರೆ– ಪರ್ವತ. ಭೂಮಿ ಧರಿಸಿರುವ ಪರ್ವತ ಗೋವರ್ಧನ ಪರ್ವತ. ಇಂಥಾ ಗೋವರ್ಧನಪರ್ವತವನ್ನು, ಫಣಿವರ ಸರ್ಪಶ್ರೇಷ್ಠರಾದ ಶೇಷ ದೇವರು, ಛತ್ರಿಯಾಗಿದ್ದೋಪಾದಿಯಲ್ಲಿ, ಗೋವರ್ಧನಪರ್ವತವನ್ನು ಛತ್ರಿಯಾಗಿ

ಮಾಡಿಕೊಂಡು, ಗೋ ಗೋಪರನು ಕಾಯಿದವನೆಂತ ತಾತ್ಪರ್ಯ. ಮತ್ತು ಭೂಮಿಯನ್ನು ಶಿರದಲ್ಲಿ ಧರಿಸಿದ ಶೇಷದೇವರೇ ಛತ್ರಿಯಾಗುಳ್ಳವ-ಎಂತಲೂ ತಾತ್ಪರ್ಯವೇ. ಗೋವರ್ಧನಪರ್ವತವನ್ನು ಛತ್ರಿಯಾಗಿ ಮಾಡಿ,ತನ್ನ ನಂಬಿದ ಗೋ ಗೋಪರನ್ನ ಹ್ಯಾಂಗೆ ರಕ್ಷಣೆ ಮಾಡಿದನೋ, ತದ್ವತ್, ನಂಬಿದವರ ರಕ್ಷಣೆ ಮಾಡತಕ್ಕವ-ಎಂತಲೂ ತಾತ್ಪರ್ಯವೇ. ದೇವರು ರಕ್ಷಿಸಬೇಕೆಂದರೆ ಕೆಡಸತಕ್ಕವರ ದಾರೂ ಕಾಣೆ. ಹಾಂಗೆ ಕೆಡಿಸಬೇಕೆಂದರೆ ರಕ್ಷಿಸತಕ್ಕವರೂ ದಾರೂ ಕಾಣೆ. ಪರಮಾತ್ಮ ಇಂಥಾ ಸರ್ವೋತ್ತಮನಾದವ. ತನ್ನ ಭಕ್ತರ ನಿಷೇಧ ಎಂದರೆ, ದೋಷಗಳನ್ನು ದೂರದಲ್ಲಿ ಓಡಿಸತಕ್ಕವ. ಮತ್ತು ನಿಷೇಧ್ಯರಾದ ದೈತ್ಯರಿಗೆ ದೂರನಾದವ. ಇಂದ್ರದೇವರು ವರ್ಷ ಸುರಿಸಿದ ದೋಷ ನಿಷೇಧಮಾಡಿ ದೂರ ಮಾಡಿದ್ದೇ ಸಾಕ್ಷಿ. ಪವಿತ್ರಕರ್ಮ- ಎಂದರೆ, ಪಾಪ ರೂಪವಾದ ಲಿಂಗಭಂಗವಾಗಿ ಪವಿತ್ರನಾಗಬೇಕಾದರೆ ಭಕ್ತಿಪೂರ್ವಕವಾಗಿ ಪರಮಾತ್ಮನ ನಾಮೋಚ್ಚಾರಣ ಕರ್ಮವೇ ಪವಿತ್ರಕರ್ಮ– ಎಂತ ತಾತ್ಪರ್ಯ. ಸೂಬೋಧ ಎಂದರೆ, ಸಮೀಚೀನವಾದ ಜ್ಞಾನದಿಂದ ಬೋಧ– ಎಂದರೆ ಮನಸ್ಸಿಗೆ ಬೋಧನಾಗತಕ್ಕವ. ಸುಖಪ್ರಾಚುರ್ಯದಿಂದ ಸ್ವರೂಪದೇಹವುಳ್ಳವರು ಮುಕ್ತಿಯೋಗ್ಯರೇವೇ. ಅತ್ಯಂತ, ಪವಿತ್ರಗಳಾದ, ನಿರ್ದೋಷಗಳಾದ ಪರಮಾತ್ಮನ ವ್ಯಾಪಾರ ಚರಿತ್ರೆಗಳ ಕೊಂಡಾಡಿ, ಸದ್ಗತಿ ಐದತಾನೆ. ತದನ್ಯರಿಗೆ ಈ ಭಾಗ್ಯವಿಲ್ಲ. ಆದ್ದರಿಂದ ಇಂಥಾ ಮಹಿಮೋಪೇತನಾದ ಪರಮಾತ್ಮ ಇವನೊಬ್ಬನೇ ಹೊರ್ತು,ಅನ್ಯರು ದಾರೂ ಇಲ್ಲ. ಅತ ಏವ,ವಿಷ್ಣು ಸರ್ವೋತ್ತಮನೆಂದು ತಿಳಿಯಬೇಕು. ಮ್ಯಾಲಿನ ವಿಶೇಷಣಪದ ಪರಮಾತ್ಮಗೂ ಸಮನ್ವಯ ಮಾಡಿಕೋಬೇಕು. ॥೧॥

**೨. ಭಾವಪ್ರಕಾಶಿಕೆ: –**

ಶ್ರೀ–ಭೂ–ದುರ್ಗಾ–ಎಂಬ ಮೂರು ರೂಪಗಳಿಂದ ಕೂಡಿದ ರಮಾದೇವಿಯರಿಗೆ ಪತಿಯಾದವನು. ಬ್ರಹ್ಮಾದಿ ದೇವತಾಗಣದಿಂದ ಚೆನ್ನಾಗಿ ಪೂಜಿತವಾದ ಪಾದಕಮಲಗಳುಳ್ಳವನು. ಜಗತ್ತಿನ ಒಳಗೂ ಹೊರಗೂ

ಸಹ **ವ್ಯಾಪ್ತ**ನಾಗಿರುವವನು. ಸಹಸ್ರ ಹೆಡೆಗಳ ಮಧ್ಯದಲ್ಲಿ ಒಂದು ಹೆಡೆಯ ಮೇಲೆ ಒಂದು ಸಾಸುವೆ ಕಾಳಿನಂತೆ ಈ ಭೂಮಂಡಲವು ಯಾರ ಹೆಡೆಯ ಮೇಲೆ ಶೋಭಿಸುತ್ತಿರುವುದೋ, ಅಂತಹಾ ಶೇಷದೇವರ ಹೆಡೆಗಳೇ ಪರಮಾತ್ಮನಿಗೆ ಶ್ವೇತಛತ್ರಿಯಾಗಿ ಶೋಭಿಸುತ್ತಿರುವುವು. ಪರಮಾತ್ಮನಿಗೆ ಇದು ಮಾಡಬಹುದಾದ ಕರ್ಮ, ಇದು ಮಾಡಬಾರದ ಕರ್ಮವೆಂತಿಲ್ಲ. "ಯೇ ದೋಷಾ ಇತರತ್ರಾಪಿ ತೇ ಗುಣಾಃ ಪರಮೇ ಮತಾಃ "– ಎಂದು ಇತರರಲ್ಲಿ ಯಾವ ಯಾವುದು ದೋಷವಾಗಿ ಕಾಣುವುದೋ, ಅದೆಲ್ಲವೂ ಪರಮಾತ್ಮನಲ್ಲಿ ಗುಣವಾಗಿಯೇ ಪರಿಣಮಿಸುವುದೆಂದು **ಶ್ರೀಮದಾಚಾರ್ಯರ** ಉಕ್ತಿಯಿರುವುದರಿಂದ, ಕೃಷ್ಣಾವತಾರದಲ್ಲಿ ಪರದಾರರಾದ ಗೋಪಿಕಾಸ್ತ್ರೀಯರಿಗೆ ಅಂಗಸಂಗವನ್ನು ಕೊಟ್ಟಿರುವನು. ಪರಸ್ತ್ರೀಗಮನವು ಮಹಾದೋಷಕರವೆಂದು ಶಾಸ್ತ್ರದಲ್ಲಿ ನಿಷೇಧ ಮಾಡಿದ್ದರೂ ಪರಮಾತ್ಮನ ಗೋಪಿಕಾಪರಿಗ್ರಹವು ಶ್ರವಣ ಪಠನ ಮಾಡುವವರಿಗೆ ಪರಮಮಂಗಳವನ್ನು ಕೊಡುವದು. ಮಾವನನ್ನು ಕೊಲ್ಲುವುದು ಮಹಾಪಾತಕವಾದರೂ, ಶ್ರೀಕೃಷ್ಣನು ಕಂಸನನ್ನು ಕೊಂದುದು– ಪುಣ್ಯಚರಿತ್ರೆ ಎನಿಸಿತು. ಆದ್ದರಿಂದ ಅವನು **ವಿಚಿತ್ರಕರ್ಮ**ನೆಂದರು. ಉತ್ತಮ ಜ್ಞಾನಾನಂದಸ್ವರೂಪನು. ಅವನ ಚರಿತ್ರೆಗಳನ್ನು ಶ್ರವಣ ಪಠನ ಮಾಡುವವರು ಸಕಲಪಾಪಗಳಿಂದ ಮುಕ್ತರಾಗಿ, ಪರಮ ಪವಿತ್ರರಾಗಿ ದಿವ್ಯಗತಿಯನ್ನು ಹೊಂದುವರು ॥೧॥

**೩. ಭಾವದರ್ಪಣ :**

ಶ್ರೀಧರಾ ಇತಿ. ವಕ್ಷಸ್ಥಲದಲ್ಲಿ ಲಕ್ಷ್ಮಿಯನ್ನು ಧರಿಸಿದವ. ವೇಧಾ = ಬ್ರಹ್ಮ, ಸುಮನಸ = ದೇವತೆಗಳು, ಗೋಧರಾ = ಭೂಮಿ ಧರಿದ ವರಾಹ, ಫಣಿವರಾತಪತ್ರ = ಸರ್ಪಶ್ರೇಷ್ಠನಾದ ಶೇಷನೇ ಛತ್ರನಾಗಿ ಉಳ್ಳವ. ॥೧॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ಶ್ರೀರಸ್ತು ॥ ಹರಿಃ ಓಂ ॥ ಕೈವಲ್ಯಾರ್ಹ ಜೀವಗಣಸ್ಯ ತ್ರಿವಿಧಚೇತನ ತಾರತಮ್ಯಂ ಪೌರ್ವಾಪರ್ಯಾತ್ಮಕಂ ಆವಶ್ಯಕಮ್ ॥ ಅಥಾತಃ ಸಂಭೂತಿಃ ॥ ಪರಮಾತ್ ವಿದ್ಯಾ ॥ ವಿದ್ಯಾಯಾಃ ಪ್ರಾಣಃ ॥ ಪ್ರಾಣಾತ್ ಶ್ರದ್ಧಾ ॥ ಶ್ರದ್ಧಾಯಾಃ ಶಿವಃ ॥ ಶಿವಾತ್ ಬುದ್ಧಿಃ ॥ ಬುದ್ಧೇಃ ಇಂದ್ರಃ ॥ ಇಂದ್ರಾತ್ ತೈಜಸಃ ಪ್ರಾಣಃ ॥ ತೈಜಸಾತ್ ಅನಿರುದ್ಧಃ ॥ ಅನಿರುದ್ಧಾತ್ ಸ್ಪರ್ಶ ವಾತಃ ॥ ಸ್ಪರ್ಶವಾತಾತ್ ಸೋಮಃ ॥ ಸೋಮಾತ್ ವರುಣಃ ॥ ವರುಣಾತ್ ಅಗ್ನಿಃ ॥ ಅಗ್ನೇರ್ಮಿತ್ರಃ ॥ ಮಿತ್ರಾತ್ ಪರ್ಜನ್ಯಃ ॥ ಪರ್ಜನ್ಯಾತ್ ಸ್ವಾಹಾ ॥ ಸ್ವಾಹಾಯಾಃ ಉಷಾ ಜಾಯತೇ ॥ ತೇಷಾಂ ಪರಃ ಪರ ಜ್ಯಾಯಾನ್ ಗುಣೈಃ ॥ ಉತ್ತರಃ ಉತ್ತರಃ ಪ್ರತ್ಯವರಃ॥ತಸ್ಮಾತ್ ಪರಸ್ಮಾತ್ ಉತ್ತರಃ ಉತ್ತರಃ ಮುಚ್ಯತೇ ಸ್ವಂ ಸ್ವಂ ಭಾವಮಾಪದ್ಯತೇ ॥ ನೈಷಾಂ ಪಾರಾವರ್ಯ ಮುಚ್ಛಿದ್ಯತೇ ಕದಾಚನ ನೈಷಾಂ ಪಾರಾವರ್ಯಂ ಉಚ್ಛಿದ್ಯತೇ ಕುತಶ್ಚನ॥ಪಾರಾವರ್ಯೇಣ ಬ್ರಹ್ಮೋಪಯಂತಿ ಪಾರಾವರ್ಯೇಣೈವ (ಪಾರಂಪರ್ಯೇಣೈವ) ಮುಕ್ತಾಃ ಸಂಚರಂತಿ ॥ " ಇತ್ಯಾದಿ ಶ್ರುತೇಶ್ಚ ॥

"ನಾಮಾದಿ ಮಾರುತಾಂತೇಷು ದೇವೇಷ್ವೇಭ್ಯಶ್ಚ ಭೇದತಃ ॥ ಉಪಾಸಿತಃ ಹರಿಃ ಮುಕ್ತಿಂ ದದ್ಯಾತ್ ನಾಸ್ತ್ಯತ್ರ ಸಂಶಯಃ ॥ "– ಇತಿ ಸತ್ತತ್ವೇ ॥ ಇತಿ ಛಾಂದೋಗ್ಯೇ ॥ "**ತಾರತಮ್ಯ ಪರಿಜ್ಞಾನಾತ್ ತೇಷು ಧ್ಯಾತಃ ವಿಮುಕ್ತಿದಃ** ॥ ಪ್ರೀತಿಂ ನ ಚಾನ್ಯಥಾ ಯಾಯಾತ್– ಇತಿ ಶಾಸ್ತ್ರಸ್ಯ ನಿರ್ಣಯಃ ॥ " ಇತಿ **ತತ್ವವಿವೇಕೇ**॥

ಕಿಂಚ ಏತದಜ್ಞಾನೇ ಅನರ್ಥ ಏವ ಶ್ರೂಯತೇ ॥ **ತಾರತಮ್ಯಾ ಪರಿ ಜ್ಞಾನಾತ್ ಅನುತ್ಥಾನಂ ತಮೋ ವ್ರಜೇತ್** ॥ " ಇತಿ **ಮಹಾಭಾರತ ತಾತ್ಪರ್ಯ ನಿರ್ಣಯೇ**॥ ತಾರತಮ್ಯಂ ತತೋ ಜ್ಞೇಯಂ ಸರ್ವೋಚ್ಚತ್ವಂ ಹರೇಃ ತಥಾ ॥ ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ ಕಥಂಚನ ॥ "

ಇತಿ ಚ ॥ ಅತಃ ಭಗವಾನ್ ದಾಸರಾಜಃ ಸಂಕ್ಷೇಪತಃ ವಾಙ್ಮುಖೇನ ಸರ್ವ ತಾರತಮ್ಯಂ ಪ್ರತಿಪಾದಯಿಷುಃ ಆದೌ ಗುಣಾಧಮ್ಯಾಪಾರಮ್ಯಾವದೀಶಾದಿ ಸ್ವೋತ್ತಮಾನ್ (ಮುಖ್ಯಾನ್) ಅಭಿಷ್ಟೌತಿ – "ಶ್ರೀಧರ" ಇತಿ. ॥

ಸರ್ವಮುಕ್ತಾಮುಕ್ತ ನಿಯಂತಾ ಸ್ವತಂತ್ರಃ ಸರ್ವಗುಣಪೂರ್ಣಃ ಶ್ರೀನಾರಾಯಣಃ ಸರ್ವೋತ್ತಮಃ ಇತಿ ಸಾಧ್ಯಾರ್ಥಃ ॥ ಪ್ರಕರಣಾತ್ ವಾಕ್ಯದ್ವಯಮಪಿ ತಾರತಮ್ಯೇನ ಉದಾಹ್ರೀಯತೇ॥ "ತತೋನಂತಗುಣೋ ವಿಷ್ಣುಃ" (ಹರಿಃ) "ತತಃ ಶ್ರೇಷ್ಠತಮೋ ವಿಷ್ಣುಃ ॥ ಶ್ರೇಷ್ಠಃ ಶ್ರೇಷ್ಠ ತಮಃ ಸಚ" ಇತಿ ॥ ವಿಷ್ಣುಃ ಸರ್ವೋತ್ತಮಃ ಇತಿ ಚ ॥ "ವೇಧಾಃ" ಬ್ರಹ್ಮಾ ॥ ಸುಮನಸಃ ದೇವಾಃ ॥ "ವ್ಯಾಪ್ತ" ಇತಿ । ಏಕಸ್ಯ ಜೀವಗಸ್ಯ ಹರೇಃ ಅಣುತ್ವಂ ತಸ್ಯೈವ ಮಹತ್ವಂ ಅನ್ಯತ್ರ ಅದೃಷ್ಟಂ ಕಥಂ ಶಕ್ಯಾಧ್ಯದಿ ಗಮಮ್ ? ಇತಿ ಚೇತ್ ಅನ್ಯತ್ರ ಇತ್ಯಸ್ಯ ಅನ್ಯಪುರುಷೇ ವಾಚ್ಯೇ ನೋಭಯಂ, ಹಕೌ ನ ದೃಷ್ಟಂ ಇತಿ ವಾ ॥ ನಾದ್ಯಃ ಅನವಸ್ಥಿತ್ಯಸಂಭ ವಾಭ್ಯಾಂ ಸೂತ್ರನಿರ್ಮಾತ್ರೈವ ನಿರಾಕೃತತ್ವಾತ್ (ಅಪ್ರಾಕೃತತ್ವಾತ್) ॥ ನ ದ್ವಿತೀಯಃ (ಇತ್ಯಾಹ) ॥ಯಥಾ ಬಾಲತನೌ ವಿಷ್ಣೋಃ ಮಾರ್ಕಂಡೇಯೇನ ಧೀಮತಾ ॥ ಪ್ರವಿಶ್ಯ ನಾಂತೋಽಧಿಗತಃ ಏವಂ ವ್ಯಾಪ್ತಃ ಹರಿಃ ಸದಾ ॥" ಇತಿ ಪರಮಸಾರಂ ಉದಾಜಹಾರ ಆಚಾರ್ಯವರ್ಯಃ ॥ ಅತಃ "ವ್ಯಾಪ್ತ" ಇತಿ ಸಾಧೂಕ್ತಂ ॥ "ಗೌಃ" ಪೃಥಿವೀ ॥ ಶೇಷಾತಪತ್ರಃ ॥ "ನಿಷೇಧೇತಿ" "ನೇತಿ ನೇತಿ" ಇತ್ಯಾದೇಃ ॥ 'ನಿಷೇಧ ಶೇಷ'-ಇತಿ ಚ ॥ "ಕರ್ಮ". – 'ಚರಿ ತಮ್' – ಭಕ್ತಪೋಷಣಾದಿ ॥

"ಪವಿತ್ರ" – ॥ ಓಂ ॥ ಸಮುಜಃ ಪರ್ವತೇಷ್ವಾಃ ಪ್ರತಿವಾಮ್ಯಜೀಷಿ ಇಂದ್ರಃ ಶಶ್ವದ್ಭಿಜೋಹೂತ್ರ (ಜಹ್ಯತ್ರ) ಏಮೈಃ ತಾ ಅಸ್ಯ ಸೂದದೋ ಹಸಃ ಸೋಮಂ ಶ್ರೀಣಂತಿ (ಪ್ರೀಣಂತಿ) ॥ ॥ ಓಂ ॥ ಪಾಪ ಸಂಘರಹಿತ ತ್ವಾತ್ ಪವಿತ್ರಮ್॥ ॥೧॥

## ಕನ್ನಡಾರ್ಥ

ಮುಕ್ತಿಯೋಗ್ಯ ಜೀವರಾಶಿಯು ಮೂರು ತರಹದ ಚೇತನಗಳಲ್ಲಿ ಇರುವ ತಾರತಮ್ಯವನ್ನು ಇವರು ಪೂರ್ವ (ಮೊದಲು) ಇವರು ಅನಂತರ ಎಂದು ಅವಶ್ಯವಾಗಿ ತಿಳಿಯಲೇಬೇಕು. "ಪರಮನಿಂದ (ಹರಿಯಿಂದ) ವಿದ್ಯೆಯು (ರಮಾ). ವಿದ್ಯೆಯಲ್ಲಿ ಪ್ರಾಣನು. ಪ್ರಾಣನು ಶ್ರದ್ಧಾ. ಶ್ರದ್ಧಾಳ ದೆಶೆಯಿಂದ ಶಿವನು ಬುದ್ಧಿ (ಉಮಾ). ಬುದ್ಧಿಯಿಂದ ಇಂದ್ರನು. ಇಂದ್ರನಿಂದ ತೈಜಸಪ್ರಾಣನು. ತೈಜಸಪ್ರಾಣನಿಂದ ಅನಿರುದ್ಧನು. ಅನಿರುದ್ಧನಿಂದ ಸ್ಪರ್ಶ (ವಾತನು) ವಾಯುವು. ಸ್ಪರ್ಶವಾಯುವಿನಿಂದ ಸೋಮನು. ಸೋಮನಿಂದ ವರುಣನು. ವರುಣನಿಂದ ಅಗ್ನಿಯು. ಅಗ್ನಿಯಿಂದ ಮಿತ್ರನು. ಮಿತ್ರನಿಂದ ಪರ್ಜನ್ಯನು. ಪರ್ಜನ್ಯನಿಂದ ಸ್ವಾಹಾ. ಸ್ವಾಹಾಳಿಂದ ಉಷಾ". ಹೀಗೆ ಸಂಭೂತರಾದರು. ಇವರಲ್ಲಿ ಪೂರ್ವ ಪೂರ್ವದವರು ಗುಣಗಳಿಂದ ಅಧಿಕರು. ಅನಂತರದವರು ಉತ್ತರೋತ್ತರದವರು ಗುಣಗಳಿಂದ ಕಡಿಮೆಯುವವರು ಆದುದರಿಂದ ಪೂರ್ವಪೂರ್ವದವರಿಂದ ಉತ್ತರ–ಉತ್ತರದವರಿಗೆ (ಮುಂದಿನವರಿಗೆ) ತಮ್ಮ ತಮ್ಮ ಸ್ವರೂಪದ ಪ್ರಾದುರ್ಭಾವವು ಆಗುತ್ತದೆ; ಮುಕ್ತಿಯಾಗುತ್ತದೆ. ಈ ದೇವತೆಗಳ ಪೌರ್ವಾಪರ್ಯವು ಯಾರಿಂದಲೂ ಎಂದಿಗೂ ನಾಶವನ್ನು ಹೊಂದುವುದಿಲ್ಲ. ಪೌರ್ವಾಪರ್ಯ ತಾರತಮ್ಯದಿಂದ ಯುಕ್ತರಾಗಿಯೇ ಪರಬ್ರಹ್ಮನನ್ನು ಹೊಂದುತ್ತಾರೆ. ತಾರತಮ್ಯದಿಂದ ಯುಕ್ತರಾಗಿಯೇ ಮುಕ್ತಿಯಲ್ಲಿ ಸಂಚರಿಸುತ್ತಾರೆ. (ಹಾಗೂ ತಾರತಮ್ಯಜ್ಞಾನದಿಂದಲೇ ಮುಕ್ತರಾಗುತ್ತಾರೆ.) ಎಂದು ತಾರತಮ್ಯ (ಸಂಭೂತಿ) ಶ್ರುತಿಯು ಸಾರುತ್ತದೆ. (**ಛಾಂದೋಗ್ಯ ಭಾಷ್ಯದಲ್ಲಿ** ಶ್ರೀಮದಾಚಾರ್ಯರಿಂದ ಉದಾಹೃತವಾದುದು.)

"ನಾಮಾಭಿಮಾನೀ ಉಷಾ ಮುಂತಾದ ಪ್ರಾಣನವರೆಗೆ ಇರುವ ಎಲ್ಲ ದೇವತೆಗಳಲ್ಲಿ ತಾರತಮ್ಯದಿಂದ (ಗುಣಾನುಸಾರವಾಗಿ) ಭೇದದಿಂದ ಪರಮಾತ್ಮನನ್ನು ಉಪಾಸಿಸಬೇಕು. ಹರಿಯು (ಪರಮಾತ್ಮನು) ಅದರಿಂದ

ಪ್ರಸನ್ನನಾಗಿ ಮುಕ್ತಿಯನ್ನು ಕೊಡುತ್ತಾನೆ."– ಎಂದು "ಸತ್ತತ್ವ"ದ ವಚನವನ್ನು ಶ್ರೀಮದಾಚಾರ್ಯರು ಛಾಂದೋಗ್ಯಭಾಷ್ಯದಲ್ಲಿ ಉದಾಹರಿಸುತ್ತಾರೆ. (ಛಾ. ಅ. ೭–೪–೧೪) ಮತ್ತು "ತಾರತಮ್ಯ ವಿವೇಕ ಪುರಸ್ಸರವಾಗಿಯೇ ಆ ದೇವತೆಗಳಲ್ಲಿ ಪರಮಾತ್ಮನನ್ನು ಧ್ಯಾನಿಸಲು, ಪರಮಾತ್ಮನು ಮುಕ್ತಿಯನ್ನು ಕೊಡುತ್ತಾನೆ. ತಾರತಮ್ಯಜ್ಞಾನರಹಿತವಾಗಿ ದೇವತೆಗಳಲ್ಲಿ ಹರಿಯನ್ನು ಉಪಾಸಿಸಿದರೆ, ಶ್ರೀಹರಿಯು ಆ ಉಪಾಸನೆಯಿಂದ ಪ್ರೀತನಾಗುವುದಿಲ್ಲ."– ಎಂದು "**ತತ್ವವಿವೇಕ**"ದ ವಾಕ್ಯವನ್ನೂ ಉದಾಹರಿಸುತ್ತಾರೆ.

**ತಾರತಮ್ಯಜ್ಞಾನವಿರದಿದ್ದರೆ, ಮಹಾ ಅನರ್ಥವಾಗುತ್ತದೆ. ಶ್ರೀಮನ್ಮಹಾಭಾರತ ನಿರ್ಣಯದಲ್ಲಿ** "ತಾರತಮ್ಯ ಪರಿಜ್ಞಾನವಿರದವರು ಮೇಲೆ ಏಳಲು ಬಾರದಂತಹ (ಪುನಃ ಅಲ್ಲಿಂದ ತಿರುಗಲು ಅಸಾಧ್ಯವಾದಂಥ) ಅಂಧಂತಮಸ್ಸಿನಲ್ಲಿ ಬೀಳುತ್ತಾರೆ."– ಎಂದು ಶ್ರೀಮದಾಚಾರ್ಯರ ವಚನವಿದೆ. ಆದುದರಿಂದ **ತಾರತಮ್ಯವಿಲ್ಲದಿದ್ದರೆ, ಯಾವನಿಗೂ** ಮುಕ್ತಿಯಾಗುವುದಿಲ್ಲ. ಆದುದರಿಂದ ತಾರತಮ್ಯವನ್ನೂ ಶ್ರೀಹರಿಯ ಸರ್ವೋತ್ತಮತ್ವವನ್ನೂ ಅತ್ಯವಶ್ಯವಾಗಿ ಸಕಲರೂ ತಿಳಿಯಲೇಬೇಕು– ಎಂದೂ ಶ್ರೀಮದಾಚಾರ್ಯರು ಉಪದೇಶಿಸಿದ್ದಾರೆ.

ಆದುದರಿಂದ, ದಾಸರಾಜರು ಸಂಕ್ಷೇಪದಿಂದ ಉಪನ್ಯಾಸರೂಪವಾಗಿ ಸರ್ವರಲ್ಲಿರುವ ತಾರತಮ್ಯವನ್ನು ನಿರೂಪಿಸ ಬಯಸುವವರಾಗಿ, ಸಂಧ್ಯಾರಂಭದಲ್ಲಿ ಗುಣೋಚ್ಚನೀಚ ಭಾವಯುಕ್ತರಾದ,– ಸ್ತೋತ್ರಮರಿಂದ ಸಹಿತರಾದ ದೇವತೆಗಳಿಂದ ಈಶನು ಆರಾಧಿತನು, ಎಂಬುದಾಗಿ ಶ್ರೀಹರಿಯನ್ನು ಸ್ತುತಿಸುತ್ತಾರೆ.– "ಶ್ರೀಧರಾ" ಎಂಬ ಪದ್ಯದಿಂದ. "ಸರ್ವಮುಕ್ತ ಹಾಗೂ ಅಮುಕ್ತರುಗಳಿಗೆ ನಿಯಾಮಕನು, ಸ್ವತಂತ್ರನು, ಸರ್ವಗುಣಸಂಪೂರ್ಣನು, ಶ್ರೀನಾರಾಯಣನು ಸರ್ವೋತ್ತಮನು"– ಎಂದು ವಿಶಿಷ್ಟ ಅಭಿಪ್ರಾಯ.

ಒಂದೇ ಸಂದರ್ಭವಾದುದರಿಂದ, ಈ ಎರಡೂ ಪದ್ಯಗಳು ತಾರ ತಮ್ಯೋಪಯುಕ್ತವಾದುದರಿಂದ ಈ ಸಂಧ್ಯಾದಿಯಲ್ಲಿ ನಿವೇಶಿಸಿರುತ್ತದೆ. "ಅನಂತಗುಣಪೂರ್ಣನು, ವಿಷ್ಣುವು. ಆದುದರಿಂದ ಶ್ರೀವಿಷ್ಣುವು ಶ್ರೇಷ್ಠತಮನು. ಶ್ರೇಷ್ಠನೂ, ಶ್ರೇಷ್ಠತಮನೂ ಆಗಿರುತ್ತಾನೆ, ಅವನು. "ವಿಷ್ಣುವು ಸರ್ವೋತ್ತಮನು."– ಎಂದು ಮುಂತಾದ ವಚನಗಳಿಗನುಸಾರ ವಾಗಿ ಈ ಎರಡು ಪದ್ಯಗಳನ್ನು ಇಲ್ಲಿ ಸೇರಿಸುತ್ತಾರೆ.

"ವೇಧ" – ಚತುರ್ಮುಖ ಬ್ರಹ್ಮ. "ಸುಮನಸರು"–ದೇವತೆಗಳು. "ಅಂತರ್ಬಹಿರ್ವ್ಯಾಪ್ತ"– ಇಲ್ಲಿ ವಿಶೇಷ ವಿಚಾರ :–

"ಜೀವರು–ಅಣುಗಳು–ಪರಮಾತ್ಮನು ಒಬ್ಬನು (ಏಕನು). ಒಬ್ಬ ಜೀವನಲ್ಲಿ ಇರುವ ಹರಿಯು ಅಣುವಾಗಿಯೇ (ಅಣುರೂಪದಿಂದಲೇ) ಇರು ತ್ತಾನೆ. ಜೀವನಲ್ಲಿ ಅಣುವಿನ ರೂಪದಲ್ಲಿ ಇರುವ ಅದೇ ಹರಿಯು ಮಹತ್ತ್ವ ವನ್ನು ಹೇಗೆ ಹೊಂದುತ್ತಾನೆ ? ಹೊರಗೆ ಮಹತ್ತಾದ ಪ್ರಪಂಚವನ್ನು ಹೇಗೆ ವ್ಯಾಪಿಸುತ್ತಾನೆ ? ಒಂದೇ ವಸ್ತುವು ಅಣುವಾಗಿರುವುದೂ ಮಹತ್ತ ವಾಗಿ ಇರುವುದೂ ಬೇರೆ ಎಲ್ಲಿಯೂ ಕಂಡು ಬಂದಿಲ್ಲ."– ಎಂದು ಪೂರ್ವ ಪಕ್ಷವು ಉದಯಿಸುತ್ತದೆ.

ಉತ್ತರ–"ಬೇರೆ ಎಲ್ಲಿಯೂ ಹೀಗೆ ಬಂದಿಲ್ಲ–"ವೆಂದರೆ– "ಬೇರೊಬ್ಬ ನಲ್ಲಿ ಹೀಗಿರುವುದು ಕಂಡು ಬರಬೇಕು. ಹೀಗೆ ನಿಮ್ಮ ಅಭಿಪ್ರಾಯವೋ ? ಅಥವಾ ಒಂದೇ ಪರಮಾತ್ಮನ ರೂಪದಲ್ಲಿ–ಇವೆರಡೂ ವಿರುದ್ಧಧರ್ಮಗಳು ಎಲ್ಲಿಯೂ ಕಂಡುಬಂದಿಲ್ಲವೆಂದು ಅಭಿಪ್ರಾಯವೋ ? ಮೊದಲನೆಯ ಪಕ್ಷವು ಸರಿಯಲ್ಲ. "ಅನವಸ್ಥಿತೇಃ ಅಸಂಭವಾಚ್ಚ ನೇತರಃ"– ಎಂಬ **ಸೂತ್ರದಲ್ಲಿ** "ಮಿಕ್ಕ ಯಾವ ಜೀವನಿಗೂ ಜೀವಾಂತರ ನಿಯಾಮಕತ್ವವು ಇರಲು ಸಂಭ ವವೂ ಇರುವುದಿಲ್ಲ.– "ಎಂದು ಮುಂತಾಗಿ ನಿರಾಕೃತವಾಗಿರುತ್ತದೆ. ಆದು ದರಿಂದ ಜೀವಾಂತರ್ಬಹಿರ್ವ್ಯಾಪ್ತಿಯು ಮಿಕ್ಕವರಿಗೂ ಇರಬೇಕು."–ಎಂದು

ಊಹಿಸುವುದು ಸರಿಯಲ್ಲ. ಯಾಕಂದರೆ, ಮಾರ್ಕಂಡೇಯಮುನಿಗಳು ಪರಮಾತ್ಮನ (ವಿಷ್ಣುವಿನ) ಬಾಲರೂಪದಲ್ಲಿ ಒಳಗೆ ಹೊಕ್ಕು, ಅನಂತಾನಂತ ಬ್ರಹ್ಮಾಂಡಗಳನ್ನೂ, ಅಲ್ಲಿರುವ ಭಗವದ್ರೂಪಗಳನ್ನೂ–ಅವನ ಅಣುವಿಗಿಂತ ಅಣುವಾಗಿರುವ–ಮಹತ್ತಿಗಿಂತ ಮಹತ್ತಮವಾಗಿರುವ ಗುಣಗಳನ್ನೂ ಕಂಡು ಕೊಂಡಿರುತ್ತಾರೆ. ಇದು ಪರಮಸಾರವಾದುದು. ಈ ಸಂಗತಿಯನ್ನು **ಶ್ರೀಮದಾಚಾರ್ಯರು** ಹೇಳಿರುತ್ತಾರೆ. ಆದುದರಿಂದ ದಾಸರಾಯರೇ "ಜಗದಂತರ್ಬಹಿರ್ವ್ಯಾಪ್ತ"– ಎಂದು ಪದ್ಯದಲ್ಲಿ ನಿಂಬಧಿಸಿದುದು ಅತ್ಯಂತ ಸಮಂಜಸವಾಗಿದೆ. "ಗೋಧರಫಣಿವರಾತಪತ್ರ" – "ಗೋ– ಭೂಮಿ, ಅದನ್ನು ಧರಿಸುವವನು ಶೇಷ. ಅವನ ಹೆಡೆಯೇ ಕೊಡೆಯಾಗಿ (ಛತ್ರವಾಗಿ) ಉಳ್ಳವನು"–ಎಂದು ಅರ್ಥ.

'ನಿಷೇಧ ಶೇಷ'–ವೆಂದು ಪಾಠವು ಸಮೀಚೀನವಾದುದು. "ಸ ಏಷ ನೇತಿನೇತಿ" ಎಂಬ **ಶ್ರುತಿಯಲ್ಲಿ** "ನಿಷೇಧಶೇಷೋ ಜಯತಾತ್ ಅಶೇಷಃ"–ಎಂಬಲ್ಲಿಯೂ ಪರಮಾತ್ಮನು "ನಿಷೇಧ ಶೇಷನು"–ಎಂದು ಉಕ್ತವಾಗಿರುತ್ತದೆ. ಪ್ರಲಯದಲ್ಲಿ ಎಲ್ಲರೂ ಅನ್ಯರಲ್ಲಿ ಲಯವನ್ನು ಹೊಂದುವುದರಿಂದ, ಅವರಾರೂ ಪರಮಾತ್ಮನೆನಿಸಲು ಅರ್ಹರಲ್ಲ. ಆದುದರಿಂದ ಅವರೆಲ್ಲರನ್ನೂ ನಿಷೇಧಿಸಿ,ಪ್ರಳಯದಲ್ಲಿಯೂ ಸಹ ಇರುವುದರಿಂದ ಅವನೇ ಪರಮಾತ್ಮನು."-ಎಂದು ಹೇಳಿರುವುದರಿಂದ 'ನಿಷೇಧಶೇಷ'– ಎಂಬುವುದು ಪರಮಾತ್ಮನಿಗೆ ವಿಶೇಷಣವಾಗಿರುತ್ತದೆ.

ಅವನ ವಿಚಿತ್ರ ಕರ್ಮಗಳೆಂದರೆ– ಜಗತ್ಸೃಷ್ಟ್ಯಾದಿಗಳು. ಚರಿತ್ರಗಳೆಂದರೆ ಭಕ್ತಪೋಷಣ-ಮುಂತಾದವುಗಳು,ಎಂದು ತಿಳಿಯಬೇಕು.

"ಪವಿತ್ರ"– ಪಾಪಗಳಿಂದ ರಹಿತನಾದುದರಿಂದ **ಪವಿತ್ರ**ವೆನ್ನುತ್ತಾರೆ. ಇದು **ಬೃಹತೀಮಂತ್ರಾನುಗುಣವಾದ** ಅರ್ಥ. ॥೧॥

೫. ಶ್ರೀಗುರುಹೃದಯಪ್ರಕಾಶಿಕೆ :-

ಬ್ರಹ್ಮಾದಿ ಮಾನುಷಾಂತಾಶ್ಚ ಜ್ಞೇಯಾಸ್ತರ ತಮಾಃ ಕ್ರಮಾತ್ ।

ಜ್ಞಾತೇತರತಮೇ ಭಾವೇ ವಿಷ್ಣೋರ್ಮಾಹಾತ್ಮ್ಯ ಮಂಜಸಾ ।

ಜಾಯತೇ ನಿಷ್ಕಳಂಕಂ ತು ತಸ್ಮಾದೇತನ್ನಿಶಮ್ಯ ತಾಂ ॥

ಎಂಬುದಾಗಿ ಶಾಂಡಿಲ್ಯತತ್ತ್ವದಲ್ಲಿ ಶ್ರೀಪರಮಾತ್ಮನ ಮಾಹಾತ್ಮ್ಯಜ್ಞಾನ ಸಾಧನೆಗೆ ತಾರತಮ್ಯಜ್ಞಾನವು ಪರಮಮುಖ್ಯವೆಂದು ಹೇಳಿರುವಂತೆ, ಹಿಂದಿನ ಸಂಧಿಯಲ್ಲಿ ಹತ್ತೊಂಭತ್ತನೆಯ ಪದ್ಯದಲ್ಲಿ 'ತಾರತಮ್ಯಜ್ಞಾನ ಶೂನ್ಯರು'- ಎಂದು ಸೂಚಿಸಿದ ಗುಣತಾರತಮ್ಯವನ್ನೂ ಮತ್ತು ಈ ತಾರ ತಮ್ಯಜ್ಞಾನಮಹಾತ್ಮ್ಯೆಯನ್ನೂ ಸಹ ಈ ಇಪ್ಪತ್ತನೆಯ ಸಂಧಿಯಲ್ಲಿ, ಶ್ರೀವಿಷ್ಣು ಆರಂಭಿಸಿ, ಮನುಷ್ಯೋತ್ತಮ ಪರಿಯಂತ ದೇವತಾತಾರತಮ್ಯ ವನ್ನೂ, ಮನುಷ್ಯಾಧಮ ಆರಂಭಿಸಿ ಕಲಿ ಪರಿಯಂತ ದೈತ್ಯತಾರತಮ್ಯ ಸಹ ಹೇಳುವ ಹರಿಕಥೆ ಎಂಬುವ ವೇದಶಾಸ್ತ್ರಾರ್ಥರೂಪ ಅಮೃತದ ಸವಿ ಯನ್ನು ಯಥಾಶಕ್ತಿ ಗುರುಕರುಣಬಲದಿಂದ ಹೇಳುವುದನ್ನು ಪರಮಹರಿ ಭಕ್ತರು ಕೇಳಬೇಕು. ॥ ಸಂ । ಸೂ ॥

ಶ್ರೀಧರಾ ಎಂದು ಮೊದಲು ಎರಡು ಪದ್ಯದಿಂದ ಶ್ರೀವಿಷ್ಣುವಿಗೆ ಸಮರೇ ಇಲ್ಲ, ಅಧಿಕರು ಇನ್ನೆಲ್ಲಿ? ಸುತರಾಂ ಇಲ್ಲವೆಂದು ವಿಷ್ಣುಸರ್ವೋ ತ್ತಮತ್ವವನ್ನು ತಿಳಿಸುತ್ತಾರೆ. ಶ್ರೀ-ಭೂ-ದುರ್ಗಾರೂಪಳಾದ ರಮಾ ಮನೋಹರನೂ, ವೇಧ-ಎಂಬ ಬ್ರಹ್ಮ ಮೊದಲಾದ ಸಮಸ್ತ- ಸುಮನಸ ರೆಂಬ ದೇವಗಣದಿಂದ ಆರಾಧಿತ ಪಾದಕಮಲನೂ, ಜಗತ್ತಿನ ಒಳ ಹೊರ ಗೆಲ್ಲಾ ವ್ಯಾಪ್ತನೂ, ಗೋಧರ ಫಣ-ಎಂಬ ಭೂಮಿಯನ್ನು ಹೊತ್ತಿರುವ ಆದಿಶೇಷದೇವರ ಹೆಡೆಯೇ ಛತ್ರಿಯಾಗಿ ಉಳ್ಳವನೂ, ನಿಷೇಧದೋಷ- ಎಂದರೆ, ದೋಷಸಂಪರ್ಕವೇ ಇಲ್ಲದವನೂ, ಬಹು ವಿಚಿತ್ರಚರಿತ್ರನೂ,

ಸುಬೋಧನೆಂಬ ಅಪ್ರಾಕೃತಜ್ಞಾನ ಸ್ವರೂಪನೂ, ಪರಮಪವಿತ್ರಕರ ಚರಿತ್ರೆ ಎಂಬ ಕಥೆಯುಳ್ಳವನು. ॥೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಭಗವದನುಗ್ರಹಪ್ರಾಪ್ತಿಗೆ ತಾರತಮ್ಯಜ್ಞಾನವು ಅತ್ಯಗತ್ಯ. ಜೀವರ ಸ್ವರೂಪಗತ ಜ್ಞಾನಶಕ್ತಿ. ಇಚ್ಛಾಶಕ್ತಿ ಮತ್ತು ಕ್ರಿಯಾಶಕ್ತಿಗಳೆಂಬ ಧರ್ಮತ್ರಯಗಳು ಜೀವರ ಸ್ವರೂಪಭೂತವಾದ ಗುಣಗಳು, ಜೀವ ಜೀವರಿಗೆ ಭೇದವಿರುವುದರಿಂದ, ಗುಣತಾರತಮ್ಯವು ಸಿದ್ಧವಾಗುವುದು. ಉತ್ತಮರ ಜ್ಞಾನೇಚ್ಛಾಕ್ರಿಯಾಶಕ್ತಿಗಳು ಅವರರ ಸ್ವರೂಪಭೂತಗುಣಗಳಿಗಿಂತ ಉತ್ತಮವಾಗಿರುವುವು. ಇದೇ ತಾರತಮ್ಯರೂಪವಾದ ನೀಚೋಚ್ಚ ಭಾವವು.

ಹಿಂದಿನ ಸಂಧಿಯಲ್ಲಿ (ಸಂಧಿ ೧೯) ದಾಸವರೇಣ್ಯರು ಶ್ರೀಪರಮಾತ್ಮನನ್ನು **ಗುಣಪೂರ್ಣನೆಂದು** ಉಪಾಸಿಸಬೇಕು. ಈ ಉಪಾಸನಾಕ್ರಮದಿಂದ ಕರ್ಮವಿಮೋಚನೆಯಾಗಿ, ತದ್ವಾರಾ ಜೀವರ ಸ್ವರೂಪಕ್ಕೆ ಪ್ರತಿಬಂಧಕ ರೂಪವಾಗಿರುವ ಲಿಂಗದೇಹವು ಭಂಗವಾಗಿ, ಮುಕ್ತಿಯೋಗ್ಯ ಚೇತನರ ಸ್ವರೂಪಗತಆನಂದದ ಆವಿರ್ಭಾವರೂಪವಾದ ಮುಕ್ತಿಯನ್ನು ಆ ಮುಕುಂದನು ದಯಪಾಲಿಸುವನು. ಈ ಕಾರಣದಿಂದ ಸತ್ಸಾಧನಾಮಾರ್ಗಕ್ಕೆ **ಪಂಚಭೇದ ಮತ್ತು ತಾರತಮ್ಯಜ್ಞಾನವು** ಅತ್ಯವಶ್ಯ- ಎಂದು ಸಿದ್ಧವಾಗುವುದು.

ಸರ್ವೇಷಾಂಚ ಹರಿರ್ನಿತ್ಯಂ ನಿಯಂತಾ ತದ್ವಶಾಃ ಪರೇ ।
ತಾರತಮ್ಯಂ ತತೋ ಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ ।
ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ ಕಥಂಚನ ॥

**-ಭಾರತತಾತ್ಪರ್ಯನಿರ್ಣಯದ ಪ್ರಥಮಾಧ್ಯಾಯದ ವಚನ.**

ಇದರಿಂದ ಸರ್ವಗುಣಪರಿಪೂರ್ಣನಾದ ಶ್ರೀಹರಿಯನ್ನು ಆರಂಭಿಸಿ, ಯಾವತ್ತೂ ವಿಷ್ಣುಭಕ್ತರಾದ ದೇವತೆಗಳ ಗುಣತಾರತಮ್ಯದ ಜ್ಞಾನ ಅತ್ಯಗತ್ಯವೆಂದು ತಿಳಿಯುವುದು.

ಸತ್ವಗುಣಾಭಿಮಾನಿಯಾದ ಶ್ರೀಲಕ್ಷ್ಮೀರೂಪಕ್ಕೆ ಶ್ರೀ- ಎಂತ ನಾಮ, ಪರಮಮಂಗಳಪ್ರದಳಾದ್ದರಿಂದ ಲಕ್ಷ್ಮಿಗೆ "ಶ್ರೀ" ಎಂದು ಹೆಸರು. ಪ್ರಳಯಕಾಲದಲ್ಲಿ ಲಕ್ಷ್ಮಿಯು ಪ್ರಳಯೋದಕರೂಪದಲ್ಲಿ ಶ್ರೀನಾಮಕಳಾಗಿರುವಳು.

ರಜೋಗುಣದ ಅಭಿಮಾನಿರೂಪಕ್ಕೆ **ಭೂದೇವಿ**-ಎಂತ ನಾಮ. ಪ್ರಳಯಕಾಲದಲ್ಲಿ ಭೂದೇವಿಯು ವಟಪತ್ರರೂಪದಲ್ಲಿದ್ದು, ಶ್ರೀಹರಿಯ ಸೇವೆ ಮಾಡುತ್ತಿರುವಳು.

ಲಕ್ಷ್ಮಿದೇವಿಯರ ತಮೋಗುಣಾಭಿಮಾನಿರೂಪ **ದುರ್ಗಾರೂಪವು**. ದುರ್ಗಾನಾಮಕಳಾಗಿ, ಸುತ್ತಲೂ ಆವರಿಸಿರುವ ಕತ್ತಲಿನ ರೂಪದಲ್ಲಿರುವಳು.

ಸತ್ವ, ರಜಸ್ತಮೋಗುಣಾಭಿಮಾನಿಯಾದ ಶ್ರೀಲಕ್ಷ್ಮೀದೇವಿಯರು ತ್ರಿಗುಣಾಭಿಮಾನಿಗಳು. ಶ್ರೀ ಭೂ ದುರ್ಗಾರೂಪಗಳಲ್ಲದೆ ಅನಂತ ರಮಾರೂಪಗಳಿಗೂ ಶ್ರೀಹರಿಯೇ ನಿಯಾಮಕನು. ರಮಾದೇವಿಯರ ಮನಸ್ಸಿನಲ್ಲಿ ಕ್ರೀಡಿಸುತ್ತಾ, ತದ್ವಾರಾ ಅವರನ್ನು ಆನಂದಪಡಿಸುತ್ತಿರುವುದರಿಂದ, ಶ್ರೀಹರಿಯು **ಶ್ರೀಧರಾ ದುರ್ಗಾಮನೋರಮನು**.

ಜೀವೋತ್ತಮರಾದ ಚತುರ್ಮುಖಬ್ರಹ್ಮದೇವರಿಗೆ **ವೇಧ**- ಎಂದು ಹೆಸರು. ಅವರು ಋಜುಗಣದರಸರು. ಬ್ರಹ್ಮದೇವರೇ ಮೊದಲಾದ ಸಕಲದೇವತಾವರ್ಗದಿಂದ ಪೂಜಿತಚರಣಕಮಲಗಳುಳ್ಳವನು ಶ್ರೀಹರಿ.

ಸಮೀಚೀನವಾದ (ಸು) ಮನಸ್ಸಿನಿಂದ ಯುಕ್ತರಾದುದರಿಂದ ದೇವತೆಗಳಿಗೆ **ಸುಮನಸರೆಂದು ಹೆಸರು.** ಸಕಲದೇವತೆಗಳೂ ಭೇದಜ್ಞಾನ ಸ್ವರೂಪವುಳ್ಳವರು. ಇದರಿಂದ ಸುಮನಸರು.

ರಮಾದೇವಿಯರಿಗೆ ತ್ರಿಗುಣಗಳ ಸಂಬಂಧವಿಲ್ಲ. ನಿತ್ಯಮುಕ್ತರು ಮತ್ತು ನಿರ್ವಿಕಾರರು. ಅವರಿಗೆ ಪರಮಾತ್ಮನನ್ನು ಆರಾಧಿಸಿ, ತದ್ವಾರಾ ಬಂಧನಿವೃತ್ತಿ ಮಾಡಿಕೊಂಡು, ಸ್ವರೂಪಸುಖವ್ಯಕ್ತಿಯು ಆಗತ್ಯವಿಲ್ಲ. ಇದರಿಂದ **ಆರಾಧನೆ**- ಎಂಬ ಶಬ್ದಪ್ರಯೋಗವು ಶ್ರೀಲಕ್ಷ್ಮೀದೇವಿಗೆ ಇಲ್ಲ. ಅವರ ಮನಸ್ಸಿನಲ್ಲಿ ಶ್ರೀಹರಿಯು ರಮಾಂತರ್ಗತನಾಗಿ ಕ್ರೀಡಿಸುವನು. ಇದರಿಂದ ಅವರಿಗೆ ಸುಖದ ಉದ್ರೇಕವಾಗುವುದು. ಇದರಿಂದ **ಮನೋರಮತ್ವವನ್ನು** ರಮಾದೇವಿಯರಿಗೆ ಹೇಳಿದ್ದಾರೆ.

ಆದರೆ ಬ್ರಹ್ಮಾದಿ ತೃಣಾಂತ ಮುಕ್ತಿಯೋಗ್ಯ ಚೇತನರು ಲಿಂಗಶರೀರದಿಂದ ಯುಕ್ತರಾಗಿದ್ದಾರೆ. ಅವರಿಗೆ ಲಿಂಗಭಂಗದ್ವಾರಾ, ಸ್ವರೂಪದ ಆನಂದದ ಅಭಿವ್ಯಕ್ತಿ. ಇದರಿಂದ ಶ್ರೀಹರಿಯು ಬ್ರಹ್ಮಾದಿ ಸಕಲದೇವತಾಗಣದಿಂದ **ಆರಾಧಿತನು.** ಪದ = ಚರಣದ್ವಯಗಳು. ಅಂಭೋಜ = ನೀರಿನಲ್ಲಿ ಉತ್ಪತ್ತಿಯಾಗುವ ಕಮಲ. ಅಂದರೆ, ಪದಾಂಭೋಜವೆಂದರೆ- ಚರಣಕಮಲಗಳೆಂದರ್ಥ. ಶ್ರೀ ಹರಿಯ ಪಾದಕಮಲಗಳನ್ನು ಬ್ರಹ್ಮಾದಿ ದೇವತೆಗಳು ನಿತ್ಯವೂ ಆರಾಧಿಸುತ್ತಿರುವರು. ಮನೋರಮತ್ವ ಮತ್ತು ಆರಾಧಾನತ್ವ ಎರಡೂ ರಮಾದೇವಿಯರಿಗೆ ಉಂಟು. ಹೀಗೆ ಶ್ರೀಹರಿಯು ರಮಾಬ್ರಹ್ಮಾದಿವಂದ್ಯನು.

ಜಗತ್ತಿನಲ್ಲೆಲ್ಲಾ ವ್ಯಾಪ್ತನಾಗಿ ತುಂಬಿ ಹರಡಿರುವನು. ಜಗತ್ತಿನ ಹೊರಗಿನ ರೂಪ ಮಹದ್ರೂಪ. ಜಗದಂತರ್ಗತರೂಪ ಅಣುರೂಪವು. ಹೀಗೆ ಜಗತ್ತಿನಲ್ಲಿ ಅಂತಬರ್ಹಿಶ್ಚವ್ಯಾಪ್ತನಾಗಿ. ಮಹದ್ರೂಪ ಮತ್ತು ಅಣುರೂಪಗಳಿಂದ ಪರಿಪೂರ್ಣನಾಗಿದ್ದಾನೆ, ಆ ಸರ್ವತ್ರವ್ಯಾಪ್ತನಾದ ಸರ್ವೇಶ್ವರನು ಸರ್ವಜೀವರ ಅಂತರ್ಗತನಾಗಿ ಶ್ರೀರಮಾ ಶ್ರೀಹರಿಯು ಸಹಿತ,

ಅವಿಯೋಗಿನಿಯಾಗಿ ಅಣುರೂಪದಿಂದ್ದಾಳೆ. ಆದರೆ, ಅಣುರೂಪವಾದ ರಮಾದೇವಿಯರಿಗೆ ಶ್ರೀಹರಿಯು ಸ್ತ್ರೀರೂಪದಿಂದ ಬಿಂಬನಾಗಿದ್ದು, ಅವರಿಗೆ ನಿಯಾಮಕನಾಗಿದ್ದಾನೆ. ರಮಾದೇವಿಯ ಬಿಂಬನಾದ ಪರಮಾತ್ಮನಲ್ಲಿ ರಮಾ ವ್ಯಾಪ್ತಿಯಿಲ್ಲ, ಹಾಗೆಯೇ, ಬ್ರಹ್ಮಾಂಡದ ನವಾರಣವ ಆಚೆಯಲ್ಲಿರುವ ಪ್ರದೇಶದಲ್ಲಿ ರಮಾ ಸ್ಥೂಲರೂಪದಿಂದ ವ್ಯಾಪ್ತಳಾಗಿದ್ದಾಳೆ. ಆ ಸ್ಥೂಲ ರೂಪಕ್ಕೆ ಬಿಂಬನಾದ ಶ್ರೀಹರಿಯಲ್ಲಿ ರಮಾವ್ಯಾಪ್ತಿ ಇಲ್ಲ. ಇದರಿಂದ ಶ್ರೀಲಕ್ಷ್ಮೀಯ ನಿತ್ಯಾವಿಯೋಗಿನತ್ವಕ್ಕೆ ಹಾನಿ ಬಂದಿತಲ್ಲಾ-ಎಂದು ಸಂದೇಹ ಬಂದರೆ, ಪರಮಾತ್ಮನನ್ನು ಬಿಟ್ಟು ಶ್ರೀರಮಾ ಇರಲು ಸಾಧ್ಯವಿಲ್ಲಂದರ್ಥ. ಆದರೆ ಅಪರಿಚ್ಛಿನ್ನವ್ಯಾಪ್ತನಾದ ಶ್ರೀಹರಿಗೆ ಸದೃಶರಾಗಿ ರಮಾ ಅಪರಿಚ್ಛಿನ್ನ ವ್ಯಾಪ್ತಳಲ್ಲ. ಸ್ವಾಖ್ಯಪ್ರದೇಶ (ರಮಾಬಿಂಬ) ವನ್ನು ಬಿಟ್ಟು, ಅನ್ಯತ್ರ ಪ್ರದೇಶಗಳಲ್ಲಿ ಶ್ರೀಹರಿಗೆ ದೇಶತಃ ಕಾಲತಃ ಸಮಳೆನಿಸಿದ್ದಾಳೆ. ಆದರೆ, ತಾರತಮ್ಯದಿಂದ ಅನಂತಕೋಟಿಗುಣಗಳಿಂದ ಅವರಳಾಗಿದ್ದಾಳೆ. ಇದರಿಂದ ರಮಾದೇವಿಗಿಂತ ಉತ್ತಮೋತ್ತಮನು– ಶ್ರೀಹರಿ-ಎಂದು ಸಿದ್ಧವು.

**ಗೋ** – ಎಂದರೆ ಭೂಮಿ. **ಗೋಧರ** – ಎಂದರೆ ಭೂಮಿಯನ್ನು ತನ್ನ ಶಿರದ **ಮೇಲೆ** ಸಾಸಿವೆ ಕಾಳಿನಂತೆ ಧರಿಸಿರುವ **ಆದಿಶೇಷನೆಂದರ್ಥ.**

ಇನ್ನೊಂದರ್ಥದಲ್ಲಿ ಗೋಧರ –ಎಂದರೆ ಭೂಮಿಯನ್ನು ಆಧರಿಸಿರುವ ಪರ್ವತವೆಂದರ್ಥ. ಗೋವರ್ಧನಪರ್ವತದ ರೂಪದಲ್ಲಿ ಶೇಷದೇವರು ಛತ್ರಿಯಂತೆ ಇದ್ದರು. ಶ್ರೀಕೃಷ್ಣನು ಗೋವರ್ಧನಪರ್ವತವನ್ನು ಛತ್ರಿಯಂತೆ ತನ್ನ ಕಿರುಬೆರಳಿನಿಂದ ಎತ್ತಿಹಿಡಿದು, ಘೋರವಾದ ಮಳೆಯಿಂದ ಗೋಗೋಪರನ್ನು ಸಂರಕ್ಷಿಸಿದನು. **ಆತಪತ್ರ** – ಎಂದರೆ ಛತ್ರಿ (ಕೊಡೆ) ಎಂದರ್ಥ. ಭೂಭಾರವನ್ನು ಹೊತ್ತಿರುವ ಆದಿಶೇಷನು ತನ್ನ ಸಹಸ್ರಫಣಿಗಳನ್ನು ಶ್ರೀಹರಿಯ ತಲೆಯ ಮೇಲೆ ಹರಡಿ, ಆತಪತ್ರನಂತಿದ್ದಾನೆ. ಇದಕ್ಕಾಗಿ **ಗೋಧರ ಫಣಿವರಾತಪತ್ರನ** ನೆಂದು ಕರೆದಿದ್ದಾರೆ. **ಫಣಿ**–ಎಂದರೆ ಹೆಡೆಗಳುಳ್ಳ ಸರ್ಪ. **ಫಣಿವರ** – ಎಂದರೆ, ಸರ್ಪಶ್ರೇಷ್ಠರಾದ ಶೇಷದೇವರು.

**ನಿಷೇಧ**– ಎಂದರೆ ತಡೆ ಅಥವಾ ಪ್ರತಿಬಂಧಕ. ಆದರಿಂದ ಶ್ರೀ ಹರಿಯು ನಿಷೇಧವಿದೂರನು. ಅವನಿಗೆ ಯಾವ ಪ್ರತಿಬಂಧಕಗಳಿಗೂ ಇಲ್ಲ. ಸರ್ವತಂತ್ರಸ್ವತಂತ್ರನು. ಸ್ವೇಚ್ಛಾಪ್ರವರ್ತಕರು.

**ನಿಷೇಧ ಶೇಷ** – ಎಂತಲೂ ಪಾಠಾಂತರವಿದೆ. **"ಸ ಏಷ ನೇತಿ ನೇತಿ" – ಎಂಬ ಶ್ರುತಿ ಪ್ರಮಾಣವಿದೆ. "ನಿಷೇಧ ಶೇಷೋ ಜಯಂ ತಾತ ಅಶೇಷ :–** ಎಂಬ ಪ್ರಮಾಣ ವಚನಾನುಸಾರ, ಪ್ರಳಯದಲ್ಲಿ ಸಮಸ್ತರೂ ಶ್ರೀಹರಿಯಲ್ಲಿ ಲಯ ಹೊಂದುವರು. ಆದರೆ, ಏಕಾಮೇವಾದ್ವಿತೀಯನಾದ ಶ್ರೀಹರಿಯು ಅವರನ್ನೆಲ್ಲಾ ನಿಷೇಧಿಸಿ, ಪ್ರಳಯದಲ್ಲಿಯೂ ಸಹ ಇರುವುದರಿಂದ **ನಿಷೇಧಶೇಷ**– ಎಂಬ ಹೆಸರು ಶ್ರೀಹರಿಗೆ ಅನ್ವರ್ಥವು. **(ಶ್ರೀವಾದಿರಾಜಾಚಾರ್ಯರ ವ್ಯಾಖ್ಯಾನದಂತೆ)** ದೋಷಸಂಪರ್ಕವೇ ಶ್ರೀಹರಿಗೆ ಇಲ್ಲ. ನಿರ್ದೋಷನಾದ ಆ ನಿರಂಜನನಿಗೆ **ನಿಷೇಧ ದೂರ**ನೆಂದೂ ಇನ್ನೊಂದರ್ಥ. ದೈತ್ಯರು ಶ್ರೀಹರಿಯಿಂದ ನಿಷೇಧ್ಯರು. ಅಂದರೆ, ಅವರಿಂದ ಬಹು ದೂರರೆಂದರ್ಥ. ದೈತ್ಯರಿಗೆ ಅಲಭ್ಯನು.

**"ಯೇ ದೋಷಾ ಇತರತ್ರಾಪಿ ತೇ ಗುಣಾಃ ಪರಮೇ ಮತಾಃ "**
– ಎಂದು **ಶ್ರೀಮದಾಚಾರ್ಯರ ಉಕ್ತಿಯು.**

ಅಂದರೆ, ಇತರರಲ್ಲಿ ಯಾವುದು ದೋಷವಾಗಿ ಕಾಣುವುದೋ, ಅವೆಲ್ಲವೂ ಶ್ರೀಹರಿಯಲ್ಲಿ ಗುಣಗಳೇ ಆಗಿರುವುವು. ಪರಸ್ತ್ರೀಸಂಗ ನಿಷಿದ್ಧವು. ಚೋರತ್ವ ದೋಷವು. ಆದರೆ ಗೋಪಿಕಾಸ್ತ್ರೀಯರ ಅಂಗಸಂಗ ಮಾಡಿದ ಶ್ರೀಕೃಷ್ಣನು ದೋಷದೂರನು. ನವನೀತಚೋರನಾದ ಶ್ರೀಕೃಷ್ಣನ ಸ್ಮರಣೆಯಿಂದ ಪಾಪಪರಿಹಾರವು. ಇದರಿಂದ ಅವನ ವ್ಯಾಪಾರ ವಿಶೇಷಗಳೆಲ್ಲವೂ ಚಿತ್ರ ವಿಚಿತ್ರವಾಗಿಯೇ ಕಂಡುಬರುವುವು. ಇದರಿಂದ **ವಿಚಿತ್ರ ಕರ್ಮನು.** ಜಗತ್ಸೃಷ್ಟ್ಯಾದಿ ವ್ಯಾಪಾರಗಳೆಲ್ಲವೂ ಶ್ರೀಹರಿಯ ವಿಚಿತ್ರ ಕರ್ಮಗಳೆನಿಸುವುವು. ಅಘಟನಾಘಟನಶಕ್ತನು.

ಅಪ್ರಾಕೃತ ಜ್ಞಾನಸ್ವರೂಪನಾದ್ದರಿಂದ, **ಸುಬೋಧನೆನಿಸಿದ್ದಾನೆ. ಸು–ಸಮೀಚೀನವಾದ (ಅಪ್ರಾಕೃತ) ಬೋಧ–ಜ್ಞಾನಯುಕ್ತನು.**

ಜ್ಞಾನಾನಂದಸ್ವರೂಪನಾದ್ದರಿಂದ, **ಸುಖಮಯಗಾತ್ರನು.** ಗಾತ್ರ – ಎಂದರೆ ಶರೀರವು. ಅವನ ಸ್ವರೂಪವೇ (ಶರೀರಾದ್ಯಂತವೂ) ಜ್ಞಾನ ಆನಂದಮಯವಾದದ್ದು.

ಅನಂತಕಲ್ಯಾಣಗುಣಗಣಧಾಮನು. ಆತಏವ, ಸರ್ವದೋಷ ವಿದೂರನು. ಅವನಿಗಿಂತ ಪವಿತ್ರವಸ್ತುವೇ ಅನ್ಯವಿಲ್ಲ. ಇದರಿಂದ **ಪರಮ ಪವಿತ್ರನು.**

ಸಮೀಚೀನವಾದ, ಚರಿತ್ರೆ ಉಳ್ಳವನು. ಅವನ ಕಥಾಶ್ರವಣದಿಂದ ಸಕಲಪಾಪ ಪರಿಹಾರಕವು. ಇದರಿಂದ **ಸುಚರಿತ್ರನು.**

ಈ ರೀತಿ ಸರ್ವೋತ್ತಮನಾದ ಶ್ರೀಹರಿಯು ಪರಮಶ್ರೇಷ್ಠನೆಂದು ತಿಳಿಸುತ್ತಾ, **ಗುಣತಾರತಮ್ಯ ಸಂಧಿಯನ್ನು** ಉಪಕ್ರಮಿಸುತ್ತಾರೆ. ॥೧॥

## ಪದ್ಯ–೨

**ಮೂಲ :–**

**ನಿತ್ಯ ನಿರ್ಮಲ ನಿಗಮವೇದ್ಯೋ ।**
**ತ್ಪತ್ತಿ ಸ್ಥಿತಿಲಯ ದೋಷವಿವರ್ಜಿತ ।**
**ಸ್ತುತ್ಯ ಪೂಜ್ಯ ಪ್ರಸಿದ್ಧ ಮುಕ್ತಾಮುಕ್ತಗಣ ಸೇವ್ಯ ॥**

**ಸತ್ಯಕಾಮ ಶರಣ್ಯ ಶಾಶ್ವತ ।**
**ಭೃತ್ಯವತ್ಸಲ ಭಯನಿವಾರಣ ।**
**ಅತ್ಯಧಿಕ ಸಂಪ್ರಿಯತಮ ಜಗನ್ನಾಥ ಮಾಂ ಪಾಹಿ ॥ ॥೨॥**

**ಅವತರಣಿಕೆ :-**

ನಿರ್ದೋಷನೂ, ಅನಂತಕಲ್ಯಾಣಗುಣಪರಿಪೂರ್ಣನೂ, ಜಗತ್ತಿನ ಸೃಷ್ಟ್ಯಾದಿ ಕಾರ್ಯಗಳಿಗೆ ಮುಖ್ಯಕರ್ತನಾದ, ಮುಕ್ತಾಮುಕ್ತಜೀವ ರಿಂದ ಸಂಸೇವ್ಯಮಾನನಾದ, ಭಕ್ತವತ್ಸಲನಾದ ಜಗದೀಶ್ವರನೇ ನಮ್ಮೆಲ್ಲ ರನ್ನು ಸಲಹೆಂದು, ಶ್ರೀಪರಮಾತ್ಮನ ಪರಮಗುಣಾವಳಿಗಳನ್ನು ಸೋತ್ರ ಮಾಡಿದ್ದಾರೆ. ॥೨॥

**ಪ್ರತಿಪದಾರ್ಥ :-**

**ನಿತ್ಯ** = ಅನಾದಿನಿತ್ಯವಾದ, **ನಿರ್ಮಲ** = ದೋಷರಹಿತ ನಾದವನು, **ನಿಗಮವೇದ್ಯ** = ಅನಂತವೇದಗಳಿಂದ ಸ್ತುತ್ಯನಾದವನು. **ಉತ್ಪತ್ತಿ ಸ್ಥಿತಿ ಲಯ** = ಜನನ, ಪಾಲನೆ, ಮರಣಗಳೆಂಬ, **ದೋಷ** = ದೋಷಗಳಿಂದ, **ವಿವರ್ಜಿತ** = ರಹಿತನಾದವನು, **ಸ್ತುತ್ಯ** = ಸಕಲಸಜ್ಜನರಿಂದ ಸ್ತುತ್ಯನು, **ಪೂಜ್ಯ** = ಸಮಸ್ತಮುಕ್ತಿಯೋಗ್ಯಜೀವ ರಿಂದ ಪೂಜಿತನಾದವನು, **ಪ್ರಸಿದ್ಧ** = ಜಗತ್ಪ್ರಸಿದ್ಧ ಪುರುಷನಾದವನು, **ಮುಕ್ತಾಮುಕ್ತಗಣಸೇವ್ಯ** = ಸಕಲಮುಕ್ತಜೀವರು, **ಅಮುಕ್ತ** ಜೀವರ ಸಮೂಹಗಳಿಂದ ಸಂಸೇವ್ಯಮಾನನು. **ಸತ್ಯಕಾಮ** = ಸತ್ಯಸಂಕ ಲ್ಪನು. **ಶರಣ್ಯ** = ಅನ್ಯರಿಂದ ಶರಣು ಮಾಡಿಸಿಕೊಳ್ಳುವವನು (ಅವನು ಇತರ್‍ಯಾರಿಗೂ ಶರಣಾಗತನಲ್ಲ), **ಶಾಶ್ವತ** = ಅನಾದಿನಿತ್ಯನು. **ಭೃತ್ಯ ವತ್ಸಲ** = ತನ್ನ ದಾಸರಲ್ಲಿ ಪ್ರೀತಿಯುಳ್ಳವನು. **ಭಯನಿವಾರಣ** = ಭಕ್ತರ ಭಯವನ್ನು ಪರಿಹರಿಸುವವನು, **ಅತ್ಯಧಿಕ ಸಂಪ್ರಿಯತಮ** =

ರಮಾದಿ ಸಮಸ್ತದೇವತಾಸಮೂಹಕ್ಕೆ ಅತ್ಯಂತಪ್ರಿಯನು. **ಜಗನ್ನಾಥ** = ಸರ್ವಜಗತ್ತಿಗೆ ಸ್ವಾಮಿಯಾದ ಶ್ರೀಹರಿಯೇ, **ಮಾಂ** = ನಮ್ಮ ಗಳನ್ನು, **ಪಾಹಿ** = ಸಂರಕ್ಷಿಸುವವನಾಗು. ॥೨॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನೂ ದೇವರ ಸ್ತೋತ್ರವೇ ಹೇಳತಾರೆ.

ಅನಾದಿನಿತ್ಯವಾದ, 'ದೋಷರಹಿತಗಳಾದ ಅನಂತವೇದಗಳಿಂದ ಸ್ತುತ್ಯನಾದವ. ಅಧಿಕಾರಿಗಳಿಗೆ ವೇದ ಮೂಲಕವಾಗಿ ಸರ್ವೋತ್ತಮನೆಂದು ವೇದ್ಯನಾದವ. ಜನನ, ಸ್ಥಿತಿ, ಮರಣಗಳೆಂಬೋ ದೋಷದಿಂದ ರಹಿತ ನಾದವ. ಸರ್ವರಿಂದಲೂ ಸ್ತೋತ್ರ ಪೂಜಾದಿಗಳ ಮಾಡಿಸಿಕೋತಕ್ಕವ. ಮುಕ್ತಿಯೋಗ್ಯರಿಂದ ಪ್ರಸಿದ್ಧನಾದವ. ಮುಕ್ತರಾದ ಬ್ರಹ್ಮಾದಿ ತೃಣಾಂತ ಜೀವರಿಂದಲೂ, ಅಮುಕ್ತರಾದ ಬ್ರಹ್ಮಾದಿ ತೃಣಾಂತ ಜೀವರಿಂದಲೂ ಸೇವ್ಯನಾದವ (ಗಣಶಬ್ದ ಸಮೂಹವಾಚಕವು). ಸತ್ಯವಾದ ಸಂಕಲ್ಪ ವುಳ್ಳವನು. ಅನ್ಯರಿಂದ ಶರಣು ಮಾಡಿಸಿಕೋತಕ್ಕವ. ತಾನು ಅನ್ಯರಿಗೆ ಶರಣಾಗತನಾದವನಲ್ಲ. ಸ್ವಾಮಿಭೃತ್ಯನ್ಯಾಯದಿಂದ-ಭಜಿಸಿದ ಭೃತ್ಯರಲ್ಲಿ ಶಾಶ್ವತವಾದ ವಾತ್ಸಲ್ಯವುಳ್ಳವ. ಭಕ್ತರ ಭಯ ಪರಿಹಾರ ಮಾಡತಕ್ಕವ. ರಮಾದೇವೇರಿಗೂ ದೇವತೆಗಳಿಗೂ ಅತ್ಯಧಿಕಪ್ರಿಯತಮನಾದವ. ಇಂಥಾ ಪರಮಾತ್ಮ ಚರಾಚರಸರ್ವಜಗತ್ತಿಗೆ ಸ್ವಾಮಿಯಾದ ಸರ್ವಾಭೀಷ್ಟ ಕೊಡ ತಕ್ಕ ಶ್ರೀನಾರಾಯಣ ದೇವರೇ, ನನ್ನ ಸಂರಕ್ಷಣೆ ಮಾಡೋವನಾಗು-ಎಂತ ಶ್ರೀಪರಮಾತ್ಮನ್ನ ಪ್ರಾರ್ಥನ ಮಾಡೋವರಾಗಿದ್ದಾರೆ.

**ವಿಶೇಷಾರ್ಥ :–** ವೇದದಿಂದಲೇ ತಿಳಿಸಿಕೋತಕ್ಕವನೇ ಹೊರತು, ಅನ್ಯವಿಷಯದಿಂದ ತಿಳಸಿಕೋತಕ್ಕವನಲ್ಲ. ಅನಂತವೇದಗಳಿಂದಲೂ ಸಾಕಲ್ಯೇನ ತಿಳಿಸಿಕೊಂಬೋದಕ್ಕೆ ಸಾಧ್ಯವಲ್ಲದವ ಮತ್ತು ಉತ್ಪತ್ತಿ, ಸ್ಥಿತಿ, ಲಯ ದೋಷವರ್ಜಿತ ಎಂದರೆ, ಪಾಂಚಭೌತಿಕದೇಹದಿಂದ ಉತ್ಪತ್ತಿಯಾಗಲೀ, ಅದೇ ದೇಹದಿಂದ ಕೆಲವು ಕಾಲ ಇರೋಣವಾಗಲೀ, ಅದೇ ದೇಹವನ್ನು ಬಿಟ್ಟು ಪುನಶ್ಚ ದೇಹಾಂತರ ಐದೋಣವಾಗಲೀ ಈ ದೋಷಗಳು ಇಲ್ಲದವ ಮತ್ತು ರಮಾದೇವೇರ ಜ್ಞಾನ ಪರಮಾತ್ಮನ ವಿಷಯದಲ್ಲಿ ನೂತನ ನೂತನ ಕಾಣತಕ್ಕ ಜ್ಞಾನ ವ್ಯುತ್ಪತ್ತಿ. ಅದು ಕೆಲವು ಕಾಲ ಸ್ಥಿತಿಯಾಗಿರೋಣ, ಅನಂತರ ಲಯವಾಗೋಣ ಇಂಥಾ ಉತ್ಪತ್ತಿ, ಸ್ಥಿತಿ, ಲಯದಿಂದ ಯುಕ್ತವಾದ ಜ್ಞಾನ, ಪರಮಾತ್ಮನ ವಿಷಯದಲ್ಲಿ ರಮಾದೇವೇರಿಗೆ ಉಂಟು. ಯೋಗ್ಯತಾನುಸಾರ ತದನ್ಯರಿಗೆ ಉಂಟು. ಪರಮಾತ್ಮನಾದರೋ ಲಕ್ಷ್ಮೀ ಆರಂಭ ಮಾಡಿತೃಣಾಂತ ಜೀವರ ಯೋಗ್ಯತಾ ಗುಣಗಳ ತಿಳಕೊಂಬೋ ವಿಷಯದಲ್ಲಿ ಪರಮಾತ್ಮನ ಜ್ಞಾನದಲ್ಲಿ, ಉತ್ಪತ್ತಿ ಸ್ಥಿತಿ ಲಯಾದಿಗಳು ಇಲ್ಲದಲೇ, ನಿತ್ಯವ್ಯಕ್ತವಾದ ಜ್ಞಾನವುಳ್ಳವ ಎಂತ– ತಾತ್ಪರ್ಯ ಮತ್ತು ಪರಮಾತ್ಮನ್ನ ಪ್ರಾಣಿಗಳು ವೇದದಿಂದಲೇ ತಿಳಕೊಂಡಂತೆ, ತ್ರಿವಿಧಜೀವರನ್ನೂ ಪರಮಾತ್ಮ ವೇದದಿಂದಲೇ ತಿಳಿಯಬೇಕಾದ್ದಿಲ್ಲ. ಸ್ವತಃ ತಿಳಿಯತಕ್ಕವ– ಎಂತಲೂ ತಾತ್ಪರ್ಯ. ॥೨॥

**೨. ಭಾವಪ್ರಕಾಶಿಕೆ :–**

ತಾತ್ಪರ್ಯ ಸ್ಪಷ್ಟವಾಗಿರುವುದು. ಲಕ್ಷ್ಮೀದೇವಿಯರ ಮಹಿಮೆಯನ್ನು ಹೇಳುತ್ತಾ, ಪರಮಾತ್ಮನಿಗೂ ಲಕ್ಷ್ಮೀದೇವಿಯರಿಗೂ ಇರುವ ತಾರತಮ್ಯವನ್ನು ಎರಡು ಪದ್ಯಗಳಿಂದ ಹೇಳುತ್ತಾರೆ. ॥೨॥

೩. **ಭಾವದರ್ಪಣ :–**

ನಿತ್ಯೇತಿ । ನಿತ್ಯ ನಿರ್ಮಲ = ದೋಷಶೂನ್ಯ, ಪ್ರತ್ಯಗಾತ್ಮ = ಅಂತರ್ಯಾಮಿ– ಎಂಬರ್ಥ. ॥೨॥

೪. **ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

ಪುನಾಃ ರಕ್ಷಣಮಾಶಾಸ್ತೇ ತಮೇವ – 'ನಿತ್ಯ' ಇತಿ. ॥೨॥

## ಕನ್ನಡಾರ್ಥ

ಮತ್ತೂ ಸಂರಕ್ಷಣವನ್ನು ಬೇಡಿಕೊಳ್ಳುತ್ತ ಆ ಪರಮಾತ್ಮನನ್ನೇ, ಜಗನ್ನಾಥವಿಠ್ಠಲನನ್ನೇ ಸ್ತುತಿಸುತ್ತಾರೆ 'ನಿತ್ಯ' ಎಂಬ ಪದ್ಯದಿಂದ. ॥೨॥

೫. **ಶ್ರೀಗುರುಹೃದಯ ಪ್ರಕಾಶಿಕೆ :–**

ನಿತ್ಯವಾದ್ದರಿಂದ ನಿರ್ದೋಷಗಳಾದ ವೇದಗಳಿಂದಲೇ ತಿಳಿಸಿಕೊಳ್ಳುವವನು. ದೇಹಸಂಬಂಧ ಜನನ, ಸ್ಥಿತಿ, ಮೃತಿ ಮೊದಲಾದ ದೋಷ ಇಲ್ಲದವನು. ಆದ್ದರಿಂದ ಸರ್ವರಿಂದಲೂ ಸ್ತುತ್ಯನು. ಪೂಜ್ಯನು. ಪ್ರಸಿದ್ಧನು. ಮುಕ್ತಾಮುಕ್ತ ಜೀವಗಣದಿಂದ ಸೇವ್ಯನು, ಸತ್ಯವೆಂಬ ನಿತ್ಯೇಚ್ಛೆವುಳ್ಳವನು. ಶರಣ್ಯನೆಂಬ ಮುಖ್ಯಾಶ್ರಯನು. ಶಾಶ್ವತ, ಎಂದರೆ– ಏಕರೀತಿ ಇರುವವನು, ಭೃತ್ಯರಾದ ಭಕ್ತರಲ್ಲಿ ಕೃಪೆಯುಳ್ಳವನು. ಆದ್ದರಿಂದ ಭಯಪರಿಹಾರಕನು. ಅತ್ಯಧಿಕ ಪ್ರೀತಿಗೆ ಪಾತ್ರನು. ಜಗನ್ನಾಥನಾದ ಇಂಥಾ ದೇವರು ನಮ್ಮನ್ನು ರಕ್ಷಿಸಲಿ– ಎಂದರ್ಥ. **ಸತ್ಯಕಾಮಃ ಸತ್ಯಸಂಕಲ್ಪಃ, ವೇದಾಹ್ಯೇನ್ಮೈನಂ ವೇದಯಂತೇತ್ಯಾದಿ ಶ್ರುತ್ಯ, ಸದಾ ನಿರಸ್ತಕುಹಕಂ**–ಎಂಬ ಭಾಗವತ ಮೊದಲಾದ ಅರ್ಥ ವಿವರಿಸಿತು. ॥೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಹರಿಯು ಅನಾದಿನಿತ್ಯನು. ಯಾವ ವಿಧವಾದ ವಿಕಾರಗಳೂ ಇಲ್ಲದ ಶಾಶ್ವತಸ್ವರೂಪನು. ಪುರಾತನಪುರುಷನು. ಇದರಿಂದ ಶಿಷ್ಟ ದೇಶಪ್ರಕಾರನಾಗಿರುವ ಶ್ರೀಹರಿಯು **ನಿತ್ಯನು.**

ಅನಂತಕಲ್ಯಾಣಗುಣಗಣ ಪರಿಪೂರ್ಣನು. ಸಕಲದೋಷಗಳಿಂದ ವಿವರ್ಜಿತನು. ಇತರ ಜೀವರಲ್ಲಿರುವಂತೆ ಯಾವ ವಿಧವಾದ ದೋಷವೂ ಲವ ಲೇಶವಾದರೂ ಶ್ರೀಪರಮಾತ್ಮನಲ್ಲಿ ಅನಾದ್ಯನಂತಕಾಲದಿಂದಲ್ಲೂ ಇಲ್ಲವೇ ಇಲ್ಲ. ಇದರಿಂದ ನಿರ್ದೋಷಿಯಾದ ನಿರಂಜನನು **ನಿರ್ಮಲನು.**

ಸದಾಗಮಗಳಿಂದ ಮಾತ್ರ ವೇದ್ಯನು. ವೇದಗಳು ಅನಂತಸಂಖ್ಯೆಯಲ್ಲಿವೆ. ಅನಂತವೇದರಾಶಿಗಳೆಲ್ಲವೂ ಅಪೌರುಷೇಯವಾದ ಶಬ್ದ ಭಂಢಾರವು. ಶ್ರೀಹರಿಯೋ ವೇದಗಳ ಮುಖ್ಯವಿಷಯನು. ಶ್ರೀಹರಿಯ ಅನಂತಾನಂತ ಗುಣ, ಕ್ರಿಯಾ, ರೂಪ, ವಿಶೇಷಗಳನ್ನು ಜಗತ್ತಿಗೆ ಪರಿಚಯ ಮಾಡಿಕೊಡುವ ಶಬ್ದ ಸಮೂಹವೇ ವೇದಗಳು. ವೇದಗಳೂ ಅನಾದಿ ನಿತ್ಯ ಹಾಗೂ ನಿರ್ದೋಷಗಳು. ಇದರಿಂದ ನಿತ್ಯ ಮತ್ತು ನಿರ್ಮಲ ಶಬ್ದಗಳೆರಡೂ ವೇದಗಳಗೆ ವಿಶೇಷಣಗಳು. ಸದಾಗಮೈಕವೇದ್ಯನಾದ ಆ ಸದಾನಂದನು ಜನನ ಮರಣ ವಿದೂರನು.

"**ಜಾತಸ್ಯ ಮೃತ್ಯುಃ ಧ್ರುವಂ**" –ಎಂಬ ವಚನಾನುಸಾರ, ಜನನ ವಿದ್ದವರಿಗೇ ಮರಣ ಪ್ರಾಪ್ತಿಯು. ಜನನವಿದೂರನಾದ ಜನಾರ್ದನನು ಮರಣ ರಹಿತನು. ನಿತ್ಯನೂ ಮತ್ತು ಶಾಶ್ವತನೂ ಆದ ನಿರ್ಮಲವಸ್ತುವಿಗೆ, ಸಾಮಾನ್ಯಮಾನವರಂತೆ ಹುಟ್ಟುವುದು, ಬೆಳವಣಿಗೆ, ದೇಹ ಪೋಷಣೆ, ದೇಹ ವಿಕಾರಾದಿಗಳು, ಅಂತ್ಯದಲ್ಲಿ ಮರಣ-ಇತ್ಯಾದಿ ದೋಷ ಗಳಾವುವೂ ಇಲ್ಲ. ಇದರಿಂದ **ಉತ್ಪತ್ತಿ (ಜನನ, ಸ್ಥಿತಿ –ಪಾಲನೆ–**

**ದೇಹಾಭಿವೃದ್ಧಿ), ಲಯ (ನಾಶ) ಮುಂತಾದ ದೋಷವಿವರ್ಜಿತನೆಂದು** ಹೇಳಿದ್ದಾರೆ.

ಸರ್ವಸಜ್ಜನರಿಂದ ಗೇಗೀಯಮಾನನು. ಭಕ್ತರು ಸದಾ ಆ ಭೃತ್ಯವತ್ಸಲನನ್ನು ಮುಕ್ತಕಂಠದಿಂದ ಹಾಡಿ ಸ್ತೋತ್ರ ಮಾಡುತ್ತಿರುವವರು. ಇದರಿಂದ **ಸ್ತುತ್ಯನು.**

ಸರ್ವಶ್ರೇಷ್ಠನಾದ್ದರಿಂದ, ಸಕಲದೇವತಾಗಣದಿಂದ ಆರಾಧ್ಯನು. ಇದರಿಂದ **ಪೂಜ್ಯನು.** ಜಗದೀಶ್ವರನಾದ ಆ ಜರಾಮರಣರಹಿತನಿಂದ ಸಕಲಚರಾಚರಾತ್ಮಕವಾದ ಜಗತ್ತು ನಿಯಮ್ಯವಾಗಿದೆ. ಇದರಿಂದ ಸರ್ವ ನಿಯಾಮಕನಾದ್ದರಿಂದ, **ಪ್ರಸಿದ್ಧ ಪುರುಷನು.** ಅಂದರೆ, ಸಮಾಭ್ಯಧಿಕಶೂನ್ಯನು. ಸರ್ವೋಚ್ಚದೇವತಾ.

ಲಿಂಗಭಂಗವನ್ನು ಹೊಂದಿ, ಸ್ವಸ್ವರೂಪಾನಂದಾವಿರ್ಭಾವರೂಪವಾದ ನಿತ್ಯಮುಕ್ತಿಸುಖವನ್ನು ಹೊಂದಿರುವ ಸಕಲಮುಕ್ತಜೀವರು. ಸಲಿಂಗರಾಗಿ ಇನ್ನೂ ಸಾಧನೆಯಲ್ಲಿರುವ ಸಮಸ್ತಅಮುಕ್ತಚೇತನರಿಂದ ಸಂಸೇವ್ಯಮಾನನು. ಇದರಿಂದ **ಮುಕ್ತಾಮುಕ್ತಾಗಣಸೇವ್ಯನು.**

ಸತ್ಯವೆಂಬ ನಿತ್ಯೇಚ್ಛೆವುಳ್ಳವನು. ಅಂದರೆ ಸತ್ಯಸಂಕಲ್ಪನು. ಇದರಿಂದ **ಸತ್ಯಕಾಮನು.**

ಸಕಲಭಗವದ್ಭಕ್ತರೂ ಶ್ರೀಹರಿಯನ್ನೇ ಶರಣು ಹೊಂದುತ್ತಾರೆ. ಆದರೆ ಅವನು ಯಾರಿಗೂ ಶರಣಾಗತನಲ್ಲ. ಸರ್ವತಂತ್ರಸ್ವತಂತ್ರನು. ಇದನ್ನು **ಶರಣ್ಯ** ವೆಂದಿದ್ದಾರೆ.

ಚತುರ್ವಿಧನಾಶರಹಿತನು. ನಿತ್ಯಶಾಶ್ವತವಾದ ಜ್ಞಾನಾನಂದಮಯನು. ಇದರಿಂದ ಅನಾದ್ಯನಂತಕಾಲದಿಂದಲೂ ಯಾವ ವಿಧವಾದ

ವಿಕಾರಗಳೂ ಇಲ್ಲದೇ, ಶಶ್ವದೇಕಪ್ರಕಾರನಾಗಿ ಇರುವವನಾದ್ದರಿಂದ **ಶಾಶ್ವತನು.**

ತನ್ನ ಭಕ್ತರಲ್ಲಿ ಅತ್ಯಂತ ಪ್ರೇಮವುಳ್ಳವನು. ಭಕ್ತರ ಆಪತ್ತಿಗೆ ಒದಗಿ, ಅವರ ದುರಿತಗಳನ್ನು ಪರಿಹಾರಮಾಡುವಪರಮ ಕರುಣಾಮಯನು. ಇದರಿಂದ **ಭೃತ್ಯವತ್ಸಲನು.** ಭೃತ್ಯರೆಂದರೆ – ಪಂಚಭೇದ ತಾರತಮ್ಯ ಜ್ಞಾನಯುಕ್ತರಾದ, ಹರಿಯ ಸರ್ವೋತ್ತಮತ್ವವನ್ನು ತಿಳಿದು, ಅದರಂತೆ ಉಪಾಸಿಸುವ ಭಕ್ತರು– ಎಂದರ್ಥ. ವಾತ್ಸಲ್ಯ–ವೆಂದರೆ ಪ್ರೀತಿ ಪ್ರೇಮ. ಭಕ್ತರಲ್ಲಿ ಅತ್ಯಂತ ಪ್ರೀತಿಯುಳ್ಳವನು- ಎಂದರ್ಥ.

ಸಂಸಾರವೆಂಬುದೇ ಭಕ್ತರಿಗೆ ಮಹಾ ಭಯಕಾರಣವು. ಜೀವರನ್ನು ಸಂಸಾರಸಾಗರದಿಂದ ಉತ್ತರಿಸಿ, ಕ್ಲೇಶಾದಿಗಳನ್ನು ಪರಿಹರಿಸಿ, ಅವರ ಭಯುವನ್ನು ದೂರ ಮಾಡುವುದರಿಂದ **ಭಯನಿವಾರಕನು.** ಅತ್ಯಧಿಕ ಪ್ರೀತಿಗೆ ಪಾತ್ರನು. **ಸಂಪ್ರಿಯ**– ಎಂದರೆ ನೈಜವಾದ ನಿಷ್ಕಪಟ, ಪ್ರೀತಿ.

ಚರಾಚರಾತ್ಮಕವಾದ ಸಕಲಜಗತ್ತನ್ನು ಸೃಷ್ಟಿಸಿ, ಪಾಲಿಸಿ, ನಿಯಾಮಕನಾಗಿರುವುದರಿಂದ **ಜಗನ್ನಾಥನು.**

ಹೇ ಜಗತ್ಪತಿಯಾದ ಅಂತಹ ಮಹಾಪ್ರಭುವೇ, ನಮ್ಮನ್ನು ಸದಾ ಸಂರಕ್ಷಿಸೆಂದು- ಭಕ್ತಿಭಾವದಿಂದ ತಾರತಮ್ಯದಲ್ಲಿ ಸರ್ವೋತ್ತಮನಾದ ಆ ಸಚ್ಚಿದಾನಂದನನ್ನು ಸಂಸ್ತುತಿಸಿದ್ದಾರೆ. ॥೨॥

## ಪದ್ಯ-೪

**ಮೂಲ :-**

**ಪರಮ ಪುರುಷನ ರೂಪಗುಣವನು ।
ಸರಿಸಿ ಕಾಂಬಳು ಪ್ರವಹದಂದದಿ ।
ನಿರುಪಮಳು ನಿರ್ದುಃಖ ಸುಖಸಂಪೂರ್ಣಳೆನಿಸುವಳು ॥
ಹರಿಗೆ ಧಾಮತ್ರಯಳೆನಿಸಿ ಆ ।
ಭರಣ ವಸನಾಯುಧಗಳಾಗಿ ।
ದ್ಧರಿಗಳನು ಸಂಹರಿಸುವಳು ಅಕ್ಷರಳೆನೆಸಿಕೊಂಡು ॥ ॥೪॥**

**ಅವತರಣಿಕೆ :-**

ಶ್ರೀಹರಿಯ ಛಾಯಾನುವರ್ತಿಯಾಗಿ, ಅವನಿಗೆ ಆಭರಣ, ವಸನ, ಆಯುಧಗಳಾಗಿ, ನಾನಾ ರೂಪಗಳಲ್ಲಿ ಅಕ್ಷರನಾಮಕಳಾದ ಶ್ರೀಲಕ್ಷ್ಮೀ ದೇವಿಯರ ವಿಚಾರ ತಿಳಿಸುತ್ತಾರೆ. ॥೪॥

**ಪ್ರತಿಪದಾರ್ಥ :-**

**ಪರಮಪುರುಷನ** = ಸರ್ವೋತ್ತಮನಾದ, ಪುರುಷರೂಪೀ ಶ್ರೀಮನ್ನಾರಾಯಣನ, **ರೂಪ** = ಅನಂತರೂಪವಿಶೇಷಗಳು, **ಗುಣ ವನು** = ಕಲ್ಯಾಣಗುಣಗಳನ್ನು, **ಅನುಸರಿಸಿ** = ಛಾಯಾನುವರ್ತಿ ಯಂತೆ ಅನುಸರಿಸಿ, **ಪ್ರವಹದಂದದಿ** = ಪ್ರವಾಹದೋಪಾದಿಯಲ್ಲಿ (ನಿರಂತರವಾಗಿ), **ಕಾಂಬಳು** = ತನ್ನ ಯೋಗ್ಯತಾನುಸಾರ ಕಾಣು ತ್ತಾಳೆ (ಸಾಕಲ್ಯೇನ ತಿಳಿಯಲು ಸಾಧ್ಯವಿಲ್ಲ). **ನಿರುಪಮಳು** = ಶ್ರೀಹರಿಯು

ನಂತರ, ಚೇತನವರ್ಗದಲ್ಲಿ ಉಪಮಾನ ಸದೃಶಳಲ್ಲದ, **ನಿರ್ದುಃಖ** = ದುಃಖಕರವಾದ ಲಿಂಗದೇಹದ ಸಂಪರ್ಕವಿಲ್ಲದೇ, ತಜ್ಜನಿತ ಕ್ಲೇಶಾದಿಗಳಿಂದ ದೂರರಾಗಿ, ನಿತ್ಯಮುಕ್ತರಾದ ಶ್ರೀಲಕ್ಷ್ಮೀದೇವಿಯು, **ಸುಖಸಂಪೂರ್ಣಳೆನಿಸುವವಳು** = ಪರಮಾತ್ಮನಪೇಕ್ಷೆಯಾ, ಬ್ರಹ್ಮಾದಿಗಳಿಗಿಂತ ಅಧಿಕವಾದ ಜ್ಞಾನ ಆನಂದಗಳಿಂದ ಪೂರ್ಣಳೆಂದು ಕರೆಯಿಸುತ್ತಾಳೆ. **ಹರಿಗೆ** = ಶ್ರೀಪರಮಾತ್ಮನಿಗೆ, **ಧಾಮತ್ರಯಳೆನಿಸಿ** = ಶ್ವೇತದ್ವೀಪ, ಅನಂತಾಸನ, ವೈಕುಂಠಗಳೆಂಬ ಮೂರು ಮುಕ್ತಸ್ಥಾನಗಳಲ್ಲಿ ತದ್ರೂಪಳಾಗಿ, ಲಕ್ಷ್ಮ್ಯಾತ್ಮಕವಾಗಿ ಇದ್ದು, **ಆಭರಣ** = ಶ್ರೀಹರಿಯ ಸರ್ವಾಭರಣಗಳು, **ವಸನ** = ಉಡುವ, ಹೊದೆಯುವ ಪೀತಾಂಬರಾದಿ ವಸ್ತ್ರಗಳು, **ಆಯುಧಗಳಾಗಿ** = ನಾನಾ ವಿಧವಾದ ಆಯುಧವಿಶೇಷಗಳು ತಾನಾಗಿ ಇದ್ದು, **ಅರಿಗಳನು** = ದುರ್ಗಾರೂಪದಿಂದ ಭಗವದ್ವೇಷಿಗಳಾದ ದೈತ್ಯರನ್ನು, **ಅಕ್ಷರಳೆನಿಸಿಕೊಂಡು** = ಯಾವ ಪ್ರಕಾರದಿಂದಲೂ ದೇಹನಾಶರಹಿತಳಾಗಿ, ಅಕ್ಷರನಾಮಕಳಾಗಿ, **ಸಂಹರಿಸುವಳು** = ಸಂಹಾರ ಮಾಡುವಳು, ॥೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಲಕ್ಷ್ಮೀದೇವೀರ ತಾರತಮ್ಯವನ್ನ ಹೇಳತಾರೆ.

ಸರ್ವೋತ್ತಮನಾದ ಪುರುಷನಾಮಕ ಶ್ರೀನಾರಾಯಣದೇವರ ರೂಪವೇನು, ಗುಣಗಳೇನು- ಇವುಗಳನ್ನ ತಮ್ಮ ಯೋಗ್ಯತಾಕ್ಕೆ ಅನುಸರಿಸಿ, ಪರಮಾತ್ಮನ ತರುವಾಯ ನಿರುಪಮರಾದ, ದುಃಖಕರವಾದ ಇನ್ನೂ ಅಜ್ಞಾನಪ್ರದವಾದ ಲಿಂಗದೇಹದಿಂದ ಅನಾದಿಕಾಲದಿಂದಲೂ ರಹಿತರಾಗಿ, ತಜ್ಜನಿತ ದುಃಖಾದಿಗಳಿಂದ ರಹಿತರಾದ, ನಿತ್ಯಮುಕ್ತರಾದ ರಮಾದೇವೇರು

ಪರಮಾತ್ಮನ ಗುಣರೂಪಗಳ ಪ್ರವಾಹದೋಪಾದಿಯಲ್ಲಿ ಕಾಣೋವರಾಗ ತಾರೆ. ಎಂದರೆ, ಗಂಗಾಪ್ರವಾಹ ನಿಲ್ಲದೇ ಓಡತಾ ಪರಸ್ಪರ ಅವಿಚ್ಛಿನ್ನ ವಾಗಿ ಇರತದೆ. ತದ್ವತ್ ಆದ್ಯಂತವಿಲ್ಲದ ಶ್ರೀಪರಮಾತ್ಮನ ಅನಂತಾನಂತ ರೂಪಗಳ ಗುಣಗಳ ಪ್ರವಾಹದೋಪಾದಿಯಲ್ಲಿ ಅಪರಿಚ್ಛಿನ್ನವಾಗಿ ನಾನಾ ವಿಚಿತ್ರಕರಗಳಾದ ಆದ್ಯಂತಗಳು ಇಲ್ಲದೇ ಪ್ರವಹಿಸತಕ್ಕ ಗುಣ ರೂಪಗಳ ಕಾಣೋವರಾಗತಾರೆ. ಇನ್ನೂ ಪರಮಾತ್ಮನಪೇಕ್ಷಯಾ ಬ್ರಹ್ಮಾದಿ ಜೀವರು ಗಳಿಗಿಂತಲೂ ಅಧಿಕವಾದ ಜ್ಞಾನಾನಂದಾದಿಗಳಿಂದ ಚೆಂದಾಗಿ ಪೂರ್ಣರು-ಎಂತ ಕರಸೋವರಾಗತಾರೆ. ಈ ರಮಾದೇವೇರು ತಮ್ಮ ಪತಿಯಾದ ಶ್ರೀ ಪರಮಾತ್ಮಗೆ ಶ್ವೇತದ್ವೀಪ, ಅನಂತಾಸನ, ವೈಕುಂಠ-ಈ ಮೂರು ಸ್ಥಳ ಗಳಲ್ಲಿ ತದ್ರೂಪರಾಗಿ, ಸಾಕ್ಷಾತ್ತಾಗಿ ತಾವೇ ದೇವರಿಗೆ ಮನಿರೂಪವಾಗಿ ಇದ್ದಾರೆ. ಇನ್ನೂ ಈ ಧಾಮತ್ರಯಗತ ತಮ್ಮ ಪತಿಯಾದ ಪರಮಾತ್ಮಗೆ, ಧರಿಸತಕ್ಕ ಸರ್ವಾಭರಣವೇನು, ಉಡತಕ್ಕ ಹೊದಿಯುತಕ್ಕ ನಾನಾ ವಿಚಿತ್ರ ವಾದ ಪೀತಾಂಬರರಾದಿ ವಸ್ತುಗಳೇನು, ಧರಿಸತಕ್ಕ ಆಯುಧಗಳೇನು-ತಾವೇ ಆಗಿ, ಈ ಪ್ರಕಾರ ಸರ್ವವೂ ತಾವೇ ಆಗಿದ್ದು, ಶ್ರೀಪರಮಾತ್ಮನ ಸೇವಾ ಮಾಡತಾ, ನಾಶಯುಕ್ತವಾದ ದೇಹದಿಂದ ಅನಾದ್ಯನಂತಕಾಲ ದಿಂದಲೂ ರಹಿತರು-ಎಂತ ಕರಸಿಕೊಂಡು, ದುರ್ಗಾರೂಪದಿಂದ ಭಗವಂತ ನಲ್ಲಿ ದ್ವೇಷ ಮಾಡತಕ್ಕ ಲಿಂಗಭಂಗರಾದ ದೈತ್ಯರಿಗೆ ಮಹಾದುಃಖಗಳ ಕೊಡತಾ, ಸಲಿಂಗರಾದ ದೈತ್ಯರ ಸಂಹಾರ ಮಾಡತಾ ಇರತಾರೆಂತ ತಾತ್ಪರ್ಯ. ॥೩॥

## ೨. ಭಾವಪ್ರಕಾಶಿಕೆ :-

ಪರಮಾತ್ಮನ ಪಟ್ಟದರಸಿಯರಾನ ರಮಾದೇವಿಯರು. ಪರಮಾತ್ಮನ ರೂಪಗುಣಗಳನ್ನು, ಗಂಗಾಪ್ರವಾಹಾದಿಗಳಲ್ಲಿ ಹೇಗೆ ನೀರು ಹೋಗುತ್ತಾ ಹಿಂದೆ ಬರುತ್ತಿರುವುದೋ,ಹಾಗೆ ತಾವು ಎಷ್ಟು ರೂಪ ಗುಣಗಳನ್ನು ಕಂಡರೂ ಮತ್ತೂ ಅಪರಿಮಿತವಾದ ಗುಣ ರೂಪಗಳನ್ನು ಹುಡುಕುತ್ತಾ ಕಾಣುತ್ತಿರು

ವರು. ಪರಮಾತ್ಮನಿಗೆ ಉಪಮಾನ ಕೊಡಲು ಹೇಗೆ ಆವನಿಗೆ ಸಮಾನ ರಿಲ್ಲವೋ, ರಮಾದೇವಿಯುರೂ ಸಹ ಉಪಮಾನವಿಲ್ಲದವರು. ಹೇಗೆಂದರೆ, ರಮಾದೇವಿಯುರಕ್ಕಿಂತಲೂ ಪರಮಾತ್ಮನು ಉತ್ತಮನಾದವನು. ಬ್ರಹ್ಮಾದಿ ಗಳೆಲ್ಲರೂ ಅವರರಾದವರು. ಈಕೆಗೆ ಸಮರ್ಯ್ಯಾರು ? ಆದ್ದರಿಂದ ನಿರುಪ ಮರು. ನಿರ್ದುಷ್ಟವಾದ ಆನಂದವನ್ನು ಭಗವದನುಗ್ರಹದಿಂದ ಬ್ರಹ್ಮಾದಿ ಗಳಕ್ಕಿಂತಲೂ ಅತ್ಯಧಿಕವಾಗಿ ಅನುಭವಿಸುತ್ತಿರುವವರು. ಪರಮಾತ್ಮನು ವಾಸಮಾಡುವ ಶ್ವೇತದ್ವೀಪಾದಿ ಮೂರುಲೋಕಗಳಲ್ಲೂ ಮನೆಗಳಾಗಿ ತಾವೇ ಸೇವಿಸುವರು. ಪರಮಾತ್ಮನು ಧರಿಸಿರುವ ವಸ್ತ್ರಗಳು, ಒಡವೆಗಳು, ಆಯುಧಗಳು– ಇವೆಲ್ಲವೂ ರಮಾಸ್ವರೂಪಗಳೇ, ಆಗಿರುವವು. ಅಂದರೆ, ಆಯಾರೂಪಗಳಿಂದ ರಮಾದೇವಿಯುರೇ ಇದ್ದು, ಭಗವಂತನ ಸೇವೆಮಾಡುತ್ತಾ ಗದಾ ಚಕ್ರಾದಿ ರೂಪಗಳಿಂದಿದ್ದು, ಶತ್ರುಗಳನ್ನು ಸಂಹರಿಸುವರು. ಯಾವಾ ಗಲೂ, ನಾಶವಿಲ್ಲದ ಕಾರಣ "ಅಕ್ಷರಪುರುಷ"–ಎಂಬ ಹೆಸರು ಈಕೆಗೆ ಬಂದಿರುವುದು. ॥೩॥

**೩. ಭಾವದರ್ಪಣ :–**

ಪರಮೇತಿ । ಸರ್ವೋತ್ತಮನ ಅರಸಿ = ಪಟ್ಟದರಾಣಿ ಎಂದರ್ಥ । ಅಥವಾ ಶ್ರೀಹರಿಯು ಗುಣಗಳನ್ನ ಹುಡುಕಿಕೊಂಬುವಳು– ಎಂಬರ್ಥ. ಅಕ್ಷರಳು = ನಾಶರಹಿತಳು. "ಲಕ್ಷ್ಮೀರಕ್ಷರದೇಹತ್ವಾದಿತಿ" **ವಿಷ್ಣುತತ್ವ ನಿರ್ಣಯೋಕ್ತೇಃ** ॥೩॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–**

ಶ್ರೀಮನೋಹರ ಪರಮ ಪ್ರೇಮ ನಿಂತಂಬಿನೀಂ ಇಂದಿರಾಂ ಪದ್ಯದ್ವ ಯೇನ ಸ್ತೌತಿ-"ಪರಮ" ಇತಿ- ॥

ರೂಪಗುಣಾನ್ ಅಪ್ಯನುಸ್ಯೂತಾನ್ ಪ್ರವಾಹವತ್ ದ್ರಕ್ಷ್ಯತಿ ಇತಿ ಯಾವತ್ ॥ 'ಹರಿಗೆ' ಇತ್ಯನೇನ ತದ್ರಮಣಪ್ರದೇಶ ಏವ ರಮಾತ್ಮಾ ನೇತರಃ ಇತಿ ಕೇಚಿತ್ ॥ ಅನ್ಯತ್ರಾಪಿ ಏವಮೇವ ॥ "ಶ್ರೀರೇವ ಲೋಕ ರೂಪೇಣ ವಿಷ್ಣೋಃ" ಇತ್ಯುಕ್ತ್ವಮ್ ॥ ॥ 'ಅರಿ' ಇತಿ ॥ ಹರ್ಯಾ ಯುಧಾನಾಂ ರಮಾತ್ಮಕತ್ವಾತ್ ಹನನಂ ಯುಕ್ತಮೇವ ॥ ಸ್ವಯಮವಿನಾ ಶಿತ್ವೇ ಚ ಏತತ್ ಇತ್ಯತ ಆಹ 'ಅಕ್ಷರ' ಇತಿ. ॥೩॥

## ಕನ್ನಡಾರ್ಥ

ನಾರಾಯಣನ ಪರಮಪ್ರಿಯಳಾದ ಇಂದಿರಾದೇವಿಯನ್ನು ಈ ಎರಡು ಪದ್ಯಗಳಿಂದ ಸ್ತುತಿಸುತ್ತಾರೆ. ಪರಮಾತ್ಮನ ರೂಪ ಹಾಗೂ ಗುಣಗಳು ಓತಪ್ರೋತವಾಗಿ ತುಂಬಿ ಇರುವುವು. ಪೋಣಿಸಲ್ಪಟ್ಟಂತೆ ವ್ಯಾಪ್ತದ ಅಸಂಖ್ಯಾನಂತ ಗುಣಗಳನ್ನು ಪ್ರವಾಹಗಳ ಪರಂಪರೆಯ ರೂಪದಿಂದ ನೋಡುತ್ತಾಳೆ.

'ಹರಿಗೆ ಧಾಮತ್ರಯ'– ಪರಮಾತ್ಮನ ರಮಣ ಪ್ರದೇಶರೂಪಳು ರಮಾ– ಎಂದು ಅಭಿಪ್ರಾಯ. "ಶ್ರೀಮಹಾಲಕ್ಷ್ಮೀದೇವಿಯೇ ವಿಷ್ಣುವಿನ ಲೋಕರೂಪಗಳಿಂದ ಅವನನ್ನು ಆನಂದಪಡಿಸುವಳು,"– ಎಂದು ಪ್ರಮಾಣ ಗಳಿರುತ್ತವೆ. ಹರಿಯ ಚಕ್ರ ಮುಂತಾದ ಆಯುಧಗಳು ರಮಾರೂಪವಾದು ದರಿಂದ "ಅರಿಗಳನೆ ಸಂಹರಿಪಳು"–ಎಂಬುದು ಯುಕ್ತವೇ ಆಗಿರುತ್ತದೆ. ತಾನು ಸ್ವತಃ ನಾಶರಹಿತಳಾಗಿದ್ದರೆ. ಇದು ಸಲ್ಲುತ್ತದೆ. ಆದುದರಿಂದ 'ಅಕ್ಷರ' ಎಂದು ಹೇಳಿರುತ್ತಾರೆ. ॥೩॥

### ೫. ಗುರುಹೃದಯಪ್ರಕಾಶಿಕೆ :–

ತದಧೀನ ರಮಾದೇವಿಯರನ್ನು ಎರಡು ಪದ್ಯದಿಂದ ಪರಮ– ಎಂದು ಮೊದಲು ಮಾಡಿ ಸ್ತುತಿಸುತ್ತಾರೆ. ಪರಮಪುರುಷನಾದ ದೇವರ ರೂಪ

ಗುಣಗಳನ್ನು ಅನುಸರಿಸಿ ಅಂದರೆ, ಅನಾದಿಯಿಂದ ಆಶ್ರಯಿಸಿ, ಸೇವಿಸಿ, ಪ್ರವಾಹದಂತೆ ನೂತನ ನೂತನ ರೂಪಗುಣಾತಿಶಯಗಳನ್ನು ಕಾಣುತ್ತಾ ಇರುವ ಅಕ್ಷರಳು ಎಂದರೆ, ಪ್ರಾಕೃತಶರೀರ ಸಂಬಂಧ ಇಲ್ಲದ್ದರಿಂದ ಅಕ್ಷರ ವೆಂಬ ನಾಶರಹಿತಸ್ವರೂಪಳಾದ ರಮಾದೇವಿಯು ನಿರುಪಮಳು–ಎಂದರೆ, ಬ್ರಹ್ಮಾದಿಗಳಲ್ಲಿ ಸಮರ್ರ್ಯಾರೂ ಇಲ್ಲದವಳು ಅಥವಾ ದೇಶ ಕಾಲಗಳಿಂದ ದೇವರಿಗೆ ಸರಿಯಾದವಳು. ಶ್ರೀಹರಿಗೆ ಧಾಮತ್ರಯವೆನಿಸಿ, ಅಂದರೆ, ಶ್ವೇತ ದ್ವೀಪ, ಅನಂತಾಸನ ವೈಕುಂಠವೆಂಬ– ಮೂರು ಧಾಮವೆಂಬ ಲೋಕ ರೂಪಳೂ ಆಗಿ, ಹಾರ ಮೊದಲಾದ ಆಭರಣವೂ ಆಗಿ, ಚಕ್ರಾದಿ ಆಯುಧ ರೂಪಳೂ ಆಗಿ, ಪೀತಾಂಬರಾದಿ ವಸ್ತ್ರರೂಪಳೂ ಆಗಿ, ದೇವರ ಶತ್ರು ಗಳನ್ನು ಸಂಹರಿಸಿ, ನಿರ್ದುಃಖ ಸುಖಸಂಪೂರ್ಣಳು ಎನಿಸಿಕೊಂಬುವಳು. ॥೩॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಿಂದ ಶ್ರೀ ಲಕ್ಷ್ಮೀದೇವಿಯರ ವಿಚಾರ ತಿಳಿಸುತ್ತಾರೆ. ಶ್ರೀಹರಿಯು ಸರ್ವೋತ್ಕೃಷ್ಟನು. ಸರ್ವೋತ್ತಮನಾದ ಶ್ರೀಪರಮಾತ್ಮನಿಗೆ ಪರಮ-ಅಂತ ನಾಮ. ಪರಮನಾದ ಶ್ರೀಹರಿಯು ಪುರುಷನಾಮಕನಾಗಿ, ಬ್ರಹ್ಮಾಂಡದ ಒಳಗೂ ಮತ್ತು ಹೊರಗೂ, ಸರ್ವಚೇತನರ ದೇಹಾ ದ್ಯಂತವೂ ಹರಡಿ ವ್ಯಾಪಿಸಿದ್ದಾನೆ. ಇದರಿಂದ **ಪರಮಪುರುಷನು.**

ಆ ಪರಮಪುರುಷನ ರೂಪ, ಗುಣ, ಕ್ರಿಯಾದಿಗಳು ಅನಂತಾನಂತ. ಪ್ರತಿ ರೂಪ ಗುಣ, ಕ್ರಿಯೆ ಪರಿಪೂರ್ಣವಾಗಿ ಅಪರಿಚ್ಛಿನ್ನವಾದದ್ದು. ಅವು ಶ್ರೀಹರಿಯ ಸ್ವರೂಪಭೂತಲಕ್ಷಣಗಳೇ. ಇಂತಹ ಅನಂತಾನಂತ ಗುಣವಿಶೇಷಗಳು, ರೂಪ ವಿಶೇಷಗಳು, ಕ್ರಿಯಾವಿಶೇಷಗಳು– ಇವೆಲ್ಲವು ತುಂಬಿ ಹರಿಯುತ್ತಿರುವ ಪ್ರವಾಹದಂತೆ ನಿತ್ಯ ನೂತನವಾಗಿವೆ. ಅವು ಅಪ

ರಿಮಿತ, ನದಿಯಲ್ಲಿ ಪ್ರವಾಹವು ಒಂದಾದ ಮೇಲೊಂದು ನಿರಂತರವಾಗಿ ಬರುತ್ತಲೇ ಇರುತ್ತದೆ. ಅವುಗಳಿಗೆ ಆದ್ಯಂತಗಳಿಲ್ಲ. ನಿತ್ಯ ನಿರಂತರವಾಗಿ ಶ್ರೀಹರಿಯ ರೂಪಗುಣ ಕ್ರಿಯಾದಿಗಳು ಪ್ರವಾಹದಂತೆ-ಎಂದಿದ್ದಾರೆ.

ಶ್ರೀ ಲಕ್ಷ್ಮೀದೇವಿಯು ಶ್ರೀಹರಿಯ ವಕ್ಷೋನಿವಾಸಿನಿ. ಅವನಿಗೆ ನಿತ್ಯಾವಿಯೋಗಿನಿಯು. ಶ್ರೀಹರಿಗೂ ಮತ್ತು ಶ್ರೀರಮಾಗೂ ಎಂದೆಂದಿಗೂ ವಿಯೋಗವೇ ಇಲ್ಲ. ಶ್ರೀಹರಿಯಿಂದ ವಿಯೋಗರಹಿತಳಾದ ಶ್ರೀಲಕ್ಷ್ಮೀ ದೇವಿಯು ಪರಮಪುರುಷನ ಅನಂತಾನಂತ ರೂಪ, ಗುಣ, ಕ್ರಿಯಾದಿಗಳನ್ನು ತನ್ನ ಯೋಗ್ಯತಾನುಸಾರ ನಿತ್ಯಾನುವರ್ತಿಯಾಗಿ, ಪ್ರವಾಹದಂತೆ ಕಾಣುತ್ತಿದ್ದಾಳೆ. ಪ್ರತಿ ಕ್ಷಣಕ್ಷಣಕ್ಕೂ ನಿತ್ಯ ನೂತನವಾಗಿ ಕಾಣಿಸುತ್ತಾನೆ- ಶ್ರೀಹರಿ ಆ ಕಮಲಲೋಚನೆಗೆ. ನಿತ್ಯಾವಿಯೋಗಿನಿಯಾದ ಶ್ರೀ ರಮಾ ದೇವಿಗೂ ಸಹ, ಶ್ರೀಹರಿಯ ಗುಣ ರೂಪ ಕ್ರಿಯೆಗಳನ್ನು ಸಾಕಲ್ಯೇನ ತಿಳಿಯಲು ಸಾಧ್ಯವಿಲ್ಲ. ಆವಳ ಯೋಗ್ಯತೆಗೆ ಅನುಸಾರ ತಿಳಿಸುತ್ತಾನೆ.

ಜೀವಕೋಟಿಪ್ರವಿಷ್ಟರಾದ ಬ್ರಹ್ಮ ವಾಯುಗಳಿಗಿಂತ ಕೋಟಿ ಗುಣದಿಂದ ಉತ್ತಮಳು ಶ್ರೀ ರಮಾ. ಶ್ರೀ ಹರಿಯ ನಂತರ ಶ್ರೀ ಲಕ್ಷ್ಮೀ ದೇವಿಗೆ ಸಮರೂ, ಅಧಿಕರೂ ಆದ ಇತರ ಚೇತನರ್ಯಾರೂ ಇಲ್ಲ. ಇದರಿಂದ **ನಿರುಪಮಳು.** ಅಂದರೆ, ಸದೃಶರಹಿತಳು. (ಉಪಮಾನ ರಹಿತಳು) ಶ್ರೀಇಂದಿರಾ ಇಂದು ಶೇಖರನ ಮಿತ್ರನಾದ ಶ್ರೀಹರಿಯ ಪೂರ್ಣಾನುಗ್ರಹದಿಂದ, ನಿರುಪಮ ಹಾಗೂ ನಿರ್ದುಷ್ಟವಾದ ಆನಂದವನ್ನು ಬ್ರಹ್ಮಾದಿಗಳಿಗಿಂತ ಅತ್ಯಧಿಕವಾಗಿ ಅನುಭವಿಸುತ್ತಿರುವರು.

ನಿತ್ಯಮುಕ್ತಳಾದ ಶ್ರೀಲಕ್ಷ್ಮಿಗೆ ಲಿಂಗದೇಹದ ಸಂಬಂಧವೇ ಇಲ್ಲ. ಇದರಿಂದ ಪ್ರಾಕೃತ ಗುಣಜನ್ಯವಾದ ದುಃಖಾದಿಗಳ ಲೇಪವೇ ಇಲ್ಲ. ಆದ್ದರಿಂದ ನಿತ್ಯಮುಕ್ತಳೂ, ನಿರ್ವಿಕಾರಳೂ ಆದ ಆ ನಿರುಪನ ಪತ್ನಿಯು **ನಿರ್ದುಃಖಳು.**

ಜ್ಞಾನಾನಂದಪೂರ್ಣಳು. ಶ್ರೀಮನ್ನಾರಾಯಣನಿಗೆ ನಿವಾಸಸ್ಥಾನವೆಂದೆನಿಪ, ವೈಕುಂಠ, ಶ್ವೇತದ್ವೀಪ ಮತ್ತು ಅನಂತಾಸನವೆಂಬ ಮುಕ್ತಿ ಧಾಮತ್ರಯಗಳು ಲಕ್ಷ್ಮ್ಯಾತ್ಮಕವಾಗಿವೆ.

ಅಂದರೆ, ವೈಕುಂಠ, ಶ್ವೇತದ್ವೀಪ, ಅನಂತಾಸನರೂಪಳಾಗಿ, ಅಲ್ಲಿ ವಿದ್ಯಮಾನನಾಗಿರುವ ಮೋಕ್ಷಪ್ರದನಾದ ವಾಸುದೇವನನ್ನು ನಾನಾ ಪರಿಯಲ್ಲಿ ಸೇವಿಸುತ್ತಿರುವಳು. ಶ್ರೀಮಹಾಲಕ್ಷ್ಮೀದೇವಿಯೇ ವಿಷ್ಣುವಿನ ಲೋಕರೂಪಗಳಿಂದ ಅವನನ್ನು ಆನಂದಪಡಿಸುತ್ತಿರುವಳು. ಆದ್ದರಿಂದ ಶ್ರೀಹರಿಗೆ **ಧಾಮತ್ರಯಳೆನಿಸಿದ್ದಾಳೆ.**

ಶ್ರೀಹರಿಯು ಧರಿಸಿರುವ, ವೈಜಯಂತೀ– ಎಂಬ ಹಾರ, ಕಿರೀಟ ಕುಂಡಲಾದಿ ನಾನಾ ವಿಧವಾದ ಆಭರಣಗಳ ರೂಪದಲ್ಲಿ ತಾನೇ ಇದ್ದು, ಎಡಬಿಡದೆ ಶ್ರೀಹರಿಯನ್ನು ಸೇವಿಸುತ್ತಿರುವಳು.

ಶ್ರೀಹರಿಯು ಧರಿಸಿರುವ ಪೀತಾಂಬರ, ಮೇಲುವಸ್ತ್ರ, ಟೊಂಕಪಟ್ಟಿ-ಮುಂತಾದ ವಸ್ತ್ರಗಳ ರೂಪಗಳಾಗಿ, ಆ ಸ್ವರಮಣನನ್ನು ನಿತ್ಯ ಸೇವಿಸುತ್ತಿರುವಳು.

ಶ್ರೀಹರಿಯು ಧರಿಸಿರುವ ಶಂಖ, ಚಕ್ರ, ಗದಾ, ಪದ್ಮಾದಿ ಆಯುಧಗಳ ರೂಪದಲ್ಲಿ ನಿರಂತರ ಸೇವೆಗೈಯ್ಯುತ್ತಿರುವಳು.

ಇದರಿಂದಲೇ **ಶ್ರೀ ಪುರಂದರದಾಸವರ್ಯರು,** ಶ್ರೀ ಲಕ್ಷ್ಮಿಯನ್ನು ಕುರಿತು, **"ಏನು ಧನ್ಯಳೋ ಲಕುಮಿ ಎಷ್ಟು ಮಾನ್ಯಳೋ"**– ಎಂಬ ಕೀರ್ತನೆಯಲ್ಲಿ – **"ಛತ್ರ ಚಾಮರ ವ್ಯಜನ ಪರ್ಯಂಕ । ಪಾತ್ರ ರೂಪದಲಿ ನಿಂತು । ಚಿತ್ರ ಚರಿತನಾದ ಹರಿಯ ತಾನೇ ನಿತ್ಯ ಸೇವೆ ಮಾಡುತಿಹಳು."** – ಎಂದು ಸ್ತೋತ್ರ ಮಾಡಿದ್ದಾರೆ.

ಶ್ರೀಹರಿಯ ಆಯುಧರೂಪಳಾಗಿ, ಭಗವದ್ವೇಷಿಗಳಾದ ಅಸುರರನ್ನು ದುರ್ಗಾರೂಪಳಾಗಿ ಸಂಹರಿಸುವಳು. ಇದರಿಂದ **ಅರಿಗಳನು ಸಂಹರಿಪಳು**– ಎಂದಿದ್ದಾರೆ.

ನಿತ್ಯಮುಕ್ತಳೂ, ನಿರ್ವಿಕಾರಳೂ ಆದ ಶ್ರೀ ಲಕ್ಷ್ಮೀದೇವಿಯು ನಾಶರಹಿತಳು. ಶ್ರೀಹರಿಯಂತೆಯೇ ಶಶ್ವದೇಕಪ್ರಕಾರಳು. ಇತರ ಜೀವರಂತೆ ಚತುರ್ವಿಧನಾದ ನಾಶಗಳಿಲ್ಲ. ಇದರಿಂದ **ಅಕ್ಷರನಾಮಕಳೆನಿಸಿ** ದ್ದಾಳೆ (ಕ್ಷರ–ನಾಶ. ಅಕ್ಷರ–ನಾಶರಹಿತಳು.) ॥೩॥

## ಪದ್ಯ-೪

**ಮೂಲ :–**

**ಈತಗಿಂತಾನಂತ ಗುಣದಲಿ ।**
**ಶ್ರೀ ತರುಣಿ ತಾ ಕಡಿಮೆಯೆನಿಪಳು ।**
**ನಿತ್ಯಮುಕ್ತಳು ನಿರ್ವಿಕಾರಳು ತ್ರಿಗುಣವರ್ಜಿತಳು ॥**
**ಧೌತಪಾಪ ವಿರಿಂಚಿ ಪವನರ ।**
**ಮಾತೆಯೆನಿಪ ಮಹಾಲಕುಮಿ ವಿ ।**
**ಖ್ಯಾತಳಾಗಿಹಳೆಲ್ಲ ಕಾಲದಿ ಶ್ರುತಿ ಪುರಾಣದೊಳು ॥ ॥೪॥**

**ಅವತರಣಿಕೆ :–**

ಶ್ರೀಹರಿಗಿಂತ ಅನಂತಾನಂತಕೋಟಿ ಗುಣದಿಂದ ಅವರಳಾದ ಶ್ರೀಲಕ್ಷ್ಮೀದೇವಿಯ ಮಹಿಮೆಗಳನ್ನು ಇನ್ನೂ ವಿವರಿಸುತ್ತಾರೆ. ॥೪॥

**ಪ್ರತಿಪದಾರ್ಥ :-**

**ಈತನಿಗಿಂತ** = ಶ್ರೀಪರಮಾತ್ಮನಿಗಿಂತ, **ಶ್ರೀತರುಣಿ** = ಕಾಂತಿ ಸಂಪನ್ನರೂ, ನಿತ್ಯಯೌವ್ವನೆಯುರೂ ಆದ ಶ್ರೀ ಲಕ್ಷ್ಮೀದೇವಿಯು, **ಅನಂತಗುಣದಲಿ** = ಅನಂತಾನಂತಗುಣಗಳಿಂದ, **ತಾ ಕಡಿಮೆಯೆನಿ ಪಳು** = ತಾವು ಅವರಳು ಎನಿಸುತ್ತಾಳೆ, **ನಿತ್ಯಮುಕ್ತಳು** = ಅನಾದ್ಯ ನಂತ ಕಾಲದಿಂದಲೂ ಬಂಧರಹಿತಳು. (ತ್ರಿಗುಣಸಂಬಂಧವಿಲ್ಲ), **ನಿರ್ವಿ ಕಾರಳು** = ಪ್ರಾಕೃತಗುಣತ್ರಯಗಳಿಂದ ದೂರಳು. **ತ್ರಿಗುಣ ವರ್ಜಿ ತಳು** = ಸತ್ವಾದಿ ಪ್ರಾಕೃತತ್ರಿಗುಣಗಳಿಂದ ವರ್ಜಿತಳು, **ಧೌತಪಾಪ** = ಅಸುರಾವೇಶ, ಅಜ್ಞಾನ ಇತ್ಯಾದಿ ಪಾಪಗಳಿಂದ (ದೋಷಗಳಿಂದ) ದೂರರಾದ **ವಿರಿಂಚಿ** = ಬ್ರಹ್ಮದೇವರು, **ಪವನರ** = ವಾಯುದೇವರ, **ಮಾತೆಯೆನಿಪ** = ಜನನೀ ಎಂದು ಪ್ರಸಿದ್ಧಳಾದ, **ಮಹಾಲಕುಮೀ** = ಜಗಜ್ಜನನಿಯಾದ ಮಹಾಲಕ್ಷ್ಮೀದೇವಿಯು, **ಎಲ್ಲ ಕಾಲದಿ** = ಸದಾ ಸರ್ವಕಾಲಗಳಲ್ಲಿ, **ಶ್ರುತಿ ಪುರಾಣದೊಳು** = ವೇದ, ಪುರಾಣಾದಿ ಗಳಲ್ಲಿ, **ವಿಖ್ಯಾತಳಾಗಿಹಳು** = ಪ್ರಖ್ಯಾತಳಾಗಿದ್ದಾಳೆ. ॥೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :-

ಶ್ರೀಪರಮಾತ್ಮನಿಗಿಂತಲೂ ಕಾಂತಿಸಂಪನ್ನರಾದ ನಿತ್ಯ ಯೌವ್ವನೆಯು ರಾದ ಪರಮಾತ್ಮನ ಪತ್ನಿಯಾದ ಲಕ್ಷ್ಮೀದೇವೇರು ತಾವು ಅನಂತಗುಣದಿಂದ ಕೊರತೆ-ಎಂತ ಎನಿಸೋವರಾಗಿದ್ದಾರೆ. ವಿಜಾತ್ಯಧಮರು ಎಂದರೆ- ಪರ ಮಾತ್ಮನಲ್ಲಿ ಸಜಾತಿ ವಿಜಾತಿ ಗುಣಗಳು ಅವೆ. ಸಜಾತಿ ಗುಣಗಳ ಕಾಣೋ ವಿಷಯದಲ್ಲಿ ರಮಾದೇವೇರಿಗೆ ಆಲೋಚನ ಇಲ್ಲ. ಅನಾಲೋಚನೆಯಿಂದ

ಕಾಣತಾರೆ. ತಮ್ಮಲ್ಲಿ ಇಲ್ಲದೇ ಇರತಕ್ಕ ವಿಜಾತಿಗುಣಗಳು ಪರಮಾತ್ಮನಲ್ಲಿ ಅವಸ್ಥಾನರೂಪದಿಂದ ಇರೋವಾಗಿವೆ. ಅವುಗಳೊಳಗೆ ಅನಂತಗುಣಗಳ ಪ್ರವಾಹತ್ವೇನ ನೂತನ ನೂತನವಾಗಿ ದೃಷ್ಟಿಯಿಂದ ನೋಡತಾರೆ. ಅದರ ಆಚೀಲಿ ನೋಡೋ ಯೋಗ್ಯತೆ ಇಲ್ಲ. ಆದ್ದರಿಂದ ಈ ವಿವಕ್ಷಯಾ ಅನಂತ ಗುಣಕ್ಕೆ ನೀಚರು. ವಿಜಾತಿಯಾದ, ತಮ್ಮಲ್ಲಿ ಇಲ್ಲದೇ ತಾವು ಕಾಣತಕ್ಕ ಅನಂತಗುಣಗಳಿಗೆ ಅಧಮರು ಎಂತ ತಿಳಿಯಬೇಕು. ಅಪರಿಚ್ಛಿನ್ನಗುಣ ಗಳು ಹಿಡಿದು ತಾರತಮ್ಯ ಹೇಳಿದ್ದಲ್ಲ. ಇದರ ವಿವರ ಮುಂದಿನ ಶ್ಲೋಕ ದಲ್ಲಿ ವಿವರಿಸುವರು. ನಿತ್ಯಮುಕ್ತಳು – ಅದಾದ್ಯನಂತಕಾಲಕ್ಕೂ ಬಂಧನ ರಹಿತರು.

ಪ್ರಮಾಣ :–

**ಶಯ್ಯಾಸ್ಯನಂ ಪಾದುಕೇಚ ಆತಪತ್ರಮಭೂದ್ರಮಾ ।**
**ನಿತ್ಯಮುಕ್ತಾ ದೋಷದೂರ ತ್ವದೂನಾಧಿಕಸದ್ಗುಣಾ ॥**
**ತತ್ಪಾದಪೂಜನೇ ನಿತ್ಯಂ ಬದ್ಧ ಕಂಕಣಭೂಷಿತಾ ॥** ಇತಿ **ಆದಿತ್ಯ** ಪುರಾಣೇ॥ ಪ್ರಾಕೃತಗುಣತ್ರಯದ ವಿಕಾರದಿಂದ ಶೂನ್ಯರು. ಅನಾದ್ಯನಂತಕಾಲದಿಂದಲೂ ತ್ರಿಗುಣಾತ್ಮಕ ಲಿಂಗದೇಹದಿಂದ ವರ್ಜಿತರು. ಅಸುರಾವೇ ಅಜ್ಞಾನಾದಿ ಪಾಪವರ್ಜಿತರಾದ ಬ್ರಹ್ಮ ವಾಯುಗಳ ತಾಯಿಯಾದವರು. ಈ ಪ್ರಕಾರ ಎನಿಸತಕ್ಕ ಮಹಾಲಕ್ಷ್ಮೀದೇವಿ ವೇದ ಶ್ರುತಿಗಳಲ್ಲಿ ಪುರಾಣಗಳಲ್ಲಿ ಇಂಥಾ ಮಹಾತ್ಮರೆಂದು ಸದಾ ಸರ್ವಕಾಲದಲ್ಲಿ ಪ್ರಸಿದ್ಧರಾಗಿದ್ದಾರೆ. ರಮಾದೇವೇರು ಅನಂತಗುಣದಿಂದ ನೀಚರು-ಎಂತ ತಾತ್ಪರ್ಯ. ॥೪॥

**೨. ಭಾವಪ್ರಕಾಶಿಕೆ :–**

ಪರಮಾತ್ಮನಕ್ಕಿಂತಲೂ ಅನಂತಗುಣಗಳಲ್ಲಿ ಕಮ್ಮಿ ಎನಿಸುವರು ರಮಾದೇವಿಯರು. ಇವರು ನಿತ್ಯಮುಕ್ತರೆಂತಲೂ, ನಿರ್ವಿಕಾರರೆಂತಲೂ ಪ್ರಸಿದ್ಧಿ ಹೊಂದಿರುವರು. ಗುಣಾತ್ಮಕರೇತರಾದರೂ ಗುಣಗಳಿಂದ ಬದ್ಧರಲ್ಲ. ಪಾಪರಹಿತರಾದ ಬ್ರಹ್ಮ ವಾಯುಗಳಿಗೆ ತಾಯಿಯೆನಿಸುವರು. ಈ ಪ್ರಕಾರವಾಗಿ ಸಕಲವಾದ ಪುರಾಣಗಳಲ್ಲೂ, ವೇದಗಳಲ್ಲಿಯೂ ಸಹ ಪ್ರಖ್ಯಾತರಾಗಿರುವರು. ॥೪॥

**೩. ಭಾವದರ್ಪಣ :–**

ಈತನಿಂದೆ । ಕಡಿಮೆ । "ದೇಶತಃ ಕಾಲತೋ ವ್ಯಾಪ್ತಾ ಚಿದ್ರೂಪಾ ಶ್ರೀಹರೇಃ ಸದಾ। ಅನಂತಗುಣತೋ ನೀಚೇತಿ ।" **ಪ್ರಕಾಶಸಂಹಿತೋಕ್ತೇಃ ।** ನಿತ್ಯಾವಿಯೋಗಿನೀ ಲಕ್ಷ್ಮೀಸ್ತದನಂತ ಗುಣಾಧಮೇತಿ"- **ತಾರತಮ್ಯಕೌಸ್ತುಭೋಕ್ತೇಃ** ॥೪॥

**೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–**

'ಈತ' ಇತಿ ॥ 'ಈತ' – ಇವನ ॥ "ತತೋನಂತಾಂಶಹೀನಾ ಚ ಬಲಜ್ಞಾನ ಸುಖಾದಿಭಿಃ ॥ ತಸ್ಮಾದನಂತಾಂತಾಂಶಾ (ಽವರಾ) ರಮಾ ॥ 'ನೀತ' ನಿತ್ಯ ॥ 'ಧೌತ' (ದೂತ) ನಿರಸ್ತ ॥ ಶುತೌ– "ಅಹಂ ಸುವೇ ಪಿತರಮ್"– ಇತಿ ಸ್ವೋಕ್ತೇಃ ॥ "ತ್ವಂ ದೇವ ಶಕ್ತ್ಯಾ "–ಇತಿ ಸ್ಮೃತೇಶ್ಚ. ॥೪॥

## ಕನ್ನಡಾರ್ಥ

"ಬಲ ಜ್ಞಾನ ಸುಖ-ಮುಂತಾದ ಒಂದೊಂದು ಗುಣದಲ್ಲಿಯೂ ಅನಂತಾನಂತ ಅಂಶಗಳಿಗಿಂತಲೂ ಕಡಿಮೆಯುವಳು"– ಎಂದು ವಚನವಿರುವದ

ರಿಂದ "ಶ್ರೀತರುಣಿ ತಾ ಕಡಿಮೆಯೆನಿಪಳು"- ಎಂದು ಹೇಳಿರುತ್ತಾರೆ. 'ನೀತ' ಎಂಬ ಪದಕ್ಕೆ ನಿತ್ಯವೆಂದು ಅರ್ಥವನ್ನು ತಿಳಿದು 'ನೀತಮುಕ್ತಳು' ಎಂದರೆ, ನಿತ್ಯಮುಕ್ತಳು-ಎಂದು ಅರ್ಥವನ್ನು ತಿಳಿಯಬೇಕು. ಧೌತ ಶಬ್ದಕ್ಕೆ 'ನಾಶಮಾಡಲ್ಪಟ್ಟ' ಎಂದು ಅರ್ಥವನ್ನು ತಿಳಿಯಬೇಕು. ಅಂದರೆ "ನಾಶ ಮಾಡಲ್ಪಟ್ಟ ಪಾಪಗಳುಳ್ಳವರು ಅಥವಾ ಪಾಪ ನಾಶವುಳ್ಳವರು"-ಎಂದು ಅರ್ಥವನ್ನು ಭಾವಿಸಬೇಕು. ಶ್ರುತಿಯಲ್ಲಿ "ನಾನು ಈ ಜಗತ್ತಿನ ಜನಕ ನೆನಿಸಿದ ಹಿರಣ್ಯಗರ್ಭ (ಚತುರ್ಮುಖ)ನನ್ನು ಪ್ರಸವಿಸುತ್ತೇನೆ"-ಎಂಬುದಾಗಿ ಶ್ರೀಲಕ್ಷ್ಮೀದೇವಿಯವರ ಸ್ವಂತ ವಚನವಿರುವುದರಿಂದ "ವಿರಿಂಚಿ ಪವನರ ಮಾತೆಯೆನಿಪ"- ಎಂದು ದಾಸರಾಯರು ಹೇಳಿದುದು ಅತ್ಯಂತ ಶ್ರುತಿ ಸಮ್ಮತವೆಂದು ತಿಳಿಯಬೇಕು. ಅಲ್ಲದೇ "ತ್ವಂ ದೇವ ಶಕ್ತ್ಯಾ" ಎಂಬ ಸ್ಮೃತಿವಾಕ್ಯವೂ ಇರುತ್ತದೆ. ॥೪॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ :-

ಬಂಧ ಸಂಪರ್ಕವೇ ಇಲ್ಲದ್ದರಿಂದ, ನಿತ್ಯಮುಕ್ತಳಾದ್ದರಿಂದ ನಿರ್ವಿಕಾರ ಳಾದ, ಈ ಕಾರಣದಿಂದ ತ್ರಿಗುಣರಹಿತಳಾದ ಶ್ರೀತರುಣಿ ಎಂಬ ಲಕ್ಷ್ಮಿಯು ಈ ದೇವರಿಗಿಂತ ಜ್ಞಾನಾನಂದಾದಿ ಗುಣಗಳಲ್ಲಿ ಅನಂತಾನಂತಾಂಶದಿಂದ ಕಡಿಮೆಯಾದವಳು. ಆದರೂ ಧೌತಪಾಪೆ- ಎಂದರೆ ಪಾಪಾದಿದೋಷ ದೂರಳು. ವಿರಿಂಚಿ ಪವನರ ಮಾತೆ, ಎಂದರೆ ಬ್ರಹ್ಮ ವಾಯು ದೇವರಿಗೆ ಸಹಾ ತಾಯಿ ಎನಿಸುವಳು. ಇಂಥಾ ಮಹಾಲಕ್ಷ್ಮಿಯು ಸದಾ ಶ್ರುತಿ ಪುರಾಣಾದಿಗಳಲ್ಲಿ ಸುಪ್ರಸಿದ್ಧಳಾಗಿರುವಳು.

**ಶಯ್ಯಾಸನಂ ಪಾದುಕಂ ಚ ಹ್ಯಾತಪತ್ರಮುಭೂದ್ರಮಾ ।**
**ನಿತ್ಯಮುಕ್ತಾ ದೋಷದೂರಾ ತ್ವದೂನಾಧಿಕ ಸದ್ಗುಣಾ ॥**
**ತ್ವತ್ಪಾದ ಪೂಜನೇ ನಿತ್ಯಂ ಬದ್ಧಕಂಕಣ ಭೂಷಿತಾ ॥**
-ಇತ್ಯಾದಿ ಆದಿತ್ಯ ಪುರಾಣಾರ್ಥವು ವಿವರಿಸಿತು. ॥೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಲಕ್ಷ್ಮೀದೇವಿಯರ ಮಹಾಮಹಿಮೆಗಳನ್ನು ಮತ್ತಷ್ಟು ವರ್ಣಿಸುತ್ತಾರೆ. ಸರ್ವೇಶನಾದ ಶ್ರೀಹರಿಗಿಂತ ಅನಂತಾನಂತಕೋಟಿ ಗುಣದಿಂದ ಅವರಳು ಶ್ರೀರಮಾ. ಅನಂತಗುಣದಿಂದ ಕೊರತೆಯುಳ್ಳವಳು.

ಸರ್ವದಾ ಶುಭಪ್ರದಳೂ, ನಿತ್ಯಯೌವ್ವನ್ನಸಂಪನ್ನಳೂ, ಕಾಂತಿಯುಕ್ತಳಾದ ಆದ ಶ್ರೀಇಂದಿರೆಯನ್ನು **ಶ್ರೀ ತರುಣಿ**-ಎಂದು ಕರೆದಿದ್ದಾರೆ.

ಶ್ರೀಪರಮಾತ್ಮನಲ್ಲಿ ಸಜಾತಿ ಹಾಗೂ ವಿಜಾತೀಯ ಗುಣಗಳಿವೆ. ಸಜಾತಿ ಗುಣಗಳನ್ನು ಕಾಣುವ ವಿಷಯದಲ್ಲಿ ಶ್ರೀಲಕ್ಷ್ಮಿಗೆ ಆಲೋಚನಾ ಇಲ್ಲ. ಅನಾಲೋಚನೆಯಿಂದಲೇ ಕಾಣುತ್ತಾರೆ. ಶ್ರೀಲಕ್ಷ್ಮಿಯಲ್ಲಿ ಇಲ್ಲದಿರುವ ವಿಜಾತೀಯ ಗುಣಗಳು ಶ್ರೀಪರಮಾತ್ಮನಲ್ಲಿ ಇವೆ. ಅವುಗಳನ್ನು ಅನಂತ ಗುಣಗಳ ಪ್ರವಾಹರೂಪದಲ್ಲಿ ನೂತನ ನೂತನವಾಗಿ ನೋಡುತ್ತಾಳೆ. ಅದರ ಆಚೆ ಕಾಣುವ ಸಾಮರ್ಥ್ಯ ಶ್ರೀಲಕ್ಷ್ಮಿಗಿಲ್ಲ. ಇದರಿಂದ ಅನಂತಾನಂತಗುಣಗಳಿಂದ ಕಡಿಮೆ ಎನಿಪಳು ಎಂದಿರುವ ಶಬ್ದದ ತಾತ್ಪರ್ಯವು.

ಅನಾದ್ಯನಂತಕಾಲಕ್ಕೂ ಬಂಧನರಹಿತಳು. ಇದರಿಂದ **ನಿತ್ಯಮುಕ್ತಳು.**

ಪ್ರಾಕೃತಗುಣತ್ರಯ ವಿಕಾರದಿಂದ ರಹಿತಳು. ಅನಾದ್ಯನಂತಕಾಲದಿಂದಲೂ ತ್ರಿಗುಣಾತ್ಮಕವಾದ ಲಿಂಗದೇಹದ ಸಂಪರ್ಕವೇ ಲಕ್ಷ್ಮಿಗಿಲ್ಲ. ಇದರಿಂದ **ನಿರ್ವಿಕಾರಳು ಮತ್ತು ತ್ರಿಗುಣವರ್ಜಿತಳು.**

**ಪ್ರಮಾಣ :-**

॥ ಶಯ್ಯಾಸನಂ ಪಾದುಕೇಚ ಆತಪತ್ರಮುಭೂದ್ರಮಾ ।
ನಿತ್ಯಮುಕ್ತಾ ದೋಷದೂರತ್ವದೂನಾಧಿಕ ಸದ್ಗುಣಾ ।
ತತ್ಪಾದ ಪೂಜನೇ ನಿತ್ಯಂ ಬದ್ಧಕಂಕಣ ಭೂಷಿತಾ ॥
**-ಇತಿ ಆದಿತ್ಯಪುರಾಣೇ.**

**ಧೌತಪಾಪ**- ಎಂದರೆ ನಾಶಪಡಿಸಲ್ಪಟ್ಟ ಪಾಪವೆಂದರ್ಥ. ಅಂದರೆ ಪಾಪವಿದೂರರಾದ ಬ್ರಹ್ಮ ವಾಯುಗಳೆಂದರ್ಥ. ಬ್ರಹ್ಮವಾಯುಗಳು ಅಸುರಾವೇಶ, ಅಜ್ಞಾನಾದಿ ಸಮಸ್ತ ದೋಷವರ್ಜಿತರು. ಶುದ್ಧ ಸತ್ತ್ವ ಪ್ರಭುರಾತ್ಮಕರು. ಪರಶುಕ್ಲತ್ರಯರಲ್ಲಿ ಸಮಾವೇಶರು. ಇದರಿಂದ **ಧೌತಪಾಪ**-ಎಂದಿದ್ದಾರೆ.

**ವಿರಿಂಚಿ** - ಎಂದರೆ ಮಾಯಾಪತಿ ವಾಸುದೇವನಿಂದ ಸೂಕ್ಷ್ಮಸೃಷ್ಟಿಯಲ್ಲಿ ಸೃಷ್ಟರಾದ ಜ್ಯೇಷ್ಠಪುತ್ರರಾದ ಶ್ರೀ ಚತುರ್ಮುಖಬ್ರಹ್ಮದೇವರು.

**ಪವನ** - ಶಬ್ದಕ್ಕೆ ಶುದ್ಧಾತ್ಮರೆಂದರ್ಥ. ಶ್ರೀಹರಿಯ ಪ್ರಥಮಾಂಗಭೂತರೂ ಜೀವೋತ್ತಮರೂ ಅತಿರೋಹಿತವಿಮಲವಿಜ್ಞಾನಿಗಳೂ ಆದ ಶ್ರೀವಾಯುದೇವರು **ಪವನನಾಮಕರು.**

ಅಂತಹ ಧೌತಪಾಪರಾದ ಬ್ರಹ್ಮ, ವಾಯುಗಳಿಗೆ ಜನನಿಯು ಶ್ರೀ ಲಕ್ಷ್ಮೀದೇವಿ. ಶ್ರೀವಾಸುದೇವನ ಪತ್ನಿ ಮಾಯಾ ದೇವಿಯಲ್ಲಿ ವಿರಿಂಚಿ ನಾಮಕ ಬ್ರಹ್ಮದೇವರ ಸೃಷ್ಟಿ. ಶ್ರೀ ಸಂಕರ್ಷಣನ ಸತಿ ಜಯಾದೇವಿಯಲ್ಲಿ ಸೂತ್ರನಾಮಕ ವಾಯುದೇವರ ಉತ್ಪತ್ತಿ. ಇದರಿಂದ ವಿರಿಂಚಿ, ಪವನರ ಮಾತೆಯೆನಿಸಿದ್ದಾಳೆ.

ಜಗಜ್ಜನನಿಯಾದ್ದರಿಂದಲೂ, ಮೂಲಪ್ರಕೃತಿಗೆ ಅಭಿಮಾನಿಯಾದ ಶ್ರೀಲಕ್ಷ್ಮೀದೇವಿಯನ್ನು ಉಪಾದಾನಕಾರಣ ಮಾಡಿಕೊಂಡು, ಶ್ರೀಹರಿಯು ಜಗತ್ತಿನ ಸೃಷ್ಟ್ಯಾದಿಕಾರ್ಯಗಳನ್ನು ಸರ್ವತಂತ್ರ ಸ್ವತಂತ್ರನಾಗಿ ಮಾಡುತ್ತಿರುವುದರಿಂದಲೂ, ಜಗದ್ವ್ಯಾಪಾರದಲ್ಲಿ ಶ್ರೀಲಕ್ಷ್ಮಿಗೆ ಉನ್ನತ ಸ್ಥಾನವಿದೆ. ಇದರಿಂದ **ಮಹಾಲಕುಮಿ** –ಎನಿಸಿದ್ದಾಳೆ.

ಅಪೌರುಷೇಯವಾದ ವೇದಗಳಿಗೆ ಶ್ರೀಲಕ್ಷ್ಮಿಯು ಅಭಿಮಾನಿಯು. ಶ್ರುತಿಗಳಲ್ಲಿ ಶ್ರೀ ಸೂಕ್ತಾದಿಗಳಿಂದ ಸ್ತೂಯಮಾನಳು. ಸಕಲಪುರಾಣಗಳಲ್ಲಿಯೂ ಅವಳ ಮಹಾಮಹಿಮೆಗಳು ವರ್ಣಿತವಾಗಿವೆ. ಇದರಿಂದ ಸದಾ ಸರ್ವಕಾಲಕ್ಕೂ, ಶ್ರುತಿ ಪುರಾಣಾದಿಗಳಿಂದ ಪ್ರಖ್ಯಾತ ಪುರುಷಳಾಗಿದ್ದಾಳೆ.

**ಪ್ರಮಾಣ :–**

೧) "ದೇಶತಃ ಕಾಲತೋ ವ್ಯಾಪ್ತಾ ಚಿದ್ರೂಪಾ ಶ್ರೀ ಹರೇಃ ಸದಾ।
ಅನಂತ ಗುಣತೋ ನೀಚೇತಿ" ॥

**–ಇತಿ ಪ್ರಕಾಶಸಂಹಿತೋಕ್ತೇಃ**

೨) "ನಿತ್ಯಾವಿಯೋಗಿನೀ ಲಕ್ಷ್ಮೀಸ್ತದನಂತ ಗುಣಾಧಮೇತಿ" ॥

**–ಇತಿ ತಾರತಮ್ಯ ಕಾಸ್ತುಭೋಕ್ತೇಃ**

೩) "ತ್ವಂ ದೇವ ಶಕ್ತ್ಯಾಂ" –**ಶ್ರುತಿವಚನ.** ॥೪॥

## ಪದ್ಯ-೫

**ಮೂಲ :-**

ಕಮಲಸಂಭವ ಪವನರೀರ್ವರು ।
ಸಮರು ಸಮವರ್ತಿಗಳು ರುದ್ರಾ ।
ದ್ಯಮರಗಣ ಸಂಸೇವಿತ ಪರಬ್ರಹ್ಮ ನಾಮಕರು ॥
ಯಮಳರಿಗೆ ಮಹಲಕುಮಿ ತಾನು ।
ತ್ತಮಳು ಕೋಟಿ ಸಜಾತಿ ಗುಣದಿಂ ।
ದಮಿತ ಸುವಿಜಾತ್ಯಧಮರೆನಿಪರು ಬ್ರಹ್ಮ ವಾಯುಗಳು ॥
॥೫॥

**ಅವತರಣಿಕೆ :-**

ಪ್ರಸಕ್ತಪದ್ಯದಿಂದ ಜೀವಕೋಟಿಪ್ರವಿಷ್ಟರಾದ ಬ್ರಹ್ಮವಾಯುಗಳ ವಿಚಾರವನ್ನು ತಿಳಿಸುತ್ತಾರೆ. ॥೫॥

**ಪ್ರತಿಪದಾರ್ಥ :-**

**ಕಮಲಸಂಭವ** = ಶ್ರೀಬ್ರಹ್ಮದೇವರು, **ಪವನರು** = ಶ್ರೀ ವಾಯುದೇವರು, **ಈರ್ವರು** = ಇವರಿಬ್ಬರು, **ಸಮರು** = ಸಮಾನ ಕಕ್ಷಾಪನ್ನರು, **ಸಮವರ್ತಿಗಳು** = ಭಗವದ್ಗುಣೋಪಾಸನೆಯಲ್ಲಿ ಸಮಾನರಾಗಿ ವರ್ತಿಸುವವರು, **ರುದ್ರಾದಿ** = ರುದ್ರದೇವರೇ ಮೊದಲಾಗಿ, **ಅಮರಗಣ** = ಸಮಸ್ತ ದೇವತಾವರ್ಗದಿಂದ, **ಸಂಸೇವಿತ** = ಚೆನ್ನಾಗಿ ಸೇವಿತರಾದವರು, **ಪರಬ್ರಹ್ಮನಾಮಕರು** = ತಿರೋಧಾನವಿಲ್ಲದ ಪರಬ್ರಹ್ಮನ ಜ್ಞಾನಯುಳ್ಳವರಾದ್ದರಿಂದ ಪರಬ್ರಹ್ಮ ನಾಮಾಂಕಿತರು.

**ಯಮಳರಿಗೆ** = ಈ ಉಭಯರಿಗೆ, **ಮಹಲಕುಮಿ ತಾನು** = ಲೋಕ ಮಾತೆಯಾದ ಶ್ರೀಲಕ್ಷ್ಮೀದೇವಿಯು, **ಕೋಟಿ ಸಜಾತಿ ಗುಣದಿಂದ** = ಕೋಟಿ ಸಂಖ್ಯಾಕವಾದ ಸಜಾತೀಯ ಗುಣಗಳಿಂದ, **ಉತ್ತಮಳು** = ಶ್ರೇಷ್ಠಳು, **ಅಮಿತ** = ಅಸಂಖ್ಯಾತವಾದ, **ಸುವಿಜಾತಿ** = ಸಮೀಚೀನ ವಾದ ವಿಜಾತೀಯ ಗುಣಗಳಿಂದ, **ಬ್ರಹ್ಮ ವಾಯುಗಳು** = ಈ ಬ್ರಹ್ಮ ವಾಯುಗಳು, **ಅಧಮರೆನಿಪರು** = ಶ್ರೀ ರಮಾದೇವಿಗಿಂತ ಕಡಿಮೆ ಎಂದೆನಿಸಿದ್ದಾರೆ. ॥೫॥

## ವ್ಯಾಖ್ಯಾನಗಳು

ಬ್ರಹ್ಮ-ವಾಯುಗಳ ತಾರತಮ್ಯ ಹೇಳುತಾರೆ.

ಬ್ರಹ್ಮದೇವರು ವಾಯುದೇವರು ಇವರಿಬ್ಬರು, ಕಿಂಚಿತ್ ನ್ಯೂನಾಧಿಕ್ಯ ಸ್ಥಿತಿಕಾಲದಲ್ಲಿದ್ದ ಕಾಲಕ್ಕೂ ಸ್ವರೂಪತಃ ಸಮಾನರು. ಸಮಾನವಾಗಿರತಕ್ಕವರು ಅಂದರೆ, ಭಗವದ್ಗುಣೋಪಾಸನದಲ್ಲಿ ಸಮಾನರಾಗಿ ವರ್ತಿಸತಕ್ಕವರು. ಸ್ಪಷ್ಟತ್ವದಲ್ಲಿ ಕಿಂಚಿತ್ ನ್ಯೂನತೆ ವಾಯುದೇವರಿಗೆ ಇರೋಣದರಿಂದ ಸ್ವಲ್ಪ ಕಡಿಮೆ ಎಂತರ್ಥ. ರುದ್ರನೇ ಆದಿಯಾಗಿ ಸಮಸ್ತ ದೇವತೆಗಳಿಂದ ಚಂದಾಗಿ ಸೇವಿತರಾದವರು. ತಿರೋಧಾನವಿಲ್ಲದ ಶ್ರೇಷ್ಠ ವಾದ ಪರಬ್ರಹ್ಮನ ಜ್ಞಾನವುಳ್ಳವರಾದ್ದರಿಂದ **ಪರಬ್ರಹ್ಮರೆಂದು** ನಾಮಾಂಕಿತ ರಾದವರು. ಬ್ರಹ್ಮ-ವಾಯುಗಳಾದ ಈ ಉಭಯರಿಗೆ ಮಹಾಲಕ್ಷ್ಮಿಯಾದ ತಾವು ಕೋಟಿ ಸಂಖ್ಯಾಕವಾದ ಗುಣಗಳಿಂದ ಉತ್ತಮರು ಎಂದರೆ, ರಮಾ ದೇವೇರು ಪರಮಾತ್ಮನಿಗಿಂತಲೂ ಅನಂತಗುಣದಿಂದ ನೀಚರು, ಬ್ರಹ್ಮ ವಾಯುಗಳಿಗಿಂತಲೂ ಕೋಟಿ ವಿಜಾತಿಗುಣದಿಂದ ಅಧಿಕರು. ಬ್ರಹ್ಮ-ವಾಯುಗಳಲ್ಲಿರತಕ್ಕ ಸಜಾತಿ ಗುಣಗಳಿಗೆ ಸಮಾನರು. ಸಮೀಚೀನಗಳಾದ ವಿಜಾತೀಯವಾದ ರಮಾದೇವೇರಲ್ಲಿರತಕ್ಕ ಕೋಟಿ ವಿಜಾತಿಗುಣಗಳಿಂದ

ಅಧಮರೆನಿಸಿಕೊಳ್ಳುವರು. ಈ ಬ್ರಹ್ಮ-ವಾಯುಗಳು ರಮಾದೇವೇರಿಂದ ಕೋಟಿ ಗುಣಾಧಮರು. ಪರಮಾತ್ಮನಿಗಿಂತಲೂ ಅಮಿತ ಗುಣದಿಂದ ನೀಚ ರೆಂದು ತಾತ್ಪರ್ಯ. ಸಜಾತಿ- ವಿಜಾತಿ ಎಂದರೆ ದೃಷ್ಟಾಂತ-ವೇದಗಳು ನಾಲ್ಕು. ಇದರಲ್ಲಿ ಎರಡು ವೇದಗಳ ಒಬ್ಬ ಓದೋವನಾಗಿದ್ದಾನೆ. ನಾಲ್ಕು ವೇದಗಳ ಒಬ್ಬ ಓದೋವನಾಗಿದ್ದಾನೆ. ಅದರಲ್ಲಿ ಎರಡು ವೇದ ಗಳು ಉಭಯರಲ್ಲಿ ಸಜಾತೀಯವಾಗಿ ಸಮವಾಯಿತು. ಉಳಿದ ಎರಡು ವೇದಗಳು ವಿಜಾತೀಯವಾಗಿ ಎರಡು ಓದಿದವ ನಾಲ್ಕು ವೇದಗಳ ಓದಿದವ ಗಿಂತಲೂ ಎರಡು ವೇದದಿಂದ ನ್ಯೂನ-ಎಂತ ಕರಸತಾನೆ. ಇದೇ ಸಜಾತಿ ವಿಜಾತಿ ಎಂಬುದೂನೂ. ಸಜಾತಿಯಿಂದ ಸಮರು, ವಿಜಾತಿಯಿಂದ ಅಸಮರು. ಅಂದರೆ ಅಧಮರು-ಎಂಬುದಕ್ಕೆ ಇದು ತಾತ್ಪರ್ಯ. ಈ ರೀತ್ಯಾ-ಗುಣತಾರತಮ್ಯವೆಂದು ತಿಳಿಯಬೇಕು. ಇನ್ನೊಂದು ದೃಷ್ಟಾಂತ-ಹತ್ತು ವರಹಗಳು ಬೆಲೆ ಆಗತಕ್ಕ ರತ್ನಗಳು ನಾಲ್ಕು ನನ್ನಲ್ಲಿ ಇರೋವಾಗಿ ಅವೆ. ನನಗಿಂತಲೂ ಭಾಗ್ಯವಂತನಾದ ಶ್ರೇಷ್ಠನಾದವನಲ್ಲಿ ಹತ್ತು ವರಹ ಬೆಲೆ ಆಗ ತಕ್ಕ ನನ್ನಲ್ಲಿರತಕ್ಕ ರತ್ನಗಳಿಗೆ ಸದೃಶವಾದ ನಾಲ್ಕು ರತ್ನಗಳೇನು, ಇಪ್ಪತ್ತು ವರಹ ಬಾಳತಕ್ಕ ರತ್ನಗಳು ನಾಲ್ಕು ಅವೆ. ಅಂತು ಸ್ವಾವರರಿಗಿಂತಲೂ ಸ್ವೋತ್ತಮರಲ್ಲಿ ಮೂರುವಿಧ ರತ್ನಗಳು ಇರೋವಾಗಿವೆ. ಸರ್ವರೂ ಯೋಗ್ಯತಾನುಸಾರ ರತ್ನ ಪರೀಕ್ಷಾ ಬಲ್ಲವರೆ. ಅವರಲ್ಲಿ ತಾರತಮ್ಯವುಂಟು. ಅವರನಾದ ನಾನು ಹತ್ತು ವರಹ ಬಾಳತಕ್ಕ ರತ್ನ ವ್ಯಾಪಾರದವ. ಅಂಥಾ ರತ್ನಗಳ ಪರೀಕ್ಷಾ ಆಲೋಚನಿ ಇಲ್ಲದೆ ಅದರ ಇಯತ್ತ (ದರ್ಜೆ) ಹೇಳಬಲ್ಲೆ. ಎಲ್ಲಿ ಇದ್ದದ್ದು ಎಂದರೆ, ನನ್ನಲ್ಲಿರತಕ್ಕ ರತ್ನಗಳಿಗೆ ಸದೃಶವಾದ ರತ್ನಗಳು ನನಗಿಂತಲೂ ಸ್ವೋತ್ತಮರಲ್ಲಿರತಕ್ಕ ರತ್ನಗಳೆಂತ ತಾತ್ಪರ್ಯ. ನನ್ನಲ್ಲಿಲ್ಲದ ಸ್ವೋತ್ತಮರಲ್ಲಿರತಕ್ಕ ವಿಜಾತೀಯವರಾದ ಇಪ್ಪತ್ತು ವರಹಗಳು ಬಾಳತಕ್ಕ ರತ್ನಗಳ ಬೆಲೆ ನಿರ್ಧಾರ ಮಾಡೋದಕ್ಕೆ, ವಿಜಾತಿ ರತ್ನಗಳಾದ್ದರಿಂದ ನೋಡಿ, ಆಯಾ ರತ್ನಗತ ವಿಶೇಷಗಳ ಕಂಡು ಆಶ್ಚರ್ಯ ಪಡೋವನಾಗತೇನೇ ಹೊರ್ತು ಬೆಲೆ ಅಂತ (ಪರಿಮಿತಿ) ಕಾಣಲಾರೆ. ನೋಡೋದಕ್ಕೆ ಕೂಡಾ

ಯೋಗ್ಯವಲ್ಲದ, ಸ್ತೋತ್ತಮರಲ್ಲಿರತಕ್ಕ ನಾಲ್ವತ್ತು ವರಹ ಬೆಲೆ ಬಾಳತಕ್ಕ ಮೂಲಧನ ಸ್ತೋತ್ತಮರಲ್ಲಿ ಆದೆ, ಎಂಬುದು ಶ್ರವಣ ತಾಡಿತವೇ ಹೊರತು, ನೋಡೋದಕ್ಕೆ ಕೂಡ ಯೋಗ್ಯವಲ್ಲದ ರತ್ನಗಳು ಬ್ಯಾರೆ ಇರೋವಾಗಿವೆ. ಈ ದೃಷ್ಟಾಂತದಿಂದ ತೃಣಜೀವ ಆರಂಭಮಾಡಿ, ಪರಮಾತ್ಮನವರಿಗೂ ಸಜಾತಿ, ವಿಜಾತಿ, ಉಭಯಾತೀತ ಜಾತಿ ಗುಣಗಳಿವೆ. ಆದರಲ್ಲಿ ಅಸ್ವತಂತ್ರರಲ್ಲಿ ಅವಧಿಯುಕ್ತ ಗುಣಗಳು, ಪರಮಾತ್ಮನಲ್ಲಿ ಅವಧಿ ಇಲ್ಲದ ಗುಣಗಳೆಂತ ತಿಳಿಯಬೇಕು. ॥೫॥

## ೨. ಭಾವಪ್ರಕಾಶಿಕೆ :–

ವಾಯುದೇವರೇ ಮುಂದಿನ ಕಲ್ಪದಲ್ಲಿ ಬ್ರಹ್ಮಪಟ್ಟಕ್ಕೆ ಬರುವವರು. ಬ್ರಹ್ಮದೇವರಲ್ಲಿ ಇರುವ ಗುಣಗಳೆಲ್ಲವೂ ವಾಯುದೇವರಲ್ಲಿ ಇರುವುವು. ಆದರೆ ಋಜುಗಣಕ್ಕೆ ಸೇರಿದವರಲ್ಲಿ ೯೯ ನೆಯ ಕಲ್ಪದಲ್ಲಿ ವಾಯುದೇವರಾಗಿ ಅವತಾರತ್ರಯದಿಂದ ಭಗವತ್ಸೇವಾದಿಗಳನ್ನು ಮಾಡಿ ೧೦೦ ನೆಯ ಕಲ್ಪದಲ್ಲಿ ಬ್ರಹ್ಮ ಪದವಿಯನ್ನು ಹೊಂದುವರು. ಹಿಂದಿನ ಕಲ್ಪದ ವಾಯುದೇವರೇ ಈಗ ಬ್ರಹ್ಮದೇವರಾಗಿರುವರು. ಆದ್ದರಿಂದ ಒಂದು ಕಲ್ಪಸಾಧನೆಮಾತ್ರ ವಾಯುದೇವರು ಬ್ರಹ್ಮದೇವರಕಿಂತಲೂ ಕಮ್ಮಿಯಾದರೂ, ಮಿಕ್ಕ ಎಲ್ಲಾ, ಗುಣಗಳಲ್ಲೂ ಬ್ರಹ್ಮದೇವರಿಗೆ ಸಮರೆನಿಸುವರು. ರುದ್ರಾದಿ ಸಕಲದೇವತೆಗಳಿಗಿಂತಲೂ ಉತ್ತಮರು. ಪರಬ್ರಹ್ಮ ಪರಮಾತ್ಮನೆಂತಲೂ, ಅಪರಬ್ರಹ್ಮರು ಬ್ರಹ್ಮವಾಯುಗಳೆಂತಲೂ ಹೆಸರುಳ್ಳವರಾಗಿರುವರು. ಇವರಿಬ್ಬರಿಗಿಂತಲೂ ಕೋಟಿ ಸಜಾತಿಗುಣಗಳಿಂದ ರಮಾದೇವಿಯರು ಉತ್ತಮರು. ಸಜಾತಿ ಎಂದರೆ-ಸಮವಾದ ಜಾತಿ ಎಂದರ್ಥ. ವಿಜಾತಿ ಎಂದರೆ– ಆ ಜಾತಿಯಲ್ಲದ ಬೇರೆ ಜಾತಿ ಎಂದರ್ಥ. ರಮಾದೇವಿಯಲ್ಲಿರುವ ಗುಣಗಳು, ರಮಾದೇವಿಯರ ಯೋಗ್ಯತೆಯನ್ನನುಸರಿಸಿದ ಅದೇ ಜಾತಿಗೆ ಸೇರಿದ ಗುಣಗಳೇ ಕೋಟಿ ಗುಣಗಳು ಬ್ರಹ್ಮವಾಯುಗಳಕಿಂತಲೂ ಹೆಚ್ಚಾಗಿರುವವೆಂಬ ಭಾವ. ಮಿತಸುವಿಜಾತ್ಯದವರು ಬ್ರಹ್ಮವಾಯುಗಳೆಂದರೆ, ಎಷ್ಟುಗುಣ

ಗಳು ರಮಾದೇವಿಯರಲ್ಲಿ ಹೆಚ್ಚಿರುವುವೋ ಅಷ್ಟು ಮಿತವೆಂದರ್ಥ. ಅಂದರೆ, ಕೋಟಿ ಗುಣಗಳಿಂದ ಬ್ರಹ್ಮವಾಯುಗಳು ಲಕ್ಷ್ಮೀದೇವಿಯರಕಿಂತಲೂ ಕಮ್ಮಿ ಯೆಂದರ್ಥ. ಗುಣಗಳೂ ವಿಜಾತೀಯವಾದುವು. ಲಕ್ಷ್ಮೀದೇವಿಯರ ಗುಣಗಳ ಜಾತಿಗೆ ಸೇರಿದ ಗುಣವಲ್ಲವೆಂಬ ತಾತ್ಪರ್ಯ. ॥೫॥

## ೩. ಭಾವದರ್ಪಣ :-

ಬ್ರಹ್ಮವಾಯುಗಳಕಿಂತ ಕೋಟಿ ಗುಣಾಧಿಕಳೆಂದು- ಹೇಳುತ್ತಾರೆ. ಕಮಲಸಂಭವೇತಿ ॥ ತದುಕ್ತಂ ತಾರತಮ್ಯ ಕೌಸ್ತುಭೇ । "ಮುಖ್ಯಪ್ರಾಣಾ ತ್ಮಕೋ ಬ್ರಹ್ಮಾ ಶ್ರಿಯಃ ಕೋಟಿ ಗುಣಾಧಮ" ಇತಿ ॥ ಈರ್ವರು = ಇಬ್ಬರು. ಅಪರಬ್ರಹ್ಮೇತಿ. "ಅಬ್ರಾಹ್ಮಣಃ ಪರೇಸರ್ವ ಇತ್ಯುಕ್ತೇಃ"॥ ಯಮಳರು = ಇಬ್ಬರು. ॥೫॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

'ಕಮಲ' ಇತಿ ॥ "ಸಮಾನೌ ಬ್ರಹ್ಮ ಮಾರುತೌ ॥ " ಸಮೇತಿ ॥ ಬ್ರಹ್ಮಣಃ ವಾಯೌ, ತಸ್ಯ ತಸ್ಮಿನ್, ಇತಿ ಅನ್ಯೋನ್ಯಾನು ಪ್ರವಿಷ್ಟೌ ತೌ ॥ 'ಅಪರಬ್ರಹ್ಮ' ಇತಿ ॥ "ಬ್ರಹ್ಮಣೀ ದ್ವೇ ಶತಾಧಿಕೇ" ಇತ್ಯಸ್ಯ 'ಪರಾಪರ ಬ್ರಹ್ಮಣೀ' ಇತಿ ಶ್ರುತ್ಯರ್ಥರತ್ನಮಾಲಾ ॥ 'ಯಮಳ' ಯುಗ್ಮ ॥ 'ಸಜಾತಿ' ಜ್ಞಾನತ್ವೇನ ಭಕ್ತಿತ್ವೇನ ॥ 'ವಿಜಾತಿ' ತಜ್ಞಾನ, ತದ್ಭಕ್ತಿ ನಿಯಾಮಕತ್ವಂ ಚ ಇತಿ ॥ ಯದ್ವಾ ಸಜಾತೀಯಾಃ ಜ್ಞಾನಾದಯಃ ವಿಜಾತೀಯಾಃ ಹರಿಗುಣಾಃ ॥ ಏತೇಭ್ಯಃ ಶ್ರೀಸ್ತು ಮುಕ್ತೇಭ್ಯಃ ಗುಣೈಃ ಕೋಟಿಗುಣೋತ್ತರಾ ॥ ತತಃ ಕೋಟ್ಯಂಶೌ ಬ್ರಹ್ಮವಾಯೂ ॥

ಅತ್ರ ಇಯಾನ್ ವಿಶೇಷಃ ॥ ಅತ್ರ "ಈರಾಜಾಭ್ಯಾಂ ಕೋಟಿಗುಣೈಃ ಸಜಾತೀಯೈಃ ಉಚ್ಚಾ ಅಪಿ ತಜ್ಜನನೀ ವಿಜಾತೀಯಾಪರೋಕ್ಷೇ ಅಮಿತ

ತಯಾ ಪರಮಾ" ಇತಿ ಮತಮೇಕಮ್ ॥ ಅಪರಂ "ಕೋಟಿ ಶತಾದಿ ಪರಮಾ ನ ಅನಂತಪರಮ್ ॥ ಯೇನ ವಿಜಾತೀಯ ಕಲ್ಪನಾ ॥ ಕಿಂತು ಜ್ಞಾನ ಮಪಿ ಕೋಟಿಗುಣೋನ್ನತಮೇವ ॥ ನ ಚೈವಂ ಸತಿ "ಉಮಾ ಯಾವದ ನಂತಾಂ ಶಾನ್ ॥ ಇತಿ ಮೂಲೇನ ಲಕ್ಷ್ಮೀಃ ಭಗವತಃ ವಾಸದೇವಸ್ಯ ಯಾವತಃ ಗುಣಾನ್ ಪಶ್ಯತಿ ತಾವತಾಂ ಅನಂತಧಾ ವಿಭಕ್ತಾನಾಂ ಏಕಮೇವ ವಿಭಾಗಂ ಬ್ರಹ್ಮಾ ಪಶ್ಯತಿ ॥ ತಸ್ಯಾಪಿ ಭಾಗಸ್ಯ ಅನಂತಧಾ ವಿಭಕ್ತಸ್ಯ ಏಕ ಮೇವ ಭಾಗಂ ಸರಸ್ವತೀ ಪಶ್ಯತಿ ॥ ಏವಂ ರುದ್ರಮುಯೋಃ ಭಗವದ್ಗುಣ ದರ್ಶನೇ ತಾರತಮ್ಯಂ ಅವಗಂತವ್ಯಮ್ ॥ ಇತಿ ಸಮುದಾಹೃತ ಮೂಲೇನ ಸನ್ಯಾಯರತ್ನಾವಲ್ಯಾ ಚ ವಿರೋಧಃ ಇತಿ ವಾಚ್ಯಮ್ ॥ ತದುಭಯಂ ಸ್ಫುಟಿತಾಭಿಪ್ರಾಯಕಮ್ ॥ "ಪರಿಮಾಣೇ ಶತಗುಣೋಽಪಿ" ಇತ್ಯುಕ್ತ್ವಾ "ಅಗ್ನಿಜ್ವಾಲಾ ನ ದೀಪವತ್" ಇತ್ಯುಕ್ತೇಃ ॥ ಯಾವತ್ ಜ್ಞಾನಂ ತಾವತೀ ಭಕ್ತಿಃ, ತಾವಾನ್ ಅನುಗ್ರಹಃ, ಯಾವಾನ್ ಅನುಗ್ರಹಃ ತಾವಾನ್ ಮೌಕ್ತಿಕಾನಂದಃ"– ಇತಿ ಶ್ರುತಿಃ ಅಪಿ ಅನುಕೂಲಾ ಅಸ್ಮಾಕಂ" ಇತ್ಯುಕ್ತ್ವಾನೌ (ನ್ಯೋ) ಚಿತ್ಯಂ ಚಾದ್ಯ ಪಕ್ಷಸ್ಯ ವ್ಯುತ್ಪಾದ್ಯಾಪಿ ಪುನರಭ್ಯುಪ ಗಮಃ ತತ್ಪಕ್ಷಸ್ಯ ಪ್ರತೀಯತೇ ವಿವೃತೌ ॥ ಸಜಾತೀಯ ವಿಜಾತೀಯಾ ಪೇಕ್ಷಯಾ ಅನಂತಗುಣತಾರತಮ್ಯಮ್ ಕೇಚಿತ್ ಸಾಂಪ್ರದಾಯಿಕಾಃ"– ಇತ್ಯುದಾಹೃತ್ಯ, ಅನಂತಗುಣವತ್ವಂ ಚ ಮಹಾಕಾಲ ಸಂವತ್ಸರ ಘಟಿಕಾ ಕ್ಷಣ ಲವಾದ್ಯಾನಂತ್ಯವತ್ ಸಂಭಾವನಾಭಿಪ್ರಾಯೇಣ"– ಇತಿ ತದೀಯ ವಚನಾತ್ ॥ ಏತತ್ ಕಿಂ ನಿಬಂಧನಮ್ ? ಪಿಹಿತನ ಯನೋಽಹಮ್ ನ ಜಾನೇ ॥ ಪರಂತು ಗ್ರಂಥೇಽಸ್ಮಿನ್ ಗೂಹಿತಂ ಯದ್ಯತ್ ಆಕೃಷ್ಯ ಅಹಂ ಯಥಾಮತಿ ಗುರುರಾಜ ಸುಮಧ್ವಾಚಾರ್ಯ ಕರುಣಾಲವಮಾತ್ರತಃ ವೀಣಾ ಇವ ಆಶ್ರಿತ್ಯ ಬಿಂಬಸ್ಯ ಕ್ರಿಯಾಂ ಸಂಸೂಚಯಾಮಿ ಇಹ ॥ ಯಥಾಹುಃ ಭಾವಪ್ರಕಾಶಿಕಾಯಾಂ "ವಾದೀಮಧ್ವಃ ಯಸ್ಯ ರಾಜಾ ಸೋಹಂ ತಸ್ಯ ಕೃಪಾಬಲಾತ್ ॥ ವಾದಿರಾಜೋನ ಸ್ವಶಕ್ತ್ಯಾ ವೀಣೇವ ರಚಯಾಮ್ಯಹಮ್"–ಇತಿ. ॥೫॥

## ಕನ್ನಡಾರ್ಥ

ಬ್ರಹ್ಮ ಹಾಗೂ ವಾಯುದೇವರು ಸಮಾನರು; ಬ್ರಹ್ಮದೇವರು ವಾಯುದೇವರಲ್ಲ; ವಾಯುದೇವರು ಬ್ರಹ್ಮದೇವರಲ್ಲ. ಹೀಗೆ ಪರಸ್ಪರರಿಗೆ ಪರಸ್ಪರರಲ್ಲಿ ಪ್ರವೇಶವಿರುವುದರಿಂದ ಸಮರು- ಎಂದು ಸಿದ್ಧವಾಗುತ್ತದೆ. ಬ್ರಹ್ಮಸೂತ್ರದ ೩ನೆಯ ಅಧ್ಯಾಯದ ೪ನೆಯ ಪಾದದ ೧೧ ನೆಯ ಸೂತ್ರದ ಭಾಷ್ಯದಲ್ಲಿ ("ವಿಭಾಗಃ ಶತವತ್" ಎಂಬ ಸೂತ್ರವ್ಯಾಖ್ಯಾನದಲ್ಲಿ) ಸೋಮ ಪಾನಾರ್ಹದೇವತೆಗಳನ್ನು ಹೇಳುತ್ತ "೯ ಕೋಟಿ ದೇವತೆಗಳಲ್ಲಿ ೧೦೦ ದೇವತೆಗಳು ಸೋಮಪಾನಾರ್ಹರು; ಅಲ್ಲದೇ ಇಬ್ಬರು ಬ್ರಹ್ಮರು ಸೋಮ ಪಾನವುಳ್ಳವರು; " ಎಂದು ನಿರೂಪಿಸಿರುತ್ತಾರೆ.

"ಇಬ್ಬರು ಬ್ರಹ್ಮರು" ಎಂಬುದಕ್ಕೆ 'ಪರ-ಅಪರ' ಎಂಬುದಾಗಿ **ಶ್ರುತ್ಯರ್ಥರತ್ನಮಾಲೆಯಲ್ಲಿ** ವಿವರಿಸಿರುತ್ತಾರೆ. ಪರಬ್ರಹ್ಮನು ನಾರಾಯಣನೆಂದೂ, ಅಪರಬ್ರಹ್ಮನು ಚತುರ್ಮುಖಬ್ರಹ್ಮನೆಂದೂ ತಿಳಿಯಬೇಕು. ಆದುದರಿಂದ "ಬ್ರಹ್ಮವಾಯುದೇವರು" ಅಪರಬ್ರಹ್ಮರೆಂದು ಹೇಳಿರುತ್ತಾರೆ. 'ಯಮಳ'-ಎಂಬ ಪದಕ್ಕೆ "ಜೋಡಿ, ಎರಡು"-ಎಂದು ಅರ್ಥ.

ಶ್ರೀಮಹಾಲಕ್ಷ್ಮೀದೇವಿಯ ಗುಣಗಳಿಗೂ, ವಾಯುಬ್ರಹ್ಮರ ಗುಣಗಳಿಗೂ ಸಜಾತ್ಯವು ಹೇಗೆ ಎಂದರೆ- ಜ್ಞಾನಸ್ವರೂಪವಾದುದರಿಂದಲೂ, ಭಕ್ತಿಸ್ವರೂಪವಾದುದರಿಂದಲೂ, ಲಕ್ಷ್ಮೀಬ್ರಹ್ಮರ ಜ್ಞಾನ ಭಕ್ತಿ ಮುಂತಾದ ಗುಣಗಳಿಗೆ ಸಜಾತ್ಯವಿರುತ್ತದೆ ಎಂದು ತಿಳಿಯಬೇಕು.

ಶ್ರೀಮಹಾಲಕ್ಷ್ಮಿಯ ಗುಣಗಳಲ್ಲಿ ವಿಜಾತೀಯತೆಯು ಹೇಗೆಂದರೆ- ಬ್ರಹ್ಮವಾಯುಗಳ ಜ್ಞಾನ, ಭಕ್ತಿ ಮುಂತಾದುವುಗಳನ್ನು ನಿಯಮಿಸುವುದು ಎಂದು ತಿಳಿಯಬೇಕು.

ಅಥವಾ ಸಜಾತೀಯ ಗುಣಗಳೆಂದರೆ– ಜ್ಞಾನ ಮುಂತಾದವುಗಳು, ವಿಜಾತೀಯ ಗುಣಗಳೆಂದರೆ ಹರಿ ಗುಣಗಳು. ಶ್ರೀಯು ಕೋಟಿ (ಅನಂತ) ಗುಣಗಳಿಂದ ಮುಕ್ತರಿಂದಲೂ ಅಧಿಕಳು. ಬ್ರಹ್ಮವಾಯುಗಳು ರಮಾ ದೇವಿಗಿಂತ ಕೋಟ್ಯಂಶ ಕಡಿಮೆ ಗುಣವುಳ್ಳವರು."– ಎಂದೂ ತಿಳಿಯಬೇಕು.

## ಇಲ್ಲಿ ವಿಶೇಷಾಂಶವಿರುತ್ತದೆ

"ಬ್ರಹ್ಮವಾಯುಗಳಿಂದ ಸಜಾತೀಯ ಕೋಟಿಗುಣಗಳಿಂದ ಶ್ರೀಮಹಾ ಲಕ್ಷ್ಮೀದೇವಿಯರು ಅಧಿಕರಾಗಿದ್ದರೂ, ಅವರು ವಿಜಾತೀಯವಾದ ಹರ್ಯ ಪರೋಕ್ಷಜ್ಞಾನದಲ್ಲಿ ಮಿತಿಯಿಲ್ಲದಷ್ಟು ಪಟ್ಟು ಅಧಿಕರು'– ಎಂದು ಒಂದು ಮತ. "ಕೋಟಿಪದವು ಶತಮುಂತಾದುವುಗಳಂತೆ ಸಂಖ್ಯಾಪದವು; ಅನಂತ ವೆಂದು ಅರ್ಥವಲ್ಲ. ಅನಂತಪರವಾದರೆ ಈ ವಿಜಾತೀಯ ಕಲ್ಪನೆಯನ್ನು ಮಾಡಬಹುದಾಗಿತ್ತು. ಜ್ಞಾನವೂ ಸಹ ಕೋಟಿಪಟ್ಟು ಅಧಿಕವೆಂದೇ ತಿಳಿ ಯಬೇಕು."– ಎಂದು ಮತ್ತೊಂದು ಮತ.

*

ಹಾಗಾದರೆ–'ಉಮಾ ಯಾದನಂತಾಂಶಾನ್''– ಎಂಬುದಾಗಿ "ಪರ ಮಾತ್ಮನ ಎಷ್ಟು ಗುಣಗಳನ್ನು ಮಹಾಲಕ್ಷ್ಮಿಯು ನೋಡುತ್ತಾಳೋ, ಅವೆಲ್ಲ ಗುಣಗಳನ್ನು ಅನಂತವಾಗಿ ವಿಭಾಗಿಸಿದರೆ,ಆಗುವ ಒಂದು ಅಂಶವನ್ನು ಮಾತ್ರ ಬ್ರಹ್ಮದೇವರು ನೋಡುತ್ತಾರೆ. ಬ್ರಹ್ಮದೇವರು ನೋಡಿದ ಆ ಭಾಗದ ಅನಂತ ಭಾಗಗಳಲ್ಲಿ ಒಂದು ಭಾಗವನ್ನು ಸರಸ್ವತೀದೇವಿಯರು ನೋಡುತ್ತಾರೆ. ಇದೇ ರೀತಿಯಾಗಿ ರುದ್ರ, ಉಮಾ, . ಇವರುಗಳ ಜ್ಞಾನದಲ್ಲಿ ಇರುವ ತಾರತಮ್ಯವನ್ನು ತಿಳಿದುಕೊಳ್ಳಬೇಕು."– ಎಂದು ಹೇಳುವ ಮೂಲ **ಅನುವ್ಯಾಖ್ಯಾನ, ಸನ್ಯಾಯರತ್ನಾವಳಿಗಳಿಂದ** ವಿರೋಧ ಬರುವದೆಂದು ಹೇಳಬಹುದು. ಆದರೆ ಸ್ಪಷ್ಟತೆಯನ್ನು ತಿಳಿಸಿಕೊಡುವದ ರಲ್ಲಿ ತಾತ್ಪರ್ಯವಿದೆಯೆಂದು ಉತ್ತರಿಸಲಾಗುತ್ತದೆ. 'ಆನಂದಾದಿಗಳ ಪರಿ ಮಾಣದಲ್ಲಿ ಶತಗುಣ ಅಧಿಕವಾಗಿದ್ದರೂ'–ಎಂದು ಮುಂತಾಗಿ ಹೇಳಿ 'ಅಗ್ನಿ ಜ್ವಾಲೆಯು ದೀಪದಂತೆ ಇರುವುದಿಲ್ಲ; ಎಂದು ಹೇಳಿರುವುದರಿಂದ ಜ್ಞಾನ

ದಷ್ಟು ಭಕ್ತಿ, ಭಕ್ತಿಯಷ್ಟು ಅನುಗ್ರಹ; ಅನುಗ್ರಹದಷ್ಟು ಮುಕ್ತಿಯಲ್ಲಿ ಸುಖ'– ಎಂದು ಹೇಳುವ ಶ್ರುತಿಯೂ ನಮಗೆ ಅನುಕೂಲವಾಗುತ್ತದೆ– ಎಂದೂ ಹೇಳಿ, ಮೊದಲನೆಯ ಪಕ್ಷಕ್ಕೆ ಅನೌಚಿತ್ಯವನ್ನು ತೋರಿಸಿದ್ದರೂ, ಸಹ ಅದೇ ಪಕ್ಷವನ್ನೇ ಅಂಗೀಕರಿಸುವುದು ಅಲ್ಲಿಯ ವಿವೃತಿಯಲ್ಲಿ ಕಂಡು ಬರುತ್ತದೆ.

"ಸಜಾತೀಯ ಹಾಗೂ ವಿಜಾತೀಯ ಗುಣಗಳಲ್ಲಿಯೂ ಅನಂತಗುಣಾಧಿಕಳು"– ಎಂದು ಕೆಲವರು ಸಾಂಪ್ರದಾಯಿಕರು ಹೇಳುತ್ತಾರೆ."– ಎಂದು ಉದಾಹರಿಸಿ, "ಮಹಾಕಾಲ, ಸಂವತ್ಸರ, ಘಳಿಗೆ, ಲವ– ಮುಂತಾದುವುಗಳಿಗೆ ಇರುವಂತೆ ಆನಂತ್ಯವು ಸಂಭಾವನೆಯ ಅಭಿಪ್ರಾಯದಿಂದ ಇರುತ್ತದೆ."– ಎಂದು ಅಲ್ಲಿಯೇ ವಚನವಿರುತ್ತದೆ. ಆದುದರಿಂದ ವಿರೋಧ ವಿಲ್ಲ.

ಹೀಗೆ ಕಲ್ಪಿಸುವುದು ಏಕೆ ?–ಎಂದು ಪ್ರಶ್ನಿಸಿದರೆ, ಕಣ್ಣು ಮುಚ್ಚಿರುವ ನಮಗೆ ತಿಳಿಯದು-ಎಂದು ಉತ್ತರವೀಯುತ್ತೇವೆ. ಆದರೆ ಈ ಗ್ರಂಥದಲ್ಲಿ ರಹಸ್ಯವಾಗಿರುವುದನ್ನು ತಿಳಿದಷ್ಟು ಹೊರತೆಗೆದು, ಗುರುರಾಜ–ಶ್ರೀಮದಾಚಾರ್ಯರ ಕರುಣಾಲೇಶ ಮಾತ್ರದಿಂದ, ವೀಣೆಯಂತೆ ಬಿಂಬರೂಪಿಯ ಕ್ರಿಯಾವನ್ನು ಅನುಸರಿಸಿ ಸೂಚಿಸುತ್ತೇನೆ. ಭಾವಪ್ರಕಾಶಿಕಾಚಾರ್ಯರು "ವಾದಿಯೆಂದರೆ ಮಧ್ವಾಚಾರ್ಯರು. ಅವರೇ ರಾಜರಾಗಿಉಳ್ಳ, ಅವರ ಸೇವಕನಾದ ನಾನು ಅವರ ಕರುಣಾಬಲದಿಂದ, ವೀಣೆಯು ಗಾಯನವನ್ನು ನುಡಿಸುವಂತೆ ಈ ಗ್ರಂಥವನ್ನು ರಚಿಸುತ್ತೇನೆ ಹೊರತಾಗಿ ನನ್ನ ಸ್ವಂತ ಶಕ್ತಿಯಿಂದಲ್ಲ."– ಎಂದು ನುಡಿದಿರುತ್ತಾರೆ. ಅವರನ್ನೇ ನಾನು ಅನುಸರಿಸುತ್ತೇನೆ, ॥೫॥

೫. ಶ್ರೀಗುರುಹೃದಯಪ್ರಕಾಶಿಕೆ :-

ಕಮಲಸಂಭವನೆಂಬ ಬ್ರಹ್ಮ, ಪವನ-ಎಂಬ ವಾಯುದೇವರು ಇವರಿಬ್ಬರೂ ಸಮವಾದ ಜ್ಞಾನಾದಿ ಗುಣಗಳಲ್ಲಿ ಕೋಟಿಗುಣಗಳಿಂದ ಕಡಿಮೆಯಾದವರು. ವಿಜಾತೀಯವೆಂಬ ನಿತ್ಯಮುಕ್ತತ್ವಾದಿ ಗುಣಗಳಿಂದ ಅನಂತ ಗುಣ ಕಡಿಮೆಯಾದವರು. ಆದರೂ ರುದ್ರಾದಿ ಸಮಸ್ತ ದೇವಗಣ ಸಂಸೇವ್ಯರು. ಸಮವರ್ತಿಗಳು ಅಂದರೆ, ಬ್ರಹ್ಮ-ವಾಯುಗಳಿಬ್ಬರೂ ಸಮಾನ ನಡತೆ, ಪರಸ್ಪರ ಸಮಮರ್ಯಾದೆ ಉಳ್ಳವರೆಂದರ್ಥ. ಇವರು ಅಪರಬ್ರಹ್ಮರೆಂಬ ಹೆಸರುಳ್ಳವರು. ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಶ್ರೀಪದ್ಮನಾಭರೂಪೀ ಶ್ರೀಪರಮಾತ್ಮನ ನಾಭೀ ಕಮಲದಲ್ಲಿ ಸೃಷ್ಟರಾದ ಹಿರಣ್ಯಗರ್ಭನಾಮಕರಾದ ಚತುರ್ಮುಖಬ್ರಹ್ಮದೇವರು **ಕಮಲಸಂಭವರು.**

ಶ್ರೀಹರಿಯ ಪ್ರಥಮಾಂಗಭೂತರೂ, ಜಗತ್ಪ್ರಾಣರೂ ಆದ ಪಾವನಮೂರ್ತಿ ಶ್ರೀವಾಯುದೇವರು **ಪವನನಾಮಕರು.**

ಬ್ರಹ್ಮ ಮತ್ತು **ಪವನ**ಇವರೀರ್ವರೂ ಸಮಕಕ್ಷಾಪನ್ನರು. ಶ್ರೀ-ವಾಯುದೇವರು ಭಾವೀಬ್ರಹ್ಮರು. ಇದರಿಂದ ಪದವಿ ದೃಷ್ಟಿಯಿಂದ, ಪವನರು ಕಮಸಂಭವನಿಗಿಂತಲೂ ಕಿಂಚಿತ್ ನ್ಯೂನರು. ಆದರೆ ಉಭಯರು ಸ್ವರೂಪತಃ ಸಮಾನರು. ಇಬ್ಬರಲ್ಲೂ ಸಮಾನ ಧರ್ಮಗಳಿವೆ.

ಭಗವದ್ಗುಣೋಪಾಸನೆಯಲ್ಲಿ ಇಬ್ಬರೂ ಸಮಾನವಾಗಿ ವರ್ತಿಸುವರು. ಇದರಿಂದ **ಸಮವರ್ತಿಗಳು.**

ಮಹರುದ್ರದೇವರೇ ಆದಿಯಾಗಿ ಸಮಸ್ತ ದೇವತಾಗಣದಿಂದ ಸಂಸೇವ್ಯರು. "ರುದ್ರ"–ಶಬ್ದದಿಂದ ಗರುಡಶೇಷರೂ ಗ್ರಾಹ್ಯ. ಇದರಿಂದ ಗರುಡಶೇಷ ರುದ್ರಾದಿಗಳಿಗಿಂತ ತಾರತಮ್ಯದಲ್ಲಿ ಉತ್ತಮರು.

ಅವರಿಬ್ಬರ ಜ್ಞಾನಕ್ಕೆ ಎಂದೆಂದಿಗೂ ತಿರೋಧಾನವಿಲ್ಲ. ಭಗವತ್ಸಂಬಂಧವಾದ ಜ್ಞಾನದಲ್ಲಿ ಅತಿರೋಹಿತ ವಿಮಲವಿಜ್ಞಾನಿಗಳು. ಇದರಿಂದ **ಪರಬ್ರಹ್ಮನಾಮಕರು.**

ಪರಮಾತ್ಮನು ಪರಬ್ರಹ್ಮನು. ಬ್ರಹ್ಮವಾಯುಗಳು **ಅಪರಬ್ರಹ್ಮರು.** ಜೀವೋತ್ತಮರಾಗಿದ್ದರಿಂದ ಜೀವಕೋಟಿಯಲ್ಲಿ ಸರ್ವಗುಣಗಳಲ್ಲಿಯೂ ಪೂರ್ಣರು. ಇದರಿಂದ **ಬ್ರಹ್ಮ** ಶಬ್ದವಾಚ್ಯರು. ಶ್ರೀಹರಿಗಿಂತ ತಾರತಮ್ಯದಲ್ಲಿ ಅತ್ಯಂತ ಅವರರಾಗಿದ್ದಾರಾದ್ದರಿಂದ, ಅಪರಬ್ರಹ್ಮನಾಮಕರು.

**ಪ್ರಮಾಣ :–**

"ಮುಖ್ಯ ಪ್ರಾಣಾತ್ಮರೋ ಬ್ರಹ್ಮಾಶ್ರಯಃ ಕೋಟಿಗುಣಾಧಮಾ"

**–ಇತಿ ತಾರತಮ್ಯ ಕೌಸ್ತುಭೇ ||**

ಅಪರಬ್ರಹ್ಮೇತಿ–"ಅಬ್ರಹ್ಮಣಃ ಪರೇಸರ್ವ"– ಇತ್ಯುಕ್ತೇಃ

ಬ್ರಹ್ಮವಾಯುಗಳು ಸಮಾನಸ್ಕಂಧರಾಗಿರುವುದರಿಂದ, ಅವರನ್ನು **ಯಮಳರು**–ಎಂದು ಕರೆದಿದ್ದಾರೆ. ಅಂದರೆ ಸಮಜೋಡಿಗಳೆಂದರ್ಥ.

ಈ ಯಮಳರಿಗೆ ಲೋಕಮಾತೆಯಾದ ಶ್ರೀಲಕ್ಷ್ಮೀದೇವಿ ಸಜಾತಿ ಕೋಟಿಗುಣಗಳಿಂದ ಉತ್ತಮಳು.

ಏಕರೀತಿ ಧರ್ಮಗಳಿಗೆ ಸಜಾತಿ ಗುಣಗಳೆಂತಲೂ, ಭಿನ್ನಧರ್ಮಗಳಿಗೆ ವಿಜಾತೀಯ ಗುಣಗಳೆಂತಲೂ ತಿಳಿಯಬೇಕು. ಬ್ರಹ್ಮವಾಯುಗಳಲ್ಲಿರುವ ಸಮಾನಧರ್ಮಗಳೆಲ್ಲರೂ ಲಕ್ಷ್ಮಿಯಲ್ಲಿರುವುವು.

ಆದರೆ ಬ್ರಹ್ಮವಾಯುಗಳಲ್ಲಿರುವ ಸಮಾನ ಗುಣಗಳಿಗೆ ಹೋಲಿಸಿದಾಗ, ಸಾಪೇಕ್ಷದೃಷ್ಟಿಯಿಂದ ಶ್ರೀಲಕ್ಷ್ಮಿಯು ಬ್ರಹ್ಮವಾಯುಗಳಿಗಿಂತ ಕೋಟಿ ಗುಣಗಳಿಂದ ಉತ್ತಮಳು.

ಆದರೆ ಶ್ರೀಲಕ್ಷ್ಮಿಯಲ್ಲಿರುವ ನಿತ್ಯಮುಕ್ತತ್ವ, ನಿರ್ವಿಕಾರತ್ವಾದಿ ಗುಣಗಳು ಬ್ರಹ್ಮವಾಯುಗಳಲ್ಲಿ ಇಲ್ಲ. ಇದರಿಂದ ಬ್ರಹ್ಮವಾಯುಗಳು ಶ್ರೀಲಕ್ಷ್ಮಿಗಿಂತ ವಿಜಾತೀಯ ಗುಣ ಧರ್ಮಗಳಲ್ಲಿ ಅಧಮರೆನಿಸಿದ್ದಾರೆ.

ಸಜಾತೀಯ ಗುಣಗಳಿಂದ ಲಕ್ಷ್ಮಿಗೆ ಶ್ರೇಷ್ಠತೆ ಮತ್ತು ಬ್ರಹ್ಮವಾಯುಗಳಿಗೆ ನ್ಯೂನತೆ.

ವಿಜಾತೀಯ ಗುಣಗಳಲ್ಲಂತೂ ಅಧಮತ್ವ ಹೀಗಿದೆ ಲಕ್ಷ್ಮೀ–ಬ್ರಹ್ಮ–ವಾಯುಗಳಿಗಿರುವ ತಾರತಮ್ಯಾಂತರ. ॥೫॥

## ಪದ್ಯ - ೬

ಮೂಲ :–

ಶತಿಗಳಿಂದ ಸರಸ್ವತೀ ಭಾ ।<br>
ರತಿಗಳಧಮರು ನೂರುಗುಣ ಪರಿ ।<br>
ಮಿತ ವಿಜಾತ್ಯವರರು ಬಲಜ್ಞಾನಾದಿ ಗುಣದಿಂದ ||

**ಅತಿಶಯುಳು ವಾಗ್ದೇವಿ ಶ್ರೀಭಾ ।**
**ರತಿಗೆ ಪದದ ಪ್ರಯುಕ್ತ ವಿಧಿ ಮಾ ।**
**ರುತರವೋಲ್ ಚಿಂತಿಪುದು ಸದ್ಭಕ್ತಿಯಲಿ ಕೋವಿದರು ॥**
**॥೬॥**

**ಅತತರಣಿಕೆ :–**

ಪ್ರಸಕ್ತಪದ್ಯದಿಂದ ಸರಸ್ವತೀ ಮತ್ತು ಭಾರತೀದೇವರುಗಳ ತಾರ ತಮ್ಯ–ವಿಚಾರ ತಿಳಿಸುತ್ತಾರೆ. ॥೬॥

**ಪ್ರತಿಪದಾರ್ಥ :–**

**ಸರಸ್ವತೀ** = ಬ್ರಹ್ಮದೇವರ ಪತ್ನಿಯಾದ ಶ್ರೀ ಸರಸ್ವತೀದೇವಿ, **ಭಾರತೀಗಳು** = ವಾಯುದೇವರ ರಮಣಿ ಶ್ರೀ ಭಾರತೀದೇವಿಯರು ಇವ ರಿಬ್ಬರು, **ಪತಿಗಳಿಂದ** = ತಮ್ಮ ತಮ್ಮ ಪತಿಗಳಿಂದ, **ವಿಜಾತಿ** = ವಿಜಾತೀಯವಾದ, **ಬಲಜ್ಞಾನಾದಿಗಳಿಂದ** = ಬಲ, ಜ್ಞಾನ ಇತ್ಯಾದಿ ಗುಣಸಮೂಹಗಳಿಂದ, **ನೂರುಗುಣ ಪರಿಮಿತ** = ಪರಿಮಿತವಾದ ನೂರು ಗುಣಗಳಿಂದ, **ಅವರರು** = ಕಡಿಮೆಯಾಗಿದ್ದಾರೆ. (ಶತಗುಣ ನ್ಯೂನರು), **ವಾಗ್ದೇವಿ** = ವಾಗಭಿಮಾನಿಯಾದ ಶ್ರೀ ಸರಸ್ವತೀದೇವಿಯು, **ಶ್ರೀಭಾರತಿಗೆ** = ಶ್ರೀ ಭಾರತೀದೇವಿಯರಿಗೆ, **ಪದದ ಪ್ರಯುಕ್ತ** = ಸತ್ಯಲೋಕದ ಪದವಿ ಪ್ರಯುಕ್ತ, **ಅತಿಶಯುಳು** = ಕಿಂಚಿಂತ್ ಅಧಿಕರು, **ವಿಧಿ** = ಶ್ರೀ ಬ್ರಹ್ಮದೇವರು, **ಮಾರುತರವೋಲ್** = ಶ್ರೀ ವಾಯು ದೇವರುಗಳಂತೆ, (ಬ್ರಹ್ಮದೇವರು ಪದದ ಪ್ರಯುಕ್ತ ಶ್ರೀವಾಯುವಿಗಿಂತ ಕಿಂಚಿತ್ ಶ್ರೇಷ್ಠರು ಎಂಬಂತೆ), **ಕೋವಿದರು** = ಜ್ಞಾನಿಗಳು, **ಸದ್ಭಕ್ತಿಯಲಿ** = ಸಮೀಚೀನವಾದ ಭಕ್ತಿಯಿಂದ, **ಚಿಂತಿಪುದು** = ಉಪಾಸಿಸುವರಾಗಬೇಕೆಂದು ತಾತ್ಪರ್ಯ. ॥೬॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಸರಸ್ವತೀ ಭಾರತೀದೇವೇರುಗಳ ತಾರತಮ್ಯ ಹೇಳತಾರೆ.

ಬ್ರಹ್ಮದೇವರ ಪತ್ನಿಯಾದ ಸರಸ್ವತೀದೇವೇರು, ವಾಯುದೇವರ ಪತ್ನಿ ಭಾರತೀದೇವೇರು- ಇವರಿಬ್ಬರು ತಮ್ಮ ತಮ್ಮ ಪತಿಗಳಿಂದಲಿ ವಿಜಾತೀಯವಾದ ಬಲಜ್ಞಾನಾದಿಗುಣಗಳಿಂದ ಪರಿಮಿತವಾದ ನೂರು ಗುಣಗಳಿಂದ ಕಡಿಮಿ ಆದವರು. ಹ್ಯಾಂಗೆಂದರೆ, ನೂರು ವಿಜಾತಿಗುಣದಿಂದ ಅಧಮರು, ನೂರು ಸಜಾತಿ ಗುಣದಿಂದ ಸಮಾನರು. ಬ್ರಹ್ಮ-ವಾಯುಗಳು ತಮ್ಮ ತಮ್ಮ ಹೆಂಡಂದಿರುಗಳಿಗಿಂತ ನೂರು ಗುಣ ಉತ್ತಮರು. ಸರಸ್ವತೀ ದೇವೇರು ಸತ್ಯಲೋಕದ ಪದವಿ ಪ್ರಯುಕ್ತ, ಕಾಂತಿಸಂಪನ್ನರಾದ ಭಾರತೀ ದೇವೇರಿಗೆ ಕಿಂಚಿತ್ ಶ್ರೇಷ್ಠರು. ಬ್ರಹ್ಮ-ವಾಯುಗಳೋಪಾದಿಯಲ್ಲಿ ಸರಸ್ವತೀ ಭಾರತೀಯರಿಬ್ಬರೂ ಅಧಮರಾದವರು. ಜ್ಞಾನಿಗಳಾದವರು ಇದನ್ನು ಸಮೀಚೀನವಾದ ಭಕ್ತಿಯಿಂದ ಚಿಂತಿಸೋವರಾಗಬೇಕಂತ ತಾತ್ಪರ್ಯ. ॥೬॥

## ೨. ಭಾವಪ್ರಕಾಶಿಕೆ: –

ಬ್ರಹ್ಮವಾಯುಗಳಿಗಿಂತಲೂ ಅವರ ಪತ್ನಿಯರಾದ ಸರಸ್ವತೀ ಭಾರತೀಯರು ಬಲದಲ್ಲೂ ಜ್ಞಾನದಲ್ಲೂ ೧೦೦ ವಿಜಾತಿಗುಣಗಳಿಂದ ಕಮ್ಮಿ ಎನಿಸುವರು. ಬ್ರಹ್ಮದೇವರು ಹೇಗೆ ವಾಯುದೇವರಿಗಿಂತಲೂ ಒಂದು ಕಲ್ಪ ಸಾಧನೆ ಹೆಚ್ಚು ಮತ್ತು ಪದವಿ ಪ್ರಯುಕ್ತವಾಗಿ ಸ್ವಲ್ಪ ಉತ್ತಮರೋ, ಹಾಗೆ ವಾಯುದೇವರ ಪತ್ನಿಯರಾದ ಭಾರತೀದೇವಿಯರಕಿಂತಲೂ ಬ್ರಹ್ಮದೇವರ ಪತ್ನಿಯರಾದ ಸರಸ್ವತೀದೇವಿಯರು ಪದವಿ ಪ್ರಯುಕ್ತವಾಗಿ ಸ್ವಲ್ಪ ಉತ್ತಮರೆಂದು-ಜ್ಞಾನಿಗಳು ಚಿಂತನೆ ಮಾಡಬೇಕೆಂಬ ತಾತ್ಪರ್ಯ,

**ಭಾವದರ್ಪಣ :–**

ಪತಿಗಳಿಂದ. ತದುಕ್ತಂ "ವಾಣೀಹಿ ಭಾರತೀರೂಪಾ ವಿಧೇಃ ಶತ ಗುಣಾಧಮಾ"– ಇತಿ **ಕೌಸ್ತುಭೇ.** ॥೬॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

'ಪತಿ' ಇತಿ ॥ 'ಬಲ' ಇತಿ । ಹರಿಸ್ವರೂಪ ಭೂತತದ ಪರೋಕ್ಷೇ ॥ "ಶಿವಾದಾಶಾ ತಥೈವಾಸ್ಯಾಃ ಮುಖ್ಯಾಯುಃ ಶತೋತ್ತರಾ" ॥– ಇತಿ **ಛಾಂದೋಗ್ಯೇ** ॥ ಹರೇ ಅಪರೋಕ್ಷಜ್ಞಾನವಿಷಯೇ ತ್ವನಂತಾಂಶನ್ಯೂನೇ "ಉಮಾ ಯಾವದಿತ್ಯುಕ್ತೇಶ್ಚೈತತ್ ಕೇಚಿದಿತ್ಯುಕ್ತ್ವಾ "ಸಂಪ್ರದಾಯವಿದಸ್ತು"– ಇತ್ಯಾದಿನಾ ಜ್ಞಾನೇ ಆನಂದೇ–ಚ ಈರಾಜಾಭ್ಯಾಂ ತದ್ರಮಣ್ಯೋಃ ಶತಾಂಶನ್ಯೂನ್ಯಮೇವ ॥ "ಚಂದ್ರೇತ್ಯಾದಿ ಸ್ವರೂಪಾಯಾಃ ತೇಭ್ಯಃ ಶತಗುಣಾವರಾಃ ॥ ವಿಷ್ಣುಭಕ್ತೌ ಚ ತತ್ಪ್ರೀತೌ ಜ್ಞಾನಾನಂದಾದಿಕೇಷ್ವಪಿ ॥ ಮುಕ್ತೇಃ ಪಶ್ಚಾದಪಿ ಗುಣೈಃ ಸರ್ವಂ ಬ್ರಹ್ಮಭ್ಯ ಈರಿತಾಃ ॥" ಇತಿ **ಬೃಹದ್ಭಾಷ್ಯಾತ್.** ಇತಿ ತಾರತಮ್ಯವಿವೃತಿಃ ಕೃತಾ ॥ "ತತ್ಪತ್ನ್ಯ ತಚ್ಛತಾವರೇ ॥ ಪದೇತಿ ॥ ಕಿಂಚಿದೂನತೇತ್ಯುಕ್ತೇಃ ॥ ಗಾಯತ್ರೀವದ್ ಭಾರತೀವತ್"– ಇತಿ ಚ. ॥೬॥

### ಕನ್ನಡಾರ್ಥ

**ಛಾಂದೋಗ್ಯೋಪನಿಷದ್ಭಾಷ್ಯದಲ್ಲಿ** "ರುದ್ರನಿಗಿಂತ ಭಾರತೀ(ಆಶಾ)–ದೇವಿಯು ನೂರುಗುಣದಿಂದ ಅಧಿಕಳು. ಭಾರತೀದೇವಿಗಿಂತಲೂ ನೂರು ಗುಣಗಳಿಂದ ಮುಖ್ಯಪ್ರಾಣದೇವರು ಅಧಿಕರು"– ಎಂಬುದಾಗಿ ಹೇಳಿದುದರಿಂದ "ಪತಿಗಳಿಂದ ಭಾರತೀ ಸರಸ್ವತೀಗಳು ಅಧಮರು ನೂರುಗುಣ"–ಎಂದು ದಾಸರಾಯರು ನಿರೂಪಿಸಿರುತ್ತಾರೆ. "ಹರಿಯು ವಿಷಯಕ ಅಪರೋಕ್ಷ

ಜ್ಞಾನದಲ್ಲಿ ಅನಂತಾಂಶಗಳಿಂದ ಕಡಿಮೆಯುವರು" ; "ಉಮಾ ಯಾವದ ನಂತಾಂಶಾನ್"– ಎಂದು ಹೇಳಲಾಗಿದೆ."– ಎಂದು ಕೆಲವರು ಹೇಳು ತ್ತಾರೆ."– ಎಂದು ಹೇಳಿ "ಸಂಪ್ರದಾಯ ಬಲ್ಲವರು–ಜ್ಞಾನ ಹಾಗೂ ಆನಂದ ಗಳಲ್ಲಿ ಬ್ರಹ್ಮವಾಯುಗಳ ದೆಶೆಯಿಂದ ಸರಸ್ವತೀ ಭಾಸತೀದೇವಿಯರು ಶತಾಂಶ (ನೂರು ಗುಣ) ಗಳಿಂದಲೇ ಕಡಿಮೆಯುವರು." ಯಾಕೆಂದರೆ– "ದ್ರೌಪದಿ ಚಂದ್ರಾ ಇತ್ಯಾದಿ ಸ್ವರೂಪರಾದ ಶ್ರೀಸರಸ್ವತೀ ಹಾಗೂ ಭಾರತೀ ದೇವಿಯರು ವಿಷ್ಣುಭಕ್ತಿ, ಪ್ರೀತಿ, ಜ್ಞಾನ, ಆನಂದ ಮುಂತಾದ ಸಕಲ ಗುಣಗಳಲ್ಲಿಯೂ ನೂರುಗುಣಗಳಿಂದ ಹೀನರು. ಮುಕ್ತಿಯನಂತರ ದಲ್ಲಿಯೂ ಇದು (ಈ ನ್ಯೂನತೆಯು) ಇರುತ್ತದೆ."–ಎಂದು **ಬೃಹದಾರಣ್ಯಕ-ಭಾಷ್ಯ**ದಲ್ಲಿ ವಚನವಿರುತ್ತದೆ. ಎಂದು **ತಾರತಮ್ಯ ವಿವೃತಿ**ಯಲ್ಲಿ ಹೇಳ ಲಾಗಿರುತ್ತದೆ. ಬ್ರಹ್ಮವಾಯುಗಳ ಪತ್ನಿಯರು ಅವರಿಂದ ನೂರುಗುಣ ಗಳಿಂದ ಕಡಿಮೆಯೆವರು.

ವಾಯುಪದ– ಬ್ರಹ್ಮಪದಗಳಲ್ಲಿ ಪೂರ್ವಾಪರಭಾವವಿದ್ದು, ತನ್ನಿ ಮಿತ್ತ ನ್ಯೂನಾಧಿಕ್ಯವಿರುವಂತೆ ಭಾರತೀ ಸರಸ್ವತಿಯರಲ್ಲೂ ಪದನಿಮಿತ್ತ ನ್ಯೂನಾಧಿಕ್ಯವಿರುವದೆಂದು ತಿಳಿಯಬೇಕು. ಸರಸ್ವತಿ ಭಾರತಿಯರು ಯೋಗ್ಯತೆಯಲ್ಲಿ ಸಮರೆಂದು ತಿಳಿಯಬೇಕು. ॥೬॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಜ್ಞಾನಿಗಳಾದವರು ಸದ್ಭಕ್ತಿಯಿಂದ, ಸರಸ್ವತೀದೇವೀ ಭಾರತೀದೇವಿ ಸಹ ಸಜಾತಿಗುಣಗಳೆಂಬ ಬಲಜ್ಞಾನಾದಿಗುಣಗಳಿಂದ ತಮ್ಮ ಪತಿಗಳಿಗಿಂತ ಸ್ತ್ರೀತ್ವಾದಿ ವಿಜಾತಿಗುಣಗಳಿಂದಲೂ ಸಹ ನೂರುಪಾಲು ಕಡಿಮೆ ಎನಿಸು ವರು; ಸರಸ್ವತೀದೇವಿ ಭಾರತೀಗಿಂತ ಪದಪ್ರಯುಕ್ತ ಕಿಂಚಿದಧಿಕಳು; ಬ್ರಹ್ಮ–ವಾಯುಗಳಲ್ಲೂ ಸಹ ಪದಪ್ರಯುಕ್ತ ಕಿಂಚಿದಧಿಕರೆಂದು ತಿಳಿವಂತೆ ಇವರಲ್ಲೂ ಭಾವಿಸಬೇಕೆಂದರ್ಥ. ॥೬॥

(ವಿವರಣೆ)- ಈ ಸಂಧಿಯಲ್ಲಿ ಸಜಾತಿ ವಿಜಾತಿ ಗುಣಗಳು- ಎಂತ ವಿಭಾಗವು ಕಂಡಿದೆ. ಸಜಾತಿ ಅಂದರೆ ತನಗೆ ಸಮನಾದ ಅಥವಾ ತನ್ನಂತೆ ಇತರರಲ್ಲಿರುವ ಗುಣಕ್ಕೆ ಸಜಾತಿ ಗುಣವೆಂತಲೂ, ತನಗಿಂತಲೂ ಮೀರಿರುವ ಗುಣಕ್ಕೆ ವಿಜಾತಿಯೆಂತ ತಿಳಿಯಬೇಕು.

## ವಿಶೇಷಪ್ರಮೇಯ ಸತ್ತತ್ತ್ವ ರತ್ನಮಾಲಾದಲ್ಲಿ-

ಈ ಮಹಾಲಕ್ಷ್ಮಿಯು ಬ್ರಹ್ಮ-ವಾಯುಗಳಿಗಿಂತಲೂ ತಾರತಮ್ಯದಲ್ಲಿ ಒಂದು ಕೋಟಿಗುಣದಷ್ಟು ಹೆಚ್ಚು ಯೋಗ್ಯತೆಯುಳ್ಳವಳು. ಶ್ರೀಮಹಾ ಲಕ್ಷ್ಮಿಯು ಜ್ಞಾನಾನಂದಾದಿಗಳಲ್ಲಿ ಮಾತ್ರವಲ್ಲದೆ ಶಕ್ತಿ ಸೌಂದರ್ಯ ಪರಾಕ್ರಮ ಗಾಂಭೀರ್ಯ-ಮುಂತಾದ ಇತರ ಗುಣಗಳ ವಿಷಯದಲ್ಲಿಯೂ ಸಹ ತಾರತಮ್ಯ ಉಳ್ಳವಳು. ಅಂದರೆ, ಶ್ರೀಮಹಾಲಕ್ಷ್ಮಿಯು ಜ್ಞಾನದಲ್ಲಿ ಆನಂದದಲ್ಲಿ ಕೋಟಿಗುಣದಿಂದ ಅಧಿಕಳಾಗಿರುವಂತೆ, ಬ್ರಹ್ಮ-ವಾಯುಗಳಿಗಿಂತ ಕೋಟಿ ಗುಣ ಶಕ್ತಳು, ಅಷ್ಟು ಗುಣ ಸುಂದರಳು- ಎಂಬುದಾಗಿ ತಿಳಿಯಬೇಕು. ಆದ್ದರಿಂದ ಈಕೆಯು ಆ ದೇವತೆಗಳಿಗಿಂತ, ಅವರಿಂದ ಊಹಿಸಲು ಅಶಕ್ಯ ವಾದ ಮಾಹಾತ್ಮ್ಯಉಳ್ಳವಳು.

ತಾನು ಪರಮಾತ್ಮನನ್ನು ಅನಂತಾನಂತಗುಣವುಳ್ಳವನೆಂದು ತಿಳಿದಿದ್ದರೂ, ಪ್ರತಿಕ್ಷಣದಲ್ಲಿಯೂ ನಾರಾಯಣನಲ್ಲಿ ಹೊಸದಾದ ಗುಣಗಳನ್ನು ನೋಡಿ ನೋಡಿ ಹಿಗ್ಗುತ್ತಿರುವಳು. ಅಂದರೆ, ಶ್ರೀರಮಾದೇವಿಯು ಭಗವದ್ವಿಷಯದಲ್ಲಿ ಸರ್ವಜ್ಞಳಲ್ಲ. ಜಗದ್ವಿಷಯದಲ್ಲಿ ಮಾತ್ರ ಸರ್ವಜ್ಞಳು. ಭಗವದ್ವಿಷಯದಲ್ಲಿ ತೋರಿ ಬರದೇ ಇರುವ ಇನ್ನೂ ಎಷ್ಟೋ ಗುಣಗಳು ಇರುವುದರಿಂದ ಭಗವದ್ವಿಷಯದಲ್ಲಿ ಸರ್ವಜ್ಞಳಲ್ಲವೆಂದರ್ಥ. ಬ್ರಹ್ಮಾದಿಗಳು ಜಗದ್ವಿಷಯದಲ್ಲಿ ಸರ್ವಜ್ಞರೇ ಆದರೂ, ಅವರು ಆಲೋಚನೆಯಿಂದ ಸರ್ವವಸ್ತುಗಳನ್ನೂ ತಿಳಿದುಕೊಳ್ಳುವರು. ಲಕ್ಷ್ಮಿಯಾದರೋ ಆಲೋಚನೆ ಇಲ್ಲದೇನೆ, ಆಮಲಕದಂತೆ ಅಂದರೆ, ಕೈಯಲ್ಲಿರುವ ಶುದ್ಧ ಜಲದಂತೆ ಸ್ಪಷ್ಟವಾಗಿ ನೋಡುವಳು.

ಲಕ್ಷ್ಮಿಗೆ ಭಗವದ್ವಿಷಯದಲ್ಲಿ ತಿಳಿಯದಿರುವ ಗುಣಗಳಿಲ್ಲದಿದ್ದರೂ ದೇಶ ಕಾಲ ವಸ್ತು ಸಂಬಂಧಗಳಿಂದ ಉಂಟಾಗುವ ವಿಶೇಷಗಳು ತಿಳಿಯದೆ ಇರುತ್ತವೆ. ಇಂಥಾ ವಿಶೇಷಗಳನ್ನು ನೋಡಿ ನೋಡಿ ಹಿಗ್ಗುತ್ತಿರುವ ಳೆಂದರ್ಥ.

ಶ್ರೀರಮೆಯು ಪ್ರಕೃತಿಗೆ ನಿಯಾಮಕಳು. ಪ್ರಕೃತಿ ಪರಿಣಾಮವಿಲ್ಲದೆ ಯಾವ ಜಡಸೃಷ್ಟಿಯೂ ಇಲ್ಲ. ಆದ್ದರಿಂದ ಆಕೆಯು ಬ್ರಹ್ಮಾಂಡಾದಿ ಜಡ ಸೃಷ್ಟಿಗೆ ಕಾರಣಳು. ದುರ್ಗಾರೂಪದಿಂದ ಪ್ರಳಯಕ್ಕೂ ಕಾರಣಳು. ನಾವು ಜೀವಿಸಬೇಕಾದರೆ ದ್ರವ್ಯವು ಅವಶ್ಯಕವಷ್ಟೆ ? ಈ ದ್ರವ್ಯವೆಂಬ ಐಶ್ವರ್ಯಕ್ಕೆ ನಿಯಾಮಕಳು ಈ ಮಹಾಲಕ್ಷ್ಮಿಯೇ. ಆದ್ದರಿಂದ ಈಕೆಯೇ ಸ್ಥಿತಿದಾಯಕಳೆನ್ನಿಸಿಕೊಳ್ಳುವಳು. ಬ್ರಹ್ಮಾದಿ ಸರ್ವಜೀವರಿಗೂ ಮನೋ ನಿಯಾಮಕಳಾಗಿರುವುದರಿಂದ, ಲಕ್ಷ್ಮಿಗೆ ಜಗನ್ನಿಯಮನವೂ ಸಿದ್ಧವಾಯಿತು. ಆದ್ದರಿಂದ ಸೃಷ್ಟ್ಯಾದ್ಯಷ್ಟಕರ್ತೃತ್ವವು ಈಕೆಗೂ ಸಂಭಾವಿತವಾಗುವುದು.

ಸೃಷ್ಟಿ ಸ್ಥಿತಿ ಪ್ರಳಯ ಸರ್ಗ ಮಹಾವಿಭೂತಿ ವೃತ್ತಿಪ್ರಕಾಶ ನಿಯಮಾ ವೃತ್ತಿಬಂಧ ಮೋಕ್ಷಾಃ ।

ಯಸ್ಯಾ ಅಪಾಂಗಲವಮಾತ್ರತ ಊರ್ಜಿತಾ ಸಾ ಶ್ರೀರ್ಯತ್ಕಟಾಕ್ಷ ಬಲವತ್ಯಜಿತಂ ನಮಾಮಿ-ಎಂಬುದಾಗಿ ದ್ವಾದಶಸ್ತೋತ್ರದಲ್ಲಿ ವರ್ಣಿಸಿರು ತ್ತಾರೆ. ॥೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಲ್ಲಿ ಶ್ರೀಸರಸ್ವತೀ ಮತ್ತು ಭಾರತೀದೇವಿಯರ ತಾರ ತಮ್ಯ ವಿಚಾರ ತಿಳಿಸುತ್ತಾರೆ. ಬ್ರಹ್ಮಪತ್ನಿಯಾದ ಶ್ರೀಸರಸ್ವತೀದೇವಿ ಮತ್ತು ವಾಯುರಮಣಿಯರಾದ ಶ್ರೀಭಾರತೀದೇವಿ ಇಬ್ಬರೂ– ಸಮಾನ

ಕಕ್ಷಾಪನ್ನರು. ಪರಶುಕ್ಲತ್ರಯರಲ್ಲಿ ಸೇರಿದವರು. ಅತಿರೋಹಿತವಿಮಲ ವಿಜ್ಞಾನಿಗಳು. ಆದರೆ ತಮ್ಮ ತಮ್ಮ ಪತಿಗಳಿಗಿಂತ ಶತಾಗುಣಾಧಮರು.

**ಪ್ರಮಾಣ :–**

"ಶಿವಾದಾಶಾ ತಥೈವಾಸ್ಯಾಃ ಮುಖ್ಯವಾಯುಃ ಶತೋತ್ತರಾ" ॥

**–ಇತಿ ಛಾಂದೋಗ್ಯೇ.**

ಅಂದರೆ, ರುದ್ರನಿಗಿಂತ ಭಾರತೀ (ಆಶಾ) ನೂರು ಗುಣದಿಂದಧಿಕಳು. ಭಾರತೀದೇವಿಗಿಂತಲೂ ಮುಖ್ಯಪ್ರಾಣದೇವರು ಶತಗುಣಾಧಿಕರು.

ವಿಜಾತೀಯುವಾದ ಬಲ, ಜ್ಞಾನ, ಆನಂದಾದಿಗುಣಗಳಿಂದ ಪರಿಮಿತವಾದ ನೂರು ಗುಣಗಳಿಂದ ಬ್ರಹ್ಮ ವಾಯುಗಳಿಗಿಂತ ಅಧಮರು. ನೂರು ಸಜಾತೀಯ ಗುಣದಿಂದ ಸಮಾನರು.

ಪ್ರಸಕ್ತ ಶ್ರೀವಾಯುದೇವರು ಭಾವೀಬ್ರಹ್ಮರು. ಇದರಿಂದ ಒಂದು ಕಲ್ಪ ಸಾಧನೆ ಮತ್ತು ಪದವಿ ಪ್ರಯುಕ್ತ ಬ್ರಹ್ಮದೇವರು ವಾಯುದೇವರಿಗಿಂತ ಕಿಂಚಿತ್ ಅಧಿಕರು.

ಹಾಗೆಯೇ, ಭಾರತೀದೇವಿಯರು ಭಾವೀ ಸರಸ್ವತಿಯು. ಇದರಿಂದ ಸಾಧನೆ ಹಾಗೂ ಪದವಿ ಪ್ರಯುಕ್ತವಾಗಭಿಮಾನಿಗಳಾದ ಶ್ರೀಸರಸ್ವತೀ ಭಾರತೀಗಿಂತ ಕಿಂಚಿತ್ ಶ್ರೇಷ್ಠಳು.

**ಪ್ರಮಾಣ :–**

"ಚಂದ್ರೇತ್ಯಾದಿ ಸ್ವರೂಪಾಯಾಃ ತೇಭ್ಯಃ ಶತಗುಣವರಾಃ ॥
ವಿಷ್ಣು ಭಕ್ತೌ ಚ ತತ್ಪ್ರೀತೌ ಜ್ಞಾನಾನಂದಾದಿಕೇಷ್ವಪಿ ॥
ಮುಕ್ತೇಃ ಪಶ್ಚಾದಪಿ ಗುಣೈಃ ಸರ್ವಂ ಬ್ರಹ್ಮಭ್ಯ ಈರಿತಾಃ ॥"

**–ಇತಿ ಬೃಹದ್ಭಾಷ್ಯೇ.**

ಅಂದರೆ, ದ್ರೌಪದೀ, ಚಂದ್ರಾ ಇತ್ಯಾದಿ ಸ್ವರೂಪರಾದ ಶ್ರೀ ಸರಸ್ವತೀ ಹಾಗೂ ಶ್ರೀಭಾರತೀದೇವಿಯರು ವಿಷ್ಣುಭಕ್ತಿ, ಪ್ರೀತಿ, ಜ್ಞಾನ, ಆನಂದಾದಿ ಸಕಲಗುಣಗಳಲ್ಲಿಯೂ ಶತಗುಣಗಳಿಂದ ತಮ್ಮ ತಮ್ಮ ಪತಿಗಳಿಂದ ಹೀನರು. ಮುಕ್ತಿಯ ನಂತರದಲ್ಲಿಯೂ ಈ ತಾರ ತಮ್ಯವು ನಿತ್ಯವು.

ಈ ರೀತಿಯಲ್ಲಿ ಜ್ಞಾನಿಗಳಾದವರು (ಕೋವಿದರು) ತಾರತಮ್ಯ ಭಾವ ವನ್ನು ತಿಳಿದು, ಆದರಂತೆ ಉಪಾಸಿಸಬೇಕೆಂದು ತಿಳಿಸುತ್ತಾರೆ. ॥೬॥

❖❖

## ಪದ್ಯ–೭

**ಮೂಲ :–**

**ಖಗಪ ಫಣಿಪತಿ ಮೃಡರು ಸಮ ವಾ ।**
**ಣಿಗೆ ಶತಗುಣಾಧಮರು ಮೂವ ।**
**ರ್ಗಿಗಿಲೆನಿಸುವನು ಶೇಷ ಪದದಿಂದಲಿ ತ್ರಿಯಂಬಕಗೆ ॥**
**ನಗಧರನ ಷಣ್ಮಹಿಷಿಯರು ಪ ।**
**ನ್ನಗವಿಭೂಷಣಗೈದು ಮೇನಕೆ ।**
**ಮಗಳು ವಾರುಣಿ ಸೌಪರಣಿಗಳಧಿಕವೆರಡು ಗುಣ ॥ ॥೭॥**

**ಅವತರಣಿಕೆ :–**

ಸಮಾನರಕ್ಷಾಪನ್ನರಾದ ಅಹಂಕಾರ ತತ್ತ್ವಾಭಿಮಾನಿಗಳಾದ ಗರುಡ, ಶೇಷ, ರುದ್ರರ-ತಾರತಮ್ಯ ವಿಚಾರವನ್ನು ತಿಳಿಸುತ್ತಾರೆ. ॥೭॥

**ಪ್ರತಿಪದಾರ್ಥ :-**

**ಖಗಪ** = ಪಕ್ಷಿ ಶ್ರೇಷ್ಠರಾದ ಗರುಡದೇವರು, **ಫಣಿಪತಿ** = ಸರ್ಪವರರಾದ ಶೇಷದೇವರು, **ಮೃಡರು**=ಶ್ರೀರುದ್ರದೇವರು, **ಸಮ** = ಈ ಮೂವರು ಸಮಾನಕಕ್ಷಾಪನ್ನರು, **ವಾಣಿಗೆ** = ವಾಗಭಿಮಾನಿಯಾದ ಶ್ರೀಸರಸ್ವತಿ. (ಹಾಗೂ ಶ್ರೀಭಾರತೀದೇವಿ) ದೇವಿಯರಿಗಿಂತ, **ಶತಗುಣಾಧಮರು** = ನೂರು ವಿಜಾತಿ ಗುಣದಿಂದ ಕಡಿಮೆಯಾದವರು, **ಮೂವರು** = ಗರುಡ, ಶೇಷ, ರುದ್ರರು-ಈ ಮೂರು ಮಂದಿಗಳಲ್ಲಿ, **ಪದದಿಂದಲಿ** = ಪದಪ್ರಯುಕ್ತದಿಂದ, **ಶೇಷ** = ಶ್ರೀ ಶೇಷದೇವರು, **ತ್ರಿಯಂಬಕಗೆ** = ತ್ರಿನೇತ್ರರಾದ ಶ್ರೀರುದ್ರದೇವರಿಗಿಂತ, **ಮಿಗಿಲೆನಿಸುವನು** = ಅಧಿಕನೆನಿಸುವರು, **ನಗಧರನ** = ಗೋವರ್ಧನಪರ್ವತವನ್ನೆತ್ತಿದ್ದ ಶ್ರೀಕೃಷ್ಣನ, **ಷಣ್ಮಹಿಷಿಯರು** = ನೀಲಾ, ಭದ್ರಾ, ಮಿತ್ರವಿಂದಾ, ಲಕ್ಷಣಾ, ಕಾಳಿಂದೀ, ಜಾಂಬುವತೀ–ಎಂಬ ಆರು ಮಂದಿ ಪತ್ನಿಯರು, **ಐದು** = ಐದು ವಿಜಾತಿ ಗುಣಗಳಿಂದ, **ಪನ್ನಗವಿಭೂಷಣಗೆ** = ಸರ್ಪಭೂಷಣನಾದ ರುದ್ರನಿಗಿಂತ ಕಡಿಮೆಯಾದವರು. ಅಂದರೆ, ಗರುಡ ಶೇಷ ರುದ್ರರು ಶ್ರೀಕೃಷ್ಣನ ಷಣ್ಮಹಿಷಿಯರಿಗಿಂತ ೫ ವಿಜಾತೀಯ ಗುಣಗಳಿಂದ ಉತ್ತಮರು, **ಮೆನಕೆ ಮಗಳು** = ಹಿಮವತ್ಪರ್ವತ ರಾಜನ ಪತ್ನಿ ಮೇನಕೆಯಲ್ಲಿ ಜನಿಸಿದ ಪಾರ್ವತಿಯು, **ವಾರುಣೀ** = ಶೇಷ ಪತ್ನಿ ಶ್ರೀವಾರುಣೀದೇವಿ, **ಸೌಪರಣಿಗಳಿಗೆ** = ಗರುಡ ಪತ್ನಿ ಶ್ರೀಸೌಪರ್ಣಿದೇವಿ ಇವರುಗಳಿಗಿಂತ, ಶ್ರೀಕೃಷ್ಣನ ಷಣ್ಮಹಿಷಿಯರು, **ಎರಡು ಗುಣ** = ಎರಡು ವಿಜಾತೀಯ ಗುಣಗಳಿಗಿಂತ ಅಧಮರು. ಅಂದರೆ, ಸೌಪರ್ಣೀ, ವಾರುಣೀ, ಪಾರ್ವತಿ-ಈ ಮೂರೂ ಶ್ರೀಕೃಷ್ಣನ ಷಣ್ಮಹಿಷಿಯರಿಗಿಂತ ಎರಡು ವಿಜಾತೀಯ ಗುಣಗಳಿಂದ ಉತ್ತಮರೆಂದರ್ಥ. ||೭||

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಗರುಡಾದಿಗಳ ತಾರತಮ್ಯ ಹೇಳುತಾರೆ-

ಗರುಡದೇವರು, ಶೇಷದೇವರು, ರುದ್ರದೇವರು-ಇವರು ಮೂರು ಮಂದಿ ಸ್ವರೂಪತಃ ಸಮಾನರು. ಈ ಮೂರು ಮಂದಿಯೊಳಗೆ ಪ್ರದಪ್ರಯುಕ್ತವಾಗಿ ರುದ್ರದೇವರಿಗಿಂತಲೂ ಶೇಷದೇವರು ಅಧಿಕರೆನಿಸುವರು. ಶೇಷ–ಗರುಡರು ಸಮಾನರು. ಸರಸ್ವತೀ ಭಾರತೀಯವರಿಗೆ ಗರುಡ ಶೇಷ ರುದ್ರಈ ಮೂರು ಮಂದಿ ನೂರು ವಿಜಾತಿ ಗುಣದಿಂದ ಅಧಮರು-ನೂರು ಸಜಾತಿ ಗುಣದಿಂದ ಸಮಾನರು. ಗರುಡಾದಿಗಳಿಗಿಂತಲೂ ಸರಸ್ವತ್ರಿ –ಭಾರತೀದೇವಿಯರು ನೂರುಗುಣದಿಂದ ಉತ್ತಮರು. ಮೂರು ನೇತ್ರವುಳ್ಳವ ರುದ್ರ ಮತ್ತು ಶೇಷ ಗರುಡ ಇವರಿಗೆ, ಗೋವರ್ಧನಪರ್ವತ ಧರಿಸಿದ ಶ್ರೀಕೃಷ್ಣನ ನೀಲಾ, ಭಧ್ರಾ, ಮಿತ್ರವಿಂದಾ, ಲಕ್ಷಣಾ, ಕಾಳಿಂದೀ, ಜಾಂಬವತೀ– ಎಂಬ ಆರು ಜನ ಪತ್ನೀರು ಐದು ವಿಜಾತಿಗುಣದಿಂದ ನೀಚರು, ಐದು ಸಜಾತಿಗುಣದಿಂದ ಸಮರು. ರುದ್ರಾದಿಗಳು ಷಣ್ಮಹಿಷಿಯರಿಗೆ ಐದುಗುಣದಿಂದ ಉತ್ತಮರು. ಸರ್ಪಭೂಷಣನಾದ ರುದ್ರ, ಶೇಷಾದಿಗಳಿಗಿಂತಲೂ ಅವರವರ ಪತ್ನೀರಾದ ರುದ್ರದೇವರ ಪತ್ನಿ ಪಾರ್ವತೀದೇವೇರು, ಶೇಷದೇವರ ಪತ್ನಿ ವಾರುಣೀದೇವೇರು ಗರುಡದೇವರ ಪತ್ನಿ ಸೌಪರ್ಣೀದೇವೇರು– ಈ ಮೂರು ಮಂದಿಗಳು ಷಣ್ಮಹಿಷಿಯರಿಗಿಂತ ಎರಡು ವಿಜಾತಿಗುಣದಿಂದ ಅಧಮರು, ಎರಡು ಸಜಾತಿಗುಣದಿಂದ ಸಮರು. ಆರು ಮಂದಿ ಮಹಿಷಿಯರು ಪಾರ್ವತ್ಯಾದಿಗಳಿಗಿಂತಲೂ ಎರಡು ಗುಣ ಅಧಿಕರೆಂದು ತಾತ್ಪರ್ಯ. ॥೭॥

## ೨. ಭಾವಪ್ರಕಾಶಿಕೆ :–

ಗರುಡ ಶೇಷ ರುದ್ರರು ಸಮರು. ಸರಸ್ವತೀ ಭಾರತೀದೇವಿಯರ ಕಿಂತಲೂ ೧೦೦ ಗುಣಗಳು ಕಮ್ಮಿ ಎನಿಸುವರು. ಈ ಮೂವರೂ ಸಮ ರಾದರೂ, ರುದ್ರದೇವರಿಗಿಂತಲೂ ಶೇಷದೇವರು ಪದವಿಯ ವಿಶೇಷದಿಂದ ಸ್ವಲ್ಪ ಅಧಿಕರೆನಿಸುವರು. ೩೯ ಕಲ್ಪ ಸಾಧನಮಾಡಿಕೊಂಡು ರುದ್ರಪದವಿ ಯನ್ನು ಹೊಂದಿ, ಮುಂದಿನ ಕಲ್ಪದಲ್ಲಿ ಶೇಷಪದವಿಗೆ ಬರುವರು. ರುದ್ರ ಪದವಿ ಅನುಭವಿಸಿದಮೇಲೆ ಶೇಷಪದವಿಗೆ ಬರುವುದರಿಂದ, ರುದ್ರದೇವರು ಶೇಷದೇವರಿಗಿಂತಲೂ ಸ್ವಲ್ಪ ಕಮ್ಮಿ ಎನಿಸುವರು. ಕೃಷ್ಣನ ಹೆಂಡರಾದ ಜಾಂಬುವತಿ, ಮಿತ್ರವಿಂದಾ, ನೀಲಾ, ಭದ್ರಾ, ಲಕ್ಷಣಾ, ಕಾಳಿಂದೀ– ಎಂಬ ೬ ಮಹಿಳೆಯರು, ರುದ್ರಾದಿಗಳಿಗಿಂತಲೂ ೫ ಗುಣ ಕಮ್ಮಿಯೂ, ಪಾರ್ವತೀ, ವಾರುಣಿ, ಸೌಪರ್ಣಿ ಎಂಬ ರುದ್ರ, ಶೇಷ, ಗರುಡರ ಹೆಂಡರುಗಳಿಗಿಂತಲೂ ಎರಡು ಗುಣಗಳಿಂದ ಉತ್ತಮರೆಂದು ತಿಳಿಯಬೇಕು. ॥೭॥

## ೩. ಭಾವದರ್ಪಣ :

ಖಗಪೇತಿ. "ರುದ್ರಾತ್ಮ ಶೇಷಸ್ತಾರ್ಕ್ಷ್ಯಶ್ಚ ಮಾಣ್ಯಾಃ ಶತಗುಣಾ ಧಮಾ"–ಇತ್ಯುಕ್ತೇಃ–ನಗಧರೇತಿ । ವಿಷ್ಣುಸ್ತ್ರಿಯೋ ಜಾಂಬವತೀ, ನೀಲಾ, ಭದ್ರಾಚ ಲಕ್ಷಣಾ । ಕಾಳಿಂದೀ ಮಿತ್ರವಿಂದಾಚ ಶೇಷಾತ್ಪಂಚಗುಣಾಧಮಾ"- ಇತಿ ಕೌಸ್ತುಭೋಕ್ತೇಃ॥ಮತ್ತೊಂದು ಪ್ರಮಾಣ. "ತಾಸಾಂ ಮಧ್ಯೇ ಜಾಂಬ ವತೀ ಪ್ರಧಾನಾ ಯದಾವೇಶೋಽಹಾಸ ಮುಪೈತಿ ತತ್ರ । ಪ್ರದ್ಯುಮ್ನತೋ ವಿಂಶದ್ಗುಣಾಧಿಕಾಸ್ಯುಃ "–। ಎಂತ ತಾತ್ಪರ್ಯನಿರ್ಣಯೋಕ್ತಿ ಅದೆ. । ಇದ ಲ್ಲದೇ– "ಸರ್ವೇತ್ವೇತೇ ಗುಣೋತ್ತರಾಃ– "ಎಂದು ಛಾಂದೋಗ್ಯಮಾನವು ಸಿದ್ಧವಾದ ಪ್ರಯುಕ್ತ ಉತ್ತಮತ್ವ ಸಿದ್ಧವಾಯಿತು. ವಾರುಣ್ಯಪೇಕ್ಷಯಾ ಷಟ್‌ಸ್ತ್ರೀಯರಿಗೆ ದ್ವಿಗುಣೋತ್ತಮತ್ವ ಅಂಗೀಕರಿಸತಕ್ಕದ್ದು. ಉಕ್ತಂಚ–

**ತಾರತಮ್ಯಕೌಸ್ತುಭೇ** । "ಉಮಾತ್ಮಾ ವಾರುಣೀ ತಾರ್ಕ್ಷ್ಯೇ ವಿಷ್ಣು ಸ್ತ್ರೀ ದ್ವಿಗುಣಾಧಮಾ– ಇತಿ" । ಗರುಡಾದಿಗಳಿಗಿಂತ ಐದು ಗುಣಕ್ಕೆ ಕಡಿಮೆ ಪಟ್ಟ ತ್ನಿಯರು. ಇವರಗಿಂತ ಎರಡು ಗುಣಕ್ಕೆ ಕಡಿಮೆ ಸೌಪರ್ಣ್ಯಾದಿಗಳು. ಆದ್ದರಿಂದ ಐದೆರಡು– ಹತ್ತು ಗುಣಗಳು ಪತಿಗಳಿಗಿಂತ ಸೌಪರ್ಣ್ಯಾದಿಗಳು ಕಡಿಮೆ ಆದರೆಂದು ದಾಸರಾಜರ ಭಾವ. ॥೭॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

'ಖಗ' ಇತಿ ॥ 'ಸಮ' ಪರಸ್ಪರಮ್ ॥ ಶೇಷ ಇತ್ಯಾದ್ಯನಂತರಂ ಪೂರ್ವೋಕ್ತೈಶ್ಚ ಗುಣೈಃ ಸರ್ವೈಃ ತಾಭ್ಯಾಂ ಶತಗುಣಾವರಾಃ ॥ ತಚ್ಛ ತಾಂಶಾಃ ಶೇಷರುದ್ರವೀಂದ್ರಾಃ ॥ 'ಮಿಗಿಲು' ದ್ವಿಗುಣಾಧಿಕಾಃ ॥ ಅಧಿಕಂ ಚ ವಿವೃತೌ ಜ್ಞೇಯಮ್ ॥ "ಮೇನಕಾ ಹಿಮವದ್ಭಾರ್ಯಾ ಸರ್ವ ಏತೇ ದಶೋತ್ತರಾಃ ॥ ತತ್ಪಂಚಮಾಂಶಕಾಃ" । ಕೃಷ್ಣಸ್ಯ ಜಾಂಬುವತ್ಯಾದ್ಯಾ ಷಟ್ ಸ್ತ್ರೀಯೋಥ ತದರ್ಧಕಾಃ । ಉಮಾದ್ಯಾಃ ॥೭॥

### ಕನ್ನಡಾರ್ಥ

ಗರುಡ, ಶೇಷ, ರುದ್ರ ಇವರು ಪರಸ್ಪರ ಸಮಾನರು. ಇವರು ಸರಸ್ವತಿ ಹಾಗೂ ಭಾರತೀದೇವಿಯರಿಂದ ನೂರು ಗುಣ ಕಡಿಮೆಯುಳ್ಳವರು. ಭಾರತಿ ಸರಸ್ವತಿಯರ ನೂರನೆಯ ಭಾಗಕ್ಕೆ ಜ್ಞಾನ ಮುಂತಾದ ಗುಣದಿಂದ ರುದ್ರ, ಶೇಷ, ಗರುಡರು ಸಮಾನರಾಗುತ್ತಾರೆ. 'ನಗಧರನ ಷಣ್ಮಹಿಷಿಯರು ಎಂಬಲ್ಲಿ-'ನಗಧರ' ಎಂದರೆ,ಗೋವರ್ಧನ ಬೆಟ್ಟವನ್ನು ಧರಿಸಿದ ಶ್ರೀ ಕೃಷ್ಣನು. ಅವನ 'ಷಣ್ಮಹಿಷಿಯರು'–ಎಂದರೆ ಜಾಂಬವತಿ, ನೀಲಾ, ಲಕ್ಷಣಾ, ಮಿತ್ರವಿಂದಾ, ಕಾಳಿಂದೀ– ಇವರುಗಳು ಎಂದು ಅರ್ಥವನ್ನು ತಿಳಿಯಬೇಕು. ಶ್ರೀಕೃಷ್ಣನ ಜಾಂಬವತಿ ಮುಂತಾದ ೬ ಮಂದಿ ಹೆಂಡತಿಯರು (ರುಕ್ಮಿಣೀ, ಸತ್ಯಭಾಮೆಯರನ್ನು ಬಿಟ್ಟು ಉಳಿದವರು) ಗರುಡ

ಶೇಷ ರುದ್ರರಿಂದ ಐದು ಗುಣಗಳಿಂದ ಕಡಿಮೆಯುವರು ಮತ್ತು ಸೌಪರ್ಣಿ ವಾರುಣೀ ಇವರುಗಳಿಂದ ಎರಡುಗುಣ ಅಧಿಕರು,– ಎಂದು ಅಭಿಪ್ರಾಯ ವನ್ನು ತಿಳಿಯಬೇಕು.

ಹೆಚ್ಚಿನ ಸಂಗತಿಯನ್ನು **ವಿವೃತಿಯಲ್ಲಿ** ತಿಳಿಯಬೇಕು. ಹಿಮವಂತ ಮಡದಿ (ಹೆಂಡತಿ) ಮೇನಕೆ, ಮೇನಕೆಯ ಮಗಳು ಉಮಾ (ಪಾರ್ವತಿ) ಎಂದು ತಿಳಿಯತಕ್ಕದ್ದು.

ಕೃಷ್ಣಪತ್ನಿಯರು, ಜಾಂಬವತೀ– ಮುಂತಾದವರು ಐದು ಗುಣ ಗಳಿಂದ ಶೇಷಾದಿಗಳಿಗೆ ಕಡಿಮೆಯುವರೂ, ಉಮಾ ವಾರುಣೀ ಸೌಪರ್ಣೀ ಯುವರಿಗೆ ಎರಡು ಗುಣಗಳಿಂದ ಹೆಚ್ಚಿನವರೂ ಎಂದು ಪ್ರಮಾಣಗಳಿರುತ್ತವೆ. ॥೭॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಖಗಪ– ಎಂಬ ಗರುಡದೇವರು, ಫಣಿಪತಿ– ಎಂಬ ಶೇಷ, ಮೃಡ ನೆಂಬ ರುದ್ರದೇವರೂ ಸಹ ಮೂರು ಮಂದಿ ವಾಣೀ ಎಂಬ ಸರಸ್ವತಿಗಿಂತ ಬಲ ಜ್ಞಾನಾದಿಗುಣಗಳಿಂದ ನೂರು ಭಾಗ ಕಡಿಮೆ. ಆದರೂ ಮೂವರೂ ಸಮಾನಗುಣವುಳ್ಳವರು. ಆದರೂ ಶೇಷದೇವರು ಈಶ್ವರನಿಗಿಂತ ಪದ ಪ್ರಯುಕ್ತ ಅಧಿಕರು. ನಗಧರನೆಂಬ ಗೋವರ್ಧನಧಾರಿ ಶ್ರೀಕೃಷ್ಣನ ಷಣ್ಮಹಿಷಿಯರೆಂಬ ಜಾಂಬವತೀ ಭದ್ರಾ ನೀಲಾ ಮಿತ್ರವಿಂದಾ ಕಾಳಿಂದೀ ಲಕ್ಷಣಾ-ಎಂಬ ಆರು ಜನ ಪನ್ನಗವಿಭೂಷಣನೆಂಬ ಶಿವನಿಗಿಂತ ಐದು ಗುಣ ಕಡಿಮೆ. ಮೇನಕೇ ಮಗಳೆಂಬ ಪಾರ್ವತೀ, ವಾರುಣೀ-ಎಂಬ ಶೇಷಪತ್ನಿ, ಸೌಪರ್ಣೀ-ಎಂಬ ಗರುಡಪತ್ನಿಗೂ ಸಹ ಎರಡುಗುಣದಿಂದ ಷಣ್ಮಹಿಷಿಯರು ಅಧಿಕರು. ॥೭॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪಕ್ಷಿಶ್ರೇಷ್ಠರಾದ ಗರುಡದೇವರಿಗೆ **ಖಗಪ**-ಎಂದು ಹೆಸರು. **ಫಣಿಪತಿ**-ಎಂದರೆ, ಸರ್ಪಶ್ರೇಷ್ಠರಾದ ಶೇಷದೇವರೆಂದರ್ಥ. **ಮೃಡ** ನಾಮಕರು-ಶ್ರೀರುದ್ರದೇವರು.

ಗರುಡ-ಶೇಷ-ರುದ್ರ ಈ ಮೂವರೂ ಸಮಾನಕಕ್ಷಾಪನ್ನರು. ಅಹಂಕಾರತತ್ವಾಭಿಮಾನಿಗಳು. ಸ್ವರೂಪತಃ ಸಮಾನರು.

ರುದ್ರದೇವರು ಭಾವೀಶೇಷರು. ರುದ್ರದೇವರು ೪೦ ಬ್ರಹ್ಮದಿನ ಕಲ್ಪಗಳು ಹಿಂದಿನ ವಾಯುದೇವರಲ್ಲಿ ಸಕಲ ಶಾಸ್ತ್ರಾಧ್ಯಯನ ಮಾಡಿ, ಮುಂದೆ ೧೦ ಬ್ರಹ್ಮ ದಿನ ಕಲ್ಪಗಳ ಕಾಲ ಲವಣ ಸಮುದ್ರದಲ್ಲಿ ಉಗ್ರ ನಾಮಕರಾಗಿ ತಪಸ್ಸನ್ನು ಆಚರಿಸಿ, ಶೇಷಪದವಿಗೆ ಅರ್ಹರೆನಿಸುವರು. ಅಂದರೆ ೫೧ ಕಲ್ಪ ಸಾಧನಾನಂತರ ರುದ್ರಪದವಿ ಪ್ರಾಪ್ತಿ. ಮುಂದಿನ ಕಲ್ಪದಲ್ಲಿ ಶೇಷಪದವಿ ಹೊಂದಿ, ಆ ಪದವಿಯಿಂದು ಪ್ರಸಕ್ತ ಕಲ್ಪದ ರುದ್ರರಿಗೆ ಮುಕ್ತಿ, ಈ ಪದವಿ ಪ್ರಯುಕ್ತ ಶೇಷದೇವರು ರುದ್ರದೇವರಿಗಿಂತ ಕಿಂಚಿತ್ ಉತ್ತಮರು.

ಗರುಡ-ಶೇಷರೀರ್ವರೂ ಸಮರು.

ವಾಗಭಿಮಾನಿಯಾದ ಶ್ರೀಸರಸ್ವತೀ, ಹಾಗೆಯೇ ಭಾರತೀದೇವಿಯರಿಗಿಂತ ಗರುಡಶೇಷ ರುದ್ರರು ೧೦೦ ವಿಜಾತೀಯಗುಣಗಳಿಂದ ಅಧಮರು. ೧೦೦ ಸಜಾತೀಯ ಗುಣಗಳಿಂದ ಸಮಾನರು. ಅಂದರೆ ೧೦೦ ಜ್ಞಾನ ಬಲಾದಿ ಗುಣಗಳಿಂದ ಸರಸ್ವತೀ ಭಾರತೀಯರು ಗರುಡಶೇಷ ರುದ್ರರಿಗಿಂತ ಉತ್ತಮರು.

ತ್ರಿನೇತ್ರರಾದ ರುದ್ರದೇವರು **ತ್ರಿಯಂಬಕರು** (ತ್ರಯ + ಅಂಬಕ.)

ಇಂದ್ರದೇವರು ಸಿಟ್ಟಿನಿಂದ ಗೋಕುಲದ ಮೇಲೆ ಮಳೆ ಸುರಿಸಿದಾಗ, ಶ್ರೀಕೃಷ್ಣನು ಗೋವರ್ಧನಪರ್ವತವನ್ನು ತನ್ನ ಕಿರುಬೆರಳಿನಿಂದ ಎತ್ತಿ, ಸಕಲ ಗೋಪಾಲಕರನ್ನು ಸಂರಕ್ಷಿಸಿದನು. ಇದರಿಂದ, ಶ್ರೀಕೃಷ್ಣನು **ನಗಧರನು** (ನಗ—ಅಚಲವಾದಪರ್ವತ.)

ಅಂತಹ ನಗಧರನಾಮಕನಾದ ಶ್ರೀಕೃಷ್ಣನ ಷಣ್ಮಹಿಷಿಯರು ಕ್ರಮವಾಗಿ ಜಾಂಬವತೀ–ಭದ್ರಾ–ನೀಲಾ–ಮಿತ್ರವಿಂದಾ– ಕಾಳಿಂದೀ– ಲಕ್ಷಣಾ— ಎಂಬ ಹೆಸರಿನವರು. ಇವರಲ್ಲಿ ಜಾಂಬವತೀ ಉತ್ತಮಳು.

**ಪ್ರಮಾಣ :–**

(೧) "ರುದ್ರಾತ್ಮಶೇಷಸ್ತಾರ್ಕ್ಷ್ಯಶ್ಚ ಷಾಣ್ಯಾಃ ಶತಗುಣಾಧಮಾ॥ "

**–ಇತಿ ತಾರತಮ್ಯ ಕೌಸ್ತುಭೋಕ್ತೇಃ ॥**

(೨) "ವಿಷ್ಣು ಸ್ತ್ರೀಯೋ ಜಾಂಬವತೀ ನೀಲಾ ಭದ್ರಾಚ ಲಕ್ಷಣಾ ।
ಕಾಳಿಂದೀ ಮಿತ್ರವಿಂದಾಚ ಶೇಷಾತ್ಪಂಚ ಗುಣಾಧಮಾ" ॥

**–ಇತಿ ತಾರತಮ್ಯ ಕೌಸ್ತುಭೋಕ್ತೇಃ ॥**

ಸರ್ಪಭೂಷಣವಾದ ರುದ್ರದೇವರು **ಪನ್ನಗವಿಭೂಷಣರು.**

ನಗಧರನ ಷಣ್ಮಹಿಷಿಯರು (ಆರು ಮಂದಿಯೂ)ಗರುಡ ಶೇಷ ರುದ್ರರಿಗಿಂತ ೫ ವಿಜಾತೀಯ ಗುಣಗಳಿಂದ ಅಧಮರು. ೫ ಸಜಾತಿಗುಣಗಳಿಂದ ಸಮಾನರು. ಅಂದರೆ ಗರುಡ ಶೇಷ ರುದ್ರ–ಈ ಮೂವರೂ ಷಣ್ಮಹಿಷಿಯರಿಗಿಂತ ೫ ಗುಣ ಉತ್ತಮರು.

ಹಿಮವತ್ಪರ್ವತರಾಜನ ಹೆಂಡತಿ ಮೇನಕೆ. ಅವಳಲ್ಲಿ ಜನಿಸಿದವಳೇ ಹೈಮವತೀ ನಾಮಕಳಾದ ಪಾರ್ವತೀ. (ಮೇನಕಾತ್ಮಜೆ).

ಶೇಷಪತ್ನಿ ವಾರುಣೀ, ಗರುಡಪತ್ನಿ ಸೌಪರ್ಣೀ ಮತ್ತು ರುದ್ರ ಪತ್ನಿ ಪಾರ್ವತೀ (ಮೇನಕೆ ಮಗಳು),– ಈ ಮೂರು ಮಂದಿ ಷಣ್ಮಹಿಷಿಯರಿಗಿಂತ ೨ ಗುಣಗಳಿಂದ ಅಧಮರು.

**ತಾರತಮ್ಯ ಕ್ರಮ :–**

(೧) ಸರಸ್ವತೀ–ಭಾರತೀ ಈರ್ವರೂ ಗರುಡಶೇಷ ರುದ್ರಾದಿಗಳಿಗಿಂತ ೧೦೦ ಗುಣಾಧಿಕರು.

(೨) ಪದವಿ ಪ್ರಯುಕ್ತ ಶೇಷನು ರುದ್ರನಿಗಿಂತ ಕಿಂಚಿತ್ ಉತ್ತಮನು.

(೩) ಶೇಷ–ಗರುಡರು ಸಮಾನಸ್ಕಂಧರು.

(೪) ಗರುಡ ಶೇಷ ರುದ್ರ– ಈ ಮೂವರೂ ಶ್ರೀಕೃಷ್ಣನ ಷಣ್ಮಹಿಷಿಯರಿಗಿಂತ ೫ ಗುಣ ಉತ್ತಮರು.

(೫) ಷಣ್ಮಹಿಷಿಯರಲ್ಲಿ ಜಾಂಬವತೀ ಉತ್ತಮಳು (ಅವಳೇ ತುಳಸಿಯು)

(೬) ಸೌಪರ್ಣೀ, ವಾರುಣೀ ಮತ್ತು ಉಮಾ-ಈ ಮೂವರು ಷಣ್ಮಹಿಷಿಯರಿಗಿಂತ ೨ ಗುಣಗಳಿಂದ ಅಧಮರು. ॥೭॥

# ಪದ್ಯ-೮

**ಮೂಲ :-**

**ಗರುಡ ಶೇಷ ಮಹೇಶರಿಗೆ ಸೌ |**
**ಪರಣಿ ವಾರುಣಿ ಪಾರ್ವತಿಯು ಮೂ |**
**ವರು ದಶಾಧಮರು ವಾರುಣಿಗೆ ಕಡಿಮೆಯೆನಿಸುವಳು ಗೌರಿ ||**
**ಹರನ ಮಡದಿಗೆ ಹತ್ತು ಗುಣದಲಿ |**
**ಸುರಪ ಕಾಮರು ಕಡಿಮೆ ಇಂದ್ರಗೆ |**
**ಕೊರತೆಯೆನಿಸುವ ಮನ್ಮಥನು ಪದದಿಂದಲಾವಾಗ || ||೮||**

**ಅವತರಣಿಕೆ :-**

ಪ್ರಸಕ್ತ ಪದ್ಯದಿಂದ ಸೌಪರ್ಣೀ, ಮತ್ತು ಪಾರ್ವತಿ ಇವರ ತಾರತಮ್ಯ ಕ್ರಮವನ್ನು ತಿಳಿಸುತ್ತಾರೆ. ಹಾಗೆಯೇ ಇಂದ್ರ-ಮನ್ಮಥ ಇವರ ವಿಚಾರವನ್ನೂ ಸಹ ತಿಳಿಸುತ್ತಾರೆ. ||೮||

**ಪ್ರತಿಪದಾರ್ಥ :-**

**ಗರುಡ** = ಶ್ರೀಗರುಡದೇವರು, **ಶೇಷ** = ಶ್ರೀಶೇಷದೇವರು, **ಮಹೇಶರಿಗೆ** = ಮಹರುದ್ರ ದೇವರು ಇವರಿಗೆ, **ಸೌಪರಣಿ** = ಗರುಡ ಪತ್ನಿ ಶ್ರೀಸೌಪರ್ಣೀದೇವಿ, **ವಾರುಣಿ** = ಶೇಷಪತ್ನಿ ಶ್ರೀವಾರುಣೀದೇವಿ, **ಪಾರ್ವತಿಯು** = ಪರ್ವತ ರಾಜಕುಮಾರಿಯಾದ ಶ್ರೀರುದ್ರಪತ್ನಿ ಶ್ರೀಪಾರ್ವತೀದೇವಿ, **ಮೂವರು** = ಈ ಮೂರು ಮಂದಿ, **ದಶಾಧಮರು** = ಹತ್ತು ವಿಜಾತೀಯಗುಣಗಳಿಂದ ಅಧರರು, ಹತ್ತು ಸಜಾತೀ

ಯಗುಣಗಳಿಂದ ಸಮಾನರು. **ಗೌರೀ** = ಗೌರವವರ್ಣಯುಕ್ತರಾದ ರುದ್ರ ಪತ್ನಿ ಶ್ರೀಪಾರ್ವತೀದೇವಿ, **ವಾರುಣಿಗೆ** = ಶೇಷಪತ್ನಿ ಶ್ರೀವಾರುಣೀದೇವಿಗಿಂತ, **ಕಡಿಮೆಯೆನಿಪಳು** = ಪದವಿ ಪ್ರಯುಕ್ತ ಕಡಿಮೆ ಎಂದು ಕರೆಸುತ್ತಾರೆ, **ಹರನ ಮಡದಿಗೆ** = ರುದ್ರಪತ್ನಿಯರಾದ ಶ್ರೀಪಾರ್ವತೀ ದೇವಿಯರಿಗಿಂತ, **ಸುರಪ** = ದೇವತಾಧಿಪನಾದ ಶ್ರೀಇಂದ್ರದೇವರು, **ಕಾಮನು** = ಶ್ರೀಮನ್ಮಥ-ಇವರೀರ್ವರು, **ಹತ್ತು ಗುಣದಲಿ** = ಹತ್ತು ವಿಜಾತೀಯಗುಣಗಳಿಂದ, **ಕಡಿಮೆ** = ಅಧಮರು. ಹತ್ತು ಸಜಾತೀಯಗುಣಗಳಿಂದ ಸಮಾನರು, **ಮನ್ಮಥನು** = ಮನ್ಮಥನು, **ಇಂದ್ರಗೆ** = ಶ್ರೀ ಇಂದ್ರದೇವರಿಗಿಂತ, **ಪದದಿಂದಲಾವಾಗ** = ಪದವಿ ಪ್ರಯುಕ್ತದಿಂದ, **ಕೊರತೆಯೆನಿಸುವ** = ಕಡಿಮೆ ಎನಿಸುವನು. ॥೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇಂದ್ರ-ಕಾಮರ ತಾರತಮ್ಯ ವಿಚಾರ ಹೇಳುತಾರೆ.

ಗರುಡ ಶೇಷ ರುದ್ರ-ಇವರಿಗೆ ಗರುಡಾದಿಗಳ ಪತ್ನೀಯರಾದ ಸೌಪರ್ಣೀ, ಪಾರ್ವತೀ ವಾರುಣೀ ಈ ಮೂರು ಮಂದಿ ಹತ್ತುಗುಣ ಅಧಮರು. (ಅಂದರೆ ಹತ್ತು ವಿಜಾತಿಗುಣದಿಂದ). ಹತ್ತು ಸಜಾತಿಗುಣದಿಂದ ಸಮಾನರು. ಗರುಡಾದಿಗಳು ಸೌಪರ್ಣ್ಯಾದಿಗಳಿಗಿಂತಲೂ ಹತ್ತು ವಿಜಾತಿ ಗುಣದಿಂದ ಉತ್ತಮರು. ರುದ್ರದೇವರ ಪತ್ನಿಯಾದ ಗೌರೀ ಸಾಂಕೇತ ರಾದ ಪಾರ್ವತೀ, ಶೇಷದೇವರಪತ್ನಿ ವಾರುಣೀದೇವೇರಿಗೆ ಪದಪ್ರಯುಕ್ತ ಕಡಿಮೆ ಎಂತ ಕರಸತಾರೆ. ವಾರುಣೀದೇವೇರು ಪದಪ್ರಯುಕ್ತ ಅಧಿಕರು. ಸ್ವರೂಪತಃ ಸೌಪರ್ಣ್ಯಾದಿಗಳು ಮೂರು ಮಂದಿಯೂ ತಮ್ಮ ತಮ್ಮೊಳಗೆ ಸಮಾನರು ರುದ್ರಪತ್ನಿಯಾದ ಪಾರ್ವತೀ ಮೊದಲಾದ ಮೂರು ಮಂದಿಗೆ

ಮನ್ಮಥ ಹತ್ತು ವಿಜಾತಿಗುಣದಿಂದ ಕಡಿಮೆ ಎನಸತಾರೆ. ಹತ್ತು ಸಜಾತಿ ಇಂದ್ರ ದೇವರು,ಗುಣದಿಂದ ಸಮಾನರು. ಪಾರ್ವತ್ಯಾದಿಗಳು ಇಂದ್ರಕಾಮರಿಗಿಂತಲೂ ಹತ್ತು ವಿಜಾತಿಗುಣದಿಂದ ಉತ್ತಮರು. ಇಂದ್ರದೇವರಿಗೆ ಕಡಿಮೆಯೆನಿಸುವ ಮನ್ಮಥನು ದಾವಾಗ್ಯೂ ಪದಪ್ರಯುಕ್ತ ಕಡಿಮೆ. ಸ್ವರೂಪತಃ ಸಮಾನರು– ಇಂದ್ರ ಕಾಮ ಎಂಬುದು, ರುದ್ರ ಶೇಷರ ಪದ ಹ್ಯಾಂಗೋ, ಬ್ರಹ್ಮ–ವಾಯು ಪದ ಹ್ಯಾಂಗೋ, ಇಂದ್ರ–ಕಾಮರ ಪದ ಅಂಥಾದ್ದೆ. ಕಾಮಗೆ ಇಂದ್ರಪದದಿಂದ ಮುಕ್ತಿ; ರುದ್ರಗೆ ಶೇಷಪದದಿಂದ ಮುಕ್ತಿ- ಎಂಬುದು ಹ್ಯಾಂಗೋ, ಅದೇ ಪ್ರಕಾರವೆಂದು ತಾತ್ಪರ್ಯ. ಅತ ಏವ ಪದ ಪ್ರಯುಕ್ತ ನ್ಯೂನಾಧಿಕ್ಯ ಎಂಬುದೇ ಇದರ ತಾತ್ಪರ್ಯ. ॥೮॥

## ೨. ಭಾವಪ್ರಕಾಶಿಕೆ :–

ಸೌಪರ್ಣಿ, ವಾರುಣೀ, ಪಾರ್ವತಿ-ಈ ಮೂವರು ತಮ್ಮ ಪತಿಗಳಾದ ಗರುಡ, ಶೇಷ, ರುದ್ರರಕಿಂತಲೂ ೧೦ ಗುಣಗಳಿಂದ ಕಮ್ಮಿ ಎನಿಸುವರು.

ಪದಪ್ರಯುಕ್ತವಾಗಿ ಶೇಷದೇವರಕಿಂತಲೂ ರುದ್ರದೇವರು ಹೇಗೆ ಸ್ವಲ್ಪ ಕಮ್ಮಿಯೋ, ಹಾಗೆಯೇ ಶೇಷಪತ್ನಿಯಾದ ವಾರುಣಿಗಿಂತಲೂ ಪಾರ್ವತೀದೇವಿಯು ಸ್ವಲ್ಪ ಕಮ್ಮಿ. ಪಾರ್ವತಿದೇವಿಯಕಿಂತಲೂ ಇಂದ್ರ, ಮನ್ಮಥರು ೧೦ ಗುಣಗಳಿಂದ ಅಧಮರೆನಿಸುವರು. ಪದವಿಯ ಪ್ರಯುಕ್ತ ಇಂದ್ರನಕಿಂತಲೂ ಮನ್ಮಥನು ಕಮ್ಮಿ ಎನಿಸುವನು. ॥೮॥

## ೩. ಭಾವದರ್ಪಣ :–

ಗರುಡೇತಿ ದಶಾಧಮೇತಿ. "ಸ್ವಭರ್ತೃಭ್ಯಾಂ ದಶನ್ಯೂನೇ ಸುಖ ವೀರ್ಯಾದಿಕೈರ್ಗುಣೌರಿತ್ಯುಕ್ತೇಃ"– ಪದಪ್ರಯುಕ್ತ ಸರಸ್ವತಿಯುಗಿಂತ– ಭಾರತೀ ಕಿಂಚಿದ್ಗುಣದಿಂದ ಹ್ಯಾಗೆ ನ್ಯೂನಳೋ ಹಾಗೆ ವಾರುಣ್ಯಾಪೇಕ್ಷಯಾ ಗೌರಿ, ಇಂದ್ರನಪೇಕ್ಷಯಾ ಕಾಮ– ಎಂದು ತಿಳೀತಕ್ಕದ್ದು. ಗೌರೀತಿ

ತದುಕ್ತಂ ತಾರತಮ್ಯಕೌಸ್ತುಭೇ । "ಇಂದ್ರೋನಕಾಮ ಇಂದ್ರಶ್ಚ ಸೌಪ ರ್ಣ್ಯಾಸ್ತು ದಶಾಧಮಾವಿತಿ". ॥ ॥೮॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

'ಗರುಡ' ಇತಿ ॥ ಮಾನಮುಕ್ತಮ್ ॥ "ಕರೋತಿ ಪ್ರಾಯಃ ಇಂದ್ರ ವತ್ ಕಾಮಃ". ಇತಿ ಪ್ರಾಯಗ್ರಹಣೇನ ಏಷು ನ್ಯೂನಃ ಇತಿ ಚ ಉಕ್ತೇಃ ॥ ಕಾಮಾವತಾರಃ ಕುಮಾರಃ "ಸನತ್ಕುಮಾರಃ ತು ಸದಾ ಪುರಂದರ ಸಮೋ ಮತಃ " ಇತಿ ಭೋಕ್ತೇಃ ॥ ವಿಶೇಷಸ್ತು ಅನ್ಯತ್ರ ಜ್ಞೇಯಃ ॥ ತಾಚ್ಯ ಇಂದ್ರಸ್ತು ದಶಮಾಂಶಃ ॥ ತತಃ ಸ್ಮರಃ ಕಿಂಚಿತ್ ನ್ಯೂನಃ ॥೮॥

## ಕನ್ನಡಾರ್ಥ

"ಗರುಡ ಶೇಷ ರುದ್ರರುಗಳಿಗೆ ಸೌಪರ್ಣಿ ವಾರುಣೀ, ಉಮಾ-ಇವರು ೧೦ (ಹತ್ತು) ಗುಣಗಳಿಂದ ಕಡಿಮೆಯುವರು." ಈ ವಿಷಯದಲ್ಲಿ ಹಿಂದಿನ ಪದ್ಯವ್ಯಾಖ್ಯಾನದಲ್ಲಿ ಪ್ರಮಾಣವನ್ನು ಉದಾಹರಿಸಿರುತ್ತಾರೆ. "ಇಂದ್ರ ನಂತೆ ಪ್ರಾಯಃ ಕಾಮನು ಕಾರ್ಯ ಮಾಡುತ್ತಾನೆ, " ಎಂಬಲ್ಲಿ "ಪ್ರಾಯಃ- ಬಹುಶಃ"- ಎಂದು ಹೇಳುವುದರಿಂದ, ಕಾಮನು ಇಂದ್ರನಿಗಿಂತ ಕಡಿಮೆ ಯುವನು- (ಪದನಿಮಿತ್ತವಾಗಿ) ಎಂದು ಪ್ರಮಾಣಗಳು ಹೇಳುತ್ತವೆ.

ಇನ್ನೊಂದು ಸಂದರ್ಭದಲ್ಲಿ "ಕಾಮಾವತಾರನಾದ ಸನತ್ಕುಮಾರನು ಸದಾ ಪುರಂದರನಿಗೆ (ಇಂದ್ರನಿಗೆ) ಸಮಾನನು"- ಎಂದೂ ಹೇಳಲಾಗಿರು ತ್ತದೆ.

ಸೌಪರ್ಣೀ ಮುಂತಾದವರಿಂದ ಇಂದ್ರನು ಹತ್ತು ಗುಣಗಳಿಂದ ಕಡಿಮೆ ಯುವನು, ಆ ಇಂದ್ರನಿಗಿಂತ ಕಾಮನು ಸ್ವಲ್ಪ ನ್ಯೂನ-ಕಡಿಮೆಯುವನು, ಎಂದೂ ಪ್ರಮಾಣಗಳು ಹೇಳುತ್ತವೆ,

ಹೆಚ್ಚಿನ ತಾರತಮ್ಯ ವಿವರಣೆಯನ್ನು ಬೇರೆ ಗ್ರಂಥಗಳಲ್ಲಿ ನೋಡ ಬೇಕು. ॥೮॥

೫. ಗುರುಹೃದಯಪ್ರಕಾಶಿಕೆ :–

ಗರುಡ ಶೇಷ ಮಹೇಶ್ವರರಿಗಿಂತ ಅವರ ಪತ್ನಿಯರಾದ ಸೌಪರ್ಣೀ ವಾರುಣೀ ಪಾರ್ವತೀ–ಎಂಬ ಮೂರು ಮಂದಿಯೂ ಹತ್ತು ಗುಣದಿಂದ ಕಡಿಮೆಯಾದವರು. ವಾರುಣೀ- ಎಂಬ ಶೇಷಪತ್ನಿಗಿಂತ ಗೌರೀದೇವಿ ಪದ ಪ್ರಯುಕ್ತ ಕಡಿಮೆ. ಪಾರ್ವತೀಗಿಂತ ಇಂದ್ರಕಾಮರು ಹತ್ತು ಗುಣ ದಿಂದ ಕಡಿಮೆ. ಪದಪ್ರಯುಕ್ತದಿಂದ ಇಂದ್ರನಿಗಿಂತ ಮನ್ಮಥನು ಕಡಿಮೆ. ॥೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಗರುಡ, ಶೇಷ, ರುದ್ರಪತ್ನಿಯರ ತಾರ ತಮ್ಯ ವಿಚಾರವನ್ನು, ಹಾಗೆಯೇ ಇಂದ್ರ ಕಾಮರ ವಿಷಯ ತಿಳಿಸುತ್ತಾರೆ.

ಶ್ರೀಸೌಪರ್ಣೀದೇವಿಯು ಗರುಡದೇವರ ಪತ್ನಿಯು. ಶೇಷ ಪತ್ನಿಯು ಶ್ರೀವಾರುಣೀದೇವಿ. ಶ್ರೀರುದ್ರದೇವರ ರಮಣಿ ಶ್ರೀ ಪಾರ್ವತೀ ದೇವಿಯರು. ಶ್ರೀಸೌಪರ್ಣೀ, ಶ್ರೀವಾರುಣೀ ಮತ್ತು ಶ್ರೀಪಾರ್ವತೀ –ಈ ಮೂರು ಮಂದಿ ಸಮಾನಕಕ್ಷಾಪನ್ನರು.

ಶೇಷದೇವರು ಪದವಿಪ್ರಯುಕ್ತ ಶ್ರೀರುದ್ರದೇವರಿಗಿಂತ ಕಿಂಚಿತ್ ಉತ್ತಮರು. ಅಂತೆಯೇ, ಶೇಷಪತ್ನಿ ವಾರುಣೀ ರುದ್ರರಮಣೀ ಶ್ರೀ ಪಾರ್ವತೀಗಿಂತ ಪದವಿಪ್ರಯುಕ್ತ ಕಿಂಚಿತ್ ಶ್ರೇಷ್ಠರು. ವಾರುಣೀ ಮತ್ತು ಸೌಪರ್ಣೀ–ಈರ್ವರೂ ಸಮಾನರು.

ಈ ಮೂವರು ತಮ್ಮ ತಮ್ಮ ಪತಿಗಳಿಗಿಂತ ೧೦ ವಿಜಾತೀಯ ಗುಣ ಗಳಿಂದ ನ್ಯೂನರು (**ದಶಾಧಮರು**). ೧೦ ಸಜಾತೀಯ ಗುಣಗಳಿಂದ ಸಮಾನರು.

**ಪ್ರಮಾಣ :–**

"ಸ್ವಭರ್ತೃಭ್ಯಾಂ ದಶನ್ಯೂನೇ ಸುಖವೀರ್ಯಾದಿಭಿರ್ಗುಣೈಃ" ॥
**–ಇತಿ ತಾರತಮ್ಯಕೌಸ್ತುಭೇ.**

ಹರನ ಮಡದಿಯಾದ ಶ್ರೀ ಪಾರ್ವತೀದೇವಿಗಿಂತ (ಹಾಗೆಯೇ ವಾರುಣೀ ಮತ್ತು ಸೌಪರ್ಣಿಗಿಂತ), ದೇವತಾಧಿಪತಿಯಾದ ಇಂದ್ರ ಮತ್ತು ಕಾಮರು ೧೦ ವಿಜಾತೀಯಗುಣಗಳಿಂದ ಅಧಮರು.

ಇವರಿಬ್ಬರಲ್ಲಿ ಸುರಪನಾದ ಇಂದ್ರನು ಮನ್ಮಥನಿಗಿಂತ ಪದವಿ ಪ್ರಯುಕ್ತ ಕಿಂಚಿತ್ ಉತ್ತಮನು.

**ವಿಶೇಷಾಂಕ :–**

(೧) ರುದ್ರದೇವರಿಗೆ ಶೇಷಪದವಿಯಿಂದ ಮುಕ್ತಿ, ಇದರಿಂದ ರುದ್ರ ಶೇಷನಿಗಿಂತ ಪದವಿ ವಿವಕ್ಷಾ ಕಿಂಚಿತ್ ನ್ಯೂನರು.

(೨) ಪಾರ್ವತಿಗೆ ವಾರುಣೀ ಪದವಿಯಿಂದ ಮುಕ್ತಿ, ಇದರಿಂದ ವಾರುಣೀ ಪಾರ್ವತಿಗಿಂತ ಪದವಿ ಪ್ರಯುಕ್ತ ಕಿಂಚಿತ್ ಉತ್ತಮರು.

(೩) ಹಾಗೆಯೇ ಮನ್ಮಥನಿಗೆ ಇಂದ್ರ ಪದವಿಯಿಂದ ಮುಕ್ತಿ, ಇದರಿಂದ ಕಾಮನು ಇಂದ್ರನಿಗಿಂತ ಪದವಿ ಪ್ರಯುಕ್ತ ಕಿಂಚಿತ್ ಕೊರತೆ ಎನಿಸುವನು. ॥೮॥

# ಪದ್ಯ-೯

**ಮೂಲ :–**

ಈರೈದು ಗುಣ ಕಡಿಮೆಯಾ ಹಂ ।
ಕಾರಿಕ ಪ್ರಾಣನು ಮನೋಜ ನ ।
ಗಾರಿಗಳಿಗನಿರುದ್ಧ ರತಿ ಮನು ದಕ್ಷ ಗುರು ಶಚಿಯು ॥
ಆರು ಜನ ಸಮ ಪ್ರಾಣನಿಂದಲಿ ।
ಹಾರಗೆನಿಪರು ಹತ್ತು ಗುಣದಲಿ ।
ಮಾರಜಾದ್ಯರಿಗೈದು ಗುಣದಿಂಧಮ ಪ್ರವಹಾಖ್ಯ ॥ ॥೯॥

**ಅವತರಣಿಕೆ :–**

ಅಹಂಕಾರಿಕ ಪ್ರಾಣ, ಕಾಮಪುತ್ರ ಅನಿರುದ್ಧ, ಮನ್ಮಥನ ಪತ್ನಿ ರತಿ, ಸ್ವಾಯಂಭುವ ಮನು, ದಕ್ಷ ಪ್ರಜಾಪತಿ, ಬೃಹಸ್ಪತ್ಯಾಚಾರ್ಯರು, ಇಂದ್ರಪತ್ನೀ ಶಚೀದೇವಿ– ಇವರ ತಾರತಮ್ಯವಿಚಾರ ತಿಳಿಸುತ್ತಾರೆ–ಪ್ರಸಕ್ತ ಪದ್ಯದಿಂದ. ॥೯॥

**ಪ್ರತಿಪದಾರ್ಥ :–**

**ಮನೋಜ** = ಶ್ರೀಹರಿಯ ಮನಸ್ಸಿನಿಂದ ಉತ್ಪತ್ತಿಯಾದ ಮನ್ಮಥ, **ನಗಾರಿಗಳಿಗೆ** = ಪರ್ವತಗಳಿಗೆ ಶತ್ರುವಾದ ಇಂದ್ರ ದೇವರು,– ಈ ಉಭಯರಿಗೆ, **ಅಹಂಕಾರಿಕ ಪ್ರಾಣನು** = ತ್ವಗಭಿಮಾನಿಯಾದ ಅಹಂಕಾರಿಕ ಪ್ರಾಣನು, **ಈರೈದು ಗುಣ ಕಡಿಮೆಯು** = ವಿಜಾತೀಯ ಹತ್ತು ಗುಣಗಳಿಂದ ಕಡಿಮೆ ಎನಿಸುತ್ತಾನೆ, **ಅನಿರುದ್ಧ** = ಕಾಮಪುತ್ರನಾದ ಅನಿ

ರುದ್ಧನು, **ರತಿ** = ಮನ್ಮಥನ ಪತ್ನಿ ರತೀದೇವಿಯು, **ಮನು** = ಸ್ವಾಯಂಭುವ ಮನುವು, **ದಕ್ಷ** = ದಕ್ಷ ಪ್ರಜಾಪತಿ, **ಗುರು** = ಸುರ ಗುರುಗಳಾದ ಬೃಹಸ್ಪತ್ಯಾಚಾರ್ಯರು, **ಶಚಿಯು** = ಇಂದ್ರನ ಪತ್ನಿ ಶಚೀದೇವಿಯು, **ಆರುಜನ** = ಈ ಆರು ಮಂದಿ, **ಸಮ** = ಸಮಾನ ಕಕ್ಷಾಪನ್ನರು.– **ಪ್ರಾಣನಿಂದಲಿ** = ಅಹಂಕಾರಿಕ ಪ್ರಾಣನಿಗಿಂತ, **ಹತ್ತು ಗುಣದಲಿ** = ಹತ್ತು ವಿಜಾತೀಯ ಗುಣಗಳಿಂದ ಮೇಲಿನ ಆರು ಮಂದಿ, **ಹೌರಗೆನಿಪರು** = ಕಡಿಮೆ ಎನಿಸುತ್ತಾರೆ (ಹೌರ = ಹಗುರ – ನ್ಯೂನ), **ಪ್ರವಹಾಖ್ಯ** = ಪ್ರವಹವಾಯುವು, **ಮಾರಜಾದ್ಯರಿಗೆ** = ಕಾಮಪುತ್ರ ಅನಿರುದ್ಧಾದಿ ಆರುಮಂದಿಗಳಿಗಿಂತ, **ಐದುಗುಣದಿಂದ** = ಐದು ವಿಜಾತೀಯ ಗುಣಗಳಿಂದ, **ಅಧಮ** = ನ್ಯೂನನೆನಿಸುವನು. ॥೯॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :–

ಆಹಂಕಾರಿಕ ಪ್ರಾಣಾದಿಗಳ ತಾರತಮ್ಯವನ್ನು ಹೇಳುತಾರೆ.

ಮನ್ಮಥ, ಪರ್ವತಗಳಿಗೆ ಶತ್ರುವಾದ ಇಂದ್ರದೇವರು- ಈ ಉಭಯರಿಗೆ ತ್ವಗಾಭಿಮಾನಿಯಾದ ಆಹಂಕಾರಿಕಪ್ರಾಣನು ಹತ್ತು ಗುಣದಿಂದ ಕಡಿಮೆ- ಎಂದರೆ, ವಿಜಾತೀಯಗುಣದಿಂದ, ಹತ್ತು ಸಜಾತಿಗುಣದಿಂದ ಸಮ. ಇಂದ್ರ ಕಾಮರು ಹತ್ತು ವಿಜಾತಿ ಗುಣದಿಂದ ಆಹಂಕಾರಿಕಪ್ರಾಣನಿಗಿಂತ ಉತ್ತಮರು. ಈ ಆಹಂಕಾರಿಕಪ್ರಾಣನಿಗಿಂತ ಕಾಮಪುತ್ರ ಅನಿರುದ್ಧ ಮನ್ಮಥನ ಪತ್ನಿ ರತೀದೇವೇರು, ಸ್ವಾಯಂಭುವ ಮನು, ದಕ್ಷ ಪ್ರಜೇಶ್ವರ, ಬೃಹಸ್ಪತ್ಯಾಚಾರ್ಯರು, ಇಂದ್ರದೇವರ ಪತ್ನಿ ಶಚೀದೇವೇರು– ಈ ಆರು ಜನರು ಸಮರು. ಹತ್ತು ಗುಣದಿಂದ ಆಹಂಕಾರಿಕ ಪ್ರಾಣಗೆ ಹತ್ತು ವಿಜಾತಿ ಗುಣದಿಂದ ಕಡಿಮೆ ಎನಿಸುತಾರೆ. ಹತ್ತು ಸಜಾತೀ ಗುಣದಿಂದ ಸಮರು. ಆಹಂಕಾರಿಕ ಪ್ರಾಣ ಪೂರ್ವೋಕ್ತ ಆರುಮಂದಿಗಿಂತಲೂ ಪ್ರವಹ

ಮಾರುತನು ಐದು ವಿಜಾತಿಗುಣದಿಂದ ಅಧಮನು. ಐದು ಸಜಾತಿಗುಣದಿಂದ ಸಮಾನನು. ಪೂರ್ವೋಕ್ತ ಅನಿರುದ್ಧಾದಿ ಆರುಮಂದಿಗಳೂ ಪ್ರವಹವಾಯುವಿಗಿಂತಲೂ ಐದು ವಿಜಾತಿ ಗುಣಗಳಿಂದ ಅಧಿಕರೆಂತ ತಾತ್ಪರ್ಯ.॥೯॥

## ೨. ಭಾವಪ್ರಕಾಶಿಕೆ :–

ಇಂದ್ರ– ಮನ್ಮಥ ಇವರಕಿಂತಲೂ ಅಹಂಕಾರಿಕಪ್ರಾಣನು ೧೦ ಗುಣಗಳಿಂದ ಕಮ್ಮಿ ಎನಿಸುವನು. ಏಕೋನಪಂಚಾಶನ್ಮರುದ್ಗಣರೆಂಬ ವಾಯುಗಳಲ್ಲಿ ಸೇರಿದವನು ಈ ಅಹಂಕಾರಿಕಪ್ರಾಣನು. ಈ ಪ್ರಾಣಕಿಂತಲೂ ೧೦ ಗುಣಗಳಿಂದ ಕಮ್ಮಿಯಾದವರು (1) ಪ್ರದ್ಯುಮ್ನನ ಮಗ ಅನಿರುದ್ಧ, (2) ಮನ್ಮಥನ ಹೆಂಡತಿ ರತಿ, (3) ಸ್ವಾಯಂಭುವಮನು, (4) ದಕ್ಷಪ್ರಜೇಶ್ವರ, (5) ಬೃಹಸ್ಪತ್ಯಾಚಾರ್ಯರು, (6) ಇಂದ್ರನ ಹೆಂಡತಿ ಶಚೀದೇವಿ.- ಇವರಾರು ಜನಗಳು ಗುಣಗಳಲ್ಲಿ ಸಮಾನರು. ಇವರಕಿಂತಲೂ ೫ ಗುಣಗಳಿಂದ ಅಧಮನು ಪ್ರವಹವಾಯು. "ಮರೀಚಿನಾಮಾಂತರವಾನ್ ಪ್ರವಹೋ ಮುಖ್ಯವಾಯುಜಃ ॥ ಕೋಣಾಧಿಪಸ್ಸ ಏವೋಕ್ತೋನಾಸಿಕ್ಯೋ ಭೌತಿಕಸ್ತಥಾ ।"–ಎಂಬ ತಾರತಮ್ಯಕೌಸ್ತುಭದ ವಾಕ್ಯಾನುಸಾರವಾಗಿ ಈ ಪ್ರವಹವಾಯುವಿಗೆ ಮರೀಚಿ ಎಂದು ನಾಮಾಂತರವೂ ಉಂಟು. ಪ್ರಧಾನವಾಯುವಿನ ಮಗನು ವಾಯುವ್ಯದಿಕ್ಕಿಗೆ ಅಭಿಮಾನಿ. ಪಂಚಭೂತದಲ್ಲಿ ಸಂಬಂಧಪಟ್ಟು ಎಲ್ಲರ ಮೂಗಿನಲ್ಲಿ ಶ್ವಾಸರೂಪನಾಗಿಯೂ, ತ್ವಗಿಂದ್ರಿಯವಿಷಯನಾಗಿಯೂ ಇರುವನು-ಎಂದು ತಿಳಿಯಬೇಕು. ॥೯॥

## ೩. ಭಾವದರ್ಪಣ :–

ಈರೈದು. ಮನೋಜ–ಮನ್ಮಥ, ನಗಾರಿ–ಇಂದ್ರ ಎಂಬರ್ಥ. ಉಕ್ತಂಚ ತಾರತಮ್ಯಕೌಸ್ತುಭೇ. "ತತೋಽಹಂಕಾರಿಕಪ್ರಾಣಃ ಕಾಮಾ

ದ್ದಶಗುಣಾಧಮಃ"– ಇತಿ. ಆರುಜನ. "ತತೋ ಸ್ವಾಯಂಭುವೋ ದಕ್ಷೋಹ್ಯನಿರುದ್ಧೋ ಬೃಹಸ್ಪತಿಃ ಶಚೀರತ್ತೀಸ್ತಥಾ ಪ್ರಾಣಾನ್ಮತಾ ದಶ ಗುಣಾಧಮೇತಿ"– ಕೌಸ್ತುಭೋಕ್ತೇಃ. ಮಾರಜಾದ್ಯರಿಗೆ. ಉಕ್ತಂಚ ಕೌಸ್ತುಭೇ.- "ಮರೀಚಿನಾಮಾಂತರ ವಾಕ್ಪ್ರವಹೋ ಮುಖ್ಯವಾಯುಜಃ। ಕೋಣಾಧಿಪಸ ಏವೋಕ್ತೋ ನಾಸಿಕ್ಯೋ ಚಾತಿಕಸ್ತಥಾ । ಮುಮುಷುಭಿರ್ಗ ವ್ಯತಯಾ ಸೂತ್ರೇ ಪ್ರೋಕ್ತೋರ್ಚಿರಾದಿಕೇ । ಆತಿವಾಹಿಕ ಇತ್ಯುಕ್ತೋ ಗುರೋಃ ಪಂಚಗುಣಾಧಮಃ" ಇತಿ.– ॥೯॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :–

'ಈರೈದು'- ಇತಿ ॥ 'ಹತ್ತು' 'ಸರ್ವ' (ಶರ್ವ) ಇತ್ಯುಕ್ತೇಃ ॥ ಮನೋಜ ನಗಾರಿ ಕಾಮೇಂದ್ರೌ ॥ ಮನುರ್ದಕ್ಷಃ ಬೃಹಸ್ಪತಿ ॥ ಶಚಿ ರತಿ ಶ್ಚಾನಿರುದ್ಧ ಸಮಾಃ ॥ "ಇತ್ಯನು ಭಾಷ್ಯೇ ॥ 'ಹೌರ' ಕಡಿಮೆ ॥ 'ಸರ್ವ' ಇತಿ ರತಿಪುತ್ರಸ್ಯಾಪಿ ಅನಿರುದ್ಧಸ್ಯ ತದಾಶ್ರಯೋತ್ಪತ್ತಿ ಯುಕ್ತಾ ಇತಿ ಉಕ್ತಂ **ಭಾವಬೋಧೇ॥** 'ಮಾರಜಃ' ಅನಿರುದ್ಧಃ ॥ ಅನಿರುದ್ಧಃ ಅನಿಲಾತ್ ಪಂಚ ಗುಣಾಧಿಕಃ ॥"- ಇತಿ **ಛಾಂದೋಗ್ಯೇ** ॥"ಶಕ್ರಾತ್ ಸ್ಯಾತ್ ಅಹಂಕಾರಿಕ ಮಾರುತಃ ॥ ದಶಮಾಂಶಃ ತತೋ ದಕ್ಷಃ ಶಚೀಗುರ್ವನಿರುದ್ಧಕಾಃ ॥ ರತೀ ಸ್ವಾಯಂಭುವ ಮನುಷಡೇತೇ ದಶಮಾಂಶಕಾಃ ॥ ಪ್ರವಹಃ ತತ್ಪಂಚ ಮಾಂಶಃ ॥ " ||೯॥

### ಕನ್ನಡಾರ್ಥ

ಮನೋಜಃ ಕಾಮ; ನಗಾರಿ = ಪರ್ವತ ಶತ್ರು–ಇಂದ್ರ. "ಮನು, ದಕ್ಷ, ಬೃಹಸ್ಪತಿ, ಶಚಿ, ರತಿ, ಅನಿರುದ್ಧ– ಇವರುಗಳು ಪರಸ್ಪರ ಸಮರು"– ಎಂದು **ಅನುವ್ಯಾಖ್ಯಾನದಲ್ಲಿ** ಹೇಳಲಾಗಿದೆ. ಮಾರಜ-ಕಾಮ ಪುತ್ರನಾದ ಅನಿರುದ್ಧ–ಅನಿರುದ್ಧ ಮುಂತಾದವರು "ಪ್ರಾಣನಿಂದಲಿ ಹೌರರೆನೆಪರು."– ಎಂದರೆ, ಹತ್ತು ಗುಣಗಳಿಂದ ಕಡಿಮೆಯವರು-ಎಂದು ಹೇಳಿಸಿ

ಕೊಳ್ಳುತ್ತಾರೆ."— ಎಂದು ಅರ್ಥ. "ಅನಿರುದ್ಧನು ಪ್ರವಹವಾಯುವಿಗೆ ಐದು ಗುಣಗಳಿಂದ ಅಧಿಕನು"— ಎಂದು ಛಾಂದೋಗ್ಯಭಾಷ್ಯದಲ್ಲಿ ಹೇಳಲಾಗಿರುತ್ತದೆ. "ಇಂದ್ರನಿಗಿಂತ ಅಹಂಕಾರಿಕ ಪ್ರಾಣನು ಹತ್ತುಗುಣಗಳಿಂದ ಕಡಿಮೆಯುವನು. ಆ ಅಹಂಕಾರಿಕಪ್ರಾಣನಿಗೆ ದಕ್ಷ, ಶಚಿ, ಗುರು, ಅನಿರುದ್ಧ, ರತಿ, ಸ್ವಾಯಂಭುವ ಮನು,— ಇವರು ಹತ್ತು ಗುಣಗಳಿಂದ ಕಡಿಮೆಯುವರು. ಇವರುಗಳಿಗೆ ಐದುಗುಣಗಳಿಂದ ಪ್ರವಹನು ಕಡಿಮೆಯುವನು"— ಎಂದು ಪ್ರಮಾಣಗಳಿರುವದರಿಂದ ಈ ಅಭಿಪ್ರಾಯವನ್ನು ತಿಳಿಯಬೇಕು. ॥೯॥

**೫. ಶ್ರೀ ಗುರುಹೃದಯ ಪ್ರಕಾಶಿಕೆ :—**

ಮನೋಜನೆಂಬ ಕಾಮನಿಗೂ, ನಗಾರಿ— ಎಂಬ ಪರ್ವತಶತ್ರುವಾದ ಇಂದ್ರನಿಗೂ ಸಹ ಈರೈದೆಂಬ ಹತ್ತು ಗುಣದಿಂದ ಅಹಂಕಾರಿಕಪ್ರಾಣನು ಅಂದರೆ, ವೈಕಾರಿಕಾಹಂಕಾರಾಭಿಮಾನಿ ರುದ್ರಪುತ್ರ ತ್ವಗಭಿಮಾನಿ ವಾಯುದೇವರು ಕಡಮೆಯಾದವರು. ಈ ಚರ್ಮೇಂದ್ರಿಯಾಭಿಮಾನಿ ವಾಯುವಿಗಿಂತ ಅನಿರುದ್ಧ ಶಚೀ— ಎಂಬ ಇಂದ್ರ ಪತ್ನಿ, ರತೀ ಎಂಬ ಕಾಮಪತ್ನಿ, ಸ್ವಾಯಂಭುವಮನು, ದಕ್ಷಪ್ರಜೇಶ್ವರ, ಗುರುವೆಂಬ ಬೃಹಸ್ಪತಿಯೂ ಸಹ ಆರುಮಂದಿ ಹತ್ತುಗುಣ ಕಡಿಮೆ. ತಮ್ಮೊಳಗೆ ಈ ಆರು ಜನರೂ ಸಮರು. ಈ ಆರುಮಂದಿಗಿಂತ ಪ್ರವಹವಾಯುವೆಂಬ ಅಂತರಿಕ್ಷದಲ್ಲಿ ಬೀಸುವ ಗಾಳಿಗೆ ಅಭಿಮಾನಿ ವಾಯುದೇವರು ಐದು ಗುಣದಿಂದ ಕಡಿಮೆ. ॥೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ವಿರಾಡ್ರೂಪೀ ಶ್ರೀಪರಮಾತ್ಮನ ಮನಸ್ಸಿನಿಂದ ಹುಟ್ಟಿದವನು ಮನ್ಮಥ. ಇದರಿಂದ ಮನ್ಮಥನಿಗೆ **ಮನೋಜ** —ಎಂದು ಹೆಸರು.

**ನಗ**–ಅಂದರೆ ಪರ್ವತ ಎಂದರ್ಥ (ನಗ–ಗಮನವಿಲ್ಲದ್ದು. ಚಲಿಸದಿರುವ ಅಚಲಗಳು), ಅವುಗಳಿಗೆ ಶತ್ರು;ಎಂದರೆ–ಇಂದ್ರದೇವರು. ಇದರಿಂದ ಇಂದ್ರನಿಗೆ **ನಗಾರಿ**– ಎಂದಿದ್ದಾರೆ. ಹಿಂದೆ ಪರ್ವತಗಳಿಗೆ ರೆಕ್ಕೆಗಳಿತ್ತು. ಪರ್ವತಾಭಿಮಾನಿಗಳು ಅಂತರಿಕ್ಷದಲ್ಲಿ ಹಾರುತ್ತಾ, ಭೂಮಿಯ ಮೇಲೆ ಇಳಿದಾಗ, ಅನೇಕ ನಗರಗಳು ಪರ್ವತಗಳ ಆಘಾತಕ್ಕೆ ಸಿಕ್ಕಿ, ನುಚ್ಚುನೂರಾಗುತ್ತಿದ್ದವು. ಇದನ್ನು ಕಂಡು ದೇವೇಂದ್ರನು ತನ್ನ ವಜ್ರಾಯುಧದಿಂದ ಪರ್ವತಗಳ ರೆಕ್ಕೆಗಳನ್ನು ಕತ್ತರಿಸಿದನು. ಇದರಿಂದ ಇಂದ್ರನಿಗೆ **ನಗಾರಿ**–ಎಂಬ ಹೆಸರು ಬಂದಿತು.

**ಅಹಂಕಾರಿಕಪ್ರಾಣನು** ಇಂದ್ರ ಮತ್ತು ಕಾಮರಿಗಿಂತ ವಿಜಾತೀಯ ಗುಣಗಳಿಂದ ಕಡಿಮೆ. (ಇಪ್ಪೈದು ಗುಣ ಕಡಿಮೆ). ವೈಕಾರಿಕಾಂಹರಾಭಿಮಾನಿಯಾದ ರುದ್ರನ ಪುತ್ರನೇ ಅಹಂಕಾರಿಕ ಪ್ರಾಣನು. ಈತನು ತ್ವಗಾಭಿಮಾನಿಯಾದ ತತ್ತ್ವದೇವತೆಯು. ೪೯ ಮರುದ್ಗಣಗಳಲ್ಲಿ ಒಬ್ಬನು.

(೧) ಕಾಮನ ಅವತಾರೀ ಪ್ರದ್ಯುಮ್ನನು ಶ್ರೀಕೃಷ್ಣ ರುಕ್ಮಿಣಿಯ ಪುತ್ರನು. ಪ್ರದ್ಯುಮ್ನನ ಪುತ್ರನೇ **ಅನಿರುದ್ಧನು.** (೨) ಮನ್ಮಥನ ಮಡದಿ ರತೀದೇವಿ. (೩) ಸ್ವಾಯಂಭುವಮನು. ಈತನು ಉಪಸ್ಥತತ್ತ್ವಕ್ಕೆ ಅಭಿಮಾನಿ ದೇವತೆ. (೪) ದಕ್ಷಪ್ರಜಾಪತಿ. ಇವನು ಹಸ್ತೇಂದ್ರಿಯಕ್ಕೆ ಅಭಿಮಾನಿಯು. (೫) ದೇವತೆಗಳ ಗುರುಗಳಾದ ಬೃಹಸ್ಪತ್ಯಾಚಾರ್ಯರು ಮತ್ತು (೬) ಇಂದ್ರದೇವರ ಪತ್ನಿ ಶಚೀದೇವಿ- ಈ ಆರು ಮಂದಿ ಸಮಾನಕಕ್ಷಾಪನ್ನರು.

ಈ ಆರು ಮಂದಿ ದೇವತೆಗಳು ಅಹಂಕಾರಿಕಪ್ರಾಣನಿಗಿಂತ ಹತ್ತು ವಿಜಾತೀಯ ಗುಣಗಳಿಂದ ನ್ಯೂನರು (**ಹೌರಗೆನಿಹರು**)– ಹತ್ತು ಸಜಾತೀ ಗುಣಗಳಿಂದ ಸಮಾನರು.

**ಪ್ರವಹವಾಯುವು** ವಾಯುವ್ಯ ದಿಕ್ಕಿನ ದಿಕ್ಪಾಲಕ. ಇವನು ೪೯ ಮರುದ್ಗಣಗಳಲ್ಲಿ ಒಬ್ಬನು. ಪಂಚಭೂತಗಳಲ್ಲಿ ಒಂದಾದ ವಾಯುತತ್ತ್ವಕ್ಕೆ

(ಬೀಸುವ ಗಾಳಿ) ಅಭಿಮಾನಿಯು. ಸರ್ವಜೀವರ ನಾಸಿಕೇಂದ್ರಿಯದಲ್ಲಿ ಶ್ವಾಸರೂಪನಾಗಿರುವನು.

ಅಂತಹ ಪ್ರವಹವಾಯುವಿಗೆ **ಮರೀಚಿ**–ಎಂಬ ನಾಮಾಂತರವಿದೆ. ಪ್ರವಹವಾಯುವು ಮೇಲಿನ ಆರು ಮಂದಿಗಿಂತ ಐದು ವಿಜಾತೀಯ ಗುಣಗಳಿಂದ ಅಧಮನು. ಇದನ್ನು **ಮಾರಜಾದ್ಯರಿಗೆ**-ಎಂದಿದ್ದಾರೆ ದಾಸವರ್ಯರು. ಅಂದರೆ ಮಾರ–ಮನ್ಮಥ. ಮಾರಜ–ಮನ್ಮಥಪುತ್ರ ಅನಿರುದ್ಧ. ಆದಿ ಶಬ್ದದಿಂದ ಅನಿರುದ್ಧಾದಿ ಶಚೀ ಪರ್ಯಂತ ಆರು ಮಂದಿ ಗ್ರಾಹ್ಯ. ॥೯॥

## ಪದ್ಯ-೧೦

**ಮೂಲ :–**

**ಗುಣದ್ವಯದಿಂ ಕಡಿಮೆ ಪ್ರವಹಗೆ ।**
**ಇನ ಶಶಾಂಕ ಯಮ ಸ್ವಯಂಭುವ ।**
**ಮನುಮಡದಿ ಶತರೂಪೆ ನಾಲ್ವರು ಪಾದಪದಾರ್ಧ ॥**
**ವನಧಿ ನೀಚ ಪದಾರ್ಧ ನಾರದ ।**
**ಮುನಿಗೆ ಭೃಗ್ವಗ್ನಿ ಪ್ರಸೂತಿಗ ।**
**ಳೆನಿಸುವರು ಪಾದಾರ್ಧ ಗುಣದಿಂದಧಮರಹುದೆಂದು ॥**
**॥೧೦॥**

**ಅವತರಣಿಕೆ :–**

ಸೂರ್ಯ, ಚಂದ್ರ, ಯಮ, ಸ್ವಾಯಂಭುವಮನುವಿನ ಪತ್ನಿ, ನಾರದ, ಭೃಗು, ಅಗ್ನಿ, ಪ್ರಸೂತಗಳ ತಾರತಮ್ಯ ವಿಷಯ ತಿಳಿಸುತ್ತಾರೆ. ॥೧೦॥

**ಪ್ರತಿಪದಾರ್ಥ :–**

**ಪ್ರವಹಗೆ** = ಪ್ರವಹವಾಯುವಿಗಿಂತಲೂ, **ಇನ** = ವಿವಸ್ವಾನ್ ನಾಮಕ ಸೂರ್ಯ, **ಶಂಶಾಕ** = ಚಂದ್ರ, **ಯಮ** = ಯಮದೇವರು, **ಸ್ವಯಂಭುವಮನು ಮಡದಿ** = ಸ್ವಾಯಂಭುವಮನುವಿನ ಪತ್ನೀ, **ಶತರೂಪ** = ಶತಾರೂಪಾದೇವಿಯರು, **ನಾಲ್ವರು** = ಈ ನಾಲ್ಕೂ ಮಂದಿ, **ಗುಣದ್ವಯದಿಂ ಕಡಿಮೆ** = ಎರಡು ವಿಜಾತೀಯಗುಣಗಳಿಂದ ನ್ಯೂನರು, **ವನಧಿ** = ಸಮುದ್ರರಾಜನಾದ ವರುಣದೇವರು, **ಪಾದ ಪದಾರ್ಧ** = ಪಾದ–ಎಂದರೆ ಕಾಲುಭಾಗ. ಪದಾರ್ಧ–ಎಂದರೆ ಕಾಲು ಭಾಗದಲ್ಲಿ ಅರ್ಧ, ಅಲ್ಲಿಗೆ ಕಾಲುಭಾಗ + ಕಾಲುಭಾಗದಲ್ಲಿ ಅರ್ಧ = $\frac{೧}{೪} + \frac{೧}{೮} = \frac{೨ + ೧}{೮} = \frac{೩}{೮}$ = ಎಂಟನೆಯ ಮೂರು ಭಾಗ (೧೬ ಆಣೆಯಲ್ಲಿ ಕಾಲು = ೪ ಆಣೆ. ೪ ಆಣೆಯಲ್ಲಿ ಅರ್ಧ = ೨ ಆಣೆ. ಅಲ್ಲಿಗೆ ೪ + ೨ = ೬ ಆಣೆ ಭಾಗವಾಗುವುದು) **ನೀಚ** ಕಡಿಮೆ, **ನಾರದ ಮುನಿ** = ದೇವರ್ಷಿಗಳಾದ ನಾರದರು, **ಪದಾರ್ಧ** = ಕಾಲು ಭಾಗದಲ್ಲಿ ಅರ್ಧ, ಅಂದರೆ ಎಂಟನೇ ಒಂದು ಭಾಗ (೨ ಆಣೆ ಭಾಗದಷ್ಟು) ವರುಣನಿಗಿಂತ ವಿಜಾತೀಯ ಗುಣಗಳಿಂದ ಕಡಿಮೆ, **ಭೃಗುವು** = ಭೃಗು ಋಷಿಗಳು, **ಅಗ್ನಿ** = ಅಗ್ನಿದೇವರು, **ಪ್ರಸೂತಿಗಳು** = ದಕ್ಷಪ್ರಜಾಪತಿಯ ಪತ್ನಿ ಪ್ರಸೂತಿದೇವಿ- ಈ ಮೂರು ಮಂದಿ ಸಮಾನಕಕ್ಷಾಪನ್ನರು. ಅಂದರೆ, **ಪಾದಾರ್ಧ ಗುಣದಿಂದ** = ಕಾಲುಭಾಗದಲ್ಲಿ ಅರ್ಧ–ಅಂದರೆ

ಒಂದು ವಿಜಾತೀಯ ಗುಣಾಂಶಗಳಿಂದ ನಾರದ ಮುನಿಗಿಂತ, **ಅಧಮರು** = ನ್ಯೂನರಾಗಿದ್ದಾರೆ, **ಅಹುದೆಂದು** = ಈ ರೀತಿಯಲ್ಲಿ ತಾರತಮ್ಯ ಕ್ರಮವನ್ನು ತಿಳಿಯಬೇಕು, ||೧೦||

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಸೂರ್ಯ-ಚಂದ್ರಾದಿಗಳ ತಾರತಮ್ಯ ಹೇಳತಾರೆ.

ಪ್ರವಹವಾಯುವಿಗಿಂತಲೂ, ವಿವಸ್ವಾನ್‌ನಾಮಕ ಸೂರ್ಯ, ಚಂದ್ರ, ಯಮದೇವರು, ಸ್ವಯಂಭುವಮನುಪತ್ನಿ ಶತರೂಪಾದೇವೇರು- ಈ ನಾಲ್ಕು ಮಂದಿಯೂ ಎರಡು ವಿಜಾತಿ ಗುಣದಿಂದ ಅಧಮರು. ಎರಡು ಸಜಾತಿ ಗುಣದಿಂದ ಸಮರು. ಪ್ರವಹವಾಯು ವಿಜಾತಿ ಗುಣದ್ವಯದಿಂದ ಸೂರ್ಯಾದಿ ನಾಲ್ವರುಗಳಿಗಿಂತಲೂ ಉತ್ತಮನು. ಈ ಸೂರ್ಯಾದಿ ನಾಲ್ವರೂ ತಮ್ಮ ತಮ್ಮೊಳಗೆ ಸಮರು. ವರುಣದೇವರು ಪೂರ್ವೋಕ್ತ ನಾಲ್ವರಿಗಿಂತಲೂ ಪಾದಗುಣ ಅಂದರೆ ಕಾಲುಗುಣ, ಅರಿಕಾಲುಗುಣ-ಅಂತು ಕಾಲೇ ಅರಿಕಾಲು ಎಂದರ್ಥ. ಕಡಿಮೆ ಅಂದರೆ ಕಾಲೇ ಅರಿಕಾಲು ವಿಜಾತಿಗುಣದಿಂದ ಅಧಮನು. ಕಾಲೇ ಅರಿಕಾಲು ಸಜಾತಿ ಗುಣದಿಂದ ಸಮನು. ವರುಣನಿಗಿಂತಲೂ ಸೂರ್ಯಾದಿ ನಾಲ್ಕು ಮಂದಿಗಳು ಕಾಲೇ ಅರಿಕಾಲು ವಿಜಾತಿಗುಣದಿಂದ ಅಧಿಕರು. ನಾರದಮುನಿ ವರುಣನಿಗಿಂತಲೂ –ನಾರದಋಷಿ, ನಾರಂ –ಜ್ಞಾನಂ. ದದಾತೀತಿ ನಾರದಃ, ಅರ–ನ ಭವತೀತಿ ವಾ, ಬ್ರಹ್ಮದೇವರ ಅಂಕದಿಂದ ಹುಟ್ಟಿದವರು-ವಿಜಾತಿ ಅರಿಕಾಲು ಗುಣದಿಂದ ಅಧಮರು. ಅರಿಕಾಲು ಸಜಾತಿಗುಣದಿಂದ ಸಮರು. ವರುಣನು ನಾರದಋಷಿಗಿಂತಲೂ ವಿಜಾತಿ ಅರಿಕಾಲು ಗುಣದಿಂದ ಉತ್ತಮನು. ಈ ನಾರದ ಋಷಿಗಳಿಗೆ ಭೃಗು ಋಷಿಗಳು, ಅಗ್ನಿದೇವರು, ದಕ್ಷಪ್ರಜಾಪತಿಯ ಪತ್ನಿ ಪ್ರಸೂತಿ

ದೇವಿ-ಈ ಮೂರುಮಂದಿಗಳು ಅರಿಕಾಲುಗುಣದಿಂದ ಕಡಿಮೆಯಾದವರು ಎನಿಸುವರು, ನಿಶ್ಚಯವೆಂದು ತಾತ್ಪರ್ಯ. ಅಂದರೆ, ಅರಿಕಾಲು ವಿಜಾತಿ ಗುಣದಿಂದ ಅಧಮರು. ಅರಿಕಾಲು ಸಜಾತಿಗುಣದಿಂದ ಸಮರು. ನಾರದರು ಈ ಭೃಗ್ವಾದಿಗಳಿಗಿಂತಲೂ ಅರಿಕಾಲು ವಿಜಾತಿಗುಣದಿಂದ ಅಧಿಕರು. ಭೃಗು-ಅಗ್ನಿ-ಪ್ರಸೂತಿ ಈ ಮೂರುಮಂದಿಗಳೂ ಸಮರು.

**ವಿಶೇಷಾರ್ಥ :–** ದೇವರು ಅಪರಿಚ್ಛಿನ್ನ ಅವಧಿರಹಿತವಾದ ಗುಣದಿಂದ ಪೂರ್ಣವಾದ ಕಾಲಕ್ಕೂ, ತಾರತಮ್ಯಕ್ಕೆ ಅವಧಿಯುಕ್ತವಾದ ಗುಣಗಳ ರಮಾದೇವೇರಿಗೆ ತೋರಿಸೋವನಾಗಿದ್ದಾನೆ. ರಮಾದೇವೇರಿಗೆ ಎಷ್ಟು ಗುಣಗಳ ತೋರಿಸಿ,ದಾವ ಗುಣಗಳು ಆಕೆಯಿಂದ ನೋಡಲ್ಪಟ್ಟಿದ್ದಾವೋ, ಆ ಗುಣದಾರಭ್ಯ ಗುಣತಾರತಮ್ಯವು. ರಮಾದೇವೇರು ಕಂಡ ಗುಣಗಳು ಎಷ್ಟು ಅಂದರೆ, ಸಜಾತಿ ಗುಣಗಳು ಆಲೋಚನಿ ಇಲ್ಲದೇ ನೋಡಿದ ಗುಣಗಳು ಅನಂತ. ಸಜಾತಿ ಗುಣಗಳಲ್ಲದ ವಿಜಾತಿಗುಣಗಳ ನೋಡಿದ್ದು ಅನಂತ. ಇವು ಆಲೋಚನಿಯಿಂದ ನೋಡಿದ್ದು ತಮ್ಮಲ್ಲಿಲ್ಲದೇ ಇದ್ದದ್ದು, ಆದಕ್ಕೆ ಮಿಂಚಿದ ಗುಣಗಳ ಕಾಣದೆ ಆನಂದಮಗ್ನರಾದರು. ಆದರೆ ಅನಂತ-ಅಂದರೆ ಅವಧಿರಹಿತ-ಎಂತ ಅರ್ಥವಾಗುತ್ತದೆ. ಅನಂತ ಎಂಬುದು ಹ್ಯಾಂಗೆ ಕೂಡತದೆ ಅಂದರೆ. ವಿವಕ್ಷಾಭೇದದಿಂದ ಅವಧಿ, ಅನವಧಿ ಎರಡೂ ಉಂಟು. ಅನಂತಕ್ಕೆ ಅವಧಿರಹಿತ ಅಂದರೂ ಸರಿಯೇವೆ. ಆದರೆ, ಪ್ರಕೃತ ಅನಂತ ಎಂಬುದು ಸಂಖ್ಯಾವಾಚ್ಯಕವೂ ಖರೇನೆ. ಸಂಖ್ಯಾದೊಳಗೆ ಅನಂತ ಎಂತಲೂ ಒಂದು ಸಂಖ್ಯಾ ಉಂಟು. ಅದರ ಗಣನ ಈ ಕೆಳಗೆ ಉದಾಹರಿಸಿದೆ. ಅನಂತ ಎಂದರೆ, ಆ–ಸಮ್ಯಕ್ ಅಂತ ಎಂತಲೂ, 'ಅ' ಕಾರ ನಿಷೇಧಪದ ಮಾಡಿದರೆ, ಅಂತರಹಿತ ಎಂತಲೂ ತಾತ್ಪರ್ಯವೇ. ಅಂತ ಹೇಳಿದ ಸಂಖ್ಯಾಕ್ಕೆ ಮ್ಯಾಲೆ ಗಣನಾ ಮಾಡೋದಕ್ಕೆ ಸಂಕೇತನಾಮ ಇಲ್ಲ. ಇದರನ್ನೇ ಪುನಶ್ಚ ತೆಗೆದುಕೋಬೇಕೆಂತಲೂ ತಾತ್ಪರ್ಯವೇ. ಲಕ್ಷ, ಕೋಟಿ, ಅರ್ಬುದ, ನ್ಯರ್ಬುದ, ಖರ್ವ, ಮಹಾಖರ್ವ, ಪದ್ಮ, ಮಹಾಪದ್ಮ, ಶಂಖ, ಮಹಾಶಂಖ, ಕ್ಷೋಣಿ, ಮಹಾಕ್ಷೋಣಿ,

ಕ್ಷಿತಿ, ಮಹಾಕ್ಷೋಭ, ನಿಧಿ. ಮಹಾನಿಧಿ, ಸಮುದ್ರ, ಮಹಾ ಸಮುದ್ರ, ಅಂತ್ಯ, ಪರಾರ್ಧ, ಮಹಾಪರಾರ್ಧ, ಭೂರಿ, ಮಹಾ ಭೂರಿ, ಕೃತಭೂರಿ, ಗಗನ, ಲೋಕ, ಅನಂತ,- ಅಂತೂ ಇಪ್ಪ ತ್ತೊಂಭತ್ತು. ಒಂದು ಹಾಕಿ ನೂರಾನಲವತ್ತೆರಡು ಸೊನ್ನೆಗಳ ಹಾಕಿದರೆ, ಅನಂತವಾಗತದೆ. ಆದ್ದರಿಂದ ಆ ಅನಂತಕ್ಕೆ ಅವಧಿ ಸಾಂಕೇತ ಉಂಟು. ಅದರ ಮ್ಯಾಲೆ ಸಾಂಕೇತವಾದ ಸಂಖ್ಯಾ ಇಲ್ಲ. ದಶಾನಂತ ಎಂತಲೂ, ಕೋಟಿ ಅನಂತ ಎಂತಲೂ, ಅನಂತಾನಂತ ಎಂತಲೂ ಅವಧಿ ಹೇಳಬಹುದು. ಹ್ಯಾಂಗೆಂದರೆ, ಅನಂತಸಂಖ್ಯಾದಿಂದ ಮತ್ತೊಂದು ಅನಂತವನ್ನು ಹೆಚ್ಚು ಗುಣಿಸಿದರೆ, ಅನಂತಾನಂತವೆಂತಲೇ ಆ ವಿಧಿಯಿಂದ ಯುಕ್ತವಾಗತದೆ. ಅದರ ಮೇಲೆ ಆ ವಿಧಿಯುಕ್ತವಾದ ಸಂಖ್ಯಾ ಲೇಖನ ಮಾಡಬಹುದು. ಆ ಲೇಖನ ಸಂಖ್ಯಾವನ್ನು ಸಾಂಕೇತನಾಮದಿಂದ ಉಚ್ಚರಿಸಲಿಕ್ಕೆ ತದನುಗುಣ ವಾದ ಸಾಂಕೇತನಾಮವಿಲ್ಲ. ಆದರ ಮ್ಯಾಲೆ ಅನಂತಾನಂತವೆಂತಲೇ ಸಾಂಕೇ ತವು. ಈ ಕ್ರಮಾನುಸಾರ ಅನಂತಕ್ಕೆ ಆ ವಿಧಿ ಇರೋದಾಗಿ ಅದೆ. ಆದ್ದ ರಿಂದ ಇದನನುಸರಿಸಿ ಈ ರೀತ್ಯಾ-

೧. ಪರಮಾತ್ಮ ವಿವಕ್ಷಾಭೇದದಿಂದ ಅನಂತದ್ವಯಗುಣಗಳುಳ್ಳವ- ಎಂತ ತಾತ್ಪರ್ಯ. ಸಜಾತಿ ಅನಂತ ಒಂದು, ವಿಜಾತಿ ಅನಂತ ಒಂದು, ಎರಡು ಅನಂತ. ಉಭಯಾತೀತ ಅಪರಿಚ್ಛಿನ್ನ ಒಂದು, ಇದು ತಾರತಮ್ಯಕ್ಕೆ ಬರತಕ್ಕದ್ದಲ್ಲ.

೨. ರಮಾ ಅನಂತಗುಣಕ್ಕೆ ನೀಚಳು, ವಿಜಾತಿ ಗುಣಕ್ಕೆ ಎಂತ ತಾತ್ಪರ್ಯ. (ಅನಂತ)

೩. ಬ್ರಹ್ಮ-ವಾಯುಗಳು ಕೋಟಿಗುಣದಿಂದ ಅವರರು. (ಕೋಟಿ)

೪-೫. ಸರಸ್ವತೀ, ಭಾರತೀ ದೇವೇರು ನೂರುಗುಣದಿಂದ ಅಧಮರು (ನೂರು)

೬. ಗರುಡ–ಶೇಷ–ರುದ್ರರು ನೂರುಗುಣ ಕಡಿಮೆ ಸರಸ್ವತ್ಯಾದಿ ಗಳಿಂದ (ನೂರು)

೭. ಪರಮಾತ್ಮನ ಷಣ್ಮಹಿಷಿಯರು, ಐದು ಗುಣ ಕಡಿಮೆ. (ಐದು)

೮. ಸೌಪರ್ಣ್ಯಾದಿಗಳು ತಮ್ಮ ತಮ್ಮ ಪತಿಗಳಿಗಿಂತ ದಶಗುಣ ಅವರರು. ಷಣ್ಮಹಿಷಿಯರಿಂದ ಎರಡು ಗುಣ ಕಡಿಮೆ. (ಎರಡು)

೯. ಇಂದ್ರ–ಕಾಮರು ಹತ್ತು ಗುಣದಿಂದ ನೀಚರು. (ಹತ್ತು)

೧೦. ಅಹಂಕಾರಪ್ರಾಣ ಹತ್ತು ಗುಣದಿಂದ ನೀಚನು. (ಹತ್ತು)

೧೧. ಅನಿರುದ್ಧ ಆರಂಭಮಾಡಿ ಶಚಿಯವರೆಗೆ ಆರುಮಂದಿ ದಶ ಗುಣಾಧಮರು. (ಹತ್ತು)

೧೨. ಪ್ರವಹವಾಯು ಐದು ಗುಣದಿಂದ ನೀಚನು. (ಐದು)

೧೩. ಸೂರ್ಯಾದಿ ನಾಲ್ವರು ಎರಡು ಗುಣದಿಂದ ಕಡಿಮೆ. (ಎರಡು)

೧೪. ವರುಣ ಕಾಲೇ ಅರಿಕಾಲುಗುಣ ಕಡಿಮೆ. (೫/೮)

೧೫. ನಾರದರು ಅರಿಕಾಲುಗುಣ ಕಡಿಮೆ. (೧/೮)

೧೬. ಭೃಗ್ವಾದಿಗಳು ನಾರದರಿಗಿಂತಲೂ ಅರಿಕಾಲು ವಿಜಾತಿಗುಣ ದಿಂದ ನೀಚರೆಂತ ಕರಸೋವರಾಗತಾರೆ. ಅಂದರೆ, ಅಷ್ಟು ಗುಣದಿಂದ ಅವರರೆಂತ ತಾತ್ಪರ್ಯ. (೧/೮)

ಇಲ್ಲಿಗೆ ಹತ್ತು ಶ್ಲೋಕಗಳ ಟೀಕ ಸರಿಯಾಯಿತು. ॥೧೦॥

೨. ಭಾವಪ್ರಕಾಶಿಕೆ :-

೪೯ ಮರುದ್ಗಣಕ್ಕೆ ಸೇರಿದ ಪ್ರವಹವಾಯುವಿನಕಿಂತಲೂ ಸೂರ್ಯ, ಚಂದ್ರ, ಯಮ, ಸ್ವಾಯಂಭುವಮನುವಿನಪತ್ನಿ ಶತರೂಪ, ಈ ನಾಲ್ವರು ೨ಭಾಗ ಗುಣದಿಂದ ಕಮ್ಮಿಯೆನಿಸುವರು. ವರುಣನು ಸೂರ್ಯಾದಿಗಳಿಗಿಂತಲೂ ೬ ಆಣೆ ಭಾಗ ಕಮ್ಮಿ ಎನಿಸುವನು. ವರುಣನಿಕಿಂತಲೂ ೨ ಆಣೆ ಭಾಗ ಗುಣದಿಂದ ನಾರದನು ಕಮ್ಮಿ ಎನಿಸುವನು. ನಾರದಮುನಿಗಿಂತಲೂ ಭೃಗುಋಷಿಗಳು, ಅಗ್ನಿ, ದಕ್ಷ ಪ್ರಜೇಶ್ವರನ ಮಡದಿಯಾದ ಪ್ರಸೂತಿ-ಇವರು ಮೂವರು ೨ ಆಣೆ ಭಾಗ ಕಮ್ಮಿಯೆನಿಸುವರು. ॥೧೦॥

೩. ಭಾವದರ್ಪಣ :-

ಗುಣದ್ವಯೇತಿ.- "ವಿವಸ್ವಾಂಶ್ಚ ಯಮಶ್ಚಂದ್ರಃ ಶತರೂಪಾಚ ಮಾನವೀ । ಗುರೋರ್ದಶಾಧಮಾಃ ಪ್ರೋಕ್ತಾಃ ಪ್ರವಹಾದ್ವಿಗುಣಾಧಮಾಃ । ಯಥಾನಂದೇ ತಥಾಜ್ಞಾನೇ ವಿಷ್ಣುಭಕ್ತೌ ಬಲಾಧಿಕ"- ಇತ್ಯುಕ್ತೇಃ । ಪಾದಪಾದಾರ್ಧ ರೂಪಾಯಿವಳಗೆ ಆರು ಆಣೇ ಪಾಲು ಎಂಬರ್ಥ. ವನಧೀತಿ । "ತತಸ್ತು ವರುಣಃ ಸೂರ್ಯಾತ್ಪಾದಾರ್ಧತೋ ಅಧಮಃ । ನಾರದೋ ವರುಣಾನ್ಯೂನೋ ಭೃಗು ವಹ್ನಿ ಪ್ರಸೂತಯಃ । ನಾರದಸ್ತು ವರಃ ಕಿಂಚಿದ್ವರುಣಾತ್ಪಾದತೋಽಧಮ"- ಇತಿ ಕೌಸ್ತುಭೋಕ್ತೇಃ ॥೧೦॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

'ಗುಣ' ಇತಿ ॥ ಯಮಃ ಮಾನವೀ-ಚಂದ್ರಸೂರ್ಯೌ "ಸೂರ್ಯಾಧಮೌ ಯಥಾ ಸೋಮೋ ಸೋಮವತ್ ಶತರೂಪಾಚ"- ಇತಿ ಭಾಷ್ಯೇ॥ ಪ್ರವಹಾತ್ ಭೂತವಾಯೋಃ ಏತೇ ಚತ್ವಾರಃ ದ್ವಿಗುಣಾವರಾಃ ॥ "ಭೂತವಾಯುಃ ತಥೈವ ಚ ದ್ವಿಗುಣ ಏವ ಚ"- ಇತಿ ಚ ಉಕ್ತೇಃ ॥ "ಪಾದ" ಇತಿ ॥ "ವನಧಿಃ "-ವರುಣಃ ಯಮಾದೇಃ ಪಾದಾರ್ಧಯುಕ್ತ ಪಾದ

ಗುಣೋನಃ ॥ ಪಾದಾರ್ಧಯುಕ್ತಪಾದಃ ಪಾದಪಾದಾರ್ಧಃ ॥ ವಿಶೇಷಣೋತ್ತರ ಸಮಾಸಃ ॥ ಅಧ್ಯರ್ಧೋನಃ ಸಮಃ ಸೋಮತಃ"– ಇತಿ **ಛಾಂದೋಗ್ಯಭಾಷ್ಯೇ**॥ ಸಃ ಅಪ್ಯಃ । ಪದೇತಿ ನಾರದೇತ್ಯನಂತರಂ "ನೀಚ" ಇತಿ ಯೋಜನೀಯಮ್ ॥ ವರುಣಾತ್ ಕಿಂಚಿತ್ ನ್ಯೂನಃ (ನೀಚಃ) ಅಗ್ನೇಃ ಉತ್ತಮಃ ॥ ವರುಣಾಗ್ನ್ಯತರಾ ತತ್ರ ನಾರದಃ"– ಇತ್ಯುಕ್ತೇಃ ವಿಭಕ್ತೇಃ ಯಃ ಚತುರ್ಥಾಂಶಃ ತೇನ ಊನಃ ಏತೇಭ್ಯಃ ಮುನೇಃ ಪಾದೋನೋ ವರುಣಾದಗ್ನಿರಿತ್ಯುಕ್ತೇಃ ॥ "ಅಹುದು–ಹೌದು ॥ "ತದರ್ಧೌ ಯಮ ಭಾಸ್ಕರೌ ॥ ಚಂದ್ರಶ್ಚ ಶತರೂಪಾ ಇತಿ ತೇಭ್ಯೋಽಂಘ್ರ್ಯರ್ಧಾವರೋಽಪಃ ॥ ತತ್ಪಾದೋನೋ ಭವೇದಗ್ನಿಃ ನಾರದೋ ಮಧ್ಯ ಏತಯೋಃ ॥ ಪ್ರಸೂತಿಶ್ಚ ಭೃಗುಶ್ಚೈತೌ ವಹ್ನಿ ತುಲ್ಯೌ ॥೧೦॥

## ಕನ್ನಡಾರ್ಥ

ಯಮ, ಮನುಪತ್ನಿ, ಚಂದ್ರ, ಸೂರ್ಯ, ಇವರು ಪ್ರವಹಗೆ ಎರಡು ಗುಣಗಳಿಂದ ಕಡಿಮೆಯುವರು-ಹೀಗೆ ಪ್ರಮಾಣಗಳಲ್ಲಿ ಹೇಳಲಾಗಿರುತ್ತದೆ. 'ವನಧಿ–ವರುಣ. ವರುಣನು ೧॥ ಕಾಲು ಗುಣದಿಂದ ಯಮ ಮುಂತಾದವರಿಗೆ ಕಡಿಮೆಯುವನು. ಪಾದಾರ್ಧದಿಂದ ಅರ್ಧಕಾಲು ಭಾಗದಿಂದ ಕೂಡಿದ ಪಾದ–ಕಾಲು ಭಾಗವು, ಪಾದಪಾದಾರ್ಧವೆನಿಸುತ್ತದೆ. ವಿಶೇಷಣೋತ್ತರ ಸಮಾಸವಾಗಿರುತ್ತದೆ. **ಛಾಂದೋಗ್ಯ**ದಲ್ಲಿ "ಚಂದ್ರನಿಗೆ ವರುಣನು ಒಂದೂವರೆ ಕಾಲು ಗುಣಗಳಿಂದ ಕಡಿಮೆಯುವನು."– ಎಂದು ಹೇಳಲಾಗಿರುತ್ತದೆ.

'ನೀಚ'-ಎಂಬುದನ್ನು ನಾರದ ಎಂಬ ಪದದ ಮುಂದೆ ಯೋಜಿಸಬೇಕು. ಅಂದರೆ,ನಾರದನು ವರುಣನಿಗಿಂತ ಪಾದಾರ್ಧ (ಅರ್ಧಕಾಲು) ಕಡಿಮೆಯುವನು-ಎಂದು ಅರ್ಥವಾಗುತ್ತದೆ. ನಾರದನು ವರುಣನಿಗೆ ಸ್ವಲ್ಪ ಕಡಿಮೆಯುವನೂ, ಅಗ್ನಿಗೆ ಸ್ವಲ್ಪ ಹೆಚ್ಚಿನವನೂ ಇರುತ್ತಾನೆ. ಭೃಗು, ಪ್ರಸೂತಿಯರು ಅಗ್ನಿಗೆ ಸಮರು-ಎಂದು ಪ್ರಮಾಣಗಳು ಹೇಳುತ್ತವೆ. ॥೧೦॥

## ೫. ಶ್ರೀಗುರುಹೃದಯಪ್ರಕಾಶಿಕೆ :-

ಆ ಪ್ರವಹವಾಯುವಿಗಿಂತ ಇನ- ಎಂಬ ಸವಿತೃನಾಮಕ ಸೂರ್ಯ, ಶಶಾಂಶ ಎಂಬ ಚಂದ್ರ, ಯಮದೇವರು, ಸ್ವಾಯಂಭುವಮನುಪತ್ನಿ ಶತರೂಪಾದೇವಿ ಸಹ ನಾಲ್ಕು ಮಂದಿಯೂ ಎರಡು ಗುಣ ಬಲಜ್ಞಾನಾದಿಗಳಿಂದ ಕಡಿಮೆ. ಈ ನಾಲ್ಕು ಜನಕಿಂತಲೂ ವನಧಿ ಎಂಬ ಸಮುದ್ರಾಭಿಮಾನಿ ವರುಣನು ಕಾಲುಪಾಲು ಗುಣ ಕಡಿಮೆ. ಈ ವರುಣನಿಗಿಂತ ಅರ್ಧಪಾದ ಗುಣ ಕಡಿಮೆ ನಾರದಮುನಿ. ಆ ನಾರದಮುನಿಗಿಂತ ಭೃಗುಋಷಿ, ಅಗ್ನಿದೇವರು,ದಕ್ಷಪತ್ನಿ ಪ್ರಸೂತೀದೇವಿ ಸಹ ಮೂರು ಮಂದಿ ಪಾದಾರ್ಧಗುಣದಿಂದ ಕಡಿಮೆ ಎನಿಸುವರು. ॥೧೦॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ವಿವಸ್ವಾನ್ ನಾಮಕನಾದ ಸೂರ್ಯ (ಇನ)-ಚಂದ್ರ (ಮೊಲದ ಸಾಂಕೇತವುಳ್ಳವನು- **ಶಶಾಂಕ**) - ದಿಕ್ಪಾಲಕರಾದ ಯಮಧರ್ಮನು- ಸ್ವಾಯಂಭುವಮನುವಿನ ಪತ್ನಿ ಶತಾರೂಪಾದೇವಿ- ಈ ನಾಲ್ಕುಮಂದಿ ಸಜಾತೀಯ ಗುಣಗಳಿಂದ ಸಮಾನಕಕ್ಷಾಪನ್ನರು.

ಆದರೆ, ಪ್ರವಹವಾಯುವಿಗಿಂತ ಎರಡು ವಿಜಾತೀಯ ಗುಣಗಳಿಂದ ಕಡಿಮೆ **(ಗುಣದ್ವಯದಿಂ ಕಡಿಮೆ)**.

೨. **ವನಧಿ**-ಎಂದರೆ ಸಮುದ್ರ. ಇಲ್ಲಿ ಸಾಂಕೇತಿಕವಾಗಿ ಸಮುದ್ರರಾಜನಾದ **ವರುಣನನ್ನು** ತೆಗೆದುಕೊಳ್ಳಬೇಕು.

ವರುಣನು ಮೇಲಿನ ನಾಲ್ಕು ಮಂದಿಗಿಂತ **ಪಾದಪದಾರ್ಧ** ಕಡಿಮೆ.
ಅಂದರೆ, ಪಾದ = ಕಾಲುಭಾಗ, (ಉ. ದಾ. ೧೬ ಆಣೆಯಲ್ಲಿ ಕಾಲುಭಾಗ = ೪ ಆಣೆ)

ಪದಾರ್ಧ = ಕಾಲುಭಾಗಗಳಲ್ಲಿ ಅರ್ಧ = $\frac{೧}{೮}$ ಭಾಗ (೧೬ ಆಣೆಯಲ್ಲಿ = ೨ ಆಣೆ).

ಕೂಡಿದರೆ–ಪಾದ + ಪದಾರ್ಧ = $\frac{೧}{೪}$ + $\frac{೧}{೮}$ = $\frac{೩}{೮}$ = ಎಂಟನೆಯ ಮೂರು ಅಂಶ (೧೬ ಆಣೆಯಲ್ಲಿ = ೪ + ೨ = ೬ ಆಣೆಭಾಗ).

ಅಂದರೆ, ಸಮುದ್ರರಾಜನಾದ ವರುಣನು ಸೂರ್ಯ – ಯಮ – ಶತರೂಪಾದೇವಿ– ಈ ನಾಲ್ವರಿಗಿಂತ ಎಂಟನೆಯ ಮೂರು ಭಾಗದಷ್ಟು ವಿಜಾತೀಯ ಗುಣಗಳಿಂದ ಅಧಮನು. ವರುಣನು ರಸನೇಂದ್ರಿಯಾಭಿಮಾನಿ ಹಾಗೂ ತತ್ತ್ವಾಭಿಮಾನಿಯು,

೩. ದೇವಋಷಿಗಳಾದ **ನಾರದರು** ವರುಣನಿಗಿಂತ **ಪದಾರ್ಧ ಕಡಿಮೆ.** ಅಂದರೆ, ಕಾಲುಭಾಗದಲ್ಲಿ ಅರ್ಧ = $\frac{೧}{೮}$ ಭಾಗ (೧೬ ಆಣೆಯಲ್ಲಿ ೨ ಆಣೆ ಭಾಗದಷ್ಟು.)

೪. ಭೃಗು ಋಷಿಗಳು. ಅಗ್ನಿದೇವರು (ತೇಜೋಭಿಮಾನಿ ಹಾಗೂ ವಾಗಭಿಮಾನಿ) ಮತ್ತು ದಕ್ಷ ಪ್ರಜಾಪತಿಯ ಪತ್ನೀ ಪ್ರಸೂತಿದೇವಿ– ಈ ಮೂವರೂ ಸಮಾನ ಕಕ್ಷಾಪನ್ನರು. ಆದರೆ ನಾರದಮುನಿಗಿಂತ **ಪಾದಾರ್ಧ ಗುಣದಿಂದ ಅಧಮರು.** ಅಂದರೆ, ಎಂಟನೆಯ ಒಂದು ಭಾಗದಿಂದ ನ್ಯೂನರು.

**ತಾರತಮ್ಯ ಕ್ರಮ :–**

(೧) ಸೂರ್ಯ-ಚಂದ್ರ-ಯಮ-ಶತರೂಪಾದೇವಿ ಪ್ರವಹವಾಯುವಿಗಿಂತ **ಎರಡು ಗುಣ ಕಡಿಮೆ.**

(೨) ವರುಣನು ಈ ನಾಲ್ವರಿಗಿಂತ ಎಂಟನೆಯ ಮೂರು ಭಾಗದಿಂದ (೬ ಆಣೆ ಭಾಗ) ಕಡಿಮೆ (ಪಾದ ಪದಾರ್ಧ.)

(೩) ನಾರದನು ವರುಣನಿಗಿಂತ ಎಂಟನೆಯ ಒಂದು ಭಾಗ ಕಡಿಮೆ. (ಪಾದಾರ್ಧ.)

(೪) ಭೃಗು–ಅಗ್ನಿ–ಪ್ರಸೂತಿ–ಈ ಮೂವರೂ ನಾರದನಿಗಿಂತ ಎಂಟನೆಯ ಒಂದು ಭಾಗ ಕಡಿಮೆ (ಪಾದಾರ್ಧ.)

## ಪದ್ಯ-೧೧

**ಮೂಲ:–**

**ಹುತವಹಗೆ ದ್ವಿಗುಣಾಧಮರು ವಿಧಿ ।**
**ಸುತ ಮರೀಚ್ಯಾದಿಗಳು ವೈವ ।**
**ಸ್ವತನು ವಿಶ್ವಾಮಿತ್ರರಿಗೆ ಕಿಂಚಿದ್ಗುಣಾಧಮನು ॥**
**ಪ್ರತಿವರ ಜಗನ್ಮಿತ್ರವರ ನಿರ ।**
**ಋತಿ ಪ್ರಾವಹಿ ತಾರರಿಗೆ ಕಿಂ ।**
**ಚಿತ್ ಗುಣಾಧಮ ಧನಪ ವಿಷಕ್ಸೇನನೆನಿಸುವನು ॥ ॥೧೧॥**

**ಅವತರಣಿಕೆ :–**

ಬ್ರಹ್ಮಪುತ್ರ ಮರೀಚಿ ಆದಿಯಾಗಿ, ವೈವಸಸ್ವತಮನು, ವಿಶ್ವಾಮಿತ್ರ, ನಿರಋತಿ, ಪ್ರಾವಹೀ, ತಾರಾದೇವಿ, ಕುಬೇರ, ವಿಷಕ್ಸೇನರ-ತಾರತಮ್ಯವಿಷಯವನ್ನು ತಿಳಿಸುತ್ತಾರೆ. ॥೧೧॥

**ಪ್ರತಿಪದಾರ್ಥ :–**

**ಹುತವಹಗೆ** = ಅಗ್ನಿದೇವರಿಗೆ, **ವಿಧಿಸುತ** = ಬ್ರಹ್ಮದೇವರ ಪುತ್ರನಾದ, **ಮರೀಚ್ಯಾದಿಗಳು** = ಮರೀಚಿ ಮೊದಲಾಗಿ ಸಪ್ತರ್ಷಿಗಳು, **ವೈವಸ್ವತನು** = ವೈವಸ್ವತ ಮನುವು, **ವಿಶ್ವಾಮಿತ್ರರಿಗೆ** = ವಿಶ್ವಾಮಿತ್ರ ಋಷಿ–ಈ ಒಂಭತ್ತು ಮಂದಿ, **ದ್ವಿಗುಣಾಧಮರು** = ಎರಡು ವಿಜಾತಿಗಳಿಂದ ನ್ಯೂನರು, **ವ್ರತಿವರ** = ವ್ರತಶ್ರೇಷ್ಠನಾದ, **ಜಗನ್ಮಿತ್ರ** = ಜಗತ್ತಿಗೇ ಮಿತ್ರನಾದ ಮಿತ್ರನಾಮಕ ಸೂರ್ಯನು, **ವರನಿರಋತಿ** = ಶ್ರೇಷ್ಠನಾದ ನಿರಋತಿಯೂ, **ಪ್ರಾವಹೀ** = ಪ್ರವಹವಾಯುವಿನ ಪತ್ನಿಪ್ರಾವಹೀ ದೇವಿಯೂ, **ತಾರರಿಗೆ** = ಸುರಗುರು ಪತ್ನಿ ತಾರಾದೇವಿ:- ಈ ನಾಲ್ಕು ಮಂದಿಗಳೂ, **ಕಿಂಚಿತ್ ಗುಣಾಧಮರು** = ಮರೀಚ್ಯಾದಿಗಳಿಗಿಂತ ಕಿಂಚಿತ್ ನ್ಯೂನರು, **ಧನಪ** = ಧನಾಧಿಪತಿಯಾದ ಕುಬೇರ, **ವಿಷಕ್ಸೇನ** = ವಾಯುಪುತ್ರನಾದ ವಿಷಕ್ಸೇನ–ಇವರು ಮಿತ್ರಾದಿ ನಾಲ್ಕು ಮಂದಿಗಿಂತ, **ಕಿಂಚಿತ್ ಗುಣಾಧಮರೆನಿಸುವರು** = ವಿಜಾತಿ ಗುಣಗಳಿಂದ ಕಿಂಚಿತ್ ನ್ಯೂನರೆನಿಸುವರು. ॥೧೧॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ

ಸಪ್ತ ಋಷಿಗಳೇ ಮೊದಲಾದ ಹದಿನೈದು ಮಂದಿಯ ತಾರತಮ್ಯ ಹೇಳತಾರೆ. ೧. ಮರೀಚಿ, ೨. ಅತ್ರಿ, ೩. ಅಂಗಿರಸ, ೪. ಪುಲಸ್ತ್ಯ, ೫. ಪುಲಹ, ೬. ಕ್ರತು, ೭. ವಸಿಷ್ಠ, ೮. ವಿಶ್ವಾಮಿತ್ರ, ೯. ವೈವಸ್ವತಮನು, ೧೦. ಮಿತ್ರನಾಮಕ ಸೂರ್ಯ, ೧೧. ನಿರಋತಿ, ೧೨. ಪ್ರಾವಹೀ, ೧೩. ತಾರಾ, ೧೪. ಧನಪ, ೧೫. ವಿಷ್ವಕ್ಸೇನ.

ಅಗ್ನಿಗೆ ಬ್ರಹ್ಮದೇವರ ಪುತ್ರರಾದ ಮರೀಚ್ಯಾದಿ ಸಪ್ತಋಷಿಗಳು, ವೈವಸ್ವತಮನು, ವಿಶ್ವಾಮಿತ್ರಋಷಿ ಅಂತೂ ಒಂಭತ್ತು ಮಂದಿ ಎರಡು ವಿಜಾತೀಗುಣದಿಂದ ಕಡಿಮೆ, ಎರಡು ಸಜಾತಿಗುಣದಿಂದ ಸಮರು. ಅಗ್ನ್ಯಾದಿಗಳು ಮರಿಚ್ಯಾದಿಗಳಿಗಿಂತಲೂ ಎರಡು ವಿಜಾತಿಗುಣದಿಂದುತ್ತಮರು. ಈ ಮರೀಚ್ಯಾದಿಗಳಿಗೆ ಪ್ರತಿಶ್ರೇಷ್ಠನಾದ ಜಗತ್ತಿಗೇ ಮಿತ್ರನಾದ ಮಿತ್ರನಾಮಕ ಸೂರ್ಯ, ಉತ್ತಮನಾದ ನಿರಋತಿ, ಪ್ರವಹವಾಯುಪತ್ನಿ ಪ್ರಾವಹೀ, ಗುರುಪತ್ನೀ ತಾರಾದೇವಿ-ಅಂತೂ ಈ ನಾಲ್ಕು ಮಂದಿಗೆ—ಮ್ಯಾಲೆ ಗುಣವಿಭಾಗ ಪಾದಾರ್ಧ ಅಂತ ಹೇಳಿ, ನಂತರ ಕಿಂಚಿದ್ಗುಣಾಧಮರೆಂತ ಹೇಳೋಣದರಿಂದ ಪಾದಾರ್ಧವಾದ ಅರಿಕಾಲುಗುಣದೊಳಗೆ ಅರ್ಧ ಸಾಂಕೇತವಾದ ಪಾದದಲ್ಲಿ ನಾಲ್ಕನೇ ಅಂಶವಾದ ವೀಸಗುಣ- ಎಂತ ತಾತ್ಪರ್ಯ- ಅತ ಏವ ವೀಸಗುಣಾಧಮರೆಂತ ತಿಳಿಯಬೇಕು. ವಿಜಾತಿಗುಣದಿಂದ ಅಧಮರು, ಸಜಾತಿಗುಣದಿಂದ ಸಮರು. ಮರೀಚ್ಯಾದಿಗಳು ಮಿತ್ರಾದಿಗಳಿಗಿಂತ ವಿಜಾತಿ ವೀಸಗುಣದಿಂದ ಅಧಿಕರು. ಮಿತ್ರಾದಿ ನಾಲ್ಕು ಮಂದಿಗೆ ಕುಬೇರ, ವಿಷ್ವಕ್ಸೇನ ಗಣೇಶ-ಈ ಮೂರು ಮಂದಿ ಕಿಂಚಿತ್ ವಿಜಾತೀಗುಣದಿಂದ ಅಧಮರೆಂತ ಕರಸತಾರೆ. ಸಜಾತಿಗುಣದಿಂದ ಸಮರು. ಮಿತ್ರಾದಿಗಳು ಕುಬೇರಾದಿಗಳಿಗಿಂತಲೂ ವಿಜಾತೀ ವೀಸಗುಣದಿಂದ ಅಧಿಕರೆಂತ ತಾತ್ಪರ್ಯ. ॥೧೧॥

**ವಿಶೇಷಾರ್ಥ :–** ಮಿತ್ರನಾಮಕ ಸೂರ್ಯ ಆರಂಭಮಾಡಿ ತಾರಾವರಿಗೂ ಸಮಾನರು. ಕುಬೇರ ವಿಷ್ವಕ್ಸೇನನ ಸಂಗಡ ಗಣೇಶನನ್ನು ಕೂಡ ಸೇರಿಸಿಕೋಬೇಕು. ಇವರು ಮೂವರೂ ಸಮರು. ತಾರಾದಿ ನಾಲ್ಕು ಮಂದಿಗೆ ಕಿಂಚಿದ್ಗುಣಾಧಮರು. ಗಣೇಶಾದಿಗಳಿಗೆ ಸಮಾನರಾದವರ ಮುಂದಿನ ಶ್ಲೋಕದಿಂದ ಹೇಳತಾರೆ. ಧನಪ ವಿಷ್ವಕ್ಸೇನನ ಕೂಡ ಗಣೇಶನನ್ನು ಸೇರಿಸಿಕೋಬೇಕು–ಎಂದು ಮುಂದಿನ ಶ್ಲೋಕದಲ್ಲಿ ಉಕ್ತವಾಗುತ್ತದೆ. ॥೧೧॥

೨. ಭಾವಪ್ರಕಾಶಿಕೆ: –

ಬ್ರಹ್ಮದೇವರ ಮಕ್ಕಳಾದ ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಶಿಷ್ಠ- ಇವರೇಳು ಜನರು, ವೈವಸ್ವತಮನು ವಿಶ್ವಾಮಿತ್ರರು–ಅಂತು, ಈ ಒಂಭತ್ತು ಮಂದಿಗಳು ಅಗ್ನಿಯಕಿಂತಲೂ ಎರಡು ಗುಣಗಳಿಂದ ಕಮ್ಮಿಯೆನಿಸುವರು. ಮಿತ್ರನೆಂಬ ಸೂರ್ಯ, ದಿಕ್ಪಾಲಕನಾದ ನಿರಋುತಿ, ಪ್ರಾವಹಿ ಎಂಬ ವಾಯು, ಬೃಹಸ್ಪತ್ಯಾಚಾರ್ಯರ ಹೆಂಡತಿ ತಾರೆ ಇವರು. ನಾಲ್ವರು, ವಿಶ್ವಾಮಿತ್ರಾದಿಗಳಿಗಿಂತಲೂ ಸ್ವಲ್ಪ ಕಮ್ಮಿಯೆನಿಸುವರು. ಕುಬೇರ ಮತ್ತು ವಿಷ್ವಕ್ಸೇನ ಇವರಿಬ್ಬರೂ ತಾರೆ ಮೊದಲಾದವರಿಕಿಂತಲೂ ಸ್ವಲ್ಪ ಕಮ್ಮಿ ಎನಿಸುವರು. ॥೧೧॥

೩. ಭಾವದರ್ಪಣ :–

ಹುತವಹ- ಎಂದರೆ ಅಗ್ನಿ. ಈತಗೆ ಬ್ರಹ್ಮಪುತ್ರರು 1) ಅತ್ರಿ 2) ಅಂಗಿರು 3) ಪುಲಸ್ತ್ಯ 4) ಪುಲಹ 5) ಕ್ರತು 6) ವಶಿಷ್ಠ 7) ಇವರಲ್ಲದೆ ವಿಶ್ವಾಮಿತ್ರ 8) ವೈವಸ್ವತಮನು 9) ಈ ಒಂಭತ್ತು ಜನ ದ್ವಿಗುಣಾಧಮರೆಂದು ಹೇಳುತ್ತಾರೆ. ಹುತವಹೇತಿ. ತದುಕ್ತಂ ಕೌಸ್ತುಭೇ. "ಮರೀಚಿರತ್ರ್ಯಂಗಿರಸೋ ಪುಲಸ್ತ್ಯಃ ಪುಲಹಃ ಕ್ರತುಃ । ವಸಿಷ್ಟಶ್ಚೇತ್ಯ ಜಸುತಾ ವೈವಸ್ವತ ಮನಸ್ತಥಾ । ವಿಶ್ವಾಮಿತ್ರೋ ವಹ್ನಿನೀಚಾಃ ಮಿತ್ರಾತ್ಕಿಂಚಿದ್ಗುಣಾಧಿಕಾ" ಇತಿ । ವ್ರತವರ–ವಿಷ್ಣುವ್ರತ ಉಳ್ಳವರಲ್ಲಿ ಶ್ರೇಷ್ಠರು ಎಂಬರ್ಥ. ಜಗನ್ಮಿತ್ರನಾದಂಥಾ ಮಿತ್ರನಾಮಕ ಸೂರ್ಯ, ನಿಋುತಿ, ಪ್ರಾವಹಿ, ತಾರಾ–ಇವರಿಗೆ ಕುಬೇರ, ವಿಷ್ವಕ್ಸೇನ, ಗಣೇಶ-ಇವರು ಕಿಂಚಿದ್ಗುಣ ನೀಚರೆಂದು ಹೇಳುತ್ತಾರೆ. "ಪ್ರಾವಹೀ ನಿಋುತಿಸ್ತಾರಾ ಮಿತ್ರಾಗ್ನೇರ್ದ್ವಿಗುಣಾಧಮಾ"- ಇತ್ಯುಕ್ತೇಃ ॥೧೧॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

'ಹುತವಹ' ಇತಿ ॥ 'ಹುತವಹಃ ಅಗ್ನಿಃ ॥ ಮರೀಚ್ಯತ್ರ್ಯಂಗಿರಃ ಪುಲಸ್ತ್ಯ ಕ್ರತು ವಸಿಷ್ಠ ವೈವಸ್ವತ ವಿಶ್ವಾಮಿತ್ರಾಖ್ಯಾಃ ನವ ವಹ್ನೇಃ

ದ್ವಿಗುಣಾವರಾಃ ॥ ಇವರಿಗೆ ಕಿಂಚಿದವರಾಃ ಋಷಿ ಜಗನ್ಮಿತ್ರ ನಿಋತಿ ಪ್ರಾವಹಿ ತಾರಾಃ ಚತಸ್ರಃ ॥ (ವಹ್ನೇಃ ದ್ವಿಗುಣಾವರಾಃ ॥) (ಇವರಿಗೆ) ಕಿಂಚಿತ್ ನ್ಯೂನೌ ಧನಾಧಿಪ ವಿಘ್ನೇಶೌ ॥ ವಿಶ್ವಾಮಿತ್ರ ಮನ್ವೋಃ ಸಪ್ತ ಸಾಮ್ಯೇ–ವಿಶ್ವಾಮಿತ್ರಃ ಕಸೂನುವತ್ ॥ ವೈವಸ್ವತೋ ಮನುಶ್ಚೇತಿ– ಇತಿ **ಭಾಷ್ಯವತ್** ॥ "ವಿಶ್ವಾಮಿತ್ರಃ ಬ್ರಹ್ಮಪುತ್ರೈಃ ಸಮೋ । ಮುನಿಃ ಉದಾಹೃತಃ ॥ ನಿಋತಿಃ ಮಿತ್ರ ಸದೃಶಃ ॥ ಋಷಿ ಸಪ್ತಕಸ್ಯ ಮಿತ್ರೋತ್ತಮತ್ವೇ ಅಗ್ನೇಃ ಅಧಮ್ಯೇ ಮಿತ್ರ ತನ್ಮಧ್ಯೇ ಬ್ರಹ್ಮಪುತ್ರಕಾಃ ॥ಭೃಗುಃ ಅಗ್ನಿ ಸಮಃ ಇತ್ಯುಕ್ತ್ಯಾಗ್ನಿಃ ತತ್ಪದಾರ್ಥಃ ॥ ಬ್ರಹ್ಮಪುತ್ರಕಾಃ ಮರೀಚ್ಯಾದ್ಯಾಃ ಮಿತ್ರ ತನ್ಮಧ್ಯೇ ಮಿತ್ರಾಗ್ನ್ಯೋಃ ಮಧ್ಯೇ ಪರಸ್ಪರಂ ಸಮಾಃ ॥ ಮಿತ್ರೋತ್ತಮಾಃ ಅಗ್ನ್ಯವರಾಃ ಪರ್ಜನ್ಯಮಿತ್ರ ಶಿಖಿನಃ ॥ ದ್ವಿಗುಣಾ ಏವ ಇತ್ಯುಕ್ತೇಃ ॥ ದ್ವಿಗುಣಾ ಏವೇತಿ ಅಗ್ನೇಃ ದ್ವಿಗುಣಾಧಮಾಃ ॥ ಚತಸೃಣಾಂ ಸಾಮ್ಯೇ ನವಭ್ಯಃ ಕಿಂಚಿತ್ ಆಧಮ್ಯೇ ಅಗ್ನೇಃ (ದ್ವಿ) ಗುಣದ್ವಯಾಧಮ್ಯೇಚ- ಸಾರ ಸಂಗ್ರಹೇ "ಮರೀಚ್ಯಾದಿ ನವಭ್ಯಸ್ತು ಆದಿತ್ಯಃ ಮಿತ್ರನಾಮಕಃ ಪತ್ನೀ ಸುರ ಗುರೋಃ ತಾರಾ ನಿಋತಿಃ ಪ್ರಾವಹೀತಿ ಚ ॥ ಕಿಂಚಿದೂನಾಃ-" ಇತ್ಯನಂತರಂ ವಹ್ನೇಃ ದ್ವಿಗುಣತಃ ನೀಚಾಃ ಚತ್ವಾರೋನ್ಯೋನ್ಯತಃ ಸಮಾಃ ॥ ಇತಿ ॥ ಅಥಾಗ್ನಿತಃ ಮರೀಚ್ಯತ್ರ್ಯಂಗಿರಸೌ (ಸಃ) ಪುಲಸ್ತ್ಯಃ ಪುಲಃ ಕ್ರತುಃ ॥ ವಿಶ್ವಾಮಿತ್ರ ವಸಿಷ್ಠೌ ತೌ ವೈವಸ್ವತಮನುಃ ತಥಾ ॥ ನ್ಯೂನಾಃ ನವೇಮೇ ಮಿತ್ರಾತ್ತು ಕಿಂಚಿದೇವ ಗುಣಾಧಿಕಾಃ ॥ ಮಿತ್ರ ತಾರಾ ನಿಋತಯಃ ಪ್ರಾವಹೀಚಾಗ್ನಿತೋರ್ಧಕಾಃ ॥ ಇತಿ. ॥೧೧॥

## ಕನ್ನಡಾರ್ಥ

ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಶಿಷ್ಠ, ವೈವಸ್ವತಮನು, ವಿಶ್ವಾಮಿತ್ರ,– ಇವರು ಅಗ್ನಿಗೆ ಎರಡು ಗುಣಗಳಿಂದ ಕಡಿಮೆಯುವರು. ಇವರಿಗೆ ಮಿತ್ರ (ನಾಮಕ ಆದಿತ್ಯ), ನಿರಋತಿ, ಪ್ರಾವಹಿ, ತಾರಾ–ಇವರು ಸ್ವಲ್ಪ ಕಡಿಮೆಯುವರು. ಈ ನಾಲ್ವರಿಗೆ ಕುಬೇರ ಹಾಗೂ ಗಣಪತಿಗಳು (ವಿಘ್ನೇಶ) ಸ್ವಲ್ಪ ಕಡಿಮೆಯುವರು.

ವಿಶ್ವಾಮಿತ್ರ ಹಾಗೂ ವೈವಸ್ವತಮನು-ಇವರಲ್ಲಿ ಪರಸ್ಪರ ಸಾಮ್ಯ ವಿರುವುದರ ಬಗ್ಗೆ "ವಿಶ್ವಾಮಿತ್ರನು ಬ್ರಹ್ಮಪುತ್ರ ವಸಿಷ್ಠನಿಗೆ ಸಮನು. ಅದರಂತೆ ವೈವಸ್ವತಮನುವು."–ಎಂದು ಭಾಷ್ಯವಚನ ವಿರುತ್ತದೆ. "ವಿಶ್ವಾಮಿತ್ರನು ಬ್ರಹ್ಮಪುತ್ರರಾದ ವಸಿಷ್ಠಾದಿಗಳಿಗೆ ಸಮಾನನಾದ ಮುನಿಯೆಂದು ಪ್ರಸಿದ್ಧನಾಗಿರುತ್ತಾನೆ. ನಿಋತಿಯೂ ಮಿತ್ರನಿಗೆ ಸಮಾನನು. ಸಪ್ತರ್ಷಿಗಳು ಮಿತ್ರನಿಗಿಂತ ಅಧಿಕರು. ಅಗ್ನಿಗಿಂತ ಕಡಿಮೆಯವರು. ಈ ವಿಷಯ ದಲ್ಲಿ–"ತನ್ಮಧ್ಯೇ ಬ್ರಹ್ಮಪುತ್ರಕಾಃ". "ಭೃಗುರಗ್ನಿಸಮಃ" –ಎಂಬ ವಚನ ಗಳು ಆಧಾರವಾಗಿರುತ್ತವೆ.

ಬ್ರಹ್ಮಪುತ್ರರಾದ ಮರೀಚಿ ಮುಂತಾದವರು ಮಿತ್ರ ಹಾಗೂ ಅಗ್ನಿ ಇವರ ಮಧ್ಯದಲ್ಲಿ ನಡುವೆ [ಮೇಲೆ ಅಗ್ನಿ ಕೆಳಗೆ ಮಿತ್ರ ಹೀಗೆ] ಇದ್ದು, ಪರಸ್ಪರ ಸಮಾನರಾಗಿರುತ್ತಾರೆ. ಅಂದರೆ, ಅಗ್ನಿಗಿಂತ ಕಡಿಮೆಯವರೂ ಮಿತ್ರನಿಗಿಂತ ಹೆಚ್ಚಿನವರೂ ಆಗಿರುತ್ತಾರೆ."–ಎಂದು ಈ ವಾಕ್ಯಗಳ ಅರ್ಥ.

ಮಿತ್ರಾದಿ ನಾಲ್ವರು ಅಗ್ನಿಗಿಂತ ೪ ಗುಣದಿಂದ ಕಡಿಮೆಯವರೂ, ಪರಸ್ಪರ ಎಂಬ ವಿಷಯದಲ್ಲಿ "ಮರೀಚಿ ಮುಂತಾದ ಒಂಭತ್ತು ಜನರಿಂದ ಆದಿತ್ಯನಾಮಕ ಮಿತ್ರ, ಸುರಗುರುಪತ್ನಿ ತಾರಾ, ನಿಋತಿ ಹಾಗೂ ಪ್ರಾವಹಿ ಇವರು ಸ್ವಲ್ಪ ಕಡಿಮೆಯವರು."–ಎಂದು ಹೇಳಿ, "ಅಗ್ನಿಗಿಂತ ಈ ಮರೀಚ್ಯಾದಿಗಳು ಎರಡು ಗುಣ ಕಡಿಮೆಯವರು. ಅವರಿಗಿಂತ ಮಿತ್ರ ಮುಂತಾದವರು ಕಿಂಚಿತ್ ನ್ಯೂನರು." ಎಂದೂ ಹೇಳಿರುತ್ತಾರೆ."– ಅಲ್ಲದೇ – "ಅಗ್ನಿಗಿಂತ ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ವಿಶ್ವಾಮಿತ್ರ, ವೈವಸ್ವತ ಮನು–ಇವರುಗಳು ಸ್ವಲ್ಪದರಲ್ಲಿಯೇ ಮಿತ್ರನಿಂದ ಅಧಿಕರು. ಮಿತ್ರ ಮುಂತಾದವರು ಅಗ್ನಿಗಿಂತ ಅರ್ಧ ಕಡಿಮೆಯವರು"- ಎಂದೂ ತಾರತಮ್ಯ ಸಂಗ್ರಹದಲ್ಲಿ ಹೇಳಲಾಗಿರುತ್ತದೆ. ॥೧೧॥

೫. ಶ್ರೀಗುರುಹೃದಯ ಪ್ರಕಾಶಿಕೆ :-

ಹುತವಹವೆಂಬ ಅಗ್ನಿಗಿಂತ ವಿಶ್ವಾಮಿತ್ರರೂ ಮತ್ತು ಬ್ರಹ್ಮಪುತ್ರರಾದ ಮರೀಚಿ ಅತ್ರಿ ವಸಿಷ್ಠ ಪುಲಹ ಪುಲಸ್ತ್ಯ ಅಂಗಿರ ಕ್ರತು- ಇವರೇಳು ಜನ ಸಹ ಎರಡು ಗುಣದಿಂದ ಕಡಿಮೆ. ಆ ವಿಶ್ವಾಮಿತ್ರಾದಿಗಳಿಗಿಂತ ಕಿಂಚಿತುಗುಣ ಕಡಿಮೆ ವೈವಸ್ವತಮನುವು. ಜಗದ್ರಕ್ಷಕ ಮಿತ್ರನಾಮಕ ಸೂರ್ಯ, ಉತ್ತಮನಾದ ನಿರಋತಿ ಎಂಬ ದಿಕ್ಪತಿ, ಪ್ರವಹವಾಯುವಿನ ಪತ್ನಿ ಪ್ರಾವಹೀದೇವಿ, ಬೃಹಸ್ಪತಿಪತ್ನೀ ತಾರಾದೇವಿ ಸಹ ಐದು ಜನರು. ಈ ಐದು ಜನಕ್ಕಿಂತ ವಿಷ್ವಕ್ಸೇನನೆಂಬ ದೇವರದ್ವಾರಪಾಲಕಾಧಿಪತಿ, ಧನಪ ಎಂಬ ಕುಬೇರ, ಗಣನಾಥ ಸಹ ಮೂರು ಮಂದಿಯೂ ಕಿಂಚಿದ್ಗುಣ ಕಡಿಮೆ. ॥೧೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಯಜ್ಞ ಯಾಗಾದಿಗಳಲ್ಲಿ ಕೊಡುವ ಹವಿಸ್ಸನ್ನು ಆಯಾಯಾ ದೇವತೆಗಳಿಗೆ ಒಯ್ದು ಕೊಡುವುದರಿಂದ, ಅಗ್ನಿದೇವರಿಗೆ- **ಹುತವಹ** ಎಂದು ಹೆಸರು [ಹುತ-ಹವಿಸ್ಸು-ವಹ-ವಾಹಕ.]

ಅಂತಹ ಅಗ್ನಿಗೆ, ಬ್ರಹ್ಮದೇವರ ಮಕ್ಕಳಾದ, ೧. ಮರೀಚಿ, ೨. ಅತ್ರಿ, ೩. ಅಂಗೀರಸ ೪. ಪುಲಸ್ತ್ಯ, ೫. ಪುಲಹ, ೬. ಕ್ರತು ಮತ್ತು ೭. ವಸಿಷ್ಠ-ಎಂಬ ಸಪ್ತರ್ಷಿಗಳು ಎರಡು ವಿಜಾತೀಯ ಗುಣಗಳಿಂದ ಅಧಮರು. **[ದ್ವಿಗುಣಾಧಮರು]**

ಹಾಗೆಯೇ, ವೈವಸ್ವತಮನು, ಮತ್ತು ವಿಶ್ವಾಮಿತ್ರ ಮಹರ್ಷಿ- ಇವರೂ ಸಹ ಅಗ್ನಿಗಿಂತ ಎರಡು ಗುಣಗಳಿಂದ ನ್ಯೂನರು. ಮೇಲ್ಕಂಡ ಒಂಭತ್ತು ಮಂದಿಗಿಂತ ಅಗ್ನಿಯು ಎರಡು ವಿಜಾತೀಯ ಗುಣಗಳಿಂಧ ಶ್ರೇಷ್ಠನು.

ವ್ರತಶ್ರೇಷ್ಠನೂ, – ಜಗನ್ಮಿತ್ರನೂ ಆದ ಮಿತ್ರನಾಮಕಸೂರ್ಯ, [ದ್ವಾದಶಾರಾದಿತ್ಯದಲ್ಲಿ ಒಬ್ಬ] ನೈರುತ್ಯ ದಿಕ್ಕಿನ ದಿಕ್ಪತಿಯಾದ ಶ್ರೇಷ್ಠನಾದ ನಿರಋತಿಯು, ಪ್ರವಹವಾಯುವಿನ ಪತ್ನೀ ಪ್ರಾವಹೀ ಮತ್ತು ಸುರಗುರುಗಳಾದ ಬೃಹಸ್ಪತ್ಯಾಚಾರ್ಯರ ಪತ್ನಿ ತಾರಾದೇವಿ–ಈ ನಾಲ್ಕು ಮಂದಿ ಮರೀಚಾದ್ಯಾದಿ ಒಂಭತ್ತು ಮಂದಿಗಿಂತ ಅಧಮರು.

ನಿರಋತಿಯು ದಿಕ್ಪಾಲಕನಾದ ದೇವತಿಯು. ಅವನು ಪ್ರಹ್ಲಾದ, ವಿಭೀಷಣ ಇವರಂತೆ ದೈತ್ಯಯೋನಿಯಲ್ಲಿ ಜಾತನಾಗಿದ್ದರೂ, ದೇವತಾ ವರ್ಗಕ್ಕೆ ಸೇರಿದವನು.

ಮೇಲಿನ ನಾಲ್ಕೂ ಮಂದಿ ಮರೀಚ್ಯಾದಿಗಳಿಗಿಂತ ಕಿಂಚಿತ್‌ಅಧಮರೆಂದರೆ– ಪಾದಾರ್ಧವಾದ ಅರೆ ಕಾಲುಗುಣದೊಳಗೆ ಅರ್ಧ, ಸಾಂಕೇತವಾದ ನಾಲ್ಕನೆಯ ಒಂದಶವಾದ "ವೀಸಗುಣ"–ಎಂದು ತಾತ್ಪರ್ಯ. ಅಂದರೆ, ಪಾದ = ಕಾಲುಭಾಗ. ಅದರ ಅರ್ಧ ಅಂದರೆ ೧/೪ × ೧/೨ = ೧/೮ ಭಾಗ = ಎಂಟನೆಯ ಒಂದಂಶ ಇದಕ್ಕೆ ಪಾದಾರ್ಧ, ಅಥವಾ ವೀಸಗುಣ ಎಂದು ಹೆಸರು.

ಧನಾಧಿಪತಿಯಾದ ಕುಬೇರನು, ವಾಯುಪುತ್ರನೂ, ಶ್ರೀಹರಿಯ ದ್ವಾರಪಾಲಕಾಧಿಪತಿಯೂ ಆದ ವಿಷಕ್ಸೇನ [ಇವರೊಂದಿಗೆ ಆದಿಪೂಜಿತನಾದ ಗಣಪತಿಯನ್ನೂ ಸೇರಿಸಬೇಕು.]– ಇವರು ಮಿತ್ರಾದಿ ನಾಲ್ಕು ಮಂದಿಗಿಂತ ಕಿಂಚಿತ್ ಅಧಮರು.

**ತಾರತಮ್ಯಕ್ರಮ :–**

೧. ಅಗ್ನಿಗಿಂತ, ಮರೀಚ್ಯಾದಿ ಸಪ್ತರ್ಷಿಗಳು (ಬ್ರಹ್ಮ ಪುತ್ರರು), ವೈವಸ್ವತಮನು, ಮತ್ತು ವಿಶ್ವಾಮಿತ್ರ ಮುನಿ–ಈ ಒಂಭತ್ತು ಮಂದಿ ಎರಡು ಗುಣಗಳಿಂದ ನ್ಯೂನರು,

೨. ಮಿತ್ರನಾಮಕ ಸೂರ್ಯ–ನಿರಋತಿ–ಪ್ರಾವಹೀ ಮತ್ತು ತಾರಾ ದೇವಿ–ಈ ನಾಲ್ವರು ಮರೀಚ್ಯಾದಿಗಳಿಗಿಂತ ಕಿಂಚಿತ್ (ಪಾದಾರ್ಧ) ಅಧಮರು.

೩. ಕುಬೇರ, ವಿಷಕ್ಸೇನ (ಮತ್ತು ಗಣಪತೀ)–ಇವರು ಮಿತ್ರಾದಿಗಳಿಗಿಂತ ಕಿಂಚಿಧಧಮರು. ॥೧೧॥

## ಪದ್ಯ-೧೨

**ಮೂಲ :–**

**ಧನಪ ವಿಷ್ವಕ್ಸೇನ ಗೌರೀ ।**
**ತನಯರಿಗೆ ಉಕ್ತೇತರರು ಸಮ ।**
**ರೆನಿಸುವರು ಎಂಭತ್ತೈದು ಜನ ಶೇಷಶತರೆಂದು ॥**
**ದಿನಪರಾರೇಳಧಿಕ ನಾಲ್ಕ ।**
**ತ್ತು ನಿಲರೇಳ್ವಸುರುದ್ರರೀರೈ ।**
**ದನಿತು ವಿಶ್ವದೇವ ಋಭುವಶ್ವಿನಿ ದ್ಯಾವಾಪೃಥಿವಿ ॥ ॥೧೨॥**

**ಅತತರಣಿಕೆ :–**

ಕುಬೇರಾದಿಗಳಿಗೆ ಸಮಾರನಾದ ೧೮ ನೆಯ ಕಕ್ಷಾಪನ್ನರ ತಾರತಮ್ಯವನ್ನು ಹೇಳುತ್ತಾರೆ. ॥೧೨॥

**ಪ್ರತಿಪದಾರ್ಥ :-**

**ಉಕ್ತ** = ಹಿಂದಿನ ೧೧ ನೆಯ ಪದ್ಯದಲ್ಲಿ ಹೇಳಿದ, **ಧನಪ** = ಕುಬೇರ, **ವಿಷ್ವಕ್ಸೇನ** = ವಾಯುಪುತ್ರ ವಿಷ್ವಕ್ಸೇನ, **ಗೌರೀತನಯರಿಗೆ** = ಪಾರ್ವತೀಪುತ್ರನಾದ ವಿಘ್ನೇಶ್ವರ,- ಈ ಮೂರು ಮಂದಿಗೆ, **ಇತರರು** = ಇವರಿಗೆ ಇತರರಾದ (ಅನ್ಯರಾದವರು), **ದಿನಪರಾರು** = ಆರು ಮಂದಿ ಆದಿತ್ಯರು, **ಏಳಧಿಕ ನಾಲ್ವತ್ತು** =೪೭ ಮಂದಿ (ಏಳು+ ನಾಲ್ವತ್ತು = ೪೭), **ಅನಿಲರು** ಮರುತರು (ಮರುದ್ಗಣ), **ಏಳ್ವಸು** =ಏಳು ಮಂದಿ ವಸುಗಳು, **ಈರೈದು** = ೧೦ ಸಂಖ್ಯಾಕವಾದ (೨ × ೫ = ೧೦), **ರುದ್ರರು** = ರುದ್ರಗಣ, **ಅನಿತು** = ಅಷ್ಟೇ ಸಂಖ್ಯೆಯು ಅಂದರೆ ೧೦ ಸಂಖ್ಯಾಕರವಾದ, **ವಿಶ್ವೇದೇವ** = ವಿಶ್ವದೇವತೆಗಳು, **ಋಭು** =ಋಭು ಎಂಬ ದೇವತೆ, **ಅಶ್ವಿನೀ**=ಅಶ್ವಿನಿ ದೇವತೆಗಳಿಬ್ಬರು, **ದ್ಯಾವಾಪೃಥಿವೀ** = ದ್ಯಾವಾ ಮತ್ತು ಪೃಥಿವೀ-ಎಂಬ ಇಬ್ಬರು, **ಎಂಭತ್ತೈದು ಜನ** = ಒಟ್ಟು ೮೫ ಮಂದಿ (ಆದಿತ್ಯರು-೬+ಮರುದ್ಗಣ -೪೭ + ವಸುಗಳು-೭ + ರುದ್ರಗಣ-೧೦ + ವಿಶ್ವೇದೇವತೆಗಳು— ೧೦ + ಋಭು-೧ + ಅಶ್ವಿನೀ-೨ + ದ್ಯಾವಾ ಪೃಥಿವೀ-೨ =೮೫), **ಶೇಷ ಶತರೆಂದು** = ಶೇಷಶತಸ್ಥರೆಂದು -ಇಷ್ಟು ಮಂದಿ ೧೮ ನೆಯ ಕಕ್ಷಾಪನ್ನರು. ॥೧೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ :-

ಕುಬೇರಾದಿಗಳಿಗೆ ಸಮಾನರಾದ ೧೮ ನೇ ಕಕ್ಷಾದವರ ತಾರತಮ್ಯ ಹೇಳುತಾರೆ.

ಹನ್ನೊಂದನೇ ಶ್ಲೋಕದಲ್ಲಿ ಉಕ್ತರಾದ ಕುಬೇರ (ವಿಷ್ವಕ್ಸೇನ. ವಾಯು ಪುತ್ರ ವಿಷ್ವಕ್ಸೇನ,)-ವಿಘ್ನೇಶ್ವರ ಈ ಮೂರು ಜನಕ್ಕೆ ಈ ಮೂರು ಮಂದಿ

ಅಲ್ಲದ ಇತರರಾದವರು ಆರು ಮಂದಿ ಆದಿತ್ಯರು, ಮರುತರು ನಲವತ್ತೇಳು ಮಂದಿ, ಏಳು ಮಂದಿ ವಸುಗಳು, ಹತ್ತು ಸಂಖ್ಯಾಕವಾದ ರುದ್ರರು, ರುದ್ರರ ಸಂಖ್ಯಾ ಎಷ್ಟೋ, ಅಷ್ಟೆ ಸಂಖ್ಯಾ ವಿಶ್ವೇದೇವತೆಗಳು, ಹತ್ತು ಮಂದಿ; ಋಭು ಒಬ್ಬ, ಅಶ್ವಿನೀದೇವತೆಗಳು ಇಬ್ಬರು; ದ್ಯಾವಾ, ಪೃಥಿವೀ ಎರಡು; ಎಂಭತ್ತೈದು ಜನ ಎಂದರೆ, ಮೇಲಿನ ಸಂಖ್ಯಾ ಎಂಭತ್ತೇಳರ ಒಳಗೆ ಅವರ ಕಕ್ಷದವರು (ಕಡಿಮೆ ಕಕ್ಷದವರು) ಒಬ್ಬರು, ದ್ಯಾವಾ ಹೊರ್ತು ಪೃಥಿವೀದೇವಿ ಅವರ ಕಕ್ಷದವರು; ಆದಿತ್ಯರೊಳಗೆ ಪರ್ಜನ್ಯನಾಮಕ ಸೂರ್ಯ ಅವರ ಕಕ್ಷದವ. ಈ ಇಬ್ಬರಾದ ಪೃಥಿವೀ ಪರ್ಜನ್ಯ ಹೋಗತಾ ಉಳಿದ ಎಂಭತ್ತೈದು ಮಂದಿ ಒಬ್ಬರಿಗೊಬ್ಬರು ಸಮಾನರೆನಿಸಿಕೊಳ್ಳುವರು. ಈ ಇಬ್ಬರೂ (ಪೃಥಿವೀ, ಪರ್ಜನ್ಯ) ಸಮರಲ್ಲ. ಈ ಎಂಭತ್ತೈದು ಜನ ರಾರೆಂದರೆ, ನೂರು ಮಂದಿಯೊಳಗೆ ಶೇಷ ಉಳದವರೆಂದು ಕರಸತಾರೆ. ವರ್ತಮಾನ ಹದಿನೆಂಟನೇ ಕಕ್ಷದವರು ದಾರೆಂದರೆ, ಮೇಲೆ ಹೇಳಿದ ಎಂಭತ್ತೈದು ಮಂದಿ ಅವರೇ ೧೮ ನೇ ಕಕ್ಷದವರು. ಎಲ್ಲರೂ ಸಮಾನರೆಂದು ಹೇಳೋ ನಿಮಿತ್ತ ಪ್ರವರ್ತಿಸಿದ ಕ್ರಮ ಇಲ್ಲಿಗೆ ಮುಗಿಯಿತು. ಇನ್ನೂ ಶೇಷ ದಾವುದು, ಶತ ದಾವುದೆಂದರೆ, ಅದರನ್ನ ಹೇಳತೇವೆ. ಇದರ ಕ್ರಮ ಬ್ಯಾರೆ, ಇದು ಎರಡನೇ ಪ್ರಕಾರ ವಿಭಾಗ.

ನೂರು ಮಂದಿ ಸೋಮಪಾನಾರ್ಹರು. 18 ನೇ ಕಕ್ಷದಲ್ಲಿ ಕೆಲವರು ತದನ್ಯ ಉತ್ತಮ ಕಕ್ಷದಲ್ಲಿ ಸೇರಿದ ಕೆಲವರು, 18 ನೇ ಕಕ್ಷಕ್ಕೆ ಅವರ ಕಕ್ಷದಲ್ಲಿ ಸೇರಿದವರು ಕೆಲವರು, ಅಂತೂ ಸೇರಿ ನೂರುಮಂದಿ ಸೋಮಪಾನಾರ್ಹರು. ಅದರಲ್ಲಿ 18 ನೇ ಕಕ್ಷದವರೇ ಬಹಳ ತದನ್ಯ ಉತ್ತಮ ಕಕ್ಷದವರು, ಅವರ ಕಕ್ಷದವರು ಬಹಳ ಸ್ವಲ್ಪವಾದ್ದರಿಂದ ಝಡಿತಿ ಬೋಧಾರ್ಥವಾಗಿ 18 ನೇ ಕಕ್ಷದಲ್ಲೇ ನೂರು ಮಂದಿ ಹೇಳಿ, ಅದರೊಳಗೆ ಉತ್ತಮ ಕಕ್ಷದವರ, ಅವರ ಕಕ್ಷದವರ ವ್ಯಾವರ್ತನ ಮಾಡತಾರೆ. ಅದರ ವಿವರ-

| 19ನೇ ಕಕ್ಷದವರು | ಉತ್ತಮ ಕಕ್ಷದವರು | ಅಧಮ ಕಕ್ಷದವರು | ಒಟ್ಟು ಸಂಖ್ಯೆ |
|---|---|---|---|
| 5 ಆದಿತ್ಯರು. | 6 ಆದಿತ್ಯರು. | 1 ಪರ್ಜನ್ಯ ನಾಮಕ ಸೂರ್ಯ | 12. |
| 47 ಮರುತ್ತರು | 1 ಪ್ರವಹವಾಯು. 1 ಪ್ರಧಾನವಾಯು ದೇವರು 1 ಆಹಂಕಾರಿಕ ಪ್ರಾಣ | ................ | 50. |
| 7 ವಸುಗಳು | 1 ಅಗ್ನಿ | ................ | 8. |
| 10 ರುದ್ರರು | 1 ಕೈಲಾಸಾಧಿಪತಿ ರುದ್ರ | ................ | 11. |
| 10 ವಿಶ್ವೇದೇವತೆಗಳು | ................ | ................ | 10. |
| 1 ಋಭು | ................ | ................ | 1. |
| 2 ಅಶ್ವಿನೀದೇವತೆಗಳು | ................ | ................ | 2. |
| ................ | 1 ದ್ಯಾವಾ ಎಂದರೆ ದ್ಯುಲೋಕಾಭಿಮಾನಿ ಭಾರಥೀ | 1 ಪೃಥಿವೀ | 2. |
| ................ | 2 ಪಿತೃಗಳು(ಯಮ, ಸೋಮ) | ಕವ್ಯಹಪಿತೃ 18ನೇ ಕಕ್ಷದಲ್ಲಿ ಸಪ್ತ ಪಿತೃಗಳಲ್ಲಿ ಸೇರಿದ್ದಾನೆ, | 2. |
| ................ | 1 ಬೃಹಸ್ಪತಿ | ................ | 1. |
| ಅಂತು 82 ಮಂದಿ. | 15 ಮಂದಿ. | 3 ಮಂದಿ. | ಅಂತು 100 ಮಂದಿ. |

ಅಂತೂ, ಈ ನೂರು ಮಂದಿ ಸೋಮಪಾನಾರ್ಹರು. ಹದಿನೆಂಟನೇ ಕಕ್ಷದಲ್ಲಿ ನೂರುಮಂದಿ ಹೇಳಿ ಅದರೊಳಗೆ ಉತ್ತಮ ಕಕ್ಷದವರು. ಅವರ ಕಕ್ಷದವರ ವ್ಯಾವರ್ತನ ಮಾಡತಾರೆ. ಅದರ ವಿವರ ರ್ಝುಡಿತಿ ರೀತ್ಯಾ ಹೇಳ ಲ್ಪಟ್ಟಿದೆ. ಇವರಲ್ಲಿ ಶೇಷಶತರೆಂದರೆ, ಶತ ಎಂದರೆ ನೂರು ಮಂದಿಯೊಳಗೆ, ಶೇಷ–ಉತ್ತಮ ಕಕ್ಷದವರು 15 ಮಂದಿ ಹೋಗತಾ, ಉಳಿದವರು 85 ಜನ ಎಂತ ತಾತ್ಪರ್ಯ. ಮತ್ತು ಶೇಷಶಬ್ದ ಆವರ್ತನವು. 85 ಜನದೊಳಗೆ ಅವರ ಕಕ್ಷದವರು 3 ಮಂದಿ ಹೋಗತಾ ಉಳದವರು 82 ಜನ ಎಂತ ತಾತ್ಪರ್ಯ. ಈ 82 ಮಂದಿ 18 ನೇ ಕಕ್ಷದವರೆಂದು ತಿಳಿಯಬೇಕೆಂದು ತಾತ್ಪರ್ಯ.

**ವಿಶೇಷಾರ್ಥ :–** ಮೇಲೆ ಹೇಳಿದ 18ನೇ ಕಕ್ಷದ ಐದುಮಂದಿ **ಸೂರ್ಯ**ರ ಹೆಸರುಗಳು—

1. ಉರುಕ್ರಮದೇವರು, 2. ಪುರಂದರನೆಂಬ ಇಂದ್ರ, 3. ಮಿತ್ರನಾಮಕ ಸೂರ್ಯ, 4. ವರುಣನಾಮಕ ಸೂರ್ಯ. 5. ವರುಣನಾಮಕ ಸೂರ್ಯ.

ಉಳಿದ ಆರುಮಂದಿ **ಸೂರ್ಯ**ರ ಹೆಸರುಗಳು—

1. ಅರ್ಯಮನಾಮಕ ಸೂರ್ಯ, 2. ತ್ವಷ್ಟೃ ನಾಮಕ ಸೂರ್ಯ, 3. ಭಗನಾಮಕ ಸೂರ್ಯ, 4. ಪೂಷಾನಾಮಕ ಸೂರ್ಯ, 5. ಸವಿತೃನಾಮಕ ಸೂರ್ಯ, ಮತ್ತು 6. ಧಾತೃನಾಮಕ ಸೂರ್ಯ.

ನಲವತ್ತೇಳು ಮಂದಿ **ಮರುತ್ತಗಳ** ಹೆಸರುಗಳು—

| | | | |
|---|---|---|---|
| 1. ಪ್ರಾಣಃ | 13. ಉದ್ವಹಃ | 25. ಶುಚಿಃ | 37. ಸಂಹುತಃ |
| 2. ಅಪಾನಃ | 14. ಸಂವಹಃ | 26. ಸ್ವೇದಃ | 38. ಸಿಂಧುಃ |
| 3. ವ್ಯಾನಃ | 15. ಸಂಯುವಃ | 27. ಜಿತಃ | 39. ರಕ್ತನಾಮಾಃ |
| 4. ಉದಾನಃ | 16. ವಿವಹಃ | 28. ಗುರುಃ | 40. ಕೃಷ್ಟಃ |
| 5. ಸಮಾನಃ | 17. ಶಂಕುಃ | 29. ಜಂದುಃ | 41. ಕಪಿಃ |
| 6. ನಾಗಃ | 18. ಕಾಲಃ | 30. ಸಂವರ್ತಿಃ | 42. ಓಕಃ |
| 7. ಕೃಕಲಃ | 19. ಶ್ವಾಸಃ | 31. ಕೀಲಹಃ | 43. ಯತಿಃ |
| 8. ಕರ್ಮ | 20. ನಿಲಃ | 32. ಶತಃ | 44. ಭೀಮಃ |
| 9. ದೇವದತ್ತಃ | 21. ನಲಃ | 33. ಸೌಮ್ಯಃ | 45. ಹನೂಯಃ |
| 10. ಧನಂಜಯಃ | 22. ಪ್ರತಿಭವಃ | 34. ಕವಿಃ | 46. ಪಿಂಗಳಃ |
| 11. ಆವಹಃ | 23. ಕುಮುದಃ | 35. ಜಡಃ | 47. ಕಪನಃ |
| 12. ಪರಾವಹಃ | 24. ಕಾಂತಃ | 36. ಮಂಡೂಕಃ | |

ಹತ್ತು ಮಂದಿ **ರುದ್ರರ** ಹೆಸರುಗಳು—

| | | | |
|---|---|---|---|
| 1. ರೈವತಃ | 4. ಭೀಮಃ | 7. ವೃಷಾಕಪಿಃ | 10. ಬಹುರೂಪಃ |
| 2. ತ್ರಿಜಃ | 5. ವಾಮಃ | 8. ಅಜೈಕಪಾತ್ | |
| 3. ಭವಃ | 6. ಉಗ್ರಃ | 9. ಅಹಿರ್ಬುಧ್ಯಃ | |

ಅಂತೂ ಹತ್ತು ಮಂದಿ.

ಹತ್ತು ಮಂದಿ **ವಿಶ್ವೇದೇವತೆಗಳ** ಹೆಸರುಗಳು—

1. ಪುರೂರವಾಃ, 2. ಆದ್ರವಾಃ, 3. ಕಾಲಃ, 4. ಕಾಮಃ, 5. ಧುರಿಃ, 6. ಲೋಚನಃ, 7. ಸತ್ಯಃ 8. ವಸುಃ 9. ದಕ್ಷಃ 10. ಕ್ರತುಃ– ಅಂತೂ ಹತ್ತು ಮಂದಿ.

ಏಳು ಮಂದಿ ವಸುಗಳ ಹೆಸರುಗಳು—

1. ದ್ರೋಣಃ, 2. ಪ್ರಾಣಃ, 3, ಧ್ರುವಃ, 4. ಅರ್ಕಃ, 5. ದೋಷಃ, 6. ವಸುಃ, 7. ದ್ಯುನಾಮಕಃ.

ಅಶ್ವಿನೀದೇವತೆಗಳು ಎರಡು ಮಂದಿ–ನಾಸತ್ಯ ಮತ್ತು ದಸ್ರ.

ಋಭುವರ್ಗ ೧, ದ್ಯಾವಾ ೧– ಪೃಥಿವೀ ೧ ಅಂತೂ ಮೂರು ಮಂದಿ. ಮ್ಯಾಲೆ ಹೇಳಿದವರೆಲ್ಲಾ ಸೇರಿ 85 ಮಂದಿ. ಇವರೇ ಉಕ್ತೇತರರು. ಮ್ಯಾಲೆ ಹೇಳಿದ ಉಕ್ತರು 15 ಮಂದಿ ಅಂತೂ ಸೇರಿ 100 ಆಯಿತು. ಇವರೇ ಶತಸ್ಥರು ಎನತಕ್ಕವರು ಎಂದು ತಿಳಿಯಬೇಕು.

ಈ ಉಕ್ತೇತರರಾದ 85 ಜನರಲ್ಲಿ ಅವರ (ಅಧಮ) ಪಾವಟಿಗಿಯಲ್ಲಿ ಪೃಥಿವೀ ದೇವೇರನ್ನ ಹೇಳಿದ್ದಾರೆ. ಎಲ್ಲಿ – ಎಂದರೆ ಕಕ್ಷತಾರತಮ್ಯಸಂಧಿಯಲ್ಲೂನೂ ಮತ್ತು ಈ ಸಂಧಿಯ 15ನೇ ಶ್ಲೋಕದಲ್ಲೂನೂ ಹೇಳಿದ್ದಾರೆ. ಅವತಾರ ತಾರತಮ್ಯದಲ್ಲಿರತಕ್ಕ ಉಕ್ತರಲ್ಲೂನೂ, ಅಧಮ ಪಾವಟಿಗಿಯಲ್ಲಿರತಕ್ಕ ಧರಣಿದೇವೇರನ್ನು ಉಕ್ತರಲ್ಲೀನೂ ಸೇರಿಸೋವರಾಗಿದ್ದಾರೆ. ಪೃಥಿವೀ ದೇವೇರನ್ನ ಅಧಮ ಪಾವಟಿಗಿಯಲ್ಲಿ ಸೇರಿಸಕೂಡದು–ಎಂತ ಕೆಲವರ ಪಕ್ಷ–ಪರಮಾತ್ಮನ ಪತ್ನಿಯಾದ ವಿರಾಟ್‌ದೇವಿಯೇ ಅಧಮ ಪಾವಟಿಗಿಯಾಗೇ ಇರೋಣದರಿಂದ ಪರಮಾತ್ಮಗೆ ಪತ್ನಿಯಾದ ಪೃಥಿವೀದೇವೇರನ್ನು ಅವರ ಪಾವಟಿಗಿಯಾಗೇ ಇಡೋಣವೆಂಬುದು ದೋಷವಲ್ಲ ಎಂತ ತಾತ್ಪರ್ಯ. ಇವರಿಬ್ಬರ ವ್ಯತಿರಿಕ್ತ ಉಳಿದವರು ಸಮಾರಂತ ತಿಳೀಬೇಕು. ಅವರವರು ಆವೇಶಬಲದಿಂದ ಉತ್ತಮಕಕ್ಷಕ್ಕೆ ಬರೋವರಾಗಿದ್ದಾರೆ. ॥೧೨॥

೨. ಭಾವಪ್ರಕಾಶಿಕೆ :–

ಕುಬೇರ, ವಿಷ್ವಕ್ಸೇನ, ಗಣೇಶರಿಗೆ ಸಮರು. 100 ದೇವತೆಗಳ ಪೈಕಿ ಮೇಲೆ ಹೇಳಿದ 15 ಜನರನ್ನು ಬಿಟ್ಟು ಉಳಿದ 85 ಜನರೆಂದು ತಿಳಿಯಬೇಕು. ಈ ವಿಷಯವಾಗಿ ತಾರತಮ್ಯಕೌಸ್ತುಭವೆಂಬ ಗ್ರಂಥದಲ್ಲಿ "ನವಕೋಟ್ಯೋಹಿ ದೇವಾನಾಂ ತೇಷಾಂ ಮಧ್ಯೇ ಶತಸ್ಯತು ॥ ಸೋಮಾಧಿ

ಕಾರೋ ವೇದೋಕ್ತಃ"– ದೇವತೆಗಳು ಒಟ್ಟಿನಲ್ಲಿ ಒಂಭತ್ತು ಕೋಟಿ ಸಂಖ್ಯೆ ಉಳ್ಳವರಿರುವರು. ಅವರಲ್ಲಿ ಸೋಮಪಾನಕ್ಕೆ ಯೋಗ್ಯರೆಂದು 100 ಜನ ದೇವತೆಗಳನ್ನು ಮಾತ್ರ ವೇದದಲ್ಲಿ ಹೇಳಿರುವರು. ಅವರು ಯಾರೆಂದರೆ: – "ಪ್ರಧಾನ ವಾಯುರ್ವಸವೋ ರುದ್ರಾದಿತ್ಯಮರುದ್ಗಣಾಃ । ಬೃಹಸ್ಪತಿ ಋಭುದ್ಯಾರ್ವಾ ಪೃಥಿವ್ಯಾವಶ್ವಿನೌ ತಥಾ । ವಿಶ್ವೇದೇವಾಶ್ಚ ಪಿತರಃ ಶತಸ್ಥಾ ದೇವತಾಮರಾಃ"

### ಆ 100 ಮಂದಿ ದೇವತೆಗಳ ವಿವರ :–

### ೧. ಪ್ರಧಾನ ವಾಯುದೇವರು

1. ಪ್ರಧಾನ ವಾಯುದೇವರು

### ವಸುಗಳು–8

| | | |
|---|---|---|
| 2. ದ್ರೋಣ | 3. ಪ್ರಾಣ | 4. ಧ್ರುವ |
| 5. ಅರ್ಕ | 6. ಅಗ್ನಿ | 7. ದೋಷಾವಸು |
| 8. ವಿಭಾವಸು | 9. ದ್ಯು | |

### ರುದ್ರರು–11

| | | |
|---|---|---|
| 10. ರೈವತ | 11. ಅಜ | 12. ಭವ |
| 13. ಭೀಮ | 14. ವಾಸು | 15. ಉಗ್ರ |
| 16. ಉಷಾಕಪಿ | 17. ಅಜೈಕಪಾತ | 18. ಅಹಿರ್ಭುದ್ನ |
| 19. ಬಹುರೂಪ | 20. ಮಹಾರ್ಣ | |

### ಆದಿತ್ಯರು–12

| | | |
|---|---|---|
| 21. ವಿವಸ್ವಾನ್ | 22. ಅರ್ಯಮಾ | 23. ಪೂಷಾ |
| 24. ತ್ವಷ್ಟಾ | 25. ಸವಿತಾ | 26. ಭಗ |
| 27. ಧಾತಾ | 28. ಪರ್ಜನ್ಯ | 29. ವರುಣ |
| 30. ಮಿತ್ರ | 31. ಶಕ (ಇಂದ್ರ) | 32. ಉರುಕ್ರಮ |

## ಮರುದ್ಗಣ-49

| | | |
|---|---|---|
| 33. ಪ್ರಾಣ | 34. ಅಪಾನ | 35. ವ್ಯಾನ |
| 36. ಉದಾನ | 37. ಸಮಾನ | 38. ನಾಗ |
| 39. ಕೃಕಲ | 40. ಕೂರ್ಮ | 41. ದೇವದತ್ತ |
| 42. ಧನಂಜಯ | 43. ಪ್ರವಹ | 44. ವಿವಹ |
| 45. ಶಂಭು | 46. ಸಂವಹ | 47. ಪರಾವಹ |
| 48. ಉದ್ವಹ | 49. ವಹ | 50. ಶಂಕು |
| 51. ಕಲ | 52. ಶ್ವಾಸ | 53. ನಲ |
| 54. ಅನಿಲ | 55. ಪ್ರತಿಭ | 56. ಕುಮುದ |
| 57. ಕಾಂತ | 58. ಶುಚಿ | 59. ಶ್ವೇತ |
| 60. ಅಜಿತ | 61. ಗುರು | 62. ಸಂಜ್ಞ |
| 63. ಸಂವರ್ತಕ | 64. ಕಾಲ | 65. ಜಿತ |
| 66. ಸೌಮ್ಯ | 67. ಕಪಿ | 68. ಜಡ |
| 69. ಮಂಡೂಕ | 70. ಸಂಹತ | 71. ಸಿದ್ಧ |
| 72. ರಕ್ತ | 73. ಕೃಷ್ಣ | 74. ಕಪಿ |
| 75. ಶುಕ | 76. ಯುತಿ | 77. ಭೀಮ |
| 78. ಹನು | 79. ಪಿಂಗ | 80. ಅಹಂಕಾರಿಕ ಪ್ರಾಣ |
| 81. ಕಂಪನ | 82. ಬೃಹಸ್ಪತಿ | 83. ಋಭು |
| 84. ದ್ಯಾವಾ | 85. ಪೃಥಿವೀ | |

## ಅಶ್ವಿನೀದೇವತೆಗಳು 2

| | |
|---|---|
| 86. ನಾಸತ್ಯ | 87. ದಸ್ರ |

## ವಿಶ್ವೇದೇವತೆಗಳು-10

| | | |
|---|---|---|
| 88. ಪುರೂರವ | 89. ಆರ್ದ್ರ | 90. ಕಾಮ |
| 91. ಕಾಲ | 92. ಧುರಿ | 93. ಲೋಚನ |
| 94. ದಕ್ಷ | 95. ಕ್ರತು. | 96. ವಸು |
| 97. ಸತ್ಯ | | |

## ಪಿತೃಗಳು–3

98. ಕವ್ಯವಾಹ 99. ಯಮ 100. ಸೋಮ

ಹೀಗೆ 100 ದೇವತೆಗಳು ಸೋಮಪಾನಾರ್ಹರು. ಇವರಲ್ಲಿ ಹದಿನೈದು ಮಂದಿ ದೇವತೆಗಳನ್ನು ಮೇಲಿನ ತಾರತಮ್ಯದಲ್ಲಿ ಸೇರಿಸಿರುತ್ತಾರೆ. ಆದರ ವಿವರ :–

ಪ್ರಧಾನವಾಯುದೇವರು. ವಸುಗಳಲ್ಲಿ ಪ್ರಧಾನಾಗ್ನಿ. ರುದ್ರರಲ್ಲಿ ಪಾರ್ವತೀ ಪತಿಯಾದ ಭವ. ಸೂರ್ಯರಲ್ಲಿ 6 ಜನರು. ಉರುಕ್ರಮನೆಂಬ ಸೂರ್ಯನು ಶ್ರೀವಿಷ್ಣುವೇ ಆದ್ದರಿಂದ ತಾರತಮ್ಯದಲ್ಲಿ ಸೇರುವುದಿಲ್ಲ. ಚಂದ್ರನಿಗೆ ಸಮನನ್ನಾಗಿ ಹೇಳಿದ ವಿವಸ್ವಾನ್ ಎಂಬುವನು. ಮಿತ್ರ ಇವನನ್ನು ನಿಋುರುತಿಗೆ ಸಮನಾಗಿ ಹಿಂದೆಯೇ ಸೇರಿಸಿರುತ್ತದೆ. ವರುಣನು ಒಬ್ಬ ಸೂರ್ಯ. ಇವನನ್ನು ಮೇಲೆ ಹೇಳಿರುತ್ತೆ. ಇಂದ್ರನೊಬ್ಬನು. ಇವರಕಿಂತಲೂ ಕಮ್ಮಿಯಾದವರಲ್ಲಿ ಗಂಗೆಗೆ ಸಮನೆಂದು ಹೇಳುವ ಪರ್ಜನ್ಯ. ಮರುದ್ಗಣದಲ್ಲಿ ಅಹಂಕಾರಿಕಪ್ರಾಣ, ಪ್ರವಹ. ಬೃಹಸ್ಪತಿ. ದ್ಯುಲೋಕಾಭಿಮಾನಿಯರು ಭಾರತೀ ಪಿತೃಗಳಲ್ಲಿ ಯಮ, ಚಂದ್ರ ಇವರಿಬ್ಬರು. ಅಂತೂ ಹದಿನೈದು ಹೋಗುತ್ತಾ ಉಳಿದವರು 85 ಮಂದಿ–ಎಂದು ದಾಸಾರ್ಯರು ಹೇಳಿರುತ್ತಾರೆ. ಅದರ ವಿವರ :–

ಸೂರ್ಯರು 6 ಮರುದ್ಗಣರಲ್ಲಿ 47 ವಸುಗಳು 7 ರುದ್ರರು 10. ವಿಶ್ವೇದೇವತೆಗಳು 10. ಋಭು 1 ಅಶ್ವಿನೀ 2 ಪಿತೃ 1 ಅಂತು 85 ಮಂದಿ ದೇವತೆಗಳು, ವಿಷ್ವಕ್ಸೇನ, ಕುಬೇರ, ಗಣೇಶರಿಗೆ ಸಮರೆಂದು ತಾತ್ಪರ್ಯ. ॥೧೨॥

## ೩. ಭಾವದರ್ಪಣ :

ಧನಪೇತಿ. ತದುಕ್ತಂ ತಾರತಮ್ಯಕೌಸ್ತುಭೇ । "ನವಕೋಟ್ಯೋಹಿ ದೇವಾನಾಂ ತೇಷಾಂ ಮಧ್ಯೆ ಶತಸ್ಯತು."– ಎಂಬ ವಚನಾನುಸಾರ ಶತಸ್ಥರ ವಿವರ ಮಾಡುತ್ತದೆ. "ಪ್ರಧಾನವಾಯುರ್ವಸವೋ ರುದ್ರಾದಿತ್ಯ ಮರುದ್ಗಣಾಃ । ಬೃಹಸ್ಪತಿ ಋಭುರ್ದ್ಯಾರ್ವಾ ಪೃಥಿವ್ಯಾವಶ್ವಿಸೌ ತಥಾ । ವಿಶ್ವೇ ದೇವಾಶ್ಚ ಪಿತರಃ ಶತಸ್ಥಾ ದೇವತಾ ಮತಾಃ ।"– ಎಂತ ಪ್ರಮಾಣವದೆ. ಇದರಲ್ಲಿ ನೂರುಮಂದಿ ಪ್ರತ್‌ಪ್ರತ್ಯೇಕ ತಿಳಿಯೋ ಉದ್ದಿಶ್ಯ ಶ್ಲೋಕರೂಪದಿಂದ ವಿವರಿಸುತ್ತದೆ. ಪ್ರಧಾನವಾಯು 1. "ದ್ರೋಣಃ ಪ್ರಾಣೋ ಧ್ರುವೋರ್ಕಾಗ್ನಿ ದೋಷಾವಸು ವಿಭಾವಸುರಿತ್ಯಷ್ಟವಸನಃ । ರೈವತೋ ಜೋಭವೋಭೀಮೋ ವಾಮೋ ಉಗ್ರೇ ಉಷಾಕಪಿಃ ಅಜೈಕಪಾದಹಿರ್ಭುರ್ದ್ನೋ ಬಹುರೂಪೋ ಮಹಾನಿತ್ಯೇಕಾದಶ ರುದ್ರಾಃ । ವಿವಸ್ವಾನರ್ಯಮಾಪೂಷಾ ತ್ವಷ್ಟಾ ಚ ಸವಿತಾ ಭಗಃ ಃ ಧಾತಾ ಪರ್ಜನ್ಯವರುಣೌ ಮಿತ್ರಃ ಶಕ್ರ ಉರುಕ್ರಮ ಇತಿ ದ್ವಾದಶಾದಿತ್ಯಾಃ । ಪ್ರಾಣೋಪಾನ ಸ್ತಥಾವ್ಯಾನ ಉದಾನಶ್ಚ ಸಮಾನಕಃ । ನಾಗಶ್ಚ ಕೃಕಲಃ ಕೂರ್ಮೋ ದೇವದತ್ತೋ ಧನಂಜಯಃ । ಪ್ರವಹೋ ವಿವಹಃ ಶಂಭುಃ ಸಂವಹಶ್ಚ ಪರಾವಹಃ । ಉದ್ವಹಶ್ಚ ವಹಃ ಶಂಕುಃ ಕಲಃ ಶ್ವಾನೋನಲೋಽನಿಲಃ । ಪ್ರತಿಭಃ ಕುಮುದಃ ಕಾಂತಃ ಶೂಚಿಃ ಶ್ವೇತೋಜಿತೋಗುರುಃ । ಸಂಜ್ಞಃ ಕಾಲೋ ಜಿತಃ ಸೌಮ್ಯಃ ಕಪಿರ್ಜಡಃ । ಮಂಡೂಕಃ ಸಂಹತಃ ಸಿದ್ಧೋರಕ್ತಃ ಕೃಷ್ಣಃ ಕಪಿಃ ಶುಕಃ । ಯತಿರ್ಭೀಮೋ ಹನುಃ ಪಿಂಗ ಅಹಂ ಪ್ರಾಣೋಧ್ರುಕಂಪನಃ" । ಇತ್ಯೇಕೋನ ಪಂಚಾಕನ್ಮರುತಃ । ಬೃಹಸ್ಪತಿ 1, ಋಭುಗಣ 1, ದ್ಯಾವಾ 1, ಪೃಥ್ವೀ 1 । "ಪುರೂರವಾದ್ರ್ರವೌ ಕಾಮಃ ಕಾಲಶ್ಚ ಧುರಿಲೋಚನೌ । ದಕ್ಷಃ ಕ್ರತುರ್ವಸುಃ ಸತ್ಯೇತಿ" । ಹತ್ತು ಮಂದಿ ವಿಶ್ವೇ ದೇವತೆಗಳು । ಕವ್ಯಬಾಹೋ ಯಮಃ ಸೋಮ"– ಇತಿ ಪಿತೃತ್ರಯ ಇವರೆಲ್ಲ ಸೇರಿ 100 ಜನ ಆಯಿತು. ಇವರುಗಳಲ್ಲಿ ಪೂರ್ವದಲ್ಲಿ ಉಕ್ತರಾದ

ವರು ಪ್ರಧಾನವಾಯುದೇವರು 1, ವಸುಗಳಲ್ಲಿ ಪ್ರಧಾನಾಗ್ನಿ 1, ರುದ್ರರಲ್ಲಿ ಭವನಾಮಕ ಉಮಾಪತಿ ರುದ್ರ 1, ಸೂರ್ಯರಲ್ಲಿ ಆರು ಜನ ಅದರ ವಿವರ– ಶ್ರೀಹರಿಯೇ ಉರುಕ್ರಮ ಸೂರ್ಯ 1, ಚಂದ್ರಗೆ ಸಮನಾದ ವಿವಸ್ವಾನ್ನಾಮಕಃ ಸೂರ್ಯ 2, ನಿರ್ಋತಿಗೆ ಸಮಾನನಾದ ಮಿತ್ರನಾಮಕ ಸೂರ್ಯ 3, ಸಮುದ್ರನಾಥನೇ ವರುಣನಾಮಕ ಸೂರ್ಯ 4, ಇಂದ್ರನೇ ಶಕ್ರನಾಮಕ ಸೂರ್ಯ 5, ಗಂಗೆಗೆ ಸಮನಾದ ಪರ್ಜನ್ಯನಾಮಕ ಸೂರ್ಯ 6, ಏಕೋನ ಪಂಚಾಶನ್ಮರುದ್ಗಣದಲ್ಲಿ ಅಹಂಕಾರಿಕಪ್ರಾಣ 1, ಪ್ರವಾಹ ಮಾರುತ 1, ಬೃಹಸ್ಪತಿ 1, ದ್ಯುಲೋಕಾಭಿಮಾನಿ ಭಾರತೀದೇವಿ 1, ಕವ್ಯವಾಹಾದಿ ಪಿತೃತ್ರಯರಲ್ಲಿ ಯಮದೇವರು ಒಬ್ಬ ಪಿತೃ 1, ಚಂದ್ರನೇ ಸೋಮ ಎಂಬ ಪಿತೃ 1, ಅಂತು 15 ಜನ ಹೋಗಲಾಗಿ ಇತರರು ಎಂಭತ್ತೈದು ಮಂದಿ. ಕುಬೇರ, ವಿಷ್ವಕ್ಸೇನ, ಗಣೇಶರಿಗೆ ಸಮರೆಂದು ಇದೇ ಪದ್ಯದಲ್ಲಿ ದಾಸಾರ್ಯರು ಹೇಳಿದ್ದರನ್ನ ವಿಸ್ತಾರ ಮಾಡದೆ ನೋಡತಕ್ಕದ್ದು. ॥೧೨॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

'ಧನಪ' ಇತಿ ॥ ಪ್ರಧಾನವಾಯುಃ ವಸವಃ ರುದ್ರಾದಿತ್ಯಾಃ ಮರುದ್ಗಣಾಃ ॥ ಬೃಹಸ್ಪತಿ ಋಭುದ್ಯಾವಾಪೃಥಿವ್ಯಾವಶ್ವಿನೌ ತಥಾ ॥ ವಿಶ್ವೇದೇವಾಶ್ಚ ಪಿತರಃ ಶತಸ್ಥಾಃ ದೇವತಾಃ ಮತಾಃ ॥ ಇತಿ. ತತ್ವಪ್ರದೀಪೋಕ್ತಾಃ ಶತಸ್ಥಾಃ ॥ ಧನಪಾದಿತ್ರೀನ್ ಗೃಹೀತ್ವಾ ಅಷ್ಟಾಶೀತಿ ದೇವಾನಾಂ ಶಿಷ್ಟತಾಂ ಬ್ರುವತೇ ಕೇಚಿತ್ ॥ ಅಪರೇ ಉಕ್ತತಾಂ ಪಂಚದಶದೇವಾನಾಂ ಮನ್ಯಂತೇ ॥ ವಿವಿಕ್ಷಾ ಭೇದೇನ ಅವಿರೋಧಃ ಸರ್ವತ್ರ ॥ ಪ್ರಕೃತೇತು ಪ್ರಧಾನವಾಯ್ವಗ್ನಿರುದ್ರ ವಿವಸ್ವದ್ವರುಣ ಮಿತ್ರ ಶಕ್ರೋರುಕ್ರಮಾಹಂ (ಕಾರಿಕ) ಪ್ರವಹ ಗುರವಃ ಇತಿ ಏಕಾದಶೋಕ್ತಾಃ ಪರ್ಜನ್ಯಃ ಏತದ್ವಾನ್ ॥ ಶತಾದಿತರೇ ಪಂಚಾಶೀತಿದೇವಾಃ ತ್ರಯಾಣಾಂ ಸಮಾಃ ಇತ್ಯರ್ಥಃ ॥ ಅಥಾದಿತ್ಯಾಃ ಋತೇ ಶಕ್ರಾತ್ ವರುಣಾತ್ ಮಿತ್ರತೋರ್ಕತಃ ॥ ವಿನಾ ವಿಷ್ಣುಂ ಚ ಪರ್ಜನ್ಯ ಷಡಧೋ ಋಭವಸ್ತ್ರಯಃ ॥ ಮಹೇಶ್ವರಂ ವಿನಾ ರುದ್ರಾಃ ವಸವಃ ವಹ್ನಿ ವರ್ಜಿತಾಃ ॥ ಪ್ರವಹಾಂಕೃತಿಪ್ರಾಣೌ ವಿನಾಸ್ಯೇ ಮರುತೋಽ

ಖಿಲಾಃ ॥ ವಿಶ್ವೇದೇವಾದಶ ದ್ಯಾವಾಪೃಥಿವ್ಯೌ ಪಿತೃಪತ್ರಯುವ್ ॥ ಗಣ ಪೋಧನರೋದಸೌ ವಿಷ್ವಕ್ಸೇನ ಇತಿಹ್ಯಮೀ ॥ ಮಿತ್ರಾತ್ ಕಿಂಚಿತ್ ಗುಣ ನ್ಯೂನಾಃ ॥೧೨॥

## ಕನ್ನಡಾರ್ಥ

ಪ್ರಧಾನವಾಯು, ವಸುಗಳು (8) (ಏಕಾದಶ) ರುದ್ರರು, (ದ್ವಾದಶ) ಆದಿತ್ಯರು, ಮರುದ್ಗಣದವರು, ಬೃಹಸ್ಪತಿ ಋಭು, ದ್ಯಾವಾ–ಪೃಥಿವೀ, ಅಶ್ವಿನಿಗಳು, ವಿಶ್ವದೇವತೆಗಳು, ಪಿತೃಗಳು – ಇವರಿಗೆ **ಶತಸ್ಥ ದೇವತೆಗಳೆಂದು** ಪ್ರಸಿದ್ಧಿ ಇದೆ – ಎಂದು **ತತ್ವಪ್ರದೀಪದಲ್ಲಿ** ಹೇಳಲಾಗಿರುತ್ತದೆ.

ಕುಬೇರ, ವಿಷ್ವಕ್ಸೇನ, ವಿಘ್ನೇಶರುಗಳನ್ನು ಪರಿಗ್ರಹಿಸಿ (ಹೆಚ್ಚಿಗೆ ಸೇರಿಸಿ) 88 ದೇವತೆಗಳು ಅವಶಿಷ್ಟ ದೇವತೆಗಳು ಎಂದು ಕೆಲವರು ಹೇಳುತ್ತಾರೆ. ಇನ್ನು ಕೆಲವರು ಉಕ್ತೇತರರು ಎಂಬಲ್ಲಿ ಹದಿನೈದು ದೇವತೆಗಳಿಗೆ ಉಕ್ತರೆಂದು ಅಭಿಪ್ರಾಯವನ್ನು ಹೇಳುತ್ತಾರೆ. ಎಲ್ಲ ಕಡೆಯಲ್ಲಿಯೂ ವಿವಕ್ಷಾಭೇದಗಳಿರುವುದರಿಂದ ಅಂದರೆ, ಹೇಳುವ ತಾತ್ಪರ್ಯವು ಬೇರೆ ಬೇರೆ ಇರುವುದರಿಂದ ವಿರೋಧವಿರುವುದಿಲ್ಲ. ಪ್ರಕೃತದಲ್ಲಿ 1 ಪ್ರಧಾನವಾಯು, 2 ಅಗ್ನಿ, 3 ರುದ್ರ, 4 ವಿವಸ್ವತ್, 5 ವರುಣ, 6 ಮಿತ್ರ, 7 ಶಕ್ರ, 8 ವಿಷ್ಣು, 9 ಅಹಂಕಾರಿಕಪ್ರಾಣ, 10 ಪ್ರವಹ, 11 ಗುರು–ಇವರು ಹನ್ನೊಂದು ದೇವತೆಗಳು ಉಕ್ತರೆಂದು ತಿಳಿಯಬೇಕು. 12 ಪರ್ಜನ್ಯನು ಇವರಲ್ಲಿಯೇ ಅಂತರ್ಗತನು. ಶತಸ್ಥದೇವತೆಗಳಲ್ಲಿ ಉಕ್ತರನ್ನು ಬಿಟ್ಟು ಉಳಿದ 85 ದೇವತೆಗಳು, ಈ ಮೂರು ದೇವತೆಗಳಿಗೆ (1 ಧನಪ, 2 ವಿಷ್ವಕ್ಸೇನ, 3 ವಿಘ್ನೇಶರಿಗೆ) ಸಮಾನರು ಎಂದು ವಿಶಿಷ್ಟ ತಾತ್ಪರ್ಯವು.

ಇಂದ್ರ, ವರುಣ, ಮಿತ್ರ, ಅರ್ಕ, ವಿಷ್ಣು, ಪರ್ಜನ್ಯರುಗಳನ್ನು ಬಿಟ್ಟು ಉಳಿದವರು ಆರು ಆದಿತ್ಯರು. ಮೂರು ಋಭುದೇವತೆಗಳು, ಮಹೇಶ್ವರನನ್ನು ಬಿಟ್ಟು ಉಳಿದ 10 ರುದ್ರರು, ಅಗ್ನಿಯನ್ನು

ಬಿಟ್ಟು ಉಳಿದ 7 ವಸುಗಳು, ಪ್ರವಹಾಹಂಕಾರಿಕ ಪ್ರಾಣರನ್ನುಳಿದು 47 ಮರುತ್ತರು, ವಿಶ್ವದೇವತೆಗಳು 10, ದ್ಯಾವಾ ಪೃಥಿವೀ (ಪಿತೃಪರು 2), ಅಶ್ವಿನೀದೇವತೆಗಳು, ಕುಬೇರ, ವಿಷ್ವಕ್ಸೇನ, ವಿಘ್ನೇಶರು, ಇವರು ಮಿತ್ರನಿಗಿಂತಲೂ ಸ್ವಲ್ಪ ಗುಣಾಧಮರು–ಕಡಿಮೆ ಗುಣವುಳ್ಳವರು– ಎಂದು ಹೇಳಿಸಿಕೊಳ್ಳುತ್ತಾರೆ. ॥೧೨॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಈ ಮೂರು ಜನಕ್ಕಿಂತ ಉಕ್ತೇತರರು– ಎಂದರೆ, ಮೇಲೆ ಹೇಳಿದ ಮುಖ್ಯಪ್ರಾಣ ರುದ್ರಾದಿಗಳು ಹದಿನೈದು ಜನರು ಹೊರತು ಉಳಿದ ದಿನಪರೆಂಬ ಆರು ಜನ ಸೂರ್ಯರು, ನಲವತ್ತೇಳು ಮಂದಿ ಮರುತ್ತುಗಳು, ಏಳು ಜನ ವಸುಗಳು, ಹತ್ತು ಜನ ರುದ್ರರು, ಹತ್ತು ಜನ ವಿಶ್ವೇದೇವತೆಗಳು, ಋಭುವೆಂಬ ದೇವತೆ ಒಬ್ಬ, ಅಶ್ವಿನಿಗಳು ಇಬ್ಬರು, ಚಿರಪಿತೃಗಳು ಅಗ್ನಿಷ್ವಾತ್ತಾ ಬಾರ್ಹಿಷದ ಸೋಮಪರೆಂಬ ಮೂವರು, ಧರಣೀದೇವಿ ಒಂದು–ಸಹ ಸೇರಿ ಎಂಭತ್ತೇಳು ಮಂದಿ ಶೇಷಶತಸ್ಥರೆಂದು ಹೇಳಿಸಿಕೊಳ್ಳುವರು. ಇವರು ಮೇಲ್ಕಂಡ ಧನಪ ವಿಷ್ವಕ್ಸೇನ ಗಣನಾಥನೆಂಬ ಮೂವರಿಗಿಂತ ಕಿಂಚಿತು ಕಡಿಮೆ, ತಮ್ಮೊಳಗೆ ಸಮರು. ॥೧೨॥

# ಸರ್ವವ್ಯಾಖ್ಯಾನಸಾರಸಂಗ್ರಹ

ಧನಾಧಿಪತಿಯಾದ ಕುಬೇರ (ಉತ್ತರ ದಿಕ್ಕಿನ ದಿಕ್ಪಾಲಕ)-ವಾಯುಪುತ್ರನಾದ ವಿಷ್ವಕ್ಸೇನ ಮತ್ತು ಗೌರೀ ತನಯನಾದ ವಿಘ್ನೇಶ್ವರ–ಇವರು ಮೂರು ಮಂದಿ ಸಮಾನಕಕ್ಷಾಪನ್ನರು.

ನೂರು ಮಂದಿ ದೇವತಾ ವರ್ಗದವರಲ್ಲಿ (**ಶತ**) 15 ಮಂದಿಯನ್ನು ಬಿಟ್ಟು ಉಳಿದ 85 ಮಂದಿ ದೇವತಾವರ್ಗಕ್ಕೆ **ಶೇಷಶತಸ್ಥ**ರೆಂದು ಹೆಸರು.

ಒಂಭತ್ತು ಕೋಟಿ ಸಂಖ್ಯಾಕರಾದ ದೇವತೆಗಳಲ್ಲಿ ಸೋಮಪಾನಕ್ಕೆ ಯೋಗ್ಯರೆಂದು ಪ್ರಖ್ಯಾತರಾಗಿರುವ ದೇವತಾ ಸಂಖ್ಯೆ = 100. ಇವರಿಗೆ **ಸೋಮಪನಾರ್ಹರೆಂದು** ಹೆಸರು.

ಈ 100 ಮಂದಿ ದೇವತೆಗಳನ್ನು ವೇದದಲ್ಲಿ ಹೇಳಿದ್ದಾರೆ. ಅವರ ವಿವರ ಇಂತಿದೆ.

| | | |
|---|---|---|
| 1. | ದ್ವಾದಶಾದಿತ್ಯರು | ........ = 12. |
| 2. | ಅಷ್ಟವಸುಗಳು | ........ = 8. |
| 3. | ಏಕಾದಶ ರುದ್ರಗಣ | ........ = 11. |
| 4. | ಮರುದ್ಗಣ | ........ = 50. |
| 5. | ವಿಶ್ವೇದೇವತೆಗಳು | ........ = 10. |
| 6. | ಅಶ್ವಿನೀ ದೇವತೆಗಳು | ........ = 2. (ನಾಸತ್ಯ ಮತ್ತು ದಸ್ರ) |
| 7. | ದ್ಯಾವಾ ಮತ್ತು ಪೃಥಿವೀ | ........ = 2. |
| 8. | ಪಿತೃಗಳು | ........ = 3. |
| 9. | ಬೃಹಸ್ಪತಿ | ........ = 1, |
| 10. | ಋಭು | ........ = 1. |
| **ಒಟ್ಟು ಸಂಖ್ಯಾ** | | = 100 (**ಶತ ಸಂಖ್ಯಾ**) |

ಮೇಲ್ಕಂಡ 100 ದೇವತಾ ವರ್ಗದಲ್ಲಿ 15 ಜನರ ವಿವರ ಹೀಗಿದೆ.:-

1. 7 ಮಂದಿ ಆದಿತ್ಯರು ....1. ಆರ್ಯನಾಮಕ ಸೂರ್ಯ
2. ತ್ವಷ್ಟ್ರನಾಮಕ ಸೂರ್ಯ
3. ಭಗನಾಮಕ ಸೂರ್ಯ
4. ಪೂಷಾನಾಮಕ ಸೂರ್ಯ
5. ಸವಿತೃನಾಮಕ ಸೂರ್ಯ

6. ಧಾತೃನಾಮಕ ಸೂರ್ಯ
7. ವಿವಸ್ವಾನ್‌ನಾಮಕ ಸೂರ್ಯ
(ಸ್ವಯಂ ವಿಷ್ಣುವಿನ ರೂಪ)

2. ವಸು–ಒಬ್ಬ ಅಗ್ನಿ (ಅಗ್ನಿಯು ವಸುವರ್ಗದಲ್ಲಿ ಉತ್ತಮ ಪಕ್ಷಕ್ಕೆ ಸೇರಿದವನು)

3. ಏಕಾದಶರುದ್ರಗಣದಲ್ಲಿ ಪಾರ್ವತೀಪತಿ ರುದ್ರನು ಉತ್ತಮ ಪಕ್ಷಕ್ಕೆ ಸೇರಿದವನು.

4. ಯಮ ಮತ್ತು ಸೋಮ–ಇಬ್ಬರು. (ಪಿತೃಗಣ) (ಉತ್ತಮ ಪಕ್ಷ).

5. ಹವ್ಯವಾಹ (ಪಿತೃ ಪಕ್ಷದಲ್ಲಿ ಅಧಮ ಪಕ್ಷನು).

6. ಬೃಹಸ್ಪತಿ (ಉತ್ತಮ ಪಕ್ಷ).

7. ದ್ಯಾವಾ (ದ್ಯುಲೋಕಾಭಿಮಾನಿ ಭಾರತೀ) ಮತ್ತು ಪೃಥಿವೀ.

ಅಲ್ಲಿಗೆ. 7 ಮಂದಿ ಆದಿತ್ಯರು + ಅಗ್ನಿ (ವಸು) + ಪಾರ್ವತೀ ಪತಿ ರುದ್ರ (ರುದ್ರ ಗಣ) + ಯಮ–ಸೋಮ–ಹವ್ಯವಾಹ + ಬೃಹಸ್ಪತಿ + ದ್ಯಾವಾ + ಪೃಥಿವೀ = 15 ಮಂದಿ. ಮೇಲ್ಕಂಡ 100 ಮಂದಿ ದೇವತಾಗಣದಲ್ಲಿ ಈ 15 ಜನರನ್ನು ಕಳೆದರೆ, ಉಳಿದ ದೇವತಾಸಂಖ್ಯೆ = 100–15. = 85 ಈ 85 ಸಂಖ್ಯಾರೂಪಾದೇವತಾಗಣಕ್ಕೆ **ಶೇಷ ಶತಸ್ಥರೆಂದು ಹೆಸರು.** ಅಂದರೆ. 100 ಮಂದಿ ಸೋಮಪಾನಾರ್ಹ ದೇವತೆಗಳಲ್ಲಿ ಉತ್ತಮ ಪಕ್ಷ ಮತ್ತು ಅಧಮ ಪಕ್ಷಗಳಿಗೆ ಸೇರಿದ 15 ಮಂದಿ ಗಳನ್ನು ಬಿಟ್ಟರೆ, ಉಳಿದ 85 ಮಂದಿ ಶೇಷಶತಸ್ಥರು.

ಈ 85 ಮಂದಿ ಶೇಷಶತಸ್ಥರು ಕುಬೇರ–ವಿಷ್ವಕ್ಸೇನ–ಗಣಪತಿ – ಈ ಮೂರು ಮಂದಿಗೆ ಸಮಾನರು.

ಇದನ್ನು 1. **ದಿನಪರಾರು** = 6 ಮಂದಿ ಸೂರ್ಯರು (ದಿನಪ–ಆದಿತ್ಯ–ಸೂರ್ಯ).

2. **ಏಳಧಿಕ ನಾಲ್ವತ್ತು ಅನಿಲರು = 47 ಮರುದ್ಗಣ.**

3. **ಏಳ್ವಸುಗಳು** = 7 ಮಂದಿ ವಸುಗಣ (ಅಷ್ಟವಸುಗಳಲ್ಲಿ ಅಗ್ನಿ ಬಿಟ್ಟು).

4. **ರುದ್ರರು ಈರೈದು** = 10 ಮಂದಿ ರುದ್ರಗಣ (ಏಕಾದಶ ರುದ್ರರಲ್ಲಿ ಪಾರ್ವತೀಪತಿ ರುದ್ರದೇವರನ್ನು ಬಿಟ್ಟು).

5. ವಿಶ್ವೇದೇವತೆಗಳು = 10 (ಅಷ್ಟೇ ಸಂಖ್ಯಾಕವಾದ).

6. ಋಭು (ಒಬ್ಬ)

7. ಅಶ್ವಿನೀ ದೇವತೆಗಳು (ಇಬ್ಬರು– ನಾಸತ್ಯ ಮತ್ತು ದಸ್ರ).

8. ದ್ಯಾವಾ (ಒಂದು).

9. ಪೃಥಿವೀ (ಒಂದು)–ಎಂದಿದ್ದಾರೆ ದಾಸರಾಯರು.

**ವಿಶೇಷಾಂಕ :–** 1. ಆದಿತ್ಯಸಂಖ್ಯೆ=12 (ದ್ವಾದಶಾದಿತ್ಯರು), ಇವರಲ್ಲಿ 5 ಮಂದಿ 18ನೆಯ ಕಕ್ಷಾಪನ್ನರು + 6 ಮಂದಿ ಉತ್ತಮ ಪಕ್ಷಾದವರು + ಒಂದು **ವಿವಸ್ವಾನ್** ನಾಮಕವಾದ **ಶ್ರೀ**ಹರಿಯ ರೂಪ.

6. ದ್ವಾದಶಾದಿತ್ಯರ ಹೆಸರುಗಳು–ಏಕಾದಶ ರುದ್ರಗಣದ ಹೆಸರುಗಳು–47 ಮರುದ್ಗಣ– 10 ಮಂದಿ ವಿಶ್ವೇದೇವತೆಗಳ ಹೆಸರುಗಳನ್ನು **ವ್ಯಾಖ್ಯಾನಗಳಲ್ಲಿ** ವಿವರವಾಗಿ ಕೊಟ್ಟಿದೆ (ಅಲ್ಲಿ ನೋಡುವುದು).

## ಪದ್ಯ-೧೩

**ಮೂಲ :–**

**ಇವರಿಗಿಂತಲಿ ಕೊರತೆಯೆನಿಪರು ।**
**ಚೆವನ ಸನಕಾದಿಗಳು ಪಾವಕ ।**
**ಕವಿ ಉಚಿಥ್ಯ ಜಯಂತ ಕಶ್ಯಪ ಮನುಗಳೇಕದಶ ॥**
**ಧೃವ ನಹುಷ ಶಶಿಬಿಂದು ಹೈಹಯ ।**
**ದವೃಷಯಂತಿ ವಿರೋಚನನ ನಿಜ ।**
**ಕುವರ ಬಲಿ ಮೊದಲಾದ ಸಪ್ತೇಂದ್ರರು ಕಕುಸ್ಥ ಗಯ ॥**
**॥೧೩॥**

**ಅವತರಣಿಕೆ :–**

ಶೇಷಶತಸ್ಥರಿಗೆ ಅವರರಾದ ಕರ್ಮಜದೇವತೆಗಳ ತಾರತಮ್ಯವನ್ನು ಹೇಳುತ್ತಾರೆ. ॥೧೩॥

**ಪ್ರತಿಪದಾರ್ಥ :–**

**ಇವರಿಗಿಂತಲಿ** = 18ನೆಯ ಕಕ್ಷಾಪನ್ನರಾದ ಶೇಷಶತಸ್ಥರಾದ 85 ಮಂದಿಗಿಂತ, **ಚೆವನ** = ಚ್ಯವನಋಷಿ, **ಸನಕಾದಿಗಳು** = ಸನಕ, ಸನಂದ, ಸನತ್ಸುಜಾತ- ಎಂಬ ಬ್ರಹ್ಮಮಾನಸಪುತ್ರರು, **ಪಾವಕ** = ಅಗ್ನಿಪುತ್ರನಾದ ಪಾವಕನು, **ಕವಿ** = ಶುಕ್ರಾಚಾರ್ಯರು, **ಉಚಿಥ್ಯ** = ಉಚಿಥ್ಯಮುನಿ, **ಜಯಂತ** = ಪಾದಾಭಿಮಾನಿಯೂ, ಇಂದ್ರಪುತ್ರನೂ ಆದ ಜಯಂತನು, **ಕಶ್ಯಪ** = ಕಶ್ಯಪ ಮಹಾಮುನಿ, **ಮನುಗಳು**

**ಏಕದಶ** =11 ಮಂದಿ ಮನುಗಳು, (14 ಮಂದಿ ಮನುಗಳಲ್ಲಿ ಉತ್ತಮ ಪಕ್ಷಕ್ಕೆ ಸೇರಿದ ಮೂವರ ಬಿಟ್ಟು. ಉಳಿದ 11 ಮಂದಿ), **ಧೃವ** = ಧೃವ ರಾಜರು, **ನಹುಷ** = ನಹುಷ ಚಕ್ರವರ್ತಿ, **ಶಶಿಬಿಂದು** = ಶಶಿಬಿಂದು ರಾಯನು, **ಹೈಹಯ** = ಹೈಹಯರಾಜನು, **ದವುಷಯಂತಿ** = ದೌಷ್ಯಂತರಾಜನು, **ವಿರೋಚನನ** = ಪ್ರಹ್ಲಾದರಾಜನ ಪುತ್ರನಾದ ವಿರೋಚನನ, **ನಿಜ ಕುವರ**=ಸ್ವಕೀಯಪುತ್ರನಾದ, **ಬಲಿ ಮೊದಲಾದ** = ಬಲಿ ಚಕ್ರವರ್ತಿಯೇ ಮೊದಲಾಗಿ, **ಸಪ್ತೇಂದ್ರರು**= ಏಳು ಮಂದಿ ಇಂದ್ರರು (14 ಮಂದಿ ಇಂದ್ರರಲ್ಲಿ ಏಳು ಮಂದಿ ಉತ್ತಮ ಕಕ್ಷಾಪನ್ನರು), **ಕಕುಸ್ಥ** = ಕಕುಸ್ಥರಾಜನು, **ಗಯ** = ಗಯರಾಜನು (ಇವರೆಲ್ಲರೂ ಕರ್ಮಜದೇವತೆಗಳು. ಅವಶಿಷ್ಟರಾದ ಕರ್ಮಜರನ್ನು ಮುಂದಿನ 14 ಪದ್ಯದಲ್ಲಿ ತಿಳಿಸುತ್ತಾರೆ). ॥೧೩॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣಒಡೆಯರ ವ್ಯಾಖ್ಯಾನ :–

ಶೇಷಶತಸ್ಥರಿಗೆ ಕಡಿಮೆಯಾದ ಕರ್ಮಜದೇವತೆಗಳ ತಾರತಮ್ಯ ಹೇಳ ತಾರೆ.

18ನೇ ಕಕ್ಷದವರಾದ 85 ಜನರಿಗಿಂತಲೂ ಕಡಿಮೆ ಎನತಕ್ಕವರು ದಾರೆಂದರೆ, ಚ್ಯವನಋಷಿಯು, ಸನಕ ಸನಂದನ ಸನಾತನ ಸನತ್ಕುಮಾರಾದಿಗಳು, ಅಗ್ನಿಪುತ್ರ, ಪಾವಕ, ಶುಕ್ರಾಚಾರ್ಯರು, ಉಚಿಥ್ಯಮುನಿಯು, ಪಾದಾಭಿಮಾನಿ ಜಯಂತ, ಕಶ್ಯಪಋಷಿಯು, 11 ಮನುಗಳು (ಉಳಿದ 3 ಮಂದಿ ಮನುಗಳು ಉತ್ತಮ ಕಕ್ಷದಲ್ಲಿ ಸೇರಿದವರು), ಧ್ರುವರಾಯ, ನಹುಷರಾಯ, ಶಶಿಬಿಂದುರಾಯ, ಹೈಹಯರಾಯ, ದೌಷ್ಯಂತಿರಾಯ, ವಿರೋಚನನ ಸ್ವಕೀಯ ಪುತ್ರನಾದ ಬಲಿಚಕ್ರವರ್ತಿಯೇ ಆದಿಯಾಗಿ ಏಳು

ಮಂದಿ ಇಂದ್ರರು (ಉಳಿದ ಏಳು ಮಂದಿ ಇಂದ್ರರು ಉತ್ತಮ ಕಕ್ಷದಲ್ಲಿ ಸೇರಿದ್ದಾರೆ), ಕಕುತ್ಸ್ಥರಾಯ, ಗಯರಾಯ, ಇನ್ನೂ ಅವಶಿಷ್ಟ ಕರ್ಮಜರನ್ನು ಮುಂದಿನ ಶ್ಲೋಕದಲ್ಲಿ ಹೇಳುತ್ತಾರೆ.

**ವಿಶೇಷಾರ್ಥ :– ಸಪ್ತೇಂದ್ರರು–**1. ಚ್ಯವನ, 2. ಅದ್ಭುತ, 3. ಶಂಭು, 4. ವೈದ್ಯುತಿ, 5. ವಿವಸ್ಪತಿ, 6. ಸುಚಿ, 7. ರಿತಧಾಮ.

**ಮನುಗಳು :–**

| | | | |
|---|---|---|---|
| 1. ಸ್ವಾರೋಚಿಷ್ಮ. | 4. ಚಾಕ್ಷುಷ. | 7. ಬ್ರಹ್ಮಸಾವರ್ಣಿ. | 10. ರುದ್ರ ಸಾವರ್ಣಿ. |
| 2. ಉತ್ತಮ. | 5. ಸಾವರ್ಣಿ. | 8. ಧರ್ಮ ಸಾವರ್ಣಿ. | 11. ಇಂದ್ರ ಸಾವರ್ಣಿ. |
| 3. ರೈವತ. | 6. ದಕ್ಷ ಸಾವರ್ಣಿ. | 9. ದೇವ ಸಾವರ್ಣಿ. | ಅಂತೂ 11 ಮಂದಿ. |

ವಿರೋಚನನ ನಿಜಕುವರ ಎಂದರೆ, ನಿಜ–ಜೀವನ ಸ್ವರೂಪದಲ್ಲಿ, ಬಾಹ್ಯದಲ್ಲಿ ನಿಜವಾದ ತಾರತಮ್ಯ, ಪಂಚಭೇದಜ್ಞಾನವೇನು, ಪರಮಾತ್ಮನಲ್ಲಿ ನಿಜ ಭಕ್ತಿಯೇನು ಉಳ್ಳಂಥ, ದೈತ್ಯಯೋನಿಜನಾದ ಕಾಲಕ್ಕೂ ದೈತ್ಯನಲ್ಲದೆ ಇದ್ದಂಥ ಕುವರ; ವಿರೋಚನನ ಮಗನಾದಂಥ ಬಲಿಚಕ್ರವರ್ತಿಯೇ ಮೊದಲಾದ ಸಪ್ತೇಂದ್ರರು–ಎಂದರೆ, ಎಲ್ಲಾ ಮಂದಿ ಇಂದ್ರರು, ಶಚೀಪತಿತ್ವ ಇಲ್ಲದೇನೇ ಇಂದ್ರ ಪಟ್ಟ ಆಳತಕ್ಕ ಇಂದ್ರರು–ಎಂತ ತಾತ್ಪರ್ಯ.
॥೧೩॥

## ೨. ಭಾವಪ್ರಕಾಶಿಕೆ :-

ಈ ಪದ್ಯದ ತಾತ್ಪರ್ಯವನ್ನು ಮುಂದಿನ 14ನೇ ಪದ್ಯದ ಜೊತೆಯಲ್ಲಿ ಕೊಡಲಾಗಿದೆ.

## ೩. ಭಾವದರ್ಪಣ :-

ಇವರಿಗಿಂದಲಿ. ಕೊರತೆ-ಕಡಿಮೆಯೆಂಬರ್ಥ. ಚಪನೇತಿ. "ವಿಪ್ರತ್ವಾಚ್ಚಾವನೋಚಿಥ್ಯೌ ತನ್ಮಧ್ಯೇ ಕಿಂಚಿದುತ್ತಮಾವಿತಿ" **ಕೌಸ್ತುಭೋಕ್ತೇಃ** ಹೈಹಯೇತಿ । ಕರ್ಮಜಾ ಇಮೇ ಇತಿ ಚ- "ಕಾರ್ತವೀರ್ಯಶ್ಚದ್ಯೌಂತಿರ್ಭರತಃ ಶಶಿಬಿಂದವಃ । ಕಕುತ್ಸ್ಥ ಮಾಂಧಾತ ಕುರುಪೃಥುಮುಖ್ಯಾಸ್ತು ಕರ್ಮಜಾ"- ಇತಿ । ಬಲಿತಿ । "ಬಲಿರದ್ಭುತ ಶಂಭೂ ಚ ವಿಧೃತಃ ಸ್ವಲ್ಪತ ಧಾಮಕ: । ವಿವಸ್ಪತಿ ಶುಚಿಶ್ಚೇತಿ ಹೀಂದ್ರಾ" -ಇತಿ ಗಯೇತಿ । ಸೋಪಿ ಕರ್ಮಜಃ ಸಮ ಇತಿ । ತದುಕ್ತಂ ಪಂಚಮಸ್ಕಂಧ ತಾತ್ಪರ್ಯೇ । "ಪ್ರಿಯವ್ರತೋ ಗಯಶ್ಚೈವ ದೇವಕರ್ಮ ಸಮೌಗುಣೈರಿತಿ ॥ ॥೧೩॥ ॥೧೪॥

## ೪. ಶ್ರೀ ವ್ಯಾಸದಾಸ ಸಿದ್ಧಾಂತ ಕೌಮುದೀ :-

ಇವರಿಗಿಂದಲಿ-ಇತಿ ॥ ಆದಿಪದಂಕುಮಾರ ಭಿನ್ನಪದಮ್ ॥ ತೇನ ಚ ವಕ್ಷಮಾಣಾಚ್ಯಾದಯಃ ಅಪಿ ಗೃಹಿತಾಃ ॥ ತೇನ ದಶಾನ್ಯೇ ನವತಿಃ ವ್ಯಾಪ್ತಿದರ್ಶಿನಃ ಉಚ್ಯಂತೇ ವೈವಸ್ವತಾಧಿಕ್ಯೇ (ಕ್ಯಂ) ಹರ್ಯಾವೇಶೇನ ಉಕ್ತಂ ಬೃಹದ್ಭಾಷ್ಯೇದ॥ ವೈವಸ್ವತಃ ಮನುಃ ನಿತ್ಯಂ ವಿಷ್ಣ್ವಾವೇಶೇ ತತೋಧಿಕಃ॥ ಇತಿ ॥ "ತದನ್ಯೇತು ತತೋಽವರಾ" ಇತ್ಯಸ್ಯ ಸುಧಾಯಾಂ "ಅನ್ಯೇ ಸ್ವಾಯಂಭುವತಾಪಸೌ ಅನ್ಯೇ ॥ ತತಃ ವೈವಸ್ವತ ಮನೋಃ ಅವರಾಃ ॥ " ಇತಿ ಉಕ್ತಮ್ ॥

ಹೈಹಯಃ-ಕಾರ್ತವೀರ್ಯಃ ॥ ದೌಷ್ಯಂತಿ-ಭರತಃ ॥ಕುವರ-ಪುತ್ರಃ॥ 'ಸಪ್ತ' ಬಲಿರದ್ಭುತಶಂಭೂ ಚ ವಿಧೃತ ಸ್ವಲ (ಸ್ವಲ್ಪ)ತ ಧಾಮಕಃ ॥ ದಿವ

ಸ್ಪತಿಃ ಶುಚಿಶ್ಚೇತ್ಯುಕ್ತಾಃ ॥ (ಯಜ್ಞ ರೋಚನ ಸಪ್ತಜಿತ್ ತ್ರಿಶಿಖ ವಿಕ್ರಮ ಇಂದ್ರದ್ಯುಮ್ನ ಪುರಂದರಾಣಾಂ ವಿಷ್ಣು ವಾಯು ಯಮ ಅಗ್ನಿ ಪುರಂದರ ತ್ವಾತ್ ಅಧಮಾಃ ಆವೇಶ ವಿಶೇಷಾತ್) ॥ ಅಥೋಚಥ್ಯಶ್ಚ ಪಾವಕಃ ॥ "ಸ್ವಾಯಂಭುವ ತಾಪಸಂ ಚ ವೈವಸ್ವತಮೃತೇಽಖಿಲಾಃ ॥ ಮನವಃ ಕಾರ್ತ ವೀರ್ಯಾದ್ಯಾಃ ಬಲ್ಯಾದ್ಯಾಃ ಯೇ ಚ ಕರ್ಮಜಾ ॥ ಜಯಂತಃ ಚ್ಯವ ನೋಷ್ಟೌ ಚ ಗಂಧರ್ವಾಃ ಪಿತೃಸಪ್ತಕಮ್ ॥ ಅಶ್ವಿನ್ಯೂನಾಶ್ಚ. ॥೧೩॥

## ಕನ್ನಡಾರ್ಥ

ಸನಕಾದಿಗಳು–ಎಂಬಲ್ಲಿರುವ ಆದಿಪದದಿಂದ ಕುಮಾರ (ಸನತ್ಕುಮಾರ) ನನ್ನು ಪರಿಗ್ರಹಿಸಬಾರದು. ಅವನನ್ನು ಉಳಿದು ಮಿಕ್ಕವರನ್ನು ಸ್ವೀಕರಿಸಿ ದರೆ ಅರ್ಜಿ ಮುಂತಾದವರೂ ಇವರಲ್ಲಿ ಸೇರುವರು. ಹೀಗೆ ಹೇಳುವುದರಿಂದ "ದಶಾನ್ಯೇ ವ್ಯಾಪ್ತಿದರ್ಶಿನಃ"–ಎಂಬ ಪ್ರಮಾಣಗಳಿಗೆ ಅನುಗುಣವಾಗು ತ್ತದೆ.

ವೈವಸ್ವತಮನುವು ಶ್ರೇಷ್ಠನೆಂಬುವುದರಲ್ಲಿ **ಬೃಹದ್ಭಾಷ್ಯದ** ವಚ ನವು ಆಧಾರವಿರುತ್ತದೆ. "ವೈವಸ್ವತಮನುವು ನಿತ್ಯದಲ್ಲಿಯೂ ವಿಷ್ಣ್ವಾವ ವೇಶವಿರುವದರಿಂದ ಉಳಿದವರಿಂದಲೂ ಶ್ರೇಷ್ಠನು." – ಎಂದು **ಬೃಹತ್ ಭಾಷ್ಯವಚನದ** ಅರ್ಥ. "ಉಳಿದವರು ಅವನಿಂದ ಕಡಿಮೆಯವರು"–ಎಂದು ಹೇಳುವ "ತದನ್ಯೇತು"–ಎಂಬ ವಾಕ್ಯವನ್ನು ವಿವರಿಸುತ್ತ **ಶ್ರೀಮನ್ನ್ಯಾಯ ಸುಧೆಯಲ್ಲಿ** "ಸ್ವಾಯಂಭುವ ಹಾಗೂ ತಾಪಸಮನುಗಳನ್ನು ಬಿಟ್ಟು, ಉಳಿದ ಮನುಗಳು ವೈವಸ್ವತಮನುವಿಗಿಂತ ಕಡಿಮೆಯುವರು."–ಎಂದು ನಿರೂಪಿಸ ಲಾಗಿರುತ್ತದೆ.

"ಹೈಹಯ"-ಕಾರ್ತವೀರ್ಯರಾಜನು. "ದೌಷ್ಯಂತಿ" ದುಷ್ಯಂತರಾಜನ ಮಗ ಭರತ. "ಸಪ್ತೇಂದ್ರರು" ಬಲಿ, ಅದ್ಭುತ, ಶಂಭು, ವಿಧೃತ, ಸ್ವ ಋತಧಾಮಕ, ದಿವಸ್ಪತಿ, ಶುಚಿ"–ಇವರುಗಳು.

ಉಚಥ್ಯ, ಪಾವಕ, ಸ್ವಾಯಂಭುವ, ತಾಪಸ, ವೈವಸ್ವತರನ್ನು ಳಿದು ಮಿಕ್ಕ ಮನುಗಳು, ಕಾರ್ತವೀರ್ಯ ಮುಂತಾದವರು. ಬಲಿರಾಜ ಮುಂತಾದ ಕರ್ಮಜದೇವತೆಗಳು, ಜಯಂತ, ಚ್ಯವನ,– ಎಂಟು ಗಂಧರ್ವರು, ಏಳು ಪಿತೃಗಳು, ಇವರು ಅಶ್ವಿನೀದೇವತೆಗಳಿಗೆ ಕಡಿಮೆಯುವರು. ॥೧೩॥

## ೫. ಗುರುಹೃದಯಪ್ರಕಾಶಿಕೆ :–

ಚ್ಯವನಋಷಿ, ಸನಕಾದಿಗಳು, ಪಾವಕನೆಂಬ ಅಗ್ನಿಪುತ್ರನು, ಜ್ಞಾನಿಯಾದ ಉಚಿಥ್ಯ, ಇಂದ್ರನ ಪುತ್ರ ಜಯಂತ, ಕಶ್ಯಪಋಷಿ, ಮನುಗಳು ಹನ್ನೊಂದು ಜನ, ಧ್ರುವರಾಯ, ನಹುಷರಾಯ, ಶಶಿಬಿಂದುರಾಜ, ಹೈಹಯನೆಂಬ ಕಾರ್ತವೀರ್ಯರಾಜ, ದೌಷ್ಯಂತಿ ಎಂಬ ಭರತರಾಯ, ವಿರೋಚನನ ಮಗ ಬಲಿರಾಯ ಮೊದಲಾದ ಏಳು ಜನ ಇಂದ್ರರು, ಕಕುಸ್ಥರಾಯ, ಗಯರಾಯ ಸಹ ಮೇಲೆ ಕಂಡ ಎಂಭತ್ತೇಳು ಜನ ಶೇಷಶತಸ್ಥರಿಗಿಂತ ಕಡಿಮೆಯೆನಿಸಿಕೊಳ್ಳುವರು. ॥೧೩॥

# ಸರ್ವವ್ಯಾಖ್ಯಾನಸಾರಸಂಗ್ರಹ

85 ಮಂದಿ ಶೇಷಶತಸ್ಥರಿಗಿಂತ ಕಡಿಮೆಯಾದವರ ತಾರತಮ್ಯಕ್ರಮ ತಿಳಿಸುತ್ತಾರೆ.

## 1. ಚ್ಯವನಋಷಿ :–

ವರುಣಪುತ್ರನಾದ ಭೃಗುಋಷಿಯ ಪುತ್ರ. ಈತನ ತಾಯಿ ಪುಲೋಮೆ. ಒಬ್ಬ ರಾಕ್ಷಸನು ಒಮ್ಮೆ ಪುಲೋಮೆಯನ್ನು ಅಪಹರಿಸಿದನು. ಆಗ ಪುಲೋಮೆ ಭಯಗ್ರಸ್ತಳಾದಳು. ಆಗ ಅವಳು ಗರ್ಭಿಣಿಯಾಗಿದ್ದಳು. ಭಯದಿಂದ ಶಿಶುವು ಗರ್ಭದಿಂದ ಚ್ಯುತವಾಯಿತು. ಈ ಕಾರಣದಿಂದ

ಚ್ಯವನವೆಂಬ ಹೆಸರಾಯಿತು. ಆ ಶಿಶು ಆ ರಾಕ್ಷಸನನ್ನು ಕ್ರೂರದೃಷ್ಟಿಯಿಂದ ನೋಡಿತು. ತಕ್ಷಣ ರಾಕ್ಷಸನು ಉರಿದು ಬೂದಿಯಾದನು. ರಾಕ್ಷಸರ ಗುರುಗಳಾದ ಶುಕ್ರಚಾರ್ಯರು ಈತನ ಸಹೋದರರು. ಚ್ಯವನನು ಮನುಪುತ್ರಿಯಾದ ಅರುಷಿ ಎಂಬ ಕನ್ಯೆಯನ್ನು ಲಗ್ನವಾದನು. ಆಕೆಯು ಗರ್ಭದಲ್ಲಿ ಜನಿಸಿದವನೇ ಔರ್ವನೆಂಬುವನು. ಒಮ್ಮೆ ಚ್ಯವನ ಋಷಿಯು ತಪೋರತನಾಗಿದ್ದಾಗ, ಅವನ ದೇಹದ ಸುತ್ತಲೂ ಮಹತ್ತರವಾದ ಹುತ್ತವು ಬೆಳೆಯಿತು. ಆತನ ಕಣ್ಣುಗಳು ಮಾತ್ರ ಹುತ್ತದ ರಂಧ್ರಗಳ ಮೂಲಕ ಮಿನುಗುಟ್ಟುತ್ತಿದ್ದುವು. ಒಮ್ಮೆ ಶರ್ಯಾತಿರಾಜನು ಬೇಟೆಗಾಗಿ ಆ ವನಕ್ಕೆ ಬಂದು, ಚ್ಯವನನು ತಪೋನಿರತನಾಗಿದ್ದ ಸ್ಥಾನದ ಬಳಿ ಬಿಡಾರ ಬಿಟ್ಟನು. ಆಗ ಶರ್ಯಾತಿ ಪುತ್ರಿಯಾದ ಸುಕನ್ಯೆಯು ಹುತ್ತದ ಸಮೀಪಕ್ಕೆ ಬಂದಳು. ಚೇಷ್ಟೆಗಾಗಿ ಹುತ್ತದ ರಂಧ್ರಗಳ ಮೂಲಕ ಮುಳ್ಳಿನ ಕೊನೆಯಿಂದ ಚ್ಯವನನ ಕಣ್ಣುಗಳಲ್ಲಿ ಚುಚ್ಚಿದಳು. ಇದರ ಪರಿಣಾಮವಾಗಿ ಶರ್ಯಾತಿ ರಾಜನ ಸೇವಾ ಪರಿವಾರಕ್ಕೆ ಮಲ ಮೂತ್ರಗಳು ಬದ್ಧವಾದುವು. ಮಗಳ ಅಪರಾಧವನ್ನು ಅರಿತ, ಆ ರಾಜನು ಚ್ಯವನನಲ್ಲಿ ಕ್ಷಮೆಯಾಚಿಸಿದ. ಆಗ ಚ್ಯವನನು ಕುರುಡಾದ ತನಗೆ ಸುಕನ್ಯೆಯನ್ನು ಶುಶ್ರೂಷೆಗಾಗಿ ಕೊಡಬೇಕೆಂದು ಕೇಳಿದ. ಅರಸನು ಚಿಂತಾಕ್ರಾಂತನಾಗಲು, ಸುಕನ್ಯೆಯು ಅಷ್ಟು ಜನರ ಪ್ರಾಣಗಳನ್ನು ಉಳಿಸುವ ಸಲುವಾಗಿ, ಚ್ಯವನನ್ನು ಲಗ್ನವಾಗಲು ಸಮ್ಮತಿಸಿದಳು. ಅಶ್ವಿನೀದೇವತೆಗಳ ಅನುಗ್ರಹದಿಂದ ಸುಕನ್ಯೆಯು ತನ್ನ ಪತಿಗೆ ಯೌವ್ವನವನ್ನು ಕರುಣಿಸುವಂತೆ ಬೇಡಿಕೊಂಡಳು. ಆಗ ಚ್ಯವನನು ಸುಕನ್ಯೆಯ ಪಾತಿವ್ರತ್ಯದ ಮಹಿಮೆಯಿಂದ ನವತಾರುಣ್ಯವನ್ನು ಪಡೆದನು. ನಂತರ ಚ್ಯವನನು ಬಹುಕಾಲ ಸುಕನ್ಯೆಯೊಡನೆ ಸುಖವಾಗಿ ಸಂಸಾರ ಮಾಡುತ್ತಾ ಪ್ರಮತಿ ಎಂಬ ಪುತ್ರನನ್ನು ಪಡೆದನು.

**2. ಸನಕಾದಿಗಳು :-**

ಬ್ರಹ್ಮನ ಮಾನಸಪುತ್ರರು-ಸನಕ-ಸನಂದನ- ಸನತ್ಸುಜಾತ - ಸನತ್ಕುಮಾರ-ಎಂಬ ನಾಲ್ವರು. ಇವರ ಪೈಕಿ ಸನತ್ಕುಮಾರನು ಶ್ರೀವಿಷ್ಣುವಿನ ಅವತಾರನು. ಇದರಿಂದ ಆದಿ ಶಬ್ದದಿಂದ ಸನಕ-ಸನಂದನ - ಸನತ್ಸುಜಾತರನ್ನು ಗ್ರಹಿಸಬೇಕು.

3. ಅಗ್ನಿಪುತ್ರನಾದ **ಪಾವಕ**-ಎಂಬ ದೇವತೆ.

4. **ಕವಿ** -ಎಂದರೆ ಅಸುರರ ಗುರುಗಳಾದ ಶುಕ್ರಾಚಾರ್ಯರು.

**5. ಉಚಿಥ್ಯ ಎಂಬ ಪರಮಜ್ಞಾನಿ :-**

ಅಂಗೀರಸಮುನಿಯ ಪುತ್ರ. ಬೃಹಸ್ಪತೀ ಮತ್ತು ಸಂವರ್ತನು ಈತನ ತಮ್ಮಂದಿರು. ಚಂದ್ರನ ಪುತ್ರಿಯಾದ ಭದ್ರೆ ಎಂಬುವಳು ಈತನ ಪತ್ನಿ. ಧೀರ್ಘತಮನೆಂಬುವನು ಉಚಿಥ್ಯನಪುತ್ರ.

**6. ಜಯಂತ :-**

ಇಂದ್ರನ ಪುತ್ರನಾದ ಜಯಂತನು ಪಾದಾಭಿಮಾನಿಯದ ತತ್ತ್ವ ದೇವತೆಯು.

**7. ಕಶ್ಯಪಋಷಿ :-**

ಈ ಮಹರ್ಷಿಯು ಬ್ರಹ್ಮಪುತ್ರನಾದ ಮರೀಚಿಯಿಂದ ಕರ್ದಮಪುತ್ರಿಯಾದ ಕಲೆಯಲ್ಲಿ ಜನಿಸಿದನು. ಈತನಿಗೆ ಅದಿತಿ -ದಿತಿ-ದನು- ಕಲಾ-ದನಾಯು-ಸಿಂಹಿಕಾ-ಕ್ರೋಧಾ-ಪ್ರಾಧಾ"ವಿಶ್ವಾ" (ಇತಿ ಎಂದು ನಾಮಾಂತರವೂ ಉಂಟು)-ವಿನತಾ-ಕಪಿಲಾ-ಮುನಿ-ಕದ್ರು-ಎಂಬ ದಕ್ಷಪ್ರಜೇಶ್ವರನ ಹದಿಮೂರು ಮಂದಿ ಪತ್ನಿಯರಿದ್ದರು. ಪುತ್ರಕಾಮೇಷ್ಟಿಯನ್ನು ಮಾಡಿ,

ಅನೇಕ ಪುತ್ರರನ್ನು ಪಡೆದನು. ಆದಿತ್ಯ (ಸುರರು), ದೈತ್ಯ-ದಾನವ-ಗರುಡ-ಗಂಧರ್ವ-ನಾಗ-ಪಶು-ಪಕ್ಷಿ-ವೃಕ್ಷ-ಗುಲ್ಮ-ಲತಾದಿಗಳು ಕಶ್ಯಪನ ಸಂತತಿ. ಕೃತಯುಗದಲ್ಲಿ ಶ್ರೀವಿಷ್ಣುವು ಅದಿತಿ-ಕಶ್ಯಪರಲ್ಲಿ ವಾಮನಾವತಾರ ಮಾಡಿ, ಉಪೇಂದ್ರನೆನಿಸಿದನು. ತ್ರೇತೆಯಲ್ಲಿ ಕಶ್ಯಪನು ದಶರಥನಾಗಿಯೂ, ಆದಿತಿಯು ಕೌಸಲ್ಯಳಾಗಿಯೂ ಅವತರಿಸಿದರು. ದಶರಥ ಕೌಸಲ್ಯಾನಂದನನೇ ಶ್ರೀರಾಮನು. ದ್ವಾಪರದಲ್ಲಿ ಅವರು ವಸುದೇವ-ದೇವಕಿಯರಾದರು. ಅವರಲ್ಲಿ ಶ್ರೀಕೃಷ್ಣನ ಅವತಾರ.

## 8. ಏಕಾದಶ ಮನುಗಳು :-

ಮನುಗಳ ಸಂಖ್ಯೆ 14. ಇವರ ಪೈಕಿ, ಸ್ವಾಯಂಭುವಮನು-ತಾಪಸ-ವೈವಸ್ವತ ಮೂರು ಮಂದಿ ಉತ್ತಮ ಕಕ್ಷಕ್ಕೆ ಸೇರಿದವರು.

ಉಳಿದವರು 1. ಸ್ವಾರೋಚಿಷ. 2. ಚಾಕ್ಷುಷ. 3. ಬ್ರಹ್ಮಸಾವರ್ಣೀ 4. ರುದ್ರಸಾವರ್ಣಿ. 5. ಉತ್ತಮ. 6. ಸಾವರ್ಣಿ. 7. ಧರ್ಮಸಾವರ್ಣಿ. 8. ಇಂದ್ರಸಾವರ್ಣಿ. 9. ರೈವತ. 10. ದಕ್ಷಸಾವರ್ಣಿ ಮತ್ತು 11. ದೇವಸಾವರ್ಣಿ-(ಏಕಾದಶ) ಮನುಗಳ ವರ್ಗ.

## 9. ಧ್ರುವರಾಜ :-

ಸ್ವಾಯಂಭುವಮನುವಿನ ಮೊಮ್ಮಗನು ಉತ್ತಾನಪಾದರಾಯ. ಈತನ ಹಿರಿಯ ಪತ್ನಿ ಸುನೀತೆಯ ಪುತ್ರನೇ ಧ್ರುವನು. ಮಲತಾಯಿಯಾದ ಸುರುಚಿಯಿಂದ ಅವಮಾನಿತನಾಗಿ, ವನದಲ್ಲಿ ಘೋರತಪವನ್ನಾಗೈದು, ಶ್ರೀಮನ್ನಾರಾಯಣನನ್ನು ಪ್ರತ್ಯಕ್ಷೀಕರಿಸಿಕೊಂಡ ಮಹಾತ್ಮನಿವನು. ಉತ್ತರ ದಿಕ್ಕಿನಲ್ಲಿರುವ ಧ್ರುವ ಮಂಡಲವೇ ಇತನ ಸ್ಥಿರವಾದ ಸ್ಥಾನ.

## 10. ನಹುಷ ಚಕ್ರವರ್ತಿ :–

ಚಂದ್ರವಂಶದ ಅರಸು. ಊರ್ವಶೀ ಪುರೊರವರ ಪುತ್ರನಾದ ಆ ಯುವ ರಾಜನಿಂದ ಸ್ವರ್ಭಾನವಿಯಲ್ಲಿ ಜನಿಸಿದವನು. ಈತನ ಪತ್ನಿ ಪಿತೃದೇವತೆಗಳ ಕನ್ಯೆ ವಿರಜಾ. ಈತನಿಗೆ ಯತಿ-ಯಾಯಾತಿ-ಸಂಯಾತಿ-ಆಯಾತಿ-ಅಯತಿ- ಧ್ರುವ ಎಂಬ ಆರು ಮಂದಿ ಪುತ್ರರು. ಈತನು ಇಂದ್ರಪದವಿಯನ್ನು ಆಳಿದನು. ಆಗ ನಹುಷನಿಗೆ ಇಂದ್ರನ ರಾಣಿಯಾದ ಶಚಿಯನ್ನು ಹೊಂದಬೇಕೆಂಬ ದುರ್ಬುದ್ಧಿ ಹುಟ್ಟಿತು. ಶಚಿಯು ಉಪಾಯಾಂತರದಿಂದ ನಹುಷನಿಗೆ,-"ನೀನು ಅಪೂರ್ವವಾದ ವಾಹನದಲ್ಲಿ ಕುಳಿತು ಬಂದರೆ, ನಿನ್ನ ವಶಳಾಗುವೆನು"- ಎಂದು ತಿಳಿಸಿದಳು. ಆಗ ನಹುಷನು ಸಪ್ತರ್ಷಿಗಳನ್ನೇ ವಾಹನನ್ನಾಗಿ ಮಾಡಿಕೊಂಡು, ಪಲ್ಲಕ್ಕಿಯಲ್ಲಿ ಕುಳಿತು ಶಚಿಯ ಮಂದಿರಕ್ಕೆ ಹೊರಟ. ಅಗಸ್ತ್ಯರೂ ಸಹ ಪಲ್ಲಕ್ಕಿಯ ವಾಹಕರಾಗಿದ್ದರು. ನಹುಷನು ಶಚಿಯನ್ನು ಕೂಡಬೇಕೆಂಬ ಆತುರ ದಿಂದ-"ಸರ್ಪ-ಸರ್ಪ"-ಎಂದರೆ-"ಬೇಗ ಬೇಗ ನಡೆ"-ಎಂದು ಅಗಸ್ತ್ಯಮುನಿಯ ತಲೆಯನ್ನು ತನ್ನ ಕಾಲಿನಿಂದ ಒದ್ದನು. ಆಗ ಕ್ರುದ್ಧರಾದ ಅಗಸ್ತ್ಯರು. "ಸರ್ಪೋಭವ" (ನೀನು ಸರ್ಪನಾಗು)– ಎಂದು ಶಪಿಸಿದರು. ಕೂಡಲೇ ನಹು ಷನು ಅಜಗರನಾಗಿ ಬಿದ್ದನು. ಪಾಂಡವರ ವನವಾಸಕಾಲದಲ್ಲಿ ಸರ್ಪರೂಪ ದಿಂದಿದ್ದ ನಹುಷನು ಭೀಮಸೇನನನ್ನು ಬಿಗಿಯಾಗಿ ಬಂಧಿಸಿದನು. ಧರ್ಮ ರಾಯನು ಸರ್ಪದ ಪ್ರಶ್ನೆಗಳಿಗೆ ಸೂಕ್ತಉತ್ತರಗಳನ್ನು ಹೇಳಿ ಭೀಮನನ್ನು ಸರ್ಪದ ಬಂಧನದಿಂದ ಬಿಡಿಸಿದನು. ಆಗ ನಹುಷನಿಗೆ ಸರ್ಪದೇಹ ಹೋಗಿ, ದಿವ್ಯದೇಹಧಾರಿಯಾಗಿ ಸ್ವರ್ಗಕ್ಕೆ ಹೋದನು.

## 11. ಶಶಿಬಿಂದು :–

ಯದುವಂಶದ ಒಬ್ಬ ರಾಜರ್ಷಿ. ವೃಷ್ಣಿ ವಂಶದ ಚಿತ್ರರಥನ ಪುತ್ರ. ಇವನ ಪುತ್ರಿಯಾದ ಬಿಂದುಮತಿ ಎಂಬುವಳು ಮಾಂಧಾತ ರಾಜನ ಪತ್ನಿ.

**12. ಹೈಹಯ :–**

ಸೂರ್ಯವಂಶದ ಅರಸು. ಶರ್ಯಾತಿರಾಜನ ಮಗ. ಇವನೇ ಕಾರ್ತವೀರ್ಯಾರ್ಜುನನು. ಸಹಸ್ರತೋಳ್ಬಲವುಳ್ಳ ಅಸಮಪರಾಕ್ರಮಿ.

**13. ದವ್ರುಷಯಂತಿ :–**

ದುಷ್ಯಂತರಾಜನಿಂದ ಶಕುಂತಲೆಯಲ್ಲಿ ಜನಿಸಿದ **ಭರತರಾಜನೇ** ದೌಷ್ಯಂತಿಯು.

**14. ಬಲಿ :–**

ಪ್ರಹ್ಲಾದ ರಾಜನ ಪುತ್ರನೇ ವಿರೋಚನನು. ವಿರೋಚನನ ಪುತ್ರನೇ ಬಲಿಚಕ್ರವರ್ತಿ. ಈತನ ಪತ್ನಿ ವಿಂಧ್ಯಾವಳೀ. ಬಾಣಾಸುರನು ಬಲಿಯ ಪುತ್ರ.

**15. ಸಪ್ತೇಂದ್ರರು :–**

14 ಮಂದಿ ಇಂದ್ರರ ಪೈಕಿ, ಚ್ಯವನ- ಅದ್ಭುತ- ಶಂಭು- ವೈದ್ಯುತಿ- ದಿವಸ್ಪತಿ-ಶುಚಿ-ರಿತಧಾಮು-ಎಂಬ ಏಳುಮಂದಿ ಇಂದ್ರರು.

(ಬ್ರಹ್ಮದೇವರ ಒಂದು ಹಗಲಿನಲ್ಲಿ 14 ಇಂದ್ರರು ಸ್ವರ್ಗಲೋಕವನ್ನೂ 14 ಮನುಗಳು ಭೂಲೋಕವನ್ನೂ ಆಳುತ್ತಾರೆ-ಒಬ್ಬ ಮನುವಿನ ಆಯಸ್ಸು = ಒಂದು ಮನ್ವಂತರ = 71 ಮಹಾ ಯುಗಗಳು-ಈ ಸಪ್ತೇಂದ್ರರಿಗೆ ಶಚೀ ಪತಿತ್ವವಿಲ್ಲ).

**16. ಕಕುಸ್ಥ :–**

ಇಕ್ಷ್ವಾಕುವಿನ ಮೊಮ್ಮಗನು. ಶಶಾದನ ಪುತ್ರನು. ಇವನಿಗೆ ಇಂದ್ರ ವಾಹ-ಎಂಬ ನಾಮಾಂತರ ಉಂಟು. ಒಮ್ಮೆ ದೇವತೆಗಳು ದಾನವರೊಡನೆ ಯುದ್ಧ ಮಾಡಬೇಕಾದ ಪ್ರಸಂಗದಲ್ಲಿ ಈತನು ವೃಷಭರೂಪಿಯಾದ ಇಂದ್ರನ ಕರುತ್-ಎಂದರೆ ಡುಬ್ಬದ ಮೇಲೆ ಕುಳಿತು, ರಾಕ್ಷಸರನ್ನು ಜಯಿಸಿದನು. ಇದ ರಿಂದ ಈತನಿಗೆ "ಇಂದ್ರವಾಹ" ಮತ್ತು "ಕಕುತ್ಸ್ಥ"-ಎಂಬ ಹೆಸರು ಬಂದಿತು.

17. ಗಯರಾಜ :–

ಚಂದ್ರವಂಶದ ಆಯುಃ ರಾಜನ ಪುತ್ರ. ಸ್ವರ್ಭಾನು ಈತನ ಮಾತೆ. ನಹುಷ ಮತ್ತು ಅನೇಸರು ಈತನ ಸಹೋದರರು.

ಮೇಲ್ಕಂಡವರೆಲ್ಲರೂ **ಶತಸ್ಥದೇವತೆಗಳಿಗಿಂತ** ಅವರರು. ಇವರಲ್ಲಿ ಮೇಲ್ಕಂಡ ಕ್ರಮದಲ್ಲಿ ತಾರತಮ್ಯವಿದೆ. ॥೧೩॥

## ಪದ್ಯ–೧೪

**ಮೂಲ :–**

**ಪೃಥು ಭರತ ಮಾಂಧಾತ ಪ್ರಿಯ ।**
**ವ್ರತ ಮರುತ ಪ್ರಹ್ಲಾದ ಸುಪರಿ ।**
**ಕ್ಷಿತ ಹರಿಶ್ಚಂದ್ರಾಂಬರೀಷೋತ್ತಾನಪಾದ ಮುಖ ॥**
**ಶತ ಸುಪುಣ್ಯಶ್ಲೋಕರು ಗದಾ ।**
**ಭೃತಗಧಿಷ್ಠಾನರು ಸುಪ್ರಿಯ ।**
**ವ್ರತಗೆ ದ್ವಿಗುಣಾಧಮರು ಕರ್ಮಜರೆಂದು ಕರೆಸುವರು ॥**
॥೧೪॥

**ಅವತರಣಿಕೆ :–**

ಅವಶಿಷ್ಟರಾದ ಕರ್ಮಜದೇವತೆಗಳ ವಿಚಾರ ತಿಳಿಸುತ್ತಾರೆ. ॥೧೪॥

**ಪ್ರತಿಪದಾರ್ಥ :–**

**ಪೃಥು** = ಪೃಥು ಚಕ್ರವರ್ತಿ, **ಭರತ** = ಭರತಚಕ್ರವರ್ತಿ, **ಮಾಂಧಾತ** = ಮಾಂಧಾತಚಕ್ರವರ್ತಿ, **ಪ್ರಿಯವ್ರತ** = ಪ್ರಿಯವ್ರತ

ರಾಯನು, **ಮರುತ** = ಮರುತರಾಯನು, **ಪ್ರಹ್ಲಾದ** = ಪ್ರಹ್ಲಾದ ರಾಜ, **ಸುಪರೀಕ್ಷಿತ** = ಪರೀಕ್ಷಿದ್ರಾಯನು, **ಹರಿಶ್ಚಂದ್ರ** = ಹರಿಶ್ಚಂದ್ರ ರಾಜ, **ಅಂಬರೀಷ** = ಅಂಬರೀಷ ಚಕ್ರವರ್ತಿ, **ಉತ್ತಾನಪಾದ** = ಉತ್ತಾನಪಾದರಾಯನು, **ಮುಖ** = ಇವರೇ ಮೊದಲಾದ, **ಶತಸುಪುಣ್ಯ ಶ್ಲೋಕರು** = ನೂರು ಮಂದಿ ಪುಣ್ಯಪುರುಷರು, **ಗದಾಭೃತಗೆ** = ಗದಾ ಧರನಾದ ಶ್ರೀಪರಮಾತ್ಮನಿಗೆ, **ಅಧಿಷ್ಠಾನರು** = ಅಧಿಷ್ಠಾನರೂಪರು ಅಂದರೆ, ಇವರಲ್ಲಿ ಭಗವದ್ವಿಭೂತಿರೂಪವಿದೆ, **ಸುಪ್ರಿಯವ್ರತಗೆ** = ಭಗವದ್ವಿಭೂತಿಸಂಪನ್ನನಾದ ಪ್ರಿಯವ್ರತರಾಜನಿಗಿಂತ, **ದ್ವಿಗುಣಾಧಮರು** = ಎರಡು ಸಜಾತಿ ಗುಣಗಳಿಂದ ಕಡಿಮೆಯಾದವರು, **ಕರ್ಮಜರೆಂದು** = ಕರ್ಮಜದೇವತೆಗಳೆಂದು, **ಕರೆಸುವರು** = ಕರೆಯಿಸುತ್ತಾರೆ.

**ವಿಶೇಷಾಂಶ :—**

1) ಮೇಲ್ಕಂಡ 100 ಮಂದಿ ಪುಣ್ಯಶ್ಲೋಕದಲ್ಲಿ ಪ್ರಿಯವ್ರತನು ಶ್ರೇಷ್ಠನು.

2) ಪ್ರಿಯವ್ರತನಿಗಿಂತ ಕರ್ಮಜದೇವತೆಗಳು ದ್ವಿಗುಣಾಧಮರು.

3) ಕುಬೇರಾದಿಗಳು ಕರ್ಮಜದೇವತೆಗಳಿಗಿಂತ ಎರಡು ವಿಜಾತೀಯ ಗುಣ ಅಧಿಕರು. ॥೧೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :—

ಅವಶಿಷ್ಠ ಕರ್ಮಜದೇವತೆಗಳನ್ನು ಹೇಳುತಾರೆ.

ಪೃಥುಚಕ್ರವರ್ತಿ, ಮಾಂಧಾತ ಚಕ್ರವರ್ತಿ, ಪ್ರಿಯವ್ರತರಾಯ, ಭರತ ರಾಯ, ಮರುತರಾಯ, ಪ್ರಹ್ಲಾದರಾಯ, ಪರೀಕ್ಷಿದ್ರಾಯ, ಹರಿಶ್ಚಂದ್ರ

ರಾಯ, ಅಂಬರೀಷರಾಯ, ಉತ್ತಾನಪಾದರಾಯ–ಮೊದಲಾದ ನೂರು ಮಂದಿ ಪುಣ್ಯಶ್ಲೋಕರು, ದುಷ್ಟನಿಗ್ರಹ ಶಿಷ್ಟಪರಿಪಾಲನ ಮಾಡತಕ್ಕ ಗದಾ ಯುಧ ಧರಿಸಿದ ರಾಜರಾಜೇಶ್ವರರೂಪನಾದ ಶ್ರೀಪರಮಾತ್ಮಗೆ ಅಧಿಷ್ಠಾನ ರೂಪರು. ಅಂಥಾ ರೂಪದಿಂದ ಲೋಕರಕ್ಷಣಾರ್ಥ ಈ ನೂರು ಮಂದಿ ರಾಜ ರಲ್ಲಿ ಪ್ರವಿಷ್ಟನಾಗಿದ್ದಾನೆಂದು ತಾತ್ಪರ್ಯ.

**ಪ್ರಮಾಣ :– ಪೃಥು ಹೈಹಯಾದಯೋ ಜೀವಾಸ್ತೇಷ್ವಾವಿಷ್ಟೋ ಹರಿಃ ಸ್ವಯಂ । ವಿಶೇಷಾವೇಶತಸ್ತೇಷು ಸಾಕ್ಷಾದ್ಧರ್ಯಂ ಶತಾವಚಃ॥ ಇತಿ ಭಾಗವತೇ-ಚತುರ್ದಶಾಧ್ಯಾಯೇ ।**

ಇವರು ಯಾವತ್ತೂ ಮಂದಿ ಶ್ರೀಪರಮಾತ್ಮಗೆ ಪ್ರೀತಿಕರವಾದ ಸಮೀ ಚೀನವಾದ ಬ್ರಹ್ಮಚರ್ಯ ವ್ರತವುಳ್ಳ ಗಣೇಶಾದಿ 85 ಮಂದಿಗೆ ಎರಡು ಗುಣ ದಿಂದ ಅಧಮರು. ಪೂರ್ವೋಕ್ತರು **ಕರ್ಮಜದೇವತೆಗಳೆಂದು** ಕರಸತಾರೆ! ವಿಜಾತಿ ಎರಡು ಗುಣದಿಂದ ನೀಚರು. ಸಜಾತಿ ಎರಡು ಗುಣದಿಂದ ಸಮಾ ನರು. ಕುಬೇರಾದಿಗಳು ಕರ್ಮಜದೇವತೆಗಳಿಗೆ ಎರಡು ವಿಜಾತಿಗುಣದಿಂದ ಅಧಿಕರೆಂತ ತಾತ್ಪರ್ಯ.

**ವಿಶೇಷಾರ್ಥ :–** ಸುಪರೀಕ್ಷಿತ ಎಂದರೆ, ಸು-ಚೆಂದಾಗಿ ಪರಮಾತ್ಮನ ಚಕ್ರದಿಂದ ಪರೀಕ್ಷಾರೂಪದಿಂದ ರಕ್ಷಿತನಾದ ಕಾರಣ **ಪರೀಕ್ಷಿದ್ರಾಜ**–ಎಂತ ತಾತ್ಪರ್ಯ. ಗದಾಭೃತಗಧಿಷ್ಠಾನರು ಎಂದರೆ, ಗದೆಯನ್ನು, ಭೃತ- ಧರಿಸಿ ದುಷ್ಟಶಿಕ್ಷ, ಶಿಷ್ಟಪರಿಪಾಲನ ಮಾಡತಕ್ಕ ದಂಡರೂಪಿ ಪರಮಾತ್ಮನ ವಿಭೂತಿ ರೂಪ ಸನ್ನಿಧಾನ. ಅತಿಶಯವೆಂತ ತಿಳಿಯಬೇಕು. ಕರ್ಮಜದೇವತೆಗಳು ಎಂದರೆ, ಕರ್ಮದಿಂದ ದೇವತ್ವವನ್ನು ಹೊಂದಿದವರಾದ ಕಡಿಯಿಂದ ಕರ್ಮಜ ರೆಂತ ಕರಸೋವರಾಗ್ತಾರೆ. ಆದರೆ, ನಿರಂಶರು ಕರ್ಮದಿಂದ ದೇವತಿಗಳಾದವ ರಂತ ತಾತ್ಪರ್ಯವಲ್ಲ. ಅವರು ಸ್ವಾಭಾವಿಕರಾದ ದೇವತೆಗಳೇ. ದೇವತ್ವ ಶಕ್ತ್ಯಾತ್ಮನಾ ಇದ್ದದ್ದು, ಕರ್ಮಸಾಧನದಿಂದ ವ್ಯಕ್ತವಾಗೋದಾಯಿತು. ಅಷ್ಟೇ

ಹೊರತು, ನಿರಂಶರು ಕರ್ಮಮಾಡಿ ಅದರಿಂದ ದೇವತ್ವವನ್ನು ಹೊಂದಿದವರಂತ ತಿಳಿಯಬಾರದು. ಅದು ವಿಪರೀತಜ್ಞಾನ. ಇದರಿಂದ ಮಹಾನರಕಾದ್ಯನರ್ಥ ಗಳಾಗತವೆ. ಆದ್ದರಿಂದ ವಿಪರೀತಜ್ಞಾನ ಆಗಬಾರದು. ॥೧೪॥

## ೨. ಭಾವಪ್ರಕಾಶಿಕೆ :–

13, 14 ಈ ಎರಡು ಪದ್ಯಗಳಲ್ಲಿ ಹೇಳಿದ ರಾಜರು, ಋಷಿ ಮೊದ ಲಾದವರೆಲ್ಲರೂ ಕರ್ಮಜದೇವತೆಗಳೆನಿಸುವರು. ಇವರು ಶೇಷಶತಸ್ಥರಾದ 85 ದೇವತೆಗಳಿಗಿಂತಲೂ ಸ್ವಲ್ಪ ಗುಣದಿಂದ ಕಮ್ಮಿಯೆನಿಸುವರು. ಈ ಎರಡು ಪದ್ಯದಲ್ಲಿ ಹೇಳಿದವರೆಲ್ಲರೂ ಸಮರಾದರೂ, ಭಗವದಾವೇಶಬಲದಿಂದ ಸ್ವಲ್ಪ ಹೆಚ್ಚು ಕಮ್ಮಿಯಾಗುವುದು. ಈ ಕರ್ಮಜರ ಮಧ್ಯದಲ್ಲಿ "ವಿಪ್ರತ್ವಾಚ್ಚ್ಯವ ನೋಚಿಥ್ಯೌ ತನ್ಮಧ್ಯೇಕಿಂಚಿದುತ್ತಮೌ"-ಎಂಬ **ತಾರತಮ್ಯಕೌಸ್ತುಭದವ್ಯಾಖ್ಯಾ** ನುಸಾರವಾಗಿ, ಬ್ರಾಹ್ಮಣರಾದುದರಿಂದ ಚ್ಯವನರು, ಉಚಿಥ್ಯರು ಸ್ವಲ್ಪ ಉತ್ತಮರೆನಿಸುವರು. 100 ಪುಣ್ಯ ಶ್ಲೋಕರಾಜರಲ್ಲಿ ಪ್ರಿಯವ್ರತನನ್ನು ಗಣನೆ ಮಾಡಿ ಮತ್ತು ದಾಸಾರ್ಯರು ಸುಪ್ರಿಯವ್ರತಗೆ ದ್ವಿಗುಣಾಧಮರು ಕರ್ಮಜರೆಂದು ಕರೆಸುವರು-ಎಂದು ಹೇಳಿರುವರು. ಶತಸುಪುಣ್ಯಶ್ಲೋಕರು = 100 ಮಂದಿ ಪುಣ್ಯಕೀರ್ತಿರಾಯರುಗಳು ಗದಾಭೃತಗಧಿಷ್ಠಾನರು = ಗದಾಧಾರಿಯಾದ ಪರ ಮಾತ್ಮನ ಅಂಶದಿಂದ ಕೂಡಿದ ಕರ್ಮಜರು = ಕರ್ಮಜದೇವತೆಗಳೆಲ್ಲರೂ, ಸುಪ್ರಿಯವ್ರತಗೆ = ಪುಣ್ಯಕೀರ್ತಿಯಾದ ಪ್ರಿಯವ್ರತರಾಜನಿಗೆ, ದ್ವಿಗುಣಧಮ ರೆಂದು = ಎರಡು ಗುಣದಿಂದ ಕಮ್ಮಿಯೆಂದು ಕರೆಸುವರು– ಎಂದು ಹೇಳಿರು ವರು.

ಭಾಗವತ ಪಂಚಮಸ್ಕಂದ ತಾತ್ಪರ್ಯದಲ್ಲಿ "ಪ್ರಿಯವ್ರತೋಗಯಶ್ಚೈವ ಕರ್ಮದೇವ ಸಮೌಗುಣೈಃ",– ಪ್ರಿಯವ್ರತರಾಜ, ಗಯರಾಜ ಇವರಿಬ್ಬರೂ ಗುಣದಲ್ಲಿ ಕರ್ಮಜದೇವತೆಗಳಿಗೆ ಸಮರೆಂದು ಹೇಳಿರುವರು. ಹೀಗಿರಲು, ಪ್ರಿಯವ್ರತನನ್ನು ಮೊದಲು ಕರ್ಮಜರಲ್ಲಿ ಗಣನೆಮಾಡಿ ಮತ್ತೂ ಮಿಕ್ಕವರು ಇವನಿಗೆ ಎರಡು ಗುಣದಿಂದ ಕಮ್ಮಿಯೆಂದೇಕೆ ಹೇಳಿದರೆಂದರೆ, –ಪ್ರಿಯವ್ರತನು

ಕರ್ಮದೇವತೆಗಳಿಗೆ ಗುಣದಲ್ಲಿ ಸಮನೆಂದು ಸೇರಿಸಿದರೂ, ಅವನಲ್ಲಿ ವಿಶೇಷವಾದ ಭಗವದಂಶವು ಮಿಕ್ಕಯೆಲ್ಲರಕಿಂತಲೂ ಅಧಿಕವಾಗಿ ಇದ್ದುದರಿಂದ 2ಗುಣದಿಂದ ಉತ್ತಮನೆಂದು ಹೇಳಿರುತ್ತಾರೆಂದು ತಿಳಿಯಬೇಕು. ವಿಶೇಷವಾದ ಭಗವದಂಶ ಅವನಲ್ಲಿ ಇದ್ದಿತೆಂಬುದಕ್ಕೆ ಭಾಗವತ ಪಂಚಮಸ್ಕಂಧದ ವಚನವಿರುವುದು. ಅದೆಂತೆನೆ-"ಪ್ರಿಯವ್ರತ ಕೃತಂಕರ್ಮಕೋನುಕುರ್ಯಾದ್ವಿನೇಶ್ವರಂ ॥ ಯೋನೇಮಿನಿಮ್ನೈರಕರೋಚ್ಛಾಯಾಂಘ್ನ್ ಸಪ್ತವಾರಿಧೀ."– ಪ್ರಿಯವ್ರತರಾಜನು ಮಾಡಿದ ಕಾರ್ಯವನ್ನು ಮಾಡಲು ಪರಮಾತ್ಮನನ್ನು ಬಿಟ್ಟು ಮತ್ತಾರಿಂದ ಸಾಧ್ಯವು ? ಯಾವ ಪ್ರಿಯವ್ರತರಾಜನು ರಾತ್ರಿಕಾಲಗಳಲ್ಲಿ ಪರ್ವತದ ಛಾಯೆಯಿಂದ ಕತ್ತಲಾಗುವುದನ್ನು ಪರಿಹರಿಸಿ, ಹಗಲಿನಂತೆ ಮಾಡುವ ಉದ್ದೇಶವಾಗಿ ಒಂದು ಚಕ್ರವುಳ್ಳ ರಥವನ್ನೇರಿ ಮೇರುಪರ್ವತವನ್ನು ಪ್ರದಕ್ಷಿಣೆ ಮಾಡುವಾಗ ರಥಚಕ್ರದ ತಗ್ಗಿನಿಂದ ಸಪ್ತಸಮುದ್ರವನ್ನು ರಚಿಸಿದನೋ ಎಂಬಿವೇ ಮೊದಲಾದ ವಾಕ್ಯಗಳಿಂದ ಸಪ್ತದ್ವೀಪ ಸಪ್ತಸಮುದ್ರಾದಿಗಳನ್ನು ಮಾಡುವ ಕಾರ್ಯ ಪರಮಾತ್ಮನನ್ನು ಬಿಟ್ಟು,ಮತ್ತೊಬ್ಬರಿಂದ ಸಾಧ್ಯವಿಲ್ಲದ ಕಾರ್ಯವೆಂದ ಮೇಲೆ ಪ್ರಿಯವ್ರತನಲ್ಲಿ ವಿಶೇಷಾಂಶದಿಂದ ಪರಮಾತ್ಮನೇ ಇದ್ದು,ಈ ಕಾರ್ಯ ಮಾಡಿದನೆಂದು ಸ್ಪಷ್ಟವಾಗುವುದು. ಆದ್ದರಿಂದ ಪುಣ್ಯಶ್ಲೋಕರಾದ 100 ಮಂದಿ ರಾಜರುಗಳಲ್ಲಿ ಇವನೂ ಒಬ್ಬನಾದರೂ, ಅವರಕಿಂತಲೂ ಎರಡು ಗುಣ ಅಧಿಕನೆಂದು ದಾಸಾರ್ಯರು ಹೇಳಿರುತ್ತಾರೆಂದು ತಾತ್ಪರ್ಯ. ಅಥವಾ ಈ ಪದ್ಯದಲ್ಲಿರುವ "ಪ್ರಿಯವ್ರತಗೆ"–ಎಂಬ ಪದವನ್ನು ಮುಂದಿನ ಪದ್ಯದಲ್ಲಿ ಅನ್ವಯಮಾಡಿಕೊಂಡರೆ ಸರಿ ಹೋಗುತ್ತದೆ. ಉತ್ತಾನಪಾದ ಮುಖ ಶತಸುಪುಣ್ಯಶ್ಲೋಕರು, ಗದಾಭೃತಗಧಿಷ್ಠಾನರು, ಕರ್ಮಜರೆಂದು ಕರೆಸುವರು. ಇವರೆಲ್ಲರು ದ್ವಿಗುಣಾಧಮರು = ಉಕ್ತೇತರರಾದ 85 ದೇವತೆಗಳಗಿಂತಲೂ ಎರಡು ಗುಣ ಕಮ್ಮಿ ಎಂದೇ ಅರ್ಥಮಾಡಿ, ಪ್ರಿಯವ್ರತಗೆ ಎಂಬ ಪದವನ್ನು ನಳಿನಿ ಸಂಜ್ಞಾರೋಹಿಣಿ ಎಂಬ ಪದ್ಯದಲ್ಲಿ ಸೇರಿಸಿಕೊಂಡು, ನಳಿನಿ ಅಂದರೆ ಗಂಗೆ, ಗಂಗೆ ಮೊದಲಾದವರು ಸುಪ್ರಿಯವ್ರತಗೆ ಅಧಮರು ಎಂದು ಅರ್ಥಮಾಡಿದರೂ ಸಿದ್ಧಾಂತಕ್ಕೂ ದಾಸರ ವಾಕ್ಯಕ್ಕೂ ಅವಿರೋಧವಾಗುವುದು. ॥೧೪॥

೩. **ಭಾವದರ್ಪಣ :–**

13 ನೇ ಪದ್ಯದಲ್ಲೇ ಈ ಪದ್ಯದ ತಾತ್ಪರ್ಯವನ್ನೂ ಕೊಟ್ಟಿದೆ. ॥೧೪॥

೪. **ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

"ಪೃಥು"-ಇತಿ. ॥೧೪॥

### ಕನ್ನಡಾರ್ಥ

ಕರ್ಮಜದೇವತೆಗಳನ್ನು ಇನ್ನೂ ವಿಶದಪಡಿಸುತ್ತಾರೆ. "ಪೃಥು"-ಎಂಬ ಪದ್ಯದಿಂದ (ಪದ್ಯಾರ್ಥವು ಸ್ಪಷ್ಟವಿರುತ್ತದೆ). ॥೧೪॥

೫. **ಶ್ರೀಗುರುಹೃದಯಪ್ರಕಾಶಿಕಾ :–**

ಪೃಥುರಾಯ, ಋಷಭಪುತ್ರ ಭರತರಾಯ, ಮಾಂಧಾತರಾಯ, ಪ್ರಿಯವ್ರತರಾಯ, ಮರುತ್ತರಾಯ, ಪ್ರಹ್ಲಾದರಾಯ, ಸುಪರೀಕ್ಷಿದ್ರಾಜ, ಹರಿಶ್ಚಂದ್ರರಾಯ, ಅಂಬರೀಷರಾಯ, ಉತ್ತಾನಪಾದರಾಯ–ಮೊದಲಾದ ಶತಪುಣ್ಯಶ್ಲೋಕರೆಂಬ ಧರ್ಮಕೀರ್ತಿವುಳ್ಳ ಮಹಾರಾಜರುಗಳು ಗದಾಧಾರಿಯಾದ ದೇವರಿಗೆ ದುಷ್ಟನಿಗ್ರಹಕ್ಕೆ ಅಧಿಷ್ಠಾನರಾದವರು, ಕರ್ಮಜದೇವತೆಗಳೆಂದು ಕರೆಸುವರು. ಪ್ರಿಯವ್ರತಗಿಂತ ಎರಡು ಗುಣ ಕಡಿಮೆ. ತಮ್ಮೊಳಗೆ ಸಮರು. ॥೧೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಲ್ಲಿ 100 ಮಂದಿ ಪುಣ್ಯಶ್ಲೋಕರಾದ ಕರ್ಮಜದೇವತೆಗಳ ವಿಚಾರ ತಿಳಿಸುತ್ತಾರೆ.

ಇವರು ಕರ್ಮದಿಂದ ದೇವತ್ವವನ್ನು ಹೊಂದಿದ ದೇವತಾವರ್ಗ. ಅವರು ಸ್ವರೂಪತಃ ದೇವತೆಗಳೇ, ಅವರಲ್ಲಿ ದೇವತ್ವ ಶಕ್ತ್ಯಾತ್ಮನಾ ಇದ್ದದ್ದು, ಕರ್ಮ ಸಾಧನದಿಂದ ವ್ಯಕ್ತವಾಯಿತು. ಇದರಿಂದ ಈ ವರ್ಗಕ್ಕೆ **ಕರ್ಮಜದೇವತೆ** ಗಳೆಂದು ಹೆಸರು.

ಇವರ ವಿವರಗಳು ಇಂತಿವೆ :-

## 1) ಪೃಥುಚಕ್ರವರ್ತಿ :-

ವೇನರಾಜನ ಪುತ್ರ ವೇನನು ಪರಮ ನಾಸ್ತಿಕನಾಗಿದ್ದನು. ಅದರಿಂದ ಅವನ ರಾಜ್ಯದಲ್ಲಿ ಭೂಮಿಯಲ್ಲಿ ಬೆಳೆಯಾಗದೆ, ಬಿತ್ತಿದ ಬೀಜಗಳನ್ನೆಲ್ಲಾ ಭೂಮಿಯೇ ನುಂಗುತ್ತಿತ್ತು. ಆಗ ಘೋರ ಕ್ಷಾಮ ಉಂಟಾಯಿತು. ಕಂಗೆಟ್ಟ ಪ್ರಜೆಗಳೆಲ್ಲರೂ ಸೇರಿ ಜ್ಞಾನಿಗಳ ಆದೇಶದಂತೆ, ವೇನರಾಜನ ಶರೀರವನ್ನು ಮಥನ ಮಾಡಿದರು. ಆಗ **ಪೃಥು** ಜನಿಸಿದನು. ಪೃಥುವು ಮಹಾ ಧರ್ಮಿಷ್ಠ ಹಾಗೂ ಭಗವದ್ಭಕ್ತ. ಅವನು ಭೂದೇವಿಯನ್ನು ಪ್ರಾರ್ಥಿಸಿ, ಭೂಮಿಯು ನುಂಗಿದ್ದ ವಸ್ತುಗಳೆಲ್ಲಾ ಪ್ರಜೆಗಳಿಗೆ ಕೊಡಿಸಿ, ಸುಖವನ್ನುಂಟುಮಾಡಿದನು. ಅಂದಿನಿಂದ ಭೂಮಿಗೆ **ಪೃಥಿವೀ** (ಅಂದರೆ, ಪೃಥುರಾಜನ ಮಗಳು) ಎಂಬ ಹೆಸರಾಯಿತು. ಪೃಥುರಾಜನ ಪತ್ನಿ ಅರ್ಚಿತ ಎಂಬುವಳು. ಇವನ ಪುತ್ರನು. ಅಂತರ್ಧಾನನಾಮಕನು. ಪ್ರಾಚೀನಬರ್ಹಿಯು ಪೃಥುರಾಜನ ಮೊಮ್ಮಗನು. ಇವನು ಭಗವದ್ವಿಭೂತಿಸಂಪನ್ನನು.

## 2) ಭರತರಾಯ :-

ಋಷಭ ರಾಜನಪುತ್ರನು ಭರತರಾಯನು. ಇವನೂ ಶತಪುಣ್ಯಶ್ಲೋಕ ರಲ್ಲಿ ಸೇರಿದ ಕರ್ಮಜ ದೇವತೆಯು. ಋಷಭ ದೇವನಿಂದ ಜಯಂತಿ ಎಂಬುವ ಳಲ್ಲಿ ಜನಿಸಿದ ಹಿರಿಯಪುತ್ರ. ಈತನ ಪತ್ನಿ ಪಂಚಜನಿ ಎಂಬುವಳು. ಇವನಿಗೆ ಸುಮತಿ-ರಾಷ್ಟ್ರಭೃತ್ -ಸುದರ್ಶನ- ಆವರಣ - ಧೂಮ್ರಕೇತುಗಳೆಂಬ ಐದು ಮಂದಿ ಪುತ್ರರು. ಇವನು ಪಾಲಿಸಿದ ದೇಶಕ್ಕೆ ಭರತಖಂಡವೆಂದು ಹೆಸರಾಯಿತು.

### 3) ಮಾಂಧಾತ ಚಕ್ರವರ್ತಿ :-

ಸೂರ್ಯವಂಶದ ಯುವನಾಶ್ವರಾಜನ ಪುತ್ರನು. ಯುವನಾಶ್ವನಿಗೆ ನೂರಾರು ಮಂದಿ ಪತ್ನಿಯರಿದ್ದರೂ, ಸಂತಾನವಾಗಲಿಲ್ಲ. ಭೃಗುಋಷಿಗಳ ದ್ವಾರಾ ಪುತ್ರಕಾಮೇಷ್ಟಿಯಾಗವನ್ನು ಮಾಡಿದ ಭೃಗು ಒಂದು ಕಲಶದಲ್ಲಿ ಪುತ್ರ ಪ್ರದಗಳಾದ ಮಂತ್ರಗಳಿಂದ ಅಭಿಮಂತ್ರಿತವಾದ ಉದಕವನ್ನು ಇಟ್ಟಿದ್ದ. ಯುವನಾಶ್ವನು ಪ್ರಮಾದದಿಂದ ಆ ಮಂತ್ರಪೂರಿತ ಉದಕವನ್ನು ಕುಡಿದನು. ಆಗ ಗರ್ಭಧಾರಣ ಮಾಡಬೇಕಾಯಿತು. ಕಾಲಕ್ರಮದಲ್ಲಿ ಶಿಶು ಜನಿಸಿದನು. ಆ ಶಿಶುವು **ಕಂಧಾಸ್ಯಾಸೀ ?** ಅಂದರೆ, ಏನನ್ನು ಕುಡಿಯುವುದು ?-ಎಂಬ ಪ್ರಶ್ನೆ ಬಂದಿತು. ಆಗ ಇಂದ್ರನು ಅಲ್ಲಿಗೆ ಬಂದು. ತನ್ನ ಬಲಗೈಯ್ಯಿನ ಹೆಬ್ಬೆರಳಲ್ಲಿ ಅಮೃತರಸವನ್ನು ತುಂಬಿ,ಆ ಶಿಶುವಿಗೆ ಪಾನ ಮಾಡಿಸಿದನು. ಆ ಮಗುವಿಗೆ **ಮಾಂಧಾತ** (ಮಾಂ ಧಾಸ್ಯಸಿ-ನನ್ನನ್ನು ಚೀಪುತ್ತಾನೆ), ಎಂಬ ಹೆಸರಾಯಿತು. ಮಾಂಧಾತರಾಜನು ಯದುವಂಶದ ಶಶಬಿಂದು ರಾಜನ ಮಗಳಾದ ಬಿಂದುಮತಿಯನ್ನು ಲಗ್ನವಾದನು. ಅವಳಲ್ಲಿ ಪುರುಕುತ್ಸ-ಅಂಬರೀಷ-ಮುಚುಕುಂದ-ಎಂಬ ಪುತ್ರವನ್ನು ಪಡೆದನು. ಮಾಂಧಾತನಿಗೆ 50 ಮಂದಿ ಪುತ್ರಿಯರಿದ್ದರು. ಅವರನ್ನು ಸೌಭರೀ ಮಹರ್ಷಿಗಳಿಗೆ ಲಗ್ನ ಮಾಡಿ ಕೊಟ್ಟನು. ಮಾಂಧಾತಚಕ್ರವರ್ತಿಯು ಮಹಾಪರಾಕ್ರಮಶಾಲಿಯು. ನೂರು ರಾಜಸೂಯಯಾಗಗಳನ್ನು ಮಾಡಿದ, ನೂರು ಅಶ್ವಮೇಧಾಯಾಗ ಕರ್ತೃವಾಗಿ ಅದರಿಂದ ಸಾರ್ವಭೌಮ ಪದವಿ (ಚಕ್ರವರ್ತಿ) ಪಡೆದನು.

### 4) ಪ್ರಿಯವ್ರತರಾಜ :-

ಸ್ವಾಯಂಭುವಮನುವಿನಿಂದ ಶತರೂಪಾದೇವಿಯಲ್ಲಿ ಜನಿಸಿದ ಹಿರಿಯ ಮಗ. ಉತ್ತಾನಪಾದರಾಜನು ಈತನ ತಮ್ಮ. ಈತನ ಪತ್ನಿ ವಿಶ್ವಕರ್ಮನ ಪುತ್ರಿಯಾದ ಬರ್ಹಿಷ್ಮತಿಯು, ಅವಳಲ್ಲಿ ಅಗ್ನೀಧ್ರ-ಇಧ್ಮಜಿಹ್ವ-ಯಜ್ಞಬಾಹು -ಮಹಾವೀರ-ಹಿರಣ್ಯರೇತ- ಘೃತಪೃಷ್ಠ- ಸವನ- ಮೇಧಾತಿಥಿ- ವೀತಿಹೋತ್ರ ಮತ್ತು ಕವಿ-ಎಂಬ ಹತ್ತು ಮಂದಿ ಪುತ್ರರನ್ನು ಪಡೆದ. ಊರ್ಜಸ್ವತಿ ಎಂಬ

ಕನ್ಯೆಯು ಈತನ ಏಕಪುತ್ರಿ ಊರ್ಜ್ವಸತಿಯು ಶುಕ್ರಾಚಾರ್ಯರನ್ನು ಲಗ್ನ ವಾದಳು. ಪ್ರಿಯವ್ರತರಾಜನು ತನ್ನ ರಥದ ಚಕ್ರ ರೇಖೆಯಿಂದ ಸಪ್ತಸಮುದ್ರ ಗಳನ್ನೂ ಸಪ್ತ ದ್ವೀಪಗಳನ್ನಾಗಿ ಮಾಡಿದನು. ಆ ಸಪ್ತದ್ವೀಪಗಳನ್ನು ತನ್ನ ಏಳು ಮಂದಿ ಪುತ್ರರಿಗೆ ಹಂಚಿಕೊಟ್ಟ. ತಾನು ನಾರದಮಹರ್ಷಿಗಳಿಂದ ತತ್ತ್ವೋಪದೇಶಹೊಂದಿ ವೈರಾಗ್ಯತಾಳಿ, ಮುಕ್ತಿಹೊಂದಿದ. ಅವನ ಹತ್ತು ಮಂದಿ ಪುತ್ರರಲ್ಲಿ ಮೂವರು ಬಾಲ್ಯದಲ್ಲಿಯೇ ಯೋಗಪರಾಯಣ ರಾದರು. ಉಳಿದ ಸಪ್ತಪುತ್ರರು ಸಪ್ತ ದ್ವೀಪಾಧಿಪತಿಗಳಾದರು. ಪ್ರಿಯ ವ್ರತರಾಜನು ಹನ್ನೊಂದು ಅರ್ಬುದ ವರ್ಷಗಳ ಕಾಲ ಅಖಂಡಭೂಮಂಡಲ ವನ್ನು ವೈಭವದಿಂದ ಆಳಿದನು.

**ವಿಶೇಷಾಂಶ :–**

1) ಪ್ರಿಯವ್ರತರಾಜ ಮತ್ತು ಗಯರಾಜ-ಈರ್ವರೂ ಗುಣದಲ್ಲಿ ಕರ್ಮಜದೇವತೆಗಳಿಗೆ ಸಮರು.

2) ಮಿಕ್ಕ ಕರ್ಮಜದೇವತೆಗಳು ಪ್ರಿಯವ್ರತನಿಗಿಂತ ಎರಡು ಗುಣ ಕಡಿಮೆ. ಕಾರಣವೇನೆಂದರೆ- ಅವರಲ್ಲಿ ವಿಶೇಷವಾದ ಭಗವಂತನ ವಿಭೂತಿಯು ಮಿಕ್ಕವರೆಲ್ಲರಿಗಿಂತ ಅಧಿಕವಾಗಿರುವುದು. ಇದರಿಂದ ದ್ವಿಗುಣಾಧಿಕನೆಂದು ಹೇಳಿದ್ದಾರೆ.

**ಪ್ರಮಾಣ :–**

"ಪ್ರಿಯವ್ರತ ಕೃತಂ ಕರ್ಮಕೋನು ಕುರ್ಯಾದ್ವಿನೇಶ್ವರಮ್ ।
ಯೋನೇಮಿನಿಮ್ನೈರ ಕರೋಚ್ಛಾಯಾಂ ಘ್ನನ್ ಸಪ್ತವಾರಿಧೀನ್ ॥ "

**–ಶ್ರೀಮದ್ಭಾಗವತ–ಪಂಚಮಸ್ಕಂಧ**

## 5) ಮಾರುತ :-

ಸೂರ್ಯವಂಶದ ಅವಿಕ್ಷಿತರಾಜನಮಗ. ಈತನ ಜನನ ಸಮಯದಲ್ಲಿ ತುಂಬುರರು ಮರುತ್ತನ ಜನನಿಯಾದ ವಿಶಾಲಾದೇವಿಯಲ್ಲಿಗೆ ಬಂದು- "ನಿನ್ನ ಪುತ್ರನು ಮರುತ್ತಗಳಂತೆ ಮಹಾಪರಾಕ್ರಮಿಯಾಗುತ್ತಾನೆ"-ಎಂದರು. ಇದ ರಿಂದ ಅವನಿಗೆ "ಮರುತ"-ನೆಂಬ ಹೆಸರು ಬಂದಿತು.

## 6) ಪ್ರಹ್ಲಾದರಾಯ :-

ಹಿರಣ್ಯಕಶಿಪುವಿನಿಂದ ಕಯಾದುದೇವಿಯಲ್ಲಿ ಜನಿಸಿದ ಭಾಗವತೋತ್ತ ಮನು. ಗರ್ಭವಾಸದಲ್ಲಿದ್ದಾಗಲೇ ಶ್ರೀನಾರದರಿಂದ ನಾರಾಯಣ ಅಷ್ಟಾಕ್ಷರ ಮಂತ್ರೋಪದೇಶ. ಪ್ರಹ್ಲಾದರಲ್ಲಿ ನಿತ್ಯವಾಯ್ವಾವೇಶ. ಮೂಲರೂಪದಲ್ಲಿ ಬ್ರಹ್ಮನ ಸೇವಕರಲ್ಲಿ ಒಬ್ಬನಾದ **ಶಂಕುಕರ್ಣ**ನೆಂಬ ದೇವತೆ. ಸರ್ವವ್ಯಾಪಕ ನಾದ ಶ್ರೀಹರಿಯನ್ನು ಶ್ರೀನರಸಿಂಹರೂಪದಿಂದ ಕಂಭದಲ್ಲಿ ತಂದೆಗೆ ತೋರಿಸಿದ ಭಾಗವತ ಗ್ರಾಮಣಿ.

## 7) ಸುಪರೀಕ್ಷಿತರಾಜ :-

ಮಧ್ಯಮ ಪಾಂಡವನಾದ ಅರ್ಜುನನ ಪುತ್ರ ಅಭಿಮನ್ಯು. ಅಭಿಮನ್ಯು ವಿನ ಪತ್ನಿ ವಿರಾಟರಾಜನ ಪುತ್ರಿ ಉತ್ತರಾದೇವಿ. ಅವಳಲ್ಲಿ ಜನಿಸಿದ ಪುಣ್ಯ ಪುತ್ರನೇ ಪರೀಕ್ಷಿದ್ರಾಜನು. ಮಾತೃಗರ್ಭದಲ್ಲಿರುವಾಗಲೇ, ಪಾಂಡವರ ವಂಶ ವನ್ನು ನಿರ್ಮೂಲಗೊಳಿಸುತ್ತೇನೆಂದು ರುಗ್ಮಶಯ್ಯೆಯಲ್ಲಿದ್ದ ದುರ್ಯೋಧನನಿಗೆ ವಚನಕೊಟ್ಟು, ಅಶ್ವತ್ಥಾಮಾಚಾರ್ಯರು ಉತ್ತರೆಯ ಗರ್ಭಸ್ಥ ಶಿಶುವಿನ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿದರು. ಆಗ ಪರಮಕರುಣಾಳುವಾದ ಶ್ರೀಕೃಷ್ಣನು ತನ್ನ ಸುದರ್ಶನ ಚಕ್ರದಿಂದ ಗರ್ಭಸ್ಥ ಶಿಶುವನ್ನು ಬ್ರಹ್ಮಾಸ್ತ್ರದಿಂದ ಸಂರಕ್ಷಿಸಿದನು. ಶ್ರೀಕೃಷ್ಣನಿಂದ ಚೆನ್ನಾಗಿ ರಕ್ಷಿತನಾದ್ದರಿಂದ, "**ಪರೀಕ್ಷಿತ**"-ನೆಂದು ಹೆಸರಾಯಿತು. ಇದರಿಂದ **ಸುಪರೀಕ್ಷನು**- ಎಂದಿದ್ದಾರೆ- ದಾಸ ರಾಯರು.

## 8) ಹರಿಶ್ಚಂದ್ರರಾಜ :-

ತ್ರಿಶಂಕುರಾಜನ ಪುತ್ರ. ಸತ್ಯವ್ರತೆ ಈತನ ತಾಯಿ. ಚಂದ್ರಮತಿ ಪತ್ನೀ ಮತ್ತು ಲೋಹಿತಾಶ್ವ (ರೋಹಿತ) ಈತನ ಪುತ್ರ. ವಿಶ್ವಾಮಿತ್ರನಿಗೆ ತನ್ನ ಸಮಸ್ತ ಭೋಗ ಭಾಗ್ಯಗಳನ್ನು ದಾನಮಾಡಿ, ತನ್ನ ಪತ್ನಿಯನ್ನು ಮಾರಿ ಕೊಂಡು, ಕಾಶೀನಗರದಲ್ಲಿ ಸ್ಮಶಾನ ಪಾಲಕನಾದ. ಕೊನೆಯಲ್ಲಿ ಚಂದ್ರಮತಿ ಯನ್ನೇ ತನ್ನ ಕೈಯ್ಯಿಂದ ವಧೆ ಮಾಡುವ ಪ್ರಸಂಗ ಒದಗಿದಾಗ, ಈಶ್ವರ ಪಾರ್ವತೀ ಸಮೇತ ಪ್ರತ್ಯಕ್ಷವಾಗಿ ಅನುಗ್ರಹಿಸಿದ. ವಿಶ್ವಾಮಿತ್ರರು ತಮ್ಮ ತಪಸ್ಸಿನ ಪುಣ್ಯವನ್ನು ಹರಿಶ್ಚಂದ್ರನಿಗೆ ಧಾರೆ ಎರೆದರು. ಇದರಿಂದ ಸತ್ಯ ಹರಿಶ್ಚಂದ್ರನ ಕೀರ್ತಿ ಆಚಂದ್ರಾರ್ಕವಾಯಿತು.

## 9) ಅಂಬರೀಷ ಚಕ್ರವರ್ತಿ :-

ಇಕ್ಷ್ವಾಕುವಂಶದ ಮಾಂಧಾತೃ ಚಕ್ರವರ್ತಿಯ ಪುತ್ರನು. ಬಿಂದುಮತಿ ಈತನ ಮಾತೆ. ಇವನ ಪುತ್ರ ಯವನಾಶ್ವನು. ಏಕಾದಶೀವ್ರತ ಪರಾ ಯಣನು. ದ್ವಾದಶೀ ದಿನ ಭಗವತ್ಪೂಜಾನಂತರ ಅತಿಥಿ ಅಭ್ಯಾಗತರೊಡ ಗೂಡಿ ಕಾಲಕ್ಕೆ ಅನುಸಾರವಾಗಿ ಪಾರಣೆ ಮಾಡುತ್ತಿದ್ದ ವಿಷ್ಣುಭಕ್ತಾ ಗ್ರೇಸರನು. ಒಮ್ಮೆ ದೂರ್ವಾಸಮುನಿಗಳು ಇವನನ್ನು ಪರೀಕ್ಷಿಸಬೇಕೆಂದು, ದ್ವಾದಶೀದಿನ ಬೆಳಿಗ್ಗೆ ಒಂದು ಭೋಜನಕ್ಕೆ ಆಹೂತರಾದರು. ಸ್ನಾನಾದಿ ಗಳನ್ನು ತೀರಿಸಿಕೊಂಡು ಬರಲು ನದಿಗೆ ಹೋಗಿ, ಉದ್ದೇಶಪೂರ್ವಕವಾಗಿ ತಡಮಾಡುತ್ತಿರಲು; ಅಂಬರೀಷನು ಪಾರಣೆಯ ಕಾಲ ಮೀರುವುದೆಂಬ ಭಯ ದಿಂದ ಮಿಕ್ಕ ಋಷಿಗಳ ಸೂಚನೆಯ ಪ್ರಕಾರ, ಪಾರಣೆಯ ಬದಲಾಗಿ ಕೇವಲ ಜಲಪ್ರಾಶನ ಮಾಡಿದನು. ಕೂಡಲೇ ದೂರ್ವಾಸರಿಗೆ ಈ ವಿಷಯ ತಿಳಿಯಿತು. ಅವರು ಕೋಪೋದ್ದೀಪಿತರಾಗಿ ಶಪಿಸಿದರು. ಅಂಬರೀಷನು ಶ್ರೀಹರಿಯನ್ನು ಧ್ಯಾನಿಸಿದನು. ಕೂಡಲೇ ಶ್ರೀಹರಿಯ ಸುದರ್ಶನ ಚಕ್ರವು ದೂರ್ವಾಸರನ್ನು ಬೆನ್ನಟ್ಟಿತು. ಅಂತ್ಯದಲ್ಲಿ ಮುನಿಗಳು ಅಂಬರೀಷನಿಗೇ ಶರಣಾಗತರಾಗಿ,

ಚಕ್ರದ ಬಾಧೆಯಿಂದ ಪಾರಾದರು. ಶ್ರೀಮತಿ ಎಂಬ ತ್ರಿಲೋಕ ಸುಂದರಿಯು ಅಂಬರೀಷನ ಪುತ್ರಿ. ಒಮ್ಮೆ ಪರ್ವತರಾಜನು ಶ್ರೀಮತಿಯ ಲಾವಣ್ಯಕ್ಕೆ ಮಾರು ಹೋಗಿ, ಶ್ರೀಮತಿಯನ್ನು ಪಡೆಯಲು ಪ್ರಯತ್ನಿಸಿ, ಅಂಬರೀಷನನ್ನು ಶಪಿಸಲು ಉದ್ಯುಕ್ತರಾದಾಗ, ವಿಷ್ಣುವಿನ ಚಕ್ರಾಯುಧದಿಂದ ತೇಜೋಭಂಗ ವನ್ನು ಹೊಂದಿದರು. ಕೊನೆಗೆ ಶ್ರೀಮತಿಯನ್ನು ಅಂಬರೀಷನು ವಿಷ್ಣುವಿಗೇ ಲಗ್ನ ಮಾಡಿಕೊಟ್ಟನು,

### 10) ಉತ್ತಾನಪಾದರಾಯ :-

ಸ್ವಾಯಂಭುವಮನುವಿನ ಕಿರಿಯಮಗ. ಪ್ರಿಯವ್ರತರಾಜನ ತಮ್ಮ ಸುನೀತಿ, ಸುರುಚೀ ಎಂಬ ಈರ್ವರು ಪತ್ನಿಯರು. ಸುನೀತಿಯ ಪುತ್ರನೇ ಭಾಗವ ತ್ತೋತ್ತಮನೂ, ಕರ್ಮದೇವತೆಯೂ ಆದ ಧ್ರುವರಾಯ. ಕಿರಿಯಪತ್ನಿ ಸುರುಚಿಯ ಪುತ್ರ ಉತ್ತಮನು.

ಮೇಲ್ಕಂಡ ಮಹಾಪುರುಷರು 100 ಮಂದಿ ಪುಣ್ಯಶ್ಲೋಕರಿದ್ದಾರೆ. **(ಶತಪುಣ್ಯಶ್ಲೋಕರು)** ಅವರು ಗಧಾಧರನಾದ ವಿಷ್ಣುವಿನ ಸನ್ನಿಧಾನ ಪಾತ್ರರು. ಅವರು ಭಗವದ್ವಿಭೂತಿಸಂಪನ್ನರು. ಅವರ ಪೈಕಿ ಪ್ರಿಯವ್ರತರಾಜ ನಿಗೆ ಭಗವಿದ್ವಿಭೂತಿ ಅಧಿಕವಾಗಿರುವುದರಿಂದ, ಉತ್ತಮನೆನಿಸುವನು.

ಶ್ರೀಹರಿಯು ದುಷ್ಟಶಿಕ್ಷಣಾರ್ಥವಾಗಿ ಕೌಮೋದಕೀ–ಎಂಬ ನಾಮಾಂಕಿತದ ಗದೆಯನ್ನು ಧರಿಸಿರುವನು–ಇದರಿಂದ ಇವರೂ ಸಹ, ಶ್ರೀಹರಿಯ ಕಾರುಣ್ಯ ಬಲದಿಂದ ದುಷ್ಟಶಿಕ್ಷಣ– ತದ್ವಾರಾ ಶಿಷ್ಟಪರಿಪಾಲನಾಕಾರ್ಯದಲ್ಲಿ ಸತತ ನಿರತರು.

ಭಗವದ್ವಿಭೂತಿ ಅಧಿಕವಾಗಿರುವ ಪ್ರಿಯವ್ರತರಾಜನು ಇತರ ಕರ್ಮಜ ದೇವತೆಗಳಿಗಿಂತ ಎರಡು ಗುಣ ಅಧಿಕನು. ಪ್ರಿಯವ್ರತನು ರಾತ್ರಿ ಕಾಲಗಳಲ್ಲಿ ಪರ್ವತಗಳ ಛಾಯೆಯಿಂದ ಕತ್ತಲಾಗುವುದನ್ನು ಪರಿಹರಿಸಲು, ಹಗಲಿನಂತೆ ಮಾಡಲು ಉದ್ಯುಕ್ತನಾಗಿ, ಒಂದು ಚಕ್ರವುಳ್ಳ ರಥವನ್ನೇರಿ ಮೇರುಪರ್ವತ

ವನ್ನು ಪ್ರದಕ್ಷಿಣೆ ಮಾಡಿದನು. ಆಗ ರಥ ಚಕ್ರದ ತಗ್ಗಿನಿಂದ ಸಪ್ತಸಮುದ್ರಗಳಾದುವು. ಸಪ್ತದ್ವೀಪಗಳನ್ನು ನಿರ್ಮಿಸಿದನು. ಈ ಅಗಾಧಕಾರ್ಯವು ಪರಮಾತ್ಮನನ್ನು ಬಿಟ್ಟರೆ ಅನ್ಯರಿಂದ ಸಾಧ್ಯವಿಲ್ಲ. ಇದರಿಂದ ಶ್ರೀಹರಿಯು ವಿಶೇಷಾಂಶದಿಂದ ಪ್ರಿಯವ್ರತನಲ್ಲಿ ಅಧಿಷ್ಠಿತನಾಗಿದ್ದು, ಈ ಅಗಾಧಕಾರ್ಯ ಮಾಡಿದನೆಂದು ಶ್ರೀಮದ್ಭಾಗವತ ಮಹಾಪುರಾಣದಿಂದ ತಿಳಿದುಬರುವುದು. ಈ ಕಾರಣದಿಂದ ಪ್ರಿಯವ್ರತನು ಉಳಿದ ಕರ್ಮಜದೇವತೆಗಳಿಗಿಂತ ದ್ವಿಗುಣಾಧಿರನೆಂದು ಹೇಳಿದ್ದಾರೆ. ॥೧೪॥

## ಪದ್ಯ-೧೫

ಮೂಲ :–

ನಳಿನಿ ಸಂಜ್ಞಾ ರೋಹಿಣೀ ಶ್ಯಾ ।
ಮಲ ವಿರಾಟ್ ಪರ್ಜನ್ಯರಧಮರು ।
ಎಲರಮಿತ್ರನ ಮಡದಿ ದ್ವಿಗುಣಾಧಮಳು ಬಾಂಬೊಳಿಗೆ ॥
ಜಲಮಯ ಬುಧಾಧಮ ದ್ವಿಗುಣದಿ ।
ಕೆಳಗೆನಿಸುವಳುಷಾ ಶನೈಶ್ಚರ ।
ರಿಳೆಯು ಈರುಗುಣಾಧಮನುಷಾದೇವಿ ದೆಶೆಯಿಂದ ॥ ॥೧೫॥

ಅವತರಣಿಕೆ :–

ಇಪ್ಪತ್ತನೆಯ ಕಕ್ಷಾಪನ್ನರಾದ ಕರ್ಮಜದೇವತೆಗಳ ತಾರತಮ್ಯವಿಚಾರ ತಿಳಿಸುತ್ತಾರೆ-ಪ್ರಸಕ್ತ ಪದ್ಯದಿಂದ. ॥೧೫॥

**ಪ್ರತಿಪದಾರ್ಥ :-**

**ನಳಿನಿ** = ವರುಣದೇವರ ಪತ್ನಿ, ನಳಿನಿ ನಾಮಕಳಾದ ಗಂಗೆ, **ಸಂಜ್ಞಾ** = ಸೂರ್ಯಪತ್ನಿ ಸಂಜ್ಞಾದೇವಿ, **ರೋಹಿಣೀ** = ಚಂದ್ರಪತ್ನಿ ರೋಹಿಣೀ ದೇವಿ, **ಶ್ಯಾಮಲ** = ಯಮದೇವರ ಪತ್ನಿ ಶ್ಯಾಮಲಾದೇವಿ, **ವಿರಾಟ್** = ಕಾಮಪುತ್ರ ಅನಿರುದ್ಧನ ಪತ್ನಿ ವಿರಾಟ್‌ದೇವಿ, **ಪರ್ಜನ್ಯರು** = ಪರ್ಜನ್ಯ ನಾಮಕ ಸೂರ್ಯದೇವರು, **ಅಧಮರು** = ಈ ಆರು ಮಂದಿ 19 ನೆಯ ಕಕ್ಷಾಪನ್ನರಾದ ಬಲ್ಯಾದಿ ಕರ್ಮಜದೇವತೆಗಳಿಂದ ಎರಡು ವಿಜಾತಿಗುಣದಿಂದ ಅಧಮರು, **ಎಲರಮಿತ್ರನ ಮಡದಿ** = ಗಾಳಿಗೆ ಮಿತ್ರನಾದ ಅಗ್ನಿದೇವರ ಪತ್ನಿ ಸ್ವಾಹಾದೇವಿ (ಎಲರ್ = ಗಾಳಿ), **ದ್ವಿಗುಣಾಧಮಳು** = ಗಂಗಾ, ಪರ್ಜನ್ಯಾದಿಗಳಿಗಿಂತ ಎರಡು ವಿಜಾತಿ ಗುಣದಿಂದ ಕಡಿಮೆ, **ಜಲಮಯ ಬುಧ** = ಜಲಾಭಿಮಾನಿಯಾದ ಬುಧನು, **ಬಾಂಬೊಳೆಗೆ** = ಗಂಗಾ ದೇವಿಗಿಂತ (ಬಾನಿನ ಹೊಳೆ = ಬಾಂಬೊಳೆ-ಆಕಾಶನದಿ) **ದ್ವಿಗುಣದಿ** = ಎರಡು ವಿಜಾತಿಗುಣಗಳಿಂದ, **ಅಧಮ** = ಕಡಿಮೆಯಾದವನು, **ಉಷಾ** = ಅಶ್ವಿನೀದೇವತೆಗಳ ಭಾರ್ಯೆ ಉಷಾದೇವಿ, **ಕೆಳಗೆನಿಸುವಳು** = ಬುಧನಿಗಿಂತ ಎರಡು ವಿಜಾತಿಗುಣಗಳಿಂದ ಅವರಳು, **ಉಷಾದೇವಿ ದೆಶೆಯಿಂದ** = ಉಷಾದೇವಿಯರಿಗಿಂತಲೂ, **ಇಳೆಯು** = ಭೂತತ್ತ್ವದಭಿಮಾನಿಯಾದ ಭೂದೇವಿಯು, ದ್ವಿಗುಣಾಧಮಳು, **ಶನೈಶ್ಚರನು** = ಭೂತತ್ತ್ವಾಭಿಮಾನಿ ಶನೈಶ್ಚರನು, **ಈರು ಗುಣಾಧಮನು** = ಭೂದೇವಿಗಿಂತ ಎರಡು ವಿಜಾತಿ ಗುಣಗಳಿಂದ ನ್ಯೂನನು. ॥೧೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇಪ್ಪತ್ತನೇ ಕಕ್ಷದ ಕರ್ಮಜರ ತಾರತಮ್ಯ ಹೇಳುತಾರೆ.

ಹತ್ತೊಂಭತ್ತನೇ ಕಕ್ಷದವರಾದ ಕರ್ಮಜರಿಗಿಂತಲೂ ತದವರರಾದ ಇಪ್ಪತ್ತನೆಯ ಕಕ್ಷದವರಾದ, ಕರ್ಮಜರಾದ ವರುಣದೇವರ ಪತ್ನೀ ನಳಿನೀ ಸಂಜ್ಞಳಾದ ಗಂಗಾದೇವೇರು, ಸೂರ್ಯದೇವರ ಪತ್ನಿ ಸಂಜ್ಞಾದೇವೇರು, ಚಂದ್ರದೇವರ ಪತ್ನಿ ರೋಹಿಣೀದೇವೇರು, ಯಮದೇವರ ಪತ್ನಿ ಶ್ಯಾಮಲಾದೇವೇರು, ಕಾಮಪುತ್ರ ಅನಿರುದ್ಧನ ಹೆಂಡತಿ ವಿರಾಟ್‌ದೇವೇರು (ಇವರಿಗೆ ಉಷಾದೇವಿ ಎಂತ ನಾಮವುಂಟು), ಪರ್ಜನ್ಯನಾಮಕ ಸೂರ್ಯದೇವರು-ಈ ಆರು ಮಂದಿ 19 ನೇ ಕಕ್ಷದವರಾದ ಬಲ್ಯಾದಿ ಕರ್ಮಜರಿಗಿಂತ ಎರಡು ವಿಜಾತಿಗುಣದಿಂದ ಅಧಮರು, ಎರಡು ಸಜಾತಿ ಗುಣದಿಂದ ಸಮಾನರು. 19ನೇ ಕಕ್ಷದವರಾದ ಬಲ್ಯಾದಿ ಕರ್ಮಜರು 20 ನೇ ಪಾವಟಿಗಿಯ, ಅವರರಾದ ಗಂಗಾ ಪರ್ಜನ್ಯಾದಿಗಳಿಗಿಂತ ವಿಜಾತಿ ದ್ವಿಗುಣೋತ್ತಮರು. ಗಾಳಿಗೆ ಸ್ನೇಹಿತನಾದವ ಅಗ್ನಿ. ಆತನ ಪತ್ನಿ ಸ್ವಾಹಾದೇವೇರು ಗಂಗಾ ಪರ್ಜನ್ಯಾದಿಗಳಿಗಿಂತ ಎರಡು ವಿಜಾತಿ ಗುಣದಿಂದ ಅಧಮರು, ಎರಡು ಸಜಾತಿ ಗುಣದಿಂದ ಸಮಾನರು. ಗಂಗಾ ಪರ್ಜನ್ಯಾದಿಗಳು ಎರಡು ವಿಜಾತಿ ಗುಣದಿಂದ ಸ್ವಾಹಾದೇವಿಗೆ ಉತ್ತಮರು. ಜಲಾಭಿಮಾನಿಯಾದ ಬುಧ ಇಪ್ಪತ್ತನೇ ಕಕ್ಷದವರಾದ ಗಂಗಾದೇವಿ ಮೊದಲಾದವರಿಗೆ ಎರಡು ಗುಣದಿಂದ ಅಧಮನು-ಎಂಬೋಣದರಿಂದ, 21 ನೇ ಕಕ್ಷದವರಾದ ಸ್ವಾಹಾದೇವೇರಿಗೆ ಒಂದು ಗುಣದಿಂದ ಕಡಿಮಿ–ಎಂಬುದು ಅರ್ಥಾತ್ ಸಿದ್ಧವು. ಒಂದು ವಿಜಾತಿ ಗುಣದಿಂದ ಅಧಮ, ಒಂದು ಸಜಾತಿ ಗುಣದಿಂದ ಸಮಾನನು. ಬುಧನಿಗಿಂತಲೂ ಸ್ವಾಹಾದೇವೇರು ಒಂದು ವಿಜಾತಿಗುಣದಿಂದ ಉತ್ತಮರು. ಅಶ್ವಿನೀಭಾರ್ಯಾ ಉಷಾದೇವೇರು ಬುಧನಿಗಿಂತ ಎರಡು ವಿಜಾತಿ ಗುಣದಿಂದ ಅಧಮರು, ಎರಡು ಸಜಾತಿಗುಣದಿಂದ ಸಮಾನರು-ಎಂದೆನಿಸುವರು. ಎರಡು ವಿಜಾತಿಗುಣದಿಂದ ಬುಧನು ಉಷಾದೇವೇರಿಗಿಂತಲೂ ಉತ್ತಮನು. ಉಷಾದೇವೇರಿಗಿಂತ, ಇಳೆಯು = ಭೂದೇವಿ ಎಂತ ಅರ್ಥ, ಈ ಪದದ ಆವರ್ತನವು. ಈ ಭೂದೇವಿ ಎರಡು ವಿಜಾತಿಗುಣದಿಂದ ಉಷಾದೇವೇರಿಗೆ ನೀಚರು, ಎರಡು ಸಜಾತೀ ಗುಣದಿಂದ ಸಮಾನರು. ಉಷಾದೇವೇರು ಎರಡು ವಿಜಾತೀಗುಣದಿಂದ ಭೂದೇವಿಗೆ ಉತ್ತಮರು.

ಶನೈಶ್ಚರನು ಧರಣೀ ದೇವೇರಿಗಿಂತಲೂ ಎರಡು ವಿಜಾತಿ ಗುಣದಿಂದ ನೀಚನು, ಎರಡು ಸಜಾತಿ ಗುಣದಿಂದ ಸಮಾನನು. ವಿಜಾತೀ ಎರಡು ಗುಣದಿಂದ ಧರಣೀ ದೇವಿ-ಅಂದರೆ ಭೂದೇವಿ ಈ ಶನೈಶ್ಚರಗೆ ಉತ್ತಮರೆಂತ ತಾತ್ಪರ್ಯ. 20ನೆಯ ಕಕ್ಷ ಗಂಗಾದಿಗಳು 2ಗುಣ. 21ನೇ ಸ್ವಾಹಾದೇವಿ 2 ಗುಣ, 22ನೇ ಕಕ್ಷ ಬುಧ 1 ಗುಣ. ॥೧೫॥

## ೨. ಭಾವಪ್ರಕಾಶಿಕೆ: –

ಗಂಗೆ, ವಿವಸ್ವಾನ್ ಎಂಬ ಸೂರ್ಯನ ಮಡದಿಯಾದ ಸಂಜ್ಞಾದೇವಿ, ಚಂದ್ರನ ಹೆಂಡತಿ ರೋಹಿಣಿದೇವಿ, ಯಮದೇವರ ಹೆಂಡತಿ ಶಾಮಲಾದೇವಿ, ವಿರಾಟ್ ಎಂದು ಅನಿರುದ್ಧನ ಹೆಂಡತಿಯಾದ, ಬಾಣಾಸುರನ ಮಗಳು ಉಷಾ ದೇವಿಗೆ ನಾಮಾಂತರವು, ಆದುದರಿಂದ ಈ ಉಷಾ, ಪರ್ಜನ್ಯನೆಂಬ ಸೂರ್ಯ ಇವರಾರು ಮಂದಿ ಸಮಾನರು. ಪ್ರಿಯವ್ರತಾದಿಗಳಿಗಿಂತಲೂ ದ್ವಿಗುಣಾ ಧಮರು. ಅಗ್ನಿದೇವರ ಹೆಂಡತಿ ಸ್ವಾಹಾದೇವಿಯು ಗಂಗಾದಿಗಳಿಗಿಂತಲೂ ಎರಡು ಗುಣದಿಂದ ಕಮ್ಮಿ ಎನಿಸುವಳು. ಉದಕಾಭಿಮಾನಿಯಾದ ಬುಧನು ಸ್ವಾಹಾದೇವಿಯಕಿಂತಲೂ 2 ಗುಣಗಳಿಂದ ನೀಚನು. ಅಶ್ವಿನೀದೇವತೆಗಳ ಹೆಂಡತಿಯಾದ ಉಷಾದೇವಿಯು ಪೃಥಿವೀಮಾನಿಯಾದ ಶನೈಶ್ಚರನೂ, ಬುಧನ ಗಿಂತಲೂ ಎರಡು ಗುಣಗಳಿಂದ ಕೆಳಗೆನಿಸುವರು. ॥೧೫॥

## ೩. ಭಾವದರ್ಪಣ :-

ನಲಿನೀತಿ. ಗಂಗಾ ಎಂಬರ್ಥ. ತದುಕ್ತಂ ಕೌಸ್ತುಭೇ । "ಸಂಜ್ಞಾ ಗಂಗಾಚ ಪರ್ಜನ್ಯ ಭಾರ್ಯೇವೈಯಮಚಂದ್ರಯೋಃ । ಅನಿರುದ್ಧ ಪ್ರಿಯೋಷಾಚ ಮಿತ್ರಾತ್ತುದ್ವಿಗುಣಾಧಮಾಃ । ಸ್ವಾಹಾದೇವೀವನ್ಹಿಜಾಯಾ ಪರ್ಜನ್ಯಾದ್ವಿಗುಣಾ ಧಮಾ । ಬುಧೋ ನೀಚೋಂಬುಪಸ್ತಸ್ಯ ಉಷಾನಾಮಾಭಿಮಾನಿನೀ । ಅಶ್ವಿ ಭಾರ್ಯಾ ಬುಧಾನ್ಯೂನಾ ಸ್ವಾಹಾಯಾಸ್ತು ದಶಾವರಾ । ಧರಾಮಾನಿ ಶನಿ ಸ್ತಸ್ಯಾ ಉಷಸೋಸ್ಯಧಮಃ ಸ್ಮೃತ" ಇತಿ.– ॥೧೫॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ನಳಿನಿ ಇತಿ. ॥ ಗಂಗಾ ॥ ಸಂಜ್ಞಾರೋಹಿಣ್ಯಾ ಇನೇಂದುಜಾಯೇ ॥ ಶಾಮಲಾ ಯಮಭಾರ್ಯಾ ॥ ವಿರಾಟ್ ಅನಿರುದ್ಧ ಭಾರ್ಯಾ ॥ ಏತಾಃ ಪರಸ್ಪರಂ ಸಮಾಃ ಇತ್ಯತ್ರ ವಿರಾಟ್ ಪರ್ಜನ್ಯವತ್ ವಾರುಣೀಚ ತಥಾ ಸಂಜ್ಞಾಚ ರೋಹಿಣೀ ಧಾರ್ಮಿಣಿಚ"– ಇತಿ ಮಾನವಮ್ ॥ ಮಿತ್ರಾತ್ತು ದ್ವಿಗುಣಾಧಮಾಃ" ಇತ್ಯುಕ್ತೇಃ ॥ ಪರ್ಜನ್ಯಾಪಧಿಕಾಃ ಇತಿ ಕೀರ್ತಿತಾಃ ಪರ್ಜನ್ಯಃ ಶಾಮಲಾ ಗಂಗಾ ಉಷಾ ಸಂಜ್ಞಾಚ ರೋಹಿಣೀ ॥ ಮಿತ್ರಾರ್ಥಃ ಷಡಧ್ಯಾಽನ್ಯೇಪಿ ಕೇಚಿತ್ ಪರ್ಜನ್ಯತೋಽಧಮಾಃ ॥ ತೇ (ತಾ) ಭ್ಯಃ ಸ್ವಾಹಾಽಧಮಾ ಜ್ಞೇಯಾ ಪರ್ಜನ್ಯಾದರ್ಧ ಸಮ್ಮಿತಾ ॥ ಸ್ವಾಹಾದಶಮಭಾಗೋಷಾ ತತ್ಸ್ವಾಹಾ ಮಧ್ಯಗೋ ಬುಧಃ ॥ ಪುಷ್ಕರಃ ಕರ್ಮದೇವಃ ಸ್ಯಾತ್ ಉಷಸಃ ದಶಮಾಂಶಕಃ ॥ ಉಷಃ ಪುಷ್ಕರಯೋಃ ಮಧ್ಯೇಜ್ಞೇಯಃ ರವಿಸುತಃ ಶನಿಃ ॥ ಭೌಮಃ ಸ್ಯಾತ್ ಉಷಃ ಕಿಂಚಿತ್ ನ್ಯೂನಃ ಶನ್ಯಧಿಕಃ ತಥಾ ॥ ಉಷಾ ಸ್ವಾಹಾ ಚ ಪರ್ಜನ್ಯಃ ॥ " ಸ್ವಾಹಾ ಗಂಗಾಧಮ ಕೂರ್ಮಾದ್ಯಪೇಕ್ಷಯಾ ಕಿಂಚಿತ್ ನೀಚಾ ಪರ್ಜನ್ಯಾತ್ ದ್ವಿಗುಣಾಧಮಾ ॥ ಬುಧಃ ಅಧಮಃ ಕಿಂಚಿತ್ ದ್ವಿಗುಣ ಸ್ವಾಹಾಯಾಃ ॥ ಇತ್ಯರ್ಥಃ ॥ ದಶಾಗುಣಾವರೇತ್ಯರ್ಥಃ ॥ ಉಷಾತ್ಯನೇನ ಅನ್ವಯಃ ॥ ಶನೈಶ್ಚರಃ ಉಷಾಯಾಃ ಕಿಂಚಿತ್ ನ್ಯೂನಃ ಇತಿ ಚ ॥ ಈಳಿಗು = ಭೂಮೌ ॥ ತತಾತ್ಮಾಮಾನೀ ಇತಿ ಯಾವತ್ ॥ ಈರು ಎರಡು ಶನಿ ಪೃಥಿವ್ಯಾ ಚ ॥ ತಥಾಚ ಶನೇಃ ಕಿಂಚಿನ್ನ್ಯೂನಃ ಪುಷ್ಕರ ಉಭಾಯಾಃ ದಷಾಧಮಃ ॥ ॥೧೫॥

## ಕನ್ನಡಾರ್ಥ

ಸಂಜ್ಞಾ ರೋಹಿಣೀ ಇವರೀರ್ವರೂ ಅನುಕ್ರಮವಾಗಿ ಸೂರ್ಯ ಹಾಗೂ ಚಂದ್ರನ ಹೆಂಡತಿಯರು, ಶಾಮಲಾದೇವಿಯು ಯಮಪತ್ನಿಯು. ಅನಿರುದ್ಧನ ಪತ್ನಿಗೆ **ವಿರಾಟ್** ಎಂದು ಹೆಸರು. ಇವರು ಪರಸ್ಪರ ಸಮಾನರು. ಈ

ವಿಷಯದಲ್ಲಿ "ವಿರಾಟ್ ಪರ್ಜನ್ಯವತ್ ವಾರುಣೀಚ ತಥಾ ಸಂಜ್ಞಾಚ ರೋಹಿಣೀ ಧಾರ್ಮಿ ಚ"– ಎಂಬ ಅನುವ್ಯಾಖ್ಯಾನವು ಪ್ರಮಾಣವಾಗಿರುತ್ತದೆ. "ಮಿತ್ರನಿಗೆ ಎರಡು ಗುಣದಿಂದ ಕಡಿಮೆಯವರು"– ಎಂದು ಹೇಳಿರುತ್ತಾರೆ. ಪರ್ಜನ್ಯನಿಗಿಂತ ಅಧಿಕರೆಂದು ಪ್ರಸಿದ್ಧರು. ಪರ್ಜನ್ಯ, ಶ್ಯಾಮಲಾ, ಗಂಗಾ ಉಷಾ, ಸಂಜ್ಞಾ, ರೋಹಿಣೀ, ಇವರು (ಆರು ಜನರು) ಮಿತ್ರನಿಗೆ ಅರ್ಧ ಕಡಿಮೆಯವರು. ಮತ್ತು ಕೆಲವರು ಪರ್ಜನ್ಯನಿಗೂ ಕಡಿಮೆಯವರು. "ಇವರಿಂದ ಅಗ್ನಿಪತ್ನಿಯಾದ ಸ್ವಾಹಾದೇವಿಯು ಪರ್ಜನ್ಯನಿಗೆ ಅರ್ಧ (ಎರಡು ಗುಣದಿಂದ) ಕಡಿಮೆಯವಳೂ, ಅವರಿಗೆ ಕಡಿಮೆಯವಳೂ ಆಗಿರುತ್ತಾಳೆ"– ಎಂದು ತಿಳಿಯಬೇಕು. ಸ್ವಾಹಾದೇವಿಗಿಂತಲೂ ಉಷಾದೇವಿಯು ಹತ್ತುಗುಣ ಕಡಿಮೆಯವಳು. ಬುಧನು ಸ್ವಾಹಾದೇವಿಯಿಂದ ಕಡಿಮೆಯವನೂ, ಉಷಾ ದೇವಿಗೆ ಹೆಚ್ಚಿನವನೂ ಆಗಿರುತ್ತಾನೆ. ಪುಷ್ಕರನು ಕರ್ಮಜದೇವತೆಗಳಿಗೆ ಸಮಾ ನನು. ಉಷಾದೇವಿಗೆ ಹತ್ತು ಗುಣಗಳಿಂದ ಕಡಿಮೆಯವನು. ಉಷಾದೇವಿ ಯಿಂದ ಕಡಿಮೆಯವನೂ, ಪುಷ್ಕರನಿಗಿಂತ ಅಧಿಕನೂ ಆದ ರವಿಸುತ ಶನಿಯು ಉಷಾ ಪುಷ್ಕರ ನಡುವೆ ಇರುವನೆಂಬುದಾಗಿ ತಿಳಿಯಬೇಕು. ಭೌಮನು (ಮಂಗಳನು) ಉಷಾದೇವಿಗಿಂತ ಕಡಿಮೆಯವನೂ, ಶನಿಗಿಂತ ಅಧಿಕನೂ ಆಗಿರುತ್ತಾನೆ. ಉಷಾ, ಸ್ವಾಹಾ, ಪರ್ಜನ್ಯ, ಮಿತ್ರ, ಅಗ್ನಿ ಇವರಲ್ಲಿ ಪೂರ್ವ ಪೂರ್ವದವರು ಉತ್ತರೋತ್ತರದಲ್ಲಿ ಇರುವವರಿಗೆ ಕೆಳಗಿನವರು. ಸ್ವಾಹಾ ಗಂಗಾದೇವಿಗಿಂತ 2 ಗುಣಗಳಿಗೆ ಕಡಿಮೆಯವಳು; ಮತ್ತು ಗಂಗಾ ಸಮಾನನಾದ ಪರ್ಜನ್ಯನಿಗಿಂತಲೂ ಎರಡು ಗುಣ ಕಡಿಮೆಯವಳು. ಜಲಮಯ ಬುಧನು ಸ್ವಾಹಾದೇವಿಗೆ ಎರಡು ಗುಣಗಳಿಂದ ಕಡಿಮೆ ಎನಿಸುತ್ತಾನೆ, ಎಂದು "ಉಷಾ ಸ್ವಾಹಾ ಚ ಪರ್ಜನ್ಯಃ"– ಎಂಬ ವಾಕ್ಯಗಳಿಗೆ ಅರ್ಥವನ್ನು ತಿಳಿಯ ಬೇಕು. 'ಉಷಾ' ಇದರ ಮುಂದೆ 'ದಶಗುಣೋತ್ತರಾಃ'-ಎಂದು ಅನ್ವಯಿಸ ಬೇಕು. ಶನೈಶ್ಚರನೂ, ಭೂಮಿಯೂ, 2 ಗುಣಗಳಿಂದ ಉಷಾದೇವಿಗಿಂತ ಕಡಿಮೆಯುವನು"–ಎಂದು ಈ ಪದ್ಯದ ಅರ್ಥ.

ಪುಷ್ಕರನು ಶನೈಶ್ಚರನಿಗಿಂತಲೂ ಕಡಿಮೆಯವನು ಹಾಗೂ ಉಷಾದೇವಿ ಗಿಂತ ಹತ್ತು ಗುಣದಿಂದ ಅಧಮನು. ॥೧೫॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ನಳಿನಿ ಎಂಬ ಗಂಗಾದೇವಿ, ಸಂಜ್ಞಾದೇವಿ ಎಂಬ ಸೂರ್ಯಪತ್ನಿ, ರೋಹಿಣೀ ಎಂಬ ಚಂದ್ರಪತ್ನಿ, ಶಾಮಲೆ ಎಂಬ ಯಮಪತ್ನಿ, ವಿರಾಟ್ ಎಂಬ ಬ್ರಹ್ಮಾಂಡಾಭಿಮಾನಿದೇವಿ, ಪರ್ಜನ್ಯನೆಂಬ ಮೇಘಚಕ್ರಾಭಿಮಾನಿ ಸೂರ್ಯ ಸಹ ಶತಪುಣ್ಯಶ್ಲೋಕರಿಗಿಂತ ಕಡಿಮೆ. ಬಾಂಬೊಳೆ- ಎಂಬ ಆಕಾಶನದ್ಯಭಿಮಾನಿ ಗಂಗೆಗಿಂತ ಎಲರೆಂಬ ವಾಯುವಿಗೆ ಮಿತ್ರನಾದ ಅಗ್ನಿಯ ಪತ್ನಿ ಸ್ವಾಹಾದೇವಿ ಎರಡು ಗುಣ ಕಡಿಮೆ. ಈ ಸ್ವಾಹಾದೇವಿಗಿಂತ ಜಲಾಧಿಪತಿ ಬುಧ ಎರಡು ಗುಣದಿಂದ ಕಡಿಮೆ. ಈ ಬುಧನಿಗಿಂತ ಅಶ್ವಿನೀದೇವತೆಗಳ ಪತ್ನಿ ಉಷಾದೇವಿ- ಶನೈಶ್ವರ ಸಹ ಎರಡು ಗುಣ ಕಡಿಮೆ. ಇವರಿಗಿಂತ ಇಳೆ ಎಂಬ ಭೂದೇವಿ ಎರಡು ಗುಣ ಕಡಿಮೆ. ॥೧೫॥

# ಸರ್ವವ್ಯಾಖ್ಯಾನಸಾರಸಂಗ್ರಹ

೧. ವರುಣದೇವರ ಪತ್ನಿಯು. ಇವಳಿಗೆ **ನಳಿನೀ**-ಎಂದು ನಾಮಾಂತರ.

೨. ವಿವಸ್ವಾನ್ ನಾಮಕ ಸೂರ್ಯನ ಪತ್ನಿಯು **ಸಂಜ್ಞಾದೇವಿ.**

೩. ಚಂದ್ರನ ಪತ್ನಿಯು **ರೋಹಿಣೀದೇವಿ.**

೪. ಯಮಧರ್ಮನ ಪತ್ನೀ **ಶಾಮಲಾದೇವಿ.**

೫. ಕಾಮಪುತ್ರನಾದ ಅನಿರುದ್ಧನ ಪತ್ನಿ **ಉಷಾದೇವಿ.** ಬಾಣಾಸುರನ ಮಗಳು. ಬ್ರಹ್ಮಾಂಡಾಭಿಮಾನಿಯಾದ ಉಷಾದೇವಿಗೆ **ವಿರಾಟ್‌ದೇವಿ** -ಎಂಬ ನಾಮಾಂತರ ಉಂಟು.

೬. **ಪರ್ಜನ್ಯ** ನಾಮಕ ಸೂರ್ಯದೇವರು. ಈತನು ಮೇಘಚಕ್ರಾಭಿಮಾನಿಯು. ಮೇಲ್ಕಂಡ ಆರು ಮಂದಿ ಸಮಾನ ಕಕ್ಷಾಪನ್ನರು. ಇವರು ಪ್ರಿಯವ್ರತಾದಿ ಶತಪುಣ್ಯಶ್ಲೋಕರಿಗಿಂತ ಎರಡು ವಿಜಾತಿ ಗುಣಗಳಿಂದ ಅಧಮರು. ಎರಡು ಸಜಾತೀ ಗುಣಗಳಿಂದ ಸಮಾನರು. 20 ನೆಯ ಕಕ್ಷಾಪನ್ನರಾದ ಈ 6 ಮಂದಿ 19ನೆಯ ಕಕ್ಷಾಪನ್ನರಿಗಿಂತ ದ್ವಿಗುಣಾಧಮರು.

**ಎಲರ್** -ಎಂದರೆ, ಗಾಳಿ. **ಎಲರಮಿತ್ರ**-ನೆಂದರೆ, ಗಾಳಿಗೆ ಸಖನಾದವನು ಅಗ್ನಿದೇವರು. ಅಗ್ನಿಯ ಪತ್ನೀ **ಸ್ವಾಹಾದೇವಿ** ಸ್ವಾಹಾ-ಎಲರ ಮಿತ್ರನ ಮಡದಿಯು. ಈಕೆ ಗಂಗಾದಿಗಳಿಗಿಂತ ಎರಡು ಏಜಾತಿ ಗುಣಗಳಿಂದ ಸಮಾನಳು.

**ಬಾಂಬೊಳೆ** -ಎಂದರೆ ಬಾನಿನ ಹೊಳೆ-ಎಂದರ್ಥ. ತ್ರಿವಿಕ್ರಮದೇವರ ವಾಮಪಾದಾಂಗುಷ್ಠದಿಂದ ಉದ್ಭವಿಸಿದ ಆಕಾಶನದಿಯೇ, ಗಂಗೆಯು. ಅವಳನ್ನು ಬಾಂಬೊಳೆ-ಎಂದಿದ್ದಾರೆ ದಾಸರಾಯರು.

**ಜಲಮಯ** -ನೆಂದರೆ ಉದಕಾಭಿಮಾನಿಯಾದ **ಬುಧನು.** ಜಲಾಧಿಪತಿಯಾದ ಬುಧನು ಸ್ವಾಹಾದೇವಿಗಿಂತ ಎರಡು ಏಜಾತಿ ಗುಣಗಳಿಂದ ಕಡಿಮೆ. ಸಜಾತೀಯ ದ್ವಿಗುಣಗಳಿಂದ ಸಮನು.

ನಾಸತ್ಯ ಮತ್ತು ದಸ್ರ-ಎಂಬ ಅಶ್ವಿನೀ ದೇವತೆಗಳ ಪತ್ನಿ **ಉಷಾದೇವಿ** ಮತ್ತು ಪೃಥಿವೀ ಅಭಿಮಾನಿಯೂ ಸೂರ್ಯನ ಪುತ್ರನೂ ಆದ **ಶನೈಶ್ಚರ**- ಇವರಿಬ್ಬರೂ ಬುಧನಿಗಿಂತ ದ್ವಿಗುಣಾಧಮರು. ಎರಡು ಸಜಾತಿ ಗುಣಗಳಿಂದ ಸಮಾನರು.

**ಇಳೆಯು** -ಅಂದರೆ ಭೂತತ್ತ್ವಾಭಿಮಾನಿಯಾದ ಭೂದೇವಿಯು ಉಷಾ ಮತ್ತು ಶನೈಶ್ಚರರಿಗಿಂತ ದ್ವಿಗುಣಾಧಮಳು. ಎರಡು ಸಜಾತೀಯ ಗುಣಗಳಿಂದ ಸಮಳು. **(ಈರು ಗುಣಾಧಮರು).**

**ಪ್ರಮಾಣ :–**

೧ "ಸಂಜ್ಞಾ ಗಂಗಾಚ ಪರ್ಜನ್ಯ ಭಾರ್ಯಾವೈಯತಂ ಚಂದ್ರಯೇಃ ।
ಅನಿರುದ್ಧ ಪ್ರಿಯೋಪಾಟ್ ಮಿತ್ರಾತ್ತು ದ್ವಿಗುಣಾಧಮಾಃ ॥

ಸ್ವಾಹಾದೇವಿ ವಹ್ನಿಜಾಯಾ ಪರ್ಜನ್ಯಾ ದ್ವಿಗುಣಾಧಮಾ ।
ಬುಧೋ ನಿಚೋಂಬುಪಸ್ತಸ್ಯ ಉಷಾ ನಾಮಾಭಿಮಾನಿನೀ ॥

ಅಶ್ವಿಭಾರ್ಯಾ ಬುಧಾನ್ಯೂನಾ ಸ್ವಾಹಾಯಾಸ್ತು ದಶಾವರಾ ।
ಧಮಾಮಾನಿ ಶನಿಸ್ತಸ್ಯಾ ಉಷಸೋಸ್ಯಧಮಃ ಸ್ಮೃತ" ॥

**–ಇತಿ ತಾರತಮ್ಯಕೌಸ್ತುಭೇ.**

೨. "ವಿರಾಟ್ ಪರ್ಜನ್ಯವತ್ ವಾರುಣೀಚ ತಥಾ ಸಂಜ್ಞಾ ಚ ರೋಹಿಣೀ ಧರ್ಮಾಚ"

**ಅನುವ್ಯಾಖ್ಯಾನ ಪ್ರಮಾಣ.** ॥೧೫॥

## ಪದ್ಯ-೧೬

**ಮೂಲ :-**

**ಎರಡು ಗುಣ ಕರ್ಮಾಧಿಪತಿ ಪು ।**
**ಷ್ಕರ ಕಡಿಮೆಯಾಜಾನ ದಿವಿಜರು ।**
**ಚಿರಪಿತೃಗಳಿಂದುತ್ತಮರು ಕಿಂಕರರು ಪುಷ್ಕರಗೆ ॥**

**ಸುರಪನಾಲಯ ಗಾಯಕೋತ್ತಮ ।**
**ರೆರಡೈದುಗುಣದಿಂಧಮ ತುಂ ।**
**ಬುರಗೆ ಸಮ ನೂರುಕೋಟಿ ಋಷಿಗಳು ನೂರು ಜನರುಳಿದು॥**
**॥೧೬॥**

**ಅವತರಣಿಕೆ :-**

ಪುಷ್ಕರ, ಅಜಾನಜ ದೇವತೆಗಳ ತಾರತಮ್ಯವಿಚಾರವನ್ನು ತಿಳಿಸುತ್ತಾರೆ. ॥೧೬॥

**ಪ್ರತಿಪದಾರ್ಥ :-**

**ಕರ್ಮಾಧಿಪತಿ ಪುಷ್ಕರ** = ಕರ್ಮಾಭಿಮಾನಿ ಪುಷ್ಕರನು, **ಎರಡು ಗುಣ ಕಡಿಮೆಯು** = ಶನೈಶ್ಚರನಿಗಿಂತಲೂ ಎರಡು ವಿಜಾತಿ ಗುಣದಿಂದ ಅಧಮನು, **ಅಜಾನದಿವಿಜರು** = ದೇವಗಂಧರ್ಯ ಪರ್ಯಂತ ಇರುವ ಅಜಾನಜ ದೇವತಾಗಣ, **ಪುಷ್ಕರಗೆ** = ಪುಷ್ಕರನಿಗೆ, **ಕಿಂಕರರು** = ಅವರರು (ಸೇವಕರು), **ನೂರುಕೋಟಿ ಋಷಿಗಳು** = ನೂರುಕೋಟಿ ಸಂಖ್ಯಾಕರಾದ ಋಷಿಗಣದಲ್ಲಿ, **ನೂರುಜನರುಳಿದು** = ನೂರು ಮಂದಿ ಹೋಗೆತಾ, ಉಳಿದವರು, ಈ ಅವಶಿಷ್ಟ ಋಷಿಗಣ 27ನೆಯ ಕಕ್ಷದವರಾದ ಅಜಾನಜರಿಗಿಂತ ಅವರರು, **ಚಿರಪಿತೃಗಳು** = ನೂರು ಕಡಿಮೆ ನೂರು ಕೋಟಿ ಋಷಿಗಳಿಗಿಂತ ಅವರರಾದವರು ಚಿರಪಿತೃವರ್ಗ, **ಸುರಪನಾಲಯ** = ಸುರ ರಾಜನಾದ ಇಂದ್ರನ ಆಲಯವಾದ ಸ್ವರ್ಗದಲ್ಲಿ, **ಗಾಯಕ** = ಗಾಯನ ಮಾಡುವ ದೇವಗಂಧರ್ವರು, **ಎರಡೈದು ಗುಣದಿಂಧಮ** = ದಶಗುಣಾಧಮರು. (ಚಿರಪಿತೃಗಳಿಗಿಂತ), **ತುಂಬುರಗೆ ಸಮ** = ನೂರು ಮಂದಿ ಋಷಿಗಳು ತುಂಬುರಾದಿ ದೇವ ಗಂಧರ್ವರಿಗೆ ಸಮರು, ॥೧೬॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಪುಷ್ಕರ ಆಜಾನಜರ. ತಾರತಮ್ಯ ವಿಚಾರ ಹೇಳುತಾರೆ.

ಶನೈಶ್ಚರನಿಗಿಂತಲೂ ಕರ್ಮಾಭಿಮಾನಿಯಾದ ಪುಷ್ಕರನು ಎರಡು ವಿಜಾತಿ ಗುಣದಿಂದ ನೀಚನು, ಎರಡು ಸಜಾತಿ ಗುಣದಿಂದ ಸಮಾನನು. ಎರಡು ವಿಜಾತಿ ಗುಣದಿಂದ ಶನೈಶ್ಚರನು ಪುಷ್ಕರನಿಗಿಂತ ಉತ್ತಮನು. ಈ ಪುಷ್ಕರನ ತರುವಾಯ ತಾರತಮ್ಯದಲ್ಲಿ ಆಜಾನಜದೇವತೆಗಳು; ದೇವಗಂಧರ್ವರ ಪರಿಯಂತ ಆಜಾನಜ ದೇವತೆಗಳು. ಪುಷ್ಕರಗೆ ಅವರರು. ಈ ಆಜಾನಜರಲ್ಲಿ ವಿವರ- ಇವರಲ್ಲಿ ತಾರತಮ್ಯ ಎರಡು ಪ್ರಕಾರ. 1. ಆಖ್ಯಾತರು, ಇವರು ಕರ್ಮಜರಿಂದ ಜನಿತರು. 2. ಅನಾಖ್ಯಾತರು, ಇವರು ಆಖ್ಯಾತ ಆಜಾನಜರಿಂದ ಜನಿತರು, ಅಂತು ಎರಡು ಪ್ರಕಾರ. ಆಖ್ಯಾತ ಆಜಾನಜರಿಂದ ಆಜಾನಜರು ಅವರರು. ಈ ಅನಾಖ್ಯಾತ ಆಜಾನಜರಲ್ಲಿ ತಾರತಮ್ಯ ವಿವರ- 1. ವಿಬುಧರು 2. ಅಸುರರು, ರಾಕ್ಷಸರು, ಚಾರಣರು- ಮೊದಲಾದವರು ಉತ್ತಮರು. ಇವರಿಗಿಂತಲೂ ನೂರು ಕಡಿಮೆ ನೂರು ಕೋಟಿ ಋಷಿಗಳು ಮ್ಯಾಲಿನ ವಿಬುಧಾದಿಗಳಿಗಿಂತ ಅವರರು. 3. ಇವರಿಗಿಂತ ಅವರರು ಚಿರ ಪಿತೃಗಳು. 4. ಇವರಿಗಿಂತ ಅವರರು ದೇವ ಗಂಧರ್ವರು. ಈ ನಾಲ್ಕು ಅನಾಖ್ಯಾತರು. ಆಜಾನಜರಲ್ಲಿ ಇರುವ ತಾರತಮ್ಯ ಇದು. ಆಖ್ಯಾತರು ಅನಾಖ್ಯಾತರು-ಎಂತ ಆಜಾನದಲ್ಲಿಯೂ ಇದ್ದಾರೆಂಬೋದಕ್ಕೆ.

**ಪ್ರಮಾಣ :-**

**ಅನಾಖ್ಯಾತಾದೇವತಾಸ್ತು ಜಾತಾ ದೇವಕುಲೇ ಚ ಯಾಃ ।**
**ಆಜಾನಜದೇವತಾಸ್ತಾ ಹಿತಾಭ್ಯೋऽಗ್ರ್ಯಾಃ ಕರ್ಮದೇವತಾಃ ॥**

**ಗಂಧರ್ವಾಸ್ತ್ತುಂಬುರಮುಖಾಃ ಶತಮಪ್ಸರಸಾಂ ಶತಂ |**
**ನಾರಾದಾದೀನೃಚಿಥ್ಯಂತಾನ್ ವಿನಾ ತು ಋಷಿಯೋಽಖಿಲಾಃ||**

**ಅರ್ಥ**–ಆಜಾನಜರ ಸಮೂಹ ಒಂದು. ಅದರಲ್ಲಿ ಎರಡು ಪ್ರಬೇಧ. ಅವರನ್ನ ವಿವರ ಮಾಡತೇವೆ. ಕರ್ಮದೇವತೆಗಳು ಅಂತ ಒಂದು. ಇವರು ಕರ್ಮಜದೇವತೆಗಳಿಂದ ಜನಿತರಾದ್ದರಿಂದ ಕರ್ಮದೇವತೆಗಳೆಂದು ಕರಸಿದರು. ಇವರೇ ಆಖ್ಯಾತ ಸಾಂಕೇತ ಆಜಾನಜರು. ಅನಾಖ್ಯಾತರು ಅಂತ ಒಂದು. ಇವರು ಆಖ್ಯಾತರಾದ ಆಜಾನಜರಿಂದ ಉತ್ಪನ್ನರಾದವರಾದ್ದರಿಂದ ಅನಾಖ್ಯಾತ ರಂತ ಕರಸಿದರು. ಆಖ್ಯಾತ– ಅನಾಖ್ಯಾತಕ್ಕೆ ವಿವರ– ಕರ್ಮಜದೇವತೆಗಳು ಅಮುಖ್ಯ ತತ್ತ್ವಾಭಿಮಾನಿಗಳೆಂದು ಖ್ಯಾತರಾದ್ದರಿಂದ, ಇವರಿಂದ ಜನಿಸಿದ ವರು ಆಖ್ಯಾತರೆಂದು ಕರಸಿದರು. ಈ ಆಖ್ಯಾತರು ತತ್ತ್ವಾಭಿಮಾನಿಗಳೆಂದು ಖ್ಯಾತರಲ್ಲ. ಆದ್ದರಿಂದ ಇವರಿಂದ ಜನಿಸಿದವರು ಅನಾಖ್ಯಾತರೆಂತ ಕರಸಿದರು. ಆಖ್ಯಾತ ಅನಾಖ್ಯಾತವೆಂಬೋದಕ್ಕೆ ಇದು ಕಾರಣವು.

ನೂರು ಕೋಟಿ ಋಷಿಗಳು ಇವರೊಳಗೆ ನೂರು ಜನ ಹೋಗತ, ಅವ ಶಿಷ್ಟ ಉಳಿದ ಋಷಿಗಳೆಂತ ಅರ್ಥ. ಅವಶಿಷ್ಟ ಉಳಿದ ಈ ಋಷಿಗಳಿಗಿಂತ ಉತ್ತಮರಾದವರು 1. ವಿಬುಧರು, 2. ರಾಕ್ಷಸರು, 3. ಅಸುರರು, 4. ಚಾರಣರು ಇವರೇ ಮೊದಲಾದ ಅನೇಕ ಮಂದಿ ವಿಬುಧಾದಿಗಳಿಗಿಂತ– ಉತ್ತಮರು. ಆಖ್ಯಾತರಾದವರು ನೂರು ಕಡಿಮಿ ನೂರುಕೋಟಿ ಋಷಿಗಳು. 1000, ಘೃತಾಚಿ, ಮೇನಕಾ, ರಂಭಾ, ಊರ್ವಶೀ, ತಿಲೋತ್ತಮಾ, ಸುಕೇಶಿ, ಶಬರೀ, ಮಂಜುಘೋಷಾ, ಪಿಂಗಳಾ– ಇತ್ಯಾದಿ

**ಗಂಧರ್ವಾಪ್ಸರಸಾಂ ಸಾಹಸ್ರಂ ಪರಿಕೀರ್ತಿತಂ |**
**ಆಜಾನಜ ಸಮೂಹ್ಯೇತಾಃ ಕರ್ಮಜಾಶ್ಚ ಶತಾವರಾಃ ||**

ಇದರಲ್ಲಿ 92 ಮಂದಿ ಕರ್ಮಜರಲ್ಲಿ ಸೇರಿದ್ದಾರೆ. 16,000 ಗೋಪ ಸ್ತ್ರೀಯರು, 92 ಮಂದಿ ಗಂಧರ್ವರು– ಇವರೇ ಮೊದಲಾದವರು ಆಖ್ಯಾತ

ರಾದ ಆಜಾನಜ ದೇವತೆಗಳು. ಅನಾಖ್ಯಾತರೊಳಗೆ ತಾರತಮ್ಯ, 'ಇಂದು ತ್ತಮರು'–ಎಂಬುದು ಆವರ್ತನ. ನೂರು ಕಡಿಮೆ ನೂರುಕೋಟಿ ಋಷಿಗಳಿಂದ ಉತ್ತಮರಾದ, ಆಖ್ಯಾತರಿಂದ ಅವರರಾದ ವಿಬುಧರು, ರಾಕ್ಷಸರು, ಅಸುರರು, ಚಾರಣರು– ಇವರೇ ಮೊದಲಾದ ಅನೇಕ ಮಂದಿ ಅನಾಖ್ಯಾತದೇವತೆಗಳು, ಆಖ್ಯಾತರಿಂದ ಅವರರು. 'ನೂರು ಕೋಟಿ ನೂರು ಜನರುಳಿದು' ಈ ಪದವೂ ಆವರ್ತನವೇ. ನೂರು ಕೋಟಿ ಋಷಿಗಳ ಒಳಗೆ ನೂರುಜನ ಹೊರ್ತು, ಅವಶಿಷ್ಟರಾದ ಋಷಿಗಳು 27 ನೇ ಕಕ್ಷದವರಾದ ಅನಾಖ್ಯಾತರಾದ ವಿಬುಧಾದಿಗಳಿಗಿಂತಲೂ ನೀಚರು. ವ್ಯಾಲಿನ ಈ ಋಷಿಗಳಿಗಿಂತಲೂ ವಿಬುಧಾದಿಗಳು ಉತ್ತಮರೆಂದು ಹೇಳೋಣದರಿಂದ ವಿಬುಧಾದಿಗಳಿಗಿಂತ ಈ ಋಷಿಗಳು ಅವರರೆಂಬುದು ಅರ್ಥಾತ್ ಸಿದ್ಧವು. ಇವರೂನೂ ಅನಾಖ್ಯಾತರಲ್ಲೇ ಗಣನ. ನೂರು ಕಡಿಮೆ ನೂರುಕೋಟಿ ಋಷಿಗಳಿಗಿಂತ ಅವರರಾದವರು ಚಿರ ಪಿತೃಗಳು. ದೇವೇಂದ್ರನ ಆಲಯ– ಸ್ವರ್ಗದಲ್ಲಿ ಗಾನ ಮಾಡತಕ್ಕ ದೇವ ಗಂಧರ್ವರೆಂಬ ಇವರು ಚಿರಪಿತೃಗಳಿಗಿಂತ ಅವರರು, ಹತ್ತು ಗುಣದಿಂದ ಅಧಮರು. ಅಂದರೆ 26ನೇ ಕಕ್ಷದಾರಭ್ಯ 30ನೇ ಕಕ್ಷದವರೆಗೂ ಪರಸ್ಪರ ದಶ ಗುಣಾಧಮರು. ಹತ್ತು ಸಜಾತಿ ಗುಣದಿಂದ ಸಮಾನರು, ಹತ್ತು ವಿಜಾತಿ ಗುಣದಿಂದ ಉತ್ತಮರು. ನೂರು ಕೋಟಿ ಋಷಿಗಳೊಳಗೆ ನೂರು ಕಡಿಮೆ ಎಂತ ಹೇಳಿದ ಈ ನೂರು ಋಷಿಗಳು ತುಂಬುರಾದಿ ಗಂಧರ್ವರಿಗೆ ಸಮರು. ತುಂಬುರರ ಸಂಗಡ ಕರ್ಮಜರಲ್ಲಿ ಸೇರಿದ್ದಾರೆ. ತದ್ವತ್ ನೂರು ಕೋಟಿ ಋಷಿಗಳಲ್ಲಿ ಕಡಿಮೆ ಆದ ನೂರು ಋಷಿಗಳೂ ಕರ್ಮಜರಲ್ಲಿ ಸೇರಿದ್ದಾರೆ. 26 ನೇ ಕಕ್ಷದಾರಭ್ಯ 30 ನೇ ಕಕ್ಷದವರಿಗೂ ಯಾವತ್ತರೂ ಆಜಾನಜರು. ಇದರಲ್ಲಿ 26ನೇ ಕಕ್ಷದವರು ಆಖ್ಯಾತ ಆಜಾನಜರು. 27ನೇ ಕಕ್ಷದಾರಭ್ಯ 30ನೇ ಕಕ್ಷದ ವರಿಗೂ ಇರತಕ್ಕ ದೇವತೆಗಳು ಅನಾಖ್ಯಾತ ಆಜಾನಜರೆಂದು ತಾತ್ಪರ್ಯ. ॥೧೬॥

## ೨. ಭಾವಪ್ರಕಾಶಿಕೆ :–

ಉಷಾದೇವಿಯಕಿಂತಲೂ ಎರಡು ಗುಣ ಕಮ್ಮಿ ಎನಿಸುವನು ಕರ್ಮಾಭಿಮಾನಿ ಪುಷ್ಕರನೆಂಬುವನು. ಚಿರಪಿತೃಗಳಿಗಿಂತಲೂ ಉತ್ತಮರೆನಿಸುವ ಆಜಾ

ನಜರು ಪುಷ್ಕರನಕಿಂತಲೂ 10 ಗುಣ ಕಮ್ಮಿ ಎನಿಸುವರು. ಆಜಾನಜರೆಂದರೆ, ತಾರತಮ್ಯ ಕೌಸ್ತುಭದಲ್ಲಿ "ಅನಾಖ್ಯಾತಾದೇವತಾಸ್ತು ಜಾತಾ ದೇವಕುಲೇಚ ಯಾಃ ॥ ಗಂಧರ್ವಾಸ್ತುಂಬರು ಮುಖಾಃ ಶತಮಪ್ಸರಸಾಂ ಶತಂ ॥ ನಾರದಾ ದೀನುಚಿತ್ಥ್ಯಂ ತಾ ವಿನಾತು ಋಷಯೋಖಿಲಾಃ ॥ಆಜಾನಜಾ ದೇವತಾಸ್ತ"– ದೇವತಾಕುಲದಲ್ಲಿ ಹುಟ್ಟಿ ದೇವತೆಗಳೆಂದು ಗಣನೆಗೆ ಬಾರದಿರುವವರು ತುಂಬರು ಮೊದಲಾದ 100 ಗಂಧರ್ವರು, ಅಪ್ಸರಸ್ತ್ರೀಯರು ॥00, ನಾರದರು ಮೊದಲು ಮಾಡಿ, ಉಚಿಥ್ಯರವರೆಗೂ ಹೇಳಿರುವ ಋಷಿಗಳನ್ನು ಬಿಟ್ಟು ಮಿಕ್ಕ ಎಲ್ಲಾ ಋಷಿಗಳು, ಇವರುಗಳಿಗೆ ಆಜಾನಜ ದೇವತೆಗಳೆಂದು ಹೆಸರೆಂದು ಹೇಳಿರುವರು. ಇವರೆಲ್ಲರೂ ಪುಷ್ಕರನಗಿಂತಲೂ 10 ಗುಣಗಳಿಂದ ಕಮ್ಮಿ ಯಾದವರೆಂದು ತಾತ್ಪರ್ಯ. ॥೧೬॥

**೩. ಭಾವದರ್ಪಣ :–**

ಎರಡು ಗುಣ. ಉಕ್ತಂಚ । "ಶನೈಶ್ಚರಾತ್ಕವರ್ಾನಿ ಪುಷ್ಕರೋಹ್ಯ ವರಃ ಸ್ಮೃತ"– ಇತಿ ॥ ಆಜಾನು ಇತಿ । ತೇಕ ಇತಿ ಚೇದುಚ್ಯತೇ । ಅನಾ ಖ್ಯಾತಾ ದೇವತಾಸ್ತು ಜಾತಾ ದೇವಕುಲಚೇ ಯಾಃ । ಗಂಧರ್ವಾಸ್ತುಂಬರು ಮುಖಾಃ ಶತಮಪ್ಸರಸಾಂ ಶತಂ । ನಾರದಾದಿನುಚಿಥ್ಯಂತಾನ್ವಿತಾತು ಋಷ ಯೋಽಖಿಲಾಃ । ಆಜಾನಜಾ ದೇವತಾಸ್ತೇ ಜ್ಞೇಯಾ"– ಇತಿ ತಾರತಮ್ಯಕೌಸ್ತು ಭೋಕ್ತೇಃ ॥ ॥೧೬॥

**೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–**

ಎರಡು ಇತಿ ॥ "ಕರ್ಮಜೇಭ್ಯಃ ಶತವರಾಃ ॥ ಆಜಾನಾಃ" ॥ ತೇಭ್ಯಃ ಋಷಯಃ ॥ ಅನಂತರಂ ಚಿರಪಿತರಃ ॥ ಗಂಧರ್ವಾಃ ॥ ಶತವರಾಃ ॥ ತುಂಬುರೋಃ ಶತಂ ವಿನಾ ಶತಕೋಟ್ಯಃ ಋಕ್ಷೀಣಾಂ ಸಮಾಃ ಇತ್ಯರ್ಥಃ ॥ ತೇಭ್ಯಃ ಶತವರಾಃ ದೇವ ಗಂಧರ್ವಾಃ ಪರಿಕೀರ್ತಿತಾಃ ॥ ಮುನಯೋಽತ್ರ ಪರಿ ಗ್ರಾಹ್ಯಾಃ ॥ ಶತೋನಶತಕೋಟಿಯಃ ॥ ಋಷಯೋ ದೇವಗಂಧರ್ವ

ಸಮಾಃ " ॥ ಇತಿ ಕೇಷಾಂಚಿತ್ ಪಕ್ಷಃ ॥ ಏತದೇವ ಅಜಾನೇಯ ಸಾಮ್ಯೇ "ದೇವೈಃ ಸಹಿತ ಗಂಧರ್ವಾಃ ಋಷಯೋ ದೇವತಾಃ ತಥಾ ॥ ಇತಿ ಬೃಹತ್ ತೇಷಾಂ ಮಾನವಮ್ ॥ ತತ್ ಅನ್ಯಥಾ ವಿವೃತೌ ವಿವೃತವಮ್ ॥ ತದ್ವಿವಕ್ಷಯಾ ಇದವಮ್ ॥ ಆಜಾನದೇವಾಃ ಇತ್ಯುಕ್ತ್ವಾ "ಆಜಾನಜೇಭ್ಯಸ್ತು ಪಿತರಃ ಸಪ್ತೇಭ್ಯೋऽನ್ಯೇ ಶತಾವರಾಃ ॥ ಪಿತೃಭ್ಯಃ ದೇವಗಂಧರ್ವಾಃ ತೇಭ್ಯಃ ಸ್ಯುಃ ಚಕ್ರವರ್ತಿನಃ ॥ ತೇಭ್ಯಸ್ತು ಮಾನುಷಾಃ ಶ್ರೇಷ್ಠಾ ಕ್ರಮಾತ್ ಶತಗುಣಾಧಮಾಃ ॥ ॥೧೬॥

## ಕನ್ನಡಾರ್ಥ

ಆಜಾನಜದೇವತೆಗಳು ಕರ್ಮಜದೇವತೆಗಳಿಗೆ ನೂರು ಗುಣಗಳಿಂದ ಕಡಿಮೆಯವರು. ಆಜಾನಜದೇವತೆಗಳಿಗೆ ಋಷಿಗಳು ಕಡಿಮೆಯವರು. ಋಷಿಗಳಿಗೆ ಚಿರಪಿತೃಗಳು ಕಡಿಮೆಯವರು. ಚಿರಪಿತೃಗಳಿಗೆ ಗಂಧರ್ವರು ಕಡಿಮೆಯವರು. ದೇವಗಂಧರ್ವರಲ್ಲಿರುವ ತುಂಬುರುನಾಮಕ ಗಂಧರ್ವನಿಗೆ ನೂರು ಕಡಿಮೆ ಒಂಭತ್ತು ಕೋಟಿ (89999900) ಋಷಿಗಳು ಸಮಾನರು"–ಎಂದು ಅರ್ಥವನ್ನು ಎಂದು ಮೂಲದಲ್ಲಿ ಹೇಳಿದ್ದಾರೆ. "ತೇಭ್ಯಃ ಶತವರಾಃ" ಇತ್ಯಾದಿ ವಾಕ್ಯಗಳು ಈ ವಿಷಯದಲ್ಲಿ ಆಧಾರಗಳಾಗಿರುತ್ತವೆ.

"ಋಷಿಗಳೂ ದೇವಗಂಧರ್ವರೂ ಸಮರು"– ಎಂದು ಕೆಲವರ ಅಭಿಪ್ರಾಯವಿರುತ್ತದೆ. "ದೇವೈಃ ಸಹಿತ ಗಂಧರ್ವಾಃ ಋಷಯಃ ದೇವತಾಃ ತಥಾ"–(ದೇವತೆಗಳಿಂದ ಯುಕ್ತರಾದ ಗಂಧರ್ವರು ದೇವಗಂಧರ್ವರು ಹಾಗೂ ಅವರಂತೆ ಋಷಿಗಳು) ಎಂದು ಹೇಳುವ ಬೃಹದ್ವಚನವು ಅವರಿಗೆ ಆಧಾರವಾಗಿರುತ್ತದೆ. ಆದರೆ ಈ ವಚನವನ್ನು ತಾರತಮ್ಯ ವಿವೃತಿಯಲ್ಲಿ ಬೇರೆ ರೀತಿಯಿಂದ ವಿವರಿಸಿರುತ್ತಾರೆ. ಇದೇ ಅಭಿಪ್ರಾಯದಿಂದಲೇ ಈ ಗುಂಪಿನವರ ಮತದಲ್ಲಿ ಸಮ್ಮತಿಯಿಲ್ಲದಿರುವುದರಿಂದಲೇ ಆಜಾನಜದೇವತೆಗಳೆಂದು ಹೇಳಿ "ಆಜಾನಜದೇವತೆಗಳು"–ಎಂದು ಪದವನ್ನು ಉಪಯೋಗಿಸಿರುತ್ತಾರೆ. "ಆಜಾನಜದೇವತೆಗಳ ರೆಶೆಯಿಂದ ಸಪ್ತರ್ಷಿ (ವಿಶ್ವಾಮಿತ್ರ ಸಹಿತ ಎಂಟು)ಗಳನ್ನು

ಬಿಟ್ಟು ಉಳಿದ ಪಿತೃಗಳು ನೂರು ಗುಣದಿಂದ ಕಡಿಮೆಯವರು." ಪಿತೃಗಳಿಗಿಂತ ಚಕ್ರವರ್ತಿಗಳು ಕಡಿಮೆಯವರು. ಚಕ್ರವರ್ತಿಗಳಿಗಿಂತ ಮನುಷ್ಯ ಗಂಧರ್ವರು ಶ್ರೇಷ್ಠರು. ಮನುಷ್ಯಗಂಧರ್ವರಿಗಿಂತ ನೂರು ಗುಣದಿಂದ ಉತ್ತಮರು ದೇವಗಂಧರ್ವರು. "ದೇವಗಂಧರ್ವರು ಪಿತೃದೇವತೆಗಳಿಂದ ನೂರು ಗುಣದಿಂದ ಅಧಮರು"–ಎಂದು ತಿಳಿಯಬೇಕು. ||೧೬||

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಭೂದೇವಿಗಿಂತ ಸತ್ಕರ್ಮಾಧಿಪತಿ ಪುಷ್ಕರನು ಎರಡು ಗುಣ ಕಡಿಮೆ. ಆಜಾನಜರೆಂಬ ದೇವಕುಮಾರರು ಚಿರಪಿತೃಗಳಿಗಿಂತ ಉತ್ತಮರಾದಾಗ್ಯೂ ಪುಷ್ಕರಗೆ ಕಿಂಕರರು ಎನಿಸುವರು. ಆಜಾನಜದೇವತೆಗಳಿಗಿಂತ ಸುರಪನೆಂಬ ಇಂದ್ರನ ಮನೆಯ ಗಾಯಕರಾದ ದೇವಗಂಧರ್ವರು ಹತ್ತು ಗುಣದಿಂದ ಕಡಿಮೆ. ಇವರಿಗಿಂತ ತುಂಬರನೆಂಬ ಗಂಧರ್ವ ಹತ್ತು ಗುಣ ಕಡಿಮೆ. ಈ ತುಂಬರಗೆ ಒಂಭತ್ತು ಕೋಟಿ ಋಷಿಗಳು ಸಮಾನರು, ನೂರುಜನ ಹೊರ್ತು ಉಳಿದವರು. ||೧೬||

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಪುಷ್ಕರ ಮತ್ತು ಅಜಾನಜದೇವತಾವರ್ಗ–ಇವರ ತಾರತಮ್ಯ ವಿಚಾರವನ್ನು ತಿಳಿಸುತ್ತಾರೆ.

1. ಅಜಾನಜದೇವತೆಗಳು ಕರ್ಮಾಭಿಮಾನಿಯಾದ ಪುಷ್ಕರನಿಗಿಂತ **ಎರಡು ವಿಜಾತೀಯ ಗುಣಗಳಿಂದ** ಅವರರು. ಎರಡು ಸಜಾತೀಯ ಗುಣಗಳಿಂದ ಸಮಾನರು.

## 2. ಅಜಾನಜ ದೇವತೆಗಳ ವಿವರ :–

ದೇವತಾಕುಲದಲ್ಲಿ ಹುಟ್ಟಿ,ದೇವತೆಗಳೆಂದು ಗಣನೆಗೆ ಬಾರದಿರುವ ಗಣಕ್ಕೆ **ಅಜಾನ**ಜರೆಂದು ಹೆಸರು. ದೇವತಾಕುಲಜಾತರಾದ್ದರಿಂದ, ಆವರಿಗೆ ದೇವತೆಗಳೆಂತ ವ್ಯವಹಾರ.

**ಪ್ರಮಾಣ :–**

"ಅನಾಖ್ಯಾತಾ ದೇವಸ್ತು ಜಾತಾ ದೇವಕುಲೇಚ ಯಾಃ ॥
ಗಂಧರ್ವಾಸ್ತುಂಬುರು ಮುಖಾಃ ಶತಮಪ್ಸರಸಾಂ ಶತಮ್ ॥
ನಾರದೀನುಚಿತ್ಥ್ಯಂ ತಾನ್ ವಿನಾತು ಋಷಿಯೋಖಿಲಾಃ ॥
ಅಜಾನಜಾ ದೇವತಾಸ್ತೇ ॥ "

**–ಇತಿ ತಾರತಮ್ಯಕೌಸ್ತುಭೇ ||**

ಈ ವರ್ಗವು ಎರಡು ಪ್ರಕಾರ :–

1) ಅಖ್ಯಾತರು ಮತ್ತು 2) ಅನಾಖ್ಯಾತರು.

**ಅಖ್ಯಾತರು :–**

ಇವರು ಕರ್ಮಜದೇವತೆಗಳಿಂದ ಜನಿತರಾದವರು. ಇವರೂ ಅಜಾನಜರೇ.

**ಅನಾಖ್ಯಾತರು :–**

ಮೇಲಿನ ಆಖ್ಯಾತ ಆಜಾನಜರಿಂದ ಜನಿತರಾದವರಿಗೆ **ಅನಾಖ್ಯಾತ ಅಜಾನ**ಜರೆಂದು ಹೆಸರು.

ಕರ್ಮಜದೇವತೆಗಳಿಂದ ಜನಿತರಾದ ಅಜಾನಜರಲ್ಲಿ ತತ್ತ್ವಾಭಿಮಾನಿಗಳ ವರ್ಗಕ್ಕೆ ಸೇರದ ವರ್ಗವು ಆಖ್ಯಾತರು. ಕರ್ಮಜದೇವತೆಗಳು ಅಮುಖ್ಯ

ತತ್ತ್ವಾಭಿಮಾನಿಗಳೆಂದು ಖ್ಯಾತರಾಗಿದ್ದಾರೆ. (ಪ್ರಸಿದ್ಧರಾಗಿದ್ದಾರೆ), ಅವರಿಂದಜನಿತರಾದ ತತ್ತ್ವಾಭಿಮಾನಿಗಳಲ್ಲದ ವರ್ಗವೇ **ಆಖ್ಯಾತರು**) ಖ್ಯಾತರಾದವರಿಗಿಂತ ಅವರರು).

ಆಖ್ಯಾತರಿಂದ ಜನಿತರಾದ ಅಜಾನಜರು **ಅನಾಖ್ಯಾತರು.** ಹೀಗೆ ಆಖ್ಯಾತ ಮತ್ತು ಅನಾಖ್ಯಾತ ಎಂದು ಎರಡು ಪ್ರಕಾರ.

ತುಂಬುರರೇ ಮೊದಲಾದ 100 ಮಂದಿ ಗಂಧರ್ವರು. 100 ಮಂದಿ ಅಪ್ಸರಸ್ತ್ರೀಯರು, ನಾರದರಿಂದ ಆರಂಭಿಸಿ ಉಚಿತ್ಥ್ಯಪರ್ಯಂತ ಹೇಳಿರುವ ಋಷಿಗಳನ್ನು,ಬಿಟ್ಟು ಉಳಿದ ಋಷಿವರ್ಗ,– ಇವರೆಲ್ಲರೂ ಕರ್ಮಾಧಿಪತಿಯಾದ ಪುಷ್ಕರನಿಗಿಂತ ಅಧಮರು.

ಅನಾಖ್ಯಾತ ಅಜಾನಜರಲ್ಲಿ 1) ವಿಬುಧರು. 3) ಅಸುರರು. 3) ರಾಕ್ಷಸರು. 4) ಚಾರಣರು–ಮೊದಲಾದವರು ಸೇರಿದ್ದಾರೆ. ಅಸುರರೆಂದರೆ. ತಮೋಯೋಗ್ಯರಲ್ಲಿ ಪ್ರಹ್ಲಾದ-ಬಲಿಚಕ್ರವರ್ತಿ, ನಿರುಋುತಿ-ವಿಭೀಷಣ ಇತ್ಯಾದಿ ಉತ್ತಮಚೇತನರು. ಅಸುರವಂಶಜಾತರು. ಘಟೋತ್ಕಜನು (ಭೀಮಪುತ್ರ) ರಾಕ್ಷಸಯೋನಿಜನು. ಇವರು ಉತ್ತಮ ಪಕ್ಷಕ್ಕೆ ಸೇರಿದವರು.

ನೂರು ಕಡಿಮೆ ನೂರು ಕೋಟಿ ಋಷಿಗಳು (ತೊಂಭತ್ತು ಕೋಟಿ 99 ಲಕ್ಷದ 99 ಸಾವಿರದ 9990 ಮಂದಿ). ಮೇಲಿನ ವಿಭುಧರಿಗಿಂತ ಅವರರು.

ಚಿರಪಿತೃಗಳು ನೂರು ಕಡಿಮಿ ನೂರು ಕೋಟಿ ಋಷಿಗಳಿಗಿಂತ ಅವರರು.

ದೇವಗಂಧರ್ವರು ಚಿರಪಿತೃಗಳಿಗಿಂತ ಅವರರು.

ಈ ನಾಲ್ಕು ವರ್ಗದವರೂ **ಅನಾಖ್ಯಾತ ಅಜಾನಜರು.**

ಅಖ್ಯಾತ ಅಜಾನಜರಲ್ಲಿ. 1) 1000 ಮಂದಿ ಋಷಿವರ್ಗ, 2) ಘೃತಾಚೀ-ಮೇನಕಾ–ರಂಭಾ–ಊರ್ವಶೀ- ತಿಲೋತ್ತಮೆ- ಸುರೇಶೀ- ಶಬರೀ-

ಮಂಜುಘೋಷಾ-ಮಂಗಳಾ ಇತ್ಯಾದಿ ಅಪ್ಸರಾಸ್ತ್ರೀಯರು (ದೇವಸಭಾನರ್ತಕಿಯರು,) 16,000 ಮಂದಿ ಗೋಪಿಕಾಸ್ತ್ರೀಯರು (ಅಗ್ನಿಪುತ್ರಿಯರು), 92 ಮಂದಿ ಗಂಧರ್ವರು-ಇವರೆಲ್ಲರೂ ಸೇರಿದ್ದಾರೆ.

**ತಾರತಮ್ಯಕ್ರಮ :–**

1) ಕರ್ಮಾಧಿಪತಿಯಾದ ಪುಷ್ಕರನು ಅಜಾನಜರಿಗಿಂತ ದ್ವಿಗುಣಾಧಿಕನು.

2) ಚಿರಪಿತೃಗಳಿಗಿಂತ ಅಜಾನಜರು ಉತ್ತಮರು.

3) ನೂರು ಕೋಟಿ ಸಂಖ್ಯಾಕರಾದ ಋಷಿಗಣದಲ್ಲಿ ಉತ್ತಮರಾದ 100 ಮಂದಿ ಹೋಗತಾ, ಅವಶಿಷ್ಟ ಗಣದವರು 27 ನೆಯ ಕಕ್ಷಾಪನ್ನರಾದ ಅಜಾನಜರಿಗಿಂತ ಅವರರು.

4) ದೇವತೆಗಳ ರಾಜನಾದ ಇಂದ್ರನ ಸಭೆಯಲ್ಲಿ (ಸುರಪನಾಲಯ) ಗಾಯನವಮಾಡುವ ದೇವಗಂಧರ್ವರು ಚಿರಪಿತೃಗಳಿಗಿಂತ 10 ವಿಜಾತೀಯಗುಣಗಳಿಂದ ಅವರರು, 10 ಸಜಾತೀಯ ಗುಣಗಳಿಂದ ಸಮಾನರು.

5) ನೂರು ಮಂದಿ ಋಷಿಗಳನ್ನು ಉಳಿದು,ಅವಶಿಷ್ಟ ನೂರು ಕೋಟಿ ಋಷಿಗಳು ತುಂಬುರಾದಿ ದೇವಗಂಧರ್ವರಿಗೆ ಸಮರು. ॥೧೬॥

## ಪದ್ಯ-೧೭

**ಮೂಲ :-**

**ಅವರವರ ಪತ್ನಿಯರು ಅಪ್ಸರ |**
**ಯುವತಿಯರು ಸಮ ಉತ್ತಮರನುಳಿ |**
**ದವರರೆನಿಪರು ಮನುಜಗಂಧರ್ವರು ದ್ವಿಷಡ್ಗುಣದಿ ||**
**ಕುವಲಯಾಧಿಪರೀರ್ಕ್ಶೈದು ಗುಣ |**
**ನವನಿಪಸ್ತ್ರೀಯರು ದಶೋತ್ತರ |**
**ನವತಿಗುಣದಿಂದ ಧಮರೆನಿಪರು ಮಾನುಷೋತ್ತಮರು || ||೧೭||**

**ಅವತರಣಿಕೆ :-**

ಅಜಾನಜದೇವತೆಗಳ ಪತ್ನಿಯರು, ಚಿರಪಿತೃಗಳು, ಋಷಿಗಳು, ದೇವ ಗಂಧರ್ವರು, ಅಪ್ಸರಸ್ತ್ರೀಯರು, ಮನುಜಗಂಧರ್ವರು, ಮಾನುಷೋತ್ತಮರ-ತಾರತಮ್ಯ ವಿಚಾರ ತಿಳಿಸುತ್ತಾರೆ. ||೧೭||

**ಪ್ರತಿಪದಾರ್ಥ :-**

**ಉಳಿದ** = ದೇವಗಂಧರ್ವರ ತರುವಾಯ ಉಳಿದವರಾದ, **ಅವರವರ ಪತ್ನಿಯರು** = ಆಯಾಯಾ ಅಜಾನಜದೇವತೆಗಳ ಪತ್ನಿಯರು, **ಅಪ್ಸರ ಯುವತಿಯರು** = ಅನ್ಯರಾದ ಮೇನಕಾ, ರಂಭಾದಿ ಅಪ್ಸರಸ್ತ್ರೀಯರು, **ಸಮ** = ಇವರೊಳಗೆ ಸಮರು. ಇವರು ದೇವಗಂಧರ್ವ ವರ್ಗದಲ್ಲೇ ಅಂತರ್ಭೂತರಾದರೂ, ತಾರತಮ್ಯದಿಂದ ದೇವಗಂಧರ್ವರಿಗಿಂತ ಅವರರು, **ಅವರೆನಿಪರು** = ಅಜಾನಜರ ಪತ್ನಿಯರಿಗಿಂತ ಅವರರೆನಿಸಿಕೊಳ್ಳುವ, **ಮನುಜಗಂಧರ್ವರು** = ನಿರಂತರರಾದ ಮಾನುಷಗಂಧರ್ವರು, **ದ್ವಿಷಡ್ಗು**

**ಣದಿ** = ಹನ್ನೆರಡು ಗುಣದಿಂದ ಅವರರು. ಅಂದರೆ, ಅಜಾನಜದೇವತೆಗಳ ಪತ್ನಿಯರು ದೇವಗಂಧರ್ವರಿಗಿಂತ ಹನ್ನೆರಡು ವಿಜಾತೀಯ ಗುಣಗಳಿಂದ ಅವರರು–ಎಂದರ್ಥ, **ಕುವಲಯಾಧಿಪರು** = ಭೂವಲಯಕ್ಕೆ ಅಧಿಪತಿಗಳಾದ ಮಾನುಷ ಚಕ್ರವರ್ತಿಗಳು, ನೂರು ವಿಜಾತಿಗುಣಗಳಿಂದ ಅಧಮರು, **ಅವನಿಪ ಸ್ತ್ರೀಯರು** = 35 ನೆಯ ಕಕ್ಷಾಪನ್ನರಾದ ಮಾನುಷಚಕ್ರವರ್ತಿಗಳ ಪತ್ನಿಯರು, **ಈರೈದು ಗುಣವು** = ಹತ್ತು ವಿಜಾತಿಗುಣಗಳಿಂದ ತಮ್ಮ ಪತ್ನಿಯರಿಗಿಂತ ಅವರರು, **ಮಾನುಷೋತ್ತಮರು** = 36 ನೆಯ ಕಕ್ಷಕ್ಕೆ ಸೇರಿದ ಮಾನುಷೋತ್ತಮರು, **ದಶೋತ್ತರನವತಿಗುಣದಿಂದ** = ನೂರುಗುಣಗಳಿಂದ (ನವತಿ =90, ದಶೋತ್ತರ = 10 ಅಧಿಕವಾದ, ಅಂದರೆ 90 + 10 = 100), **ಅಧಮರೆನಿಪರು** = ಮಾನುಷಚಕ್ರವರ್ತಿಗಳ ಪತ್ನಿಯರಿಗಿಂತ ಅವರರೆಂದೆನಿಸುತ್ತಾರೆ. ॥೧೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಅಜಾನಜಪತ್ನೇರು ಮೊದಲಾದವರ ತಾರತಮ್ಯ ಹೇಳತಾರೆ. ಅಜಾನಜರು, ಚಿರಪಿತೃಗಳು, ಋಷಿಗಳು, ದೇವಗಂಧರ್ವರು ಇವರಿವರ ಪತ್ನೇರು ಅಪ್ಸರಸ್ತ್ರೀಯರಿಗೆ ಸಮಾನರು.

ದೇವಗಂಧರ್ವರ ತರುವಾಯ, ಉಳಿದವರು ದಾರೆಂದರೆ, ಆಯಾ ಆಜಾನಜದೇವತೆಗಳ ಪತ್ನಿಯರು, ಅನ್ಯರಾದ ಕೇವಲ ಅಪ್ಸರಸ್ತ್ರೀಯರು ಇವರೊಳಗೆ ಸಮರು, ಉತ್ತಮರ ತಿಳಿಯಬೇಕಂತ ತಾತ್ಪರ್ಯ. ಕಿಂಚಿತ್ ನ್ಯೂನಾಧಿಕ್ಯದಿಂದ ತಾರತಮ್ಯವೆಂದು ತಾತ್ಪರ್ಯ. ಇವರು ದೇವಗಂಧರ್ವರಲ್ಲೇ ಅಂತರ್ಭೂತರು. ಆದರೂ ತಾರತಮ್ಯದಲ್ಲಿ ದೇವಗಂಧರ್ವರಿಗಿಂತ ಅಮರರು. ಆದ್ದರಿಂದ ಪ್ರತ್ಯೇಕ ತಾರತಮ್ಯ ಹೇಳಿದ್ದಾರೆ. ಮಾನುಷೋತ್ತಮರ ನಂತರ ಇರತಕ್ಕ ತೃಣಜೀವರ ತಾರತಮ್ಯ ಎಂಬುದು ಬಿಟ್ಟು ಮಾನುಷೋತ್ತಮರ ಪತಿ

ಯಂತ ಕೆಲವು ಗ್ರಂಥಾಂತರಗಳಲ್ಲಿ ಹೇಳಿ,ತೃಣಾದಿಗಳು ಮಾನುಷೋತ್ತಮರಲ್ಲಿ, ಅಂತರ್ಭೂತರೆಂದು ಹೇಳೋವರಾಗಿದ್ದಾರೆ. ಅದರಂತೆ,ದೇವಗಂಧರ್ವಾನಂತರ ಬರತಕ್ಕ ತಾರತಮ್ಯದವರನ್ನು ವಿಶೇಷ ಪ್ರಸಿದ್ಧಿ ಮಾಡದೆ ಬಿಡೋವರಾಗಿದ್ದಾರೆ. ಅದರಂತೆ, ದೇವಗಂಧರ್ವಾನಂತರ ಬರತಕ್ಕ ತಾರತಮ್ಯದವರನ್ನು ವಿಶೇಷ ಪ್ರಸಿದ್ಧಿ ಮಾಡದೆ ಬಿಡೋವರಾಗಿದ್ದಾರೆ. 33ನೇ ಕಕ್ಷದ ಮನುಜಗಂಧರ್ವರು, ಇವರಲ್ಲಿ ದೇವಗಂಧರ್ವರಲ್ಲಿ ಅಂತರ್ಭೂತರೆಂದು ತಾತ್ಪರ್ಯ. ಆಜಾನಜರ ಪತ್ನಿಯರಿಗಿಂತ ಅವರರೆನಿಸಿಕೊಳ್ಳುತಾರೆ, ದಾರೆಂದರೆ, ನಿರಂಶರಾದ ಮಾನುಷ ಗಂಧರ್ವರು, ಎರಡು ಗುಣದಿಂದ ಅವರರೆಂತ ಅರ್ಥ. ಈ ದಿಕ್ಪ್ರದರ್ಶನದಿಂದ ಆಜಾನಜಪತ್ನಿಯರು ದೇವಗಂಧರ್ವರಿಗೆ ಎರಡು ಗುಣದಿಂದ ಅವರರೆಂದು ತಾತ್ಪರ್ಯ. 34 ನೇ ಕಕ್ಷದ ಮಾನುಷಚಕ್ರವರ್ತಿಗಳು ಆರು ವಿಜಾತಿಗುಣದಿಂದ ಧಮರು, ವಿಜಾತಿ ಅಧಮ, ಸಜಾತಿ ಸಮ, ವಿಜಾತಿ ಉತ್ತಮ, ಇವು ಮೂರೂ ಪೂರ್ವೋಕ್ತದಂತೆ ಸರ್ವರಿಗೂ ಗ್ರಾಹ್ಯಮಾಡಿಕೋಬೇಕು. 35ನೆಯ ಕಕ್ಷದ ಅವನಿಪ ಸ್ತ್ರೀಯರು-ಮಾನುಷ ಚಕ್ರವರ್ತಿಗಳಿಗಿಂತ ಅಧಮರಾದವರು ಮಾನುಷ ಚಕ್ರವರ್ತಿಗಳ ಪತ್ನಿಯರು, ಹತ್ತು ವಿಜಾತಿಗುಣದಿಂದ ಅಧಮ ರೆಂದು ತಾತ್ಪರ್ಯ. 36 ನೇ ಕಕ್ಷದ ಅವನಿಪ ಸ್ತ್ರೀಯರಿಂದ ನೀಚರು ಮಾನು ಷೋತ್ತಮರು, ನೂರು ಗುಣದಿಂದ, ವಿಜಾತಿಗುಣದಿಂದ ಅಧಮರೆಂತ ಕರಸೋವರಾಗತಾರಂತ ತಾತ್ಪರ್ಯ. ॥೧೭॥

## ೨. ಭಾವಪ್ರಕಾಶಿಕೆ :–

ಈ ಮೂಲದಲ್ಲಿ ಸಾಧಾರಣವಾಗಿ ತೋರುವಂತೆ, ಗಂಧರ್ವರು 100 ಮಂದಿ, ಅಪ್ಸರರು 100 ಮಂದಿ, 100 ಕಮ್ಮಿ 9 ಕೋಟಿ ಋಷಿಗಳು, ಅವರ ಪತ್ನಿಯರು– ಇವರೆಲ್ಲರೂ ಪುಷ್ಕರನಗಿಂತಲೂ, 10 ಗುಣ ಕಮ್ಮಿ ಎಂತಲೂ, ದೇವಗಂಧರ್ವಾದಿಗಳಿಗಿಂತಲೂ ಮನುಷ್ಯಗಂಧರ್ವರು 12ಗುಣ ಗಳಿಂದ ಕಮ್ಮಿ ಎಂತಲೂ, ಚಕ್ರವರ್ತಿಗಳು ಅವರ ಹೆಂಡಂದಿರು ಸಹ ಮನುಷ್ಯಗಂಧರ್ವರಿಗಿಂತಲೂ, 10 ಗುಣಗಳಿಂದ ನೀಚರೆಂತಲೂ, ಅವರ ಗಿಂತಲೂ ಮನುಷ್ಯೋತ್ತಮರು 100 ಗುಣಗಳಿಂದ ನೀಚರೆಂತಲೂ– ಅರ್ಥ

ವಾಗುತ್ತದೆ. ಅದರಂತೆಯೆ ಪದ್ಯಾರ್ಥದಲ್ಲಿ ಬರಿಯಲ್ಪಟ್ಟಿದೆ. ಆದರೆ **ತಾರ ತಮ್ಯಕೌಸ್ತುಭದ** ವಚನಗಳಿಗೂ ದಾಸಾರ್ಯರ ವಾಕ್ಯಕ್ಕೂ ಪರಸ್ಪರ ವಿರೋಧ ಬರುವುದು. ಹೇಗೆಂದರೆ "ಆಜಾನೇಭ್ಯೋ ಶತಂ ನ್ಯೂನಾಃ ಪಿತೃಭ್ಯಶ್ಚ ಶತಾಧಮಾಃ ॥ ಉಕ್ತಾನ್ಯೇದೇವ ಗಂಧರ್ವಾ ಸ್ತಚ್ಛತೋನಾನ್ನಗಾಯಕಾಃ ॥ ಗಂಧರ್ವೇಭ್ಯೋ ಮಾನುಷೇಭ್ಯಃ ಶತೋನಾಶ್ಚಕ್ರವರ್ತಿನಃ ॥ ಕ್ಷಿತಿಪೇಭ್ಯೋ ಶತಾಂಶೋನಾ ಈರಿತಾ ಮಾನುಷೋತ್ತಮಾಃ"- ಆಜಾನಜ ದೇವತೆಗಳಿಗಿಂತಲೂ, ಮತ್ತು ಚಿರಪಿತೃಗಳಿಗಿಂತಲೂ ಮೇಲೆ ಹೇಳಿದ ಗಂಧರ್ವರನ್ನು ಬಿಟ್ಟು ಉಳಿದ ದೇವಗಂಧರ್ವರು, 100 ಗುಣದಿಂದ ಕಮ್ಮಿಯೆನಿಸುವರು. ಅವರಗಿಂತಲೂ 100 ಗುಣದಿಂದ ಕಮ್ಮಿ ಎನಿಸುವರು ಮನುಷ್ಯಗಂಧರ್ವರು. ಅವರಿಗಿಂತಲೂ 100 ಗುಣ ಕಮ್ಮಿ ಚಕ್ರವರ್ತಿಗಳು. ಅವರಿಗಿಂತಲೂ 100 ಗುಣಗಳಿಂದ ಮನುಷ್ಯೋತ್ತಮರು ಕಮ್ಮಿಯೆನಿಸುವರೆಂದು ಪ್ರಮಾಣಾರ್ಥ. ಇದನ್ನನುಸರಿಸಿ ಮೂಲಕ್ಕೆ ಪ್ರಕಾರಾಂತರವಾಗಿ ಅರ್ಥವು ಬರೆಯಲ್ಪಡುತ್ತೆ :-

ಪ್ರಕಾರಾಂತರವಾಗಿ 17 ನೆಯ ಪದ್ಯಾರ್ಥ :- ಉತ್ತಮರನ್ನುಳಿದು– ಮೇಲಿನ ತಾರತಮ್ಯದಲ್ಲಿ ಉತ್ತಮರನ್ನಾಗಿ ಗಣನೆ ಮಾಡಿದವರನ್ನು ಬಿಟ್ಟು, ಅವರವರ ಪತ್ನಿಯರು = ಋಷಿಗಳ ಪತ್ನಿಯರು, ಅಪ್ಸರ ಯುವತಿಯರು = ಅಪ್ಸರಸ್ತ್ರೀಯರು, ಸಮ = ಸಮರೆನಿಸುವರು ದ್ವಿಷಡ್ಗುಣದಿ = 12 ಗುಣಗಳಿಂದ, ಅವರರೆನಿಪರು = ಪತಿಗಳಿಗಿಂತಲೂ ನೀಚರೆನಿಸುವರು, ಮನುಜಗಂಧರ್ವರು. ದಶೋತ್ತರ ನವತಿ ಗುಣದಿಂದ = 10 ಅಧಿಕ, 90 ಗುಣಗಳಿಂದ, ಒಟ್ಟು 100 ಗುಣಗಳಿಂದ, ದೇವಗಂಧರ್ವರಿಗಿಂತಲೂ ಅಧಮರೆನಿಪರು. ಕುವಲಯಾಧಿಪರು = ಚಕ್ರವರ್ತಿಗಳು, ಮನುಜಗಂಧರ್ವರಗಿಂಶಲೂ ದಶೋತ್ತರನವತಿ ಗುಣದಿಂದ = 100 ಗುಣಗಳಿಂದ (ಈ ಪದವನ್ನು 2-3 ಸಲ ಆವೃತ್ತಿ ಮಾಡಿಕೊಳ್ಳಬೇಕು) ಅಧಮರೆನಿಪರು. ಅವನಿಪ ಸ್ತ್ರೀಯರು = ಚಕ್ರವರ್ತಿಗಳ ಹೆಂಡತಿಯರು, ಈರೈದು ಗುಣ = 10 ಗುಣಗಳಿಂದ, ಪತಿಗಳಿಗಿಂತಲೂ, ಅಧಮರೆನಿಪರು. ಮಾನುಷೋತ್ತಮರು, ಚಕ್ರವರ್ತಿಗಳಕಿಂತಲೂ, ದಶೋತ್ತರ ನವತಿ ಗುಣದಿಂದ = 100 ಗುಣಗಳಿಂದ

ಅಧಮರೆನಿಪರು,- ಎಂದು ಅರ್ಥ ಮಾಡಿದರೆ ಪ್ರಮಾಣಾರ್ಥವೂ, ಮೂಲ ವಾಕ್ಯವೂ ಸರಿ ಹೋಗುವುದೆಂದು ತೋರಿದಂತೆ ಸೂಚಿಸಿರುತ್ತೆ ॥ ॥೧೭॥

## ೩. ಭಾವದರ್ಪಣ :–

ಅವರವರ । "ಉಕ್ತಾನ್ಯೇ ಪಿತರಶ್ಚಿರಾಃ । ಅಜಾನೇಭ್ಯೋ ಶತಂ ನ್ಯೂನಾಃ ಪಿತೃಭ್ಯಶ್ಚ ಶತಾಧಮಾಃ । ಉಕ್ತಾನ್ಯೇ ದೇವಗಂಧರ್ವಾಸ್ತಚ್ಛತೋನಾ ನೃಗಾಯಕಾಃ । ಗಂಧರ್ವೇಭ್ಯೋ ಮಾನುಷೇಭ್ಯಃ ಶತೋನಾಶ್ಚಕ್ರವರ್ತಿನಃ । ಕ್ಷಿತಿಪಾಶ್ಚ ಶತಾಂಶೋನಾ ಈರಿತಾ ಮಾನುಷೋತ್ತಮಾಃ"– । ಇತಿ ಕೌಸ್ತುಭೋಕ್ತೇಃ । ಉಳಿದು ಬಿಟ್ಟು ಅವರ ನೀಚರು ಎನಿಸುತ್ತಾರೆ. ಕುವಲಯಾ– ಭೂಮಿ; ಅವನಿಪ–ರಾಜ, ದಶೋತ್ತರ ನವತಿ = 100 ಗುಣ. ॥೧೭॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದಿ :–

'ಅವರವರು'–ಇತಿ ॥ ತೇಭ್ಯಃ ಮನುಷ್ಯಗಂಧರ್ವಾಃ ಸಾರ್ಧದ್ವಾದಶತಂ ಅಧಮಾಃ ॥ ಯದ್ವಾಷ್ಟಭಿಃ ಸ್ತ್ರೀಯಃ ಪತಿಭಿಃ "ದೇವಗಂಧರ್ವಪತೋಽಥ ಮುನಿಪತ್ನ್ಯಃ ತಥೈವಚ ॥ ಭರ್ತೃಷ್ಟೋನಾಃ ಪರಿಜ್ಞೇಯಾಃ ಯಾಸಾಂ ಮುಕ್ತೌ ಸಹ ಸ್ಥಿತಿಃ॥ಇತಿ. ತಾರತಮ್ಯ ರತ್ನಮಾಲಾಯಾಂ ॥ ಅವಮಾಃ ಶತ ಗುಣೈಃ ಉತ್ತರಾರ್ಧೋಕ್ತ್ಯೈಃ ॥ ಕುವಲಯಾಧಿಪಾಃ ರಾಜಾನಃ ॥ ತಾಭ್ಯಃ ನರ ಗಂಧರ್ವಾಣಾಂ ದ್ವಿಷಡ್ಗುಣೋನತ್ವಾತ್ ಕ್ವಚಿತ್ ಕ್ವಚಿತ್ ಸ್ಥಲೇ ತಥೋಕ್ತೇಃ ಏವಂ ಉಕ್ತಾವಪಿ ಬಲವತ್ಪ್ರಮಾಣಾದೇವಮೇವ ಮಂತವ್ಯಮ್ ॥ ತದ್ಭಾರ್ಯಾಃ ಪತಿಭ್ಯಃ ಅಷ್ಟಗುಣ್ಯಾವರಾಃ ॥ "ದಶಂ ಶತಂ ಸಹಸ್ರಂ ಚ ನೈವ ತನ್ಮಾತ್ರ ವಾಚಕಮ್ ॥ ಅವಿರೋಧಃ ತತೋ ಜ್ಞೇಯಃ ನಾನಾ ವಾಕ್ಯೇಷು ಸರ್ವಶಃ ॥ ಇತ್ಯುಕ್ತೇಃ ॥೧೮॥

## ಕನ್ನಡಾರ್ಥ

ಅವರಿಂದ ನೂರುಳಿದ ನವಕೋಟಿ ಋಷಿಗಳಿಂದ ಮನುಷ್ಯಗಂಧರ್ವರು 12 ಗುಣಗಳಿಂದ ಅಧಮರು ಎಂದರ್ಥ. ಅಥವಾ ದ್ವಿಷಡ್ಗುಣ– ಶಬ್ದಕ್ಕೆ

ಎಂಟು ಗುಣಗಳೆಂದು ಅರ್ಥವನ್ನು ತಿಳಿಯಬೇಕು. "ದೇವಗಂಧರ್ವಪತ್ನಿಯರು ಹಾಗೂ ಋಷಿಪತ್ನಿಯರು ತಮ್ಮ ತಮ್ಮ ಪತಿಗಳಿಂದ ಎಂಟು ಗುಣಗಳಿಂದ ಕಡಿಮೆಯವರೆಂದು ತಿಳಿಯಬೇಕು. ಅವರು ಮುಕ್ತಿಯಲ್ಲಿ ತಮ್ಮ ಪತಿಗಳೊಡನೆಯೇ ಇರುತ್ತಾರೆ."– ಎಂದು ತಾರತಮ್ಯಮಾಲೆಯಲ್ಲಿ ಹೇಳಲಾಗಿದೆ. 'ಅವಮಾಃ (ಅವರವರು) ಎಂದರೆ, ನೂರು ಗುಣಗಳಿಂದ ಕಡಿಮೆಯವರು- ಎಂದು ಉತ್ತರಾರ್ಧದಲ್ಲಿ ಹೇಳಿದ್ದಕ್ಕನುಗುಣವಾಗಿ ತಿಳಿಯಬೇಕು.

"ಕುವಲಯಾಧಿಪರು = ರಾಜರುಗಳು. ದೇವ ಋಷಿಪತ್ನಿಯರಿಂದ ಮನುಷ್ಯಗಂಧರ್ವರು 12 ಗುಣಗಳಿಂದ ಕಡಿಮೆಯವರು"– ಎಂದು ಕೆಲಕೆಲವು ಗ್ರಂಥಗಳಲ್ಲಿ ಹೇಳಿದುದಾದರೂ ಬಲಯುಕ್ತ, ನಿರವಕಾಶವಾದ ಪ್ರಮಾಣಗಳಿರುವುದರಿಂದ, ಅವರವರ ಪತ್ನಿಯರಿಗೂ ಋಷಿದೇವತೆಗಳಿಗೂ ಎಂಟು ಗುಣಗಳ ಅಂತರವಿರುವುದಾಗಿಯೂ ಆ ದೇವಗಂಧರ್ವರಿಗೂ ತತ್ಸಮರಾದ ನೂರು ಕಡಿಮೆ ನವಕೋಟಿ ಋಷಿಗಳಿಗೂ ಮನುಷ್ಯಗಂಧರ್ವರು ನೂರು ಗುಣಗಳಿಂದ ಕಡಿಮೆಯವರೆಂದೂ ಅರ್ಥವನ್ನು ತಿಳಿಯಬೇಕು. "ಶ, ಶತ, ಸಹಸ್ರ" ಮುಂತಾದ ಶಬ್ದಗಳಿಗೆ 10,100,1000,-ಎಂದು ಅಷ್ಟೇ ಸಂಖ್ಯೆಗಳೆಂದು ಅರ್ಥವಲ್ಲ. ಹೆಚ್ಚಿನ ಸಂಖ್ಯೆಗಳೂ ಅರ್ಥವಾಗುವವು."– ಎಂದು ಪ್ರಮಾಣಗಳಿರುವುದರಿಂದ,ಅನೇಕ ವಾಕ್ಯಗಳಿಗೆ ಪರಸ್ಪರ ವಿರೋಧವಿರುವುದಿಲ್ಲ. ||೧೭||

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಆ ಋಷಿಗಳ ಪತ್ನಿಯರು ಅಪ್ಸರಸ್ತ್ರೀಯರಿಗೆ ಸಮಾನರು. ಉತ್ತಮರಾದ ದೇವಗಂಧರ್ವರನ್ನು ಬಿಟ್ಟು ಮನುಷ್ಯಗಂಧರ್ವರು ಅಪ್ಸರಸ್ತ್ರೀಯರಿಗಿಂತ ಹನ್ನೆರಡು ಗುಣ ಕಡಿಮೆ. ಮನುಷ್ಯಗಂಧರ್ವರಿಗಿಂತ ಕುವಲಯಾಧಿಪರೆನಿಸುವ ಮಧ್ಯಮ ಭೂಪತಿಗಳೆಂಬ ದೊರೆಗಳು ಹತ್ತು ಗುಣದಿಂದ ಕಡಿಮೆ. ಅವರ ಪತ್ನಿಯರು ಅವರಿಗೆ ಹತ್ತು ಗುಣ ಕಡಿಮೆ. ಆ ದೊರೆಗಳಿಗಿಂತ ಮನುಷ್ಯೋತ್ತಮರು ನೂರು ಗುಣದಿಂದ ಕಡಿಮೆ. ||೧೭||

# ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಲ್ಲಿ ಅಜಾನಜದೇವತೆಗಳ ಪತ್ನಿಯರು–ಅಪ್ಸರಸ್ತ್ರೀಯರ ವರ್ಗ– ಮನುಜ ಗಂಧರ್ವರು– ಮಾನುಷೋತ್ತಮರು– ಇವರ ತಾರತಮ್ಯ ವಿಚಾರ ತಿಳಿಸುತ್ತಾರೆ.

1. ಋಷಿಪತ್ನಿಯರು ಮತ್ತು ರಂಭಾದಿ ಅಪ್ಸರಸ್ತ್ರೀಯರು ಸಮಾನ ಕಕ್ಷಾಪನ್ನರು. ಈ ವರ್ಗವು ತಮಗೆ ಉತ್ತಮರಾದವರಿಗಿಂತ 12 ಗುಣಗಳಿಂದ ಅವರರು (**ದ್ವಿಷಡ್ಗುಣ**).

2. ಉತ್ತಮರಾದ ದೇವಗಂಧರ್ವರನ್ನು ಬಿಟ್ಟು, ಮನುಜಗಂಧರ್ವರು ಋಷಿಪತ್ನಿಯರು ಮತ್ತು ಅಪ್ಸರಸ್ತ್ರೀಯರಿಗಿಂತ 12 ವಿಜಾತಿಗುಣಗಳಿಂದ ಅಧಮರು. (ಇಲ್ಲಿ **ದ್ವಿಷಡ್ಗುಣದಿ**–ಎಂಬ ಶಬ್ದವನ್ನು ಎರಡೂ ಕಡೆಗೂ ಆವರ್ತನ ಮಾಡಿಕೊಳ್ಳಬೇಕು).

3. **ಕುವಲಯಾ**–ಭೂಮಂಡಲವೆಂದರ್ಥ. ಅದಕ್ಕೆ ಅಧಿಪರು– ಎಂದರೆ ಚಕ್ರವರ್ತಿಗಳು. (**ಕುವಲಯಾಧಿಪರು**) ಮನುಜಗಂಧರ್ವರಿಗಿಂತ 10 ವಿಜಾತಿಯ ಗುಣಗಳಿಂದ ಅವರರು (**ಈರೈದು ಗುಣ**).

4. ಚಕ್ರವರ್ತಿಗಳ ಪತ್ನಿಯರು ಅವರಿಗಿಂತ 10 ಗುಣಗಳಿಂದ ಕಡಿಮೆ (ಇಲ್ಲಿಯೂ "ಈರೈದುಗುಣದಿಂ"–ಆವರ್ತನವಾಗಿದೆ).

5. ಮಾನುಷೋತ್ತಮರು ಚಕ್ರವರ್ತಿಗಳ ಪತ್ನಿಯರಿಗಿಂತ ನೂರು ಗುಣ ಕಡಿಮೆ ಎನಿಸುವರು. ಇದನ್ನು ದಾಸರಾಯರು **ದಶೋತ್ತರ ನವತಿ ಗುಣದಿಂದ**–ಎಂದಿದ್ದಾರೆ.

ಅಂದರೆ ನವತಿ = 90
ದಶೋತ್ತರ = 10 ಹೆಚ್ಚಾದ

ಅಲ್ಲಿಗೆ 90 + 10 = 100 ಆಗುವುದು.

**ಪ್ರಮಾಣ :–**

"ಅಜಾನೇಭ್ಯೋ ಶತಂ ನ್ಯೂನಾಃ ಪಿತೃಭ್ಯಶ್ಚ ಶತಾಧಮಾಃ ॥
ಉಕ್ತಾನ್ಯೇದೇವ ಗಂಧರ್ವಾಸ್ತ್ವಚ್ಛತೋನಾನ್ಯ ಗಾಯಕಾಃ ॥
ಗಂಧರ್ವೇಭ್ಯೋ ಮಾನುಷೇಭ್ಯಃ ಶತೋನಾಶ್ಚಕ್ರವರ್ತಿನಃ ॥
ಕ್ಷಿತಿಪೇಭ್ಯೋ ಶತಾಂಶೋನಾ ಈರಿತಾ ಮಾನುಷೋತ್ತಮಾಃ ॥

**–ಇತಿ ತಾರತಮ್ಯಕೌಸ್ತುಭೇ.**

ಇದರ ಅರ್ಥ :–

1. ಅಜಾನಜದೇವತೆಗಳಿಗಿಂತಲೂ ಮತ್ತು ಚಿರಪಿತೃಗಳಿಗಿಂತಲೂ ಮೇಲೆ ಹೇಳಿದ ಗಂಧರ್ವರನ್ನು ಬಿಟ್ಟು, ಉಳಿದ ದೇವಗಂಧರ್ವರು 100 ಗುಣಗಳಿಂದ ಕಡಿಮೆ.

2. ಮನುಷ್ಯಗಂಧರ್ವರು ಅವರಿಗಿಂತಲೂ 100 ಗುಣಗಳಿಂದ ಅವರರು.

3. ಚಕ್ರವರ್ತಿಗಳು ಮನುಷ್ಯಗಂಧರ್ವರಿಗಿಂತ 100 ಗುಣ ಕಡಿಮೆ.

4. ಮಾನುಷ್ಯೋತ್ತಮರು ಚಕ್ರವರ್ತಿಗಳಿಗಿಂತ ಶತಗುಣಾವರರು.

॥೧೫॥

**(ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀಕಾರರು– ದ್ವಿಷಡ್ಗುಣ–** ಎಂದರೆ 2 + 6 = 8 ಗುಣ ಎಂದು ಅರ್ಥೈಯಿಸಿದ್ದಾರೆ. ಅಂದರೆ, ದೇವಗಂಧರ್ವ ಪತ್ನಿಯರು ಹಾಗೂ ಋಷಿಪತ್ನಿಯರು ತಮ್ಮ ತಮ್ಮ ಪತಿಗಳಿಗಿಂತ 8 ಗುಣಗಳಿಂದ ಕಡಿಮೆ ಎಂದು ಅರ್ಥಮಾಡಿದ್ದಾರೆ–ವಿಚಾರಾಂಶ**)**. ॥೧೭॥

## ಪದ್ಯ-೧೮

**ಮೂಲ :–**

**ಸತ್ತ್ವ ಸತ್ತ್ವರು ಸತ್ತ್ವರಾಜಸ ।**
**ಸತ್ತ್ವ ತಾಮಸ ಮೂವರು ರಜ ।**
**ಸ್ಸತ್ತ್ವಧಿಕಾರಿಗಳು ಭಗವದ್ಭಕ್ತರೆನಿಸುವರು ॥**
**ನಿತ್ಯಬದ್ಧರು ರಜೋರಜರು ।**
**ತ್ಪತ್ತಿ ಭೂ ಸ್ವರ್ಗದೊಳು ನರಕದಿ ।**
**ಪೃಥ್ವಿಯೊಳು ಸಂಚರಿಸುತ್ತಿಪ್ಪರು ರಜಸ್ತಾಮಸರು ॥೧೮॥**

**ಅವತರಣಿಕೆ :–**

ಮುಕ್ತಿಯೋಗ್ಯಚೇತನರ ಮತ್ತು ನಿತ್ಯಸಂಸಾರಿಗಳ ತಾರತಮ್ಯ ತಿಳಿಸುತ್ತಾರೆ. ॥೧೮॥

**ಪ್ರತಿಪದಾರ್ಥ :–**

**ಸತ್ತ್ವ ಸತ್ತ್ವರು** = ಸತ್ತ್ವಗುಣದಲ್ಲಿ ವಿಭಾಗವಾದ ಸತ್ತ್ವ ಪ್ರಾಚುರ್ಯನಾದ ಸತ್ತ್ವ ಶರೀರವುಳ್ಳವರು–ಬ್ರಹ್ಮಾದಿ ಪುಷ್ಕರಾಂತ ದೇವತೆಗಳು. (ವಿಭಾಗಕ್ರಮವೆಂದರೆ–ಸೃಷ್ಟಿ ಪ್ರಾರಂಭದಲ್ಲಿ. ಅಸಂಸೃಷ್ಟ ಗುಣತ್ರಯಗಳಲ್ಲಿ ಒಂದರಲ್ಲಿ ಒಂದಧಿಕ ನ್ಯೂನತೆಗಳಿಂದ ಮೇಳನ ಮಾಡಿದ ಸೃಷ್ಟಿಕರ್ತನಾದ ಶ್ರೀಹರಿ. ಗುಣತ್ರಯಗಳ ವೈಷಮ್ಯದಲ್ಲಿ (ಬೆರೆಕಯಲ್ಲಿ) ಒಂದು ಸತ್ತ್ವಪ್ರಾಚುರ್ಯಯುಕ್ತ ರಜೋಗುಣವನ್ನುಂಟುಮಾಡಿ, ಪ್ರಾಚುರ್ಯ ವಿಶೇಷದಿಂದ ಸತ್ತ್ವಗುಣವನ್ನಾಗಿ ಮಾಡಿದ. ಇದೇ ಸತ್ತ್ವಸತ್ತ್ವ ದೇಹವುಳ್ಳ ದೇಹವುಳ್ಳವರು, **ಸತ್ತ್ವರಾಜಸ** = ಪೂರ್ವೋಕ್ತ ಸತ್ತ್ವಗುಣದಲ್ಲಿ ವಿಭಾಗವಾದ ರಜಃಪ್ರಾಚುರ್ಯ ಸತ್ತ್ವಗುಣಉಳ್ಳ ಶರೀರಉಳ್ಳ ಚೇತನ

ವರ್ಗ–ಅಜಾನಜ ದೇವತೆಗಳಾರಂಭಿಸಿ,ದೇವಗಂಧರ್ವಾಂತ ಗಣ. **ಸತ್ವತಾಮಸ** = ಪೂರ್ವೋಕ್ತ ಸತ್ತ್ವಗುಣದಲ್ಲಿ ವಿಭಾಗವಾದ ತಮಃ ಪ್ರಾಚುರ್ಯ ಸತ್ತ್ವ ಶರೀರ ಉಳ್ಳವರು. ನಿರಂಶರಾದ ಮಾನುಷಗಂಧರ್ವರಾಭ್ಯ ತೃಣಾಂತಜೀವ ವರ್ಗ. ಇದು ಸತ್ತ್ವಗುಣದ ವಿಭಾಗ ತ್ರಯಗಳ ವಿವರ, **ಮೂವರು** = ಈ ಮೂರುವಿಧ ಗುಣದಿ. ಉಳ್ಳವರು ಉತ್ತಮರೆಂದು ತಾತ್ಪರ್ಯ, **ರಜ ಸತ್ತಾತ್ವಧಿಕಾರಿಗಳು** = ಪೂರ್ವೋಕ್ತ ರಜೋಗುಣದಲ್ಲಿ ವಿಭಾಗವಾದ ಭಾಗ ತ್ರಯದಿಂದ ಮಿಶ್ರಜ್ಞಾನಿಗಳಾದ ಮಿಶ್ರಜೀವರು ಇವರು ನಿತ್ಯಸಂಸಾರಿಗಳು. ಇವರಲ್ಲಿ ಮೂರು ಪ್ರಕಾರ :– 1) ಸ್ವರ್ಗಪ್ರಚುರರು. 2) ಭೂಪ್ರಚುರರರು ಮತ್ತು 3) ನಿರಯಪ್ರಚುರರು, **ಭೂ** = ಭೂಪ್ರಚುರರು ಸ್ವರೂಪದಲ್ಲಿ ಸುಖದುಃಖ ಸಮಾನವುಳ್ಳವರು, **ಸ್ವರ್ಗ** = ಸ್ವರೂಪತಃ ದುಃಖ ಕಡಿಮೆ. ಸುಖ ಅಧಿಕ. ಈ ಗಣದ ರಜೋಜೀವರು ಸ್ವರ್ಗ ಪ್ರಚುರರು, **ನರಕ** = ಸ್ವರೂಪದಲ್ಲಿ ದುಃಖ ಅಧಿಕ–ತದ್ವಿಪಕ್ಷಯಾ ಸುಖ ಕಡಿಮೆ. ಇವರು ನಿರಯ ಪ್ರಚುರರು, **ನಿತ್ಯಬದ್ಧರು** = ಸುಖ ದುಃಖ ಮಿಶ್ರ ಸ್ವರೂಪರಾದ ಇವರು ಅನಾದಿಯಿಂದ ಬದ್ಧರು. **ಪೃಥ್ವಿಯೊಳು** = ಲೋಕಾಲೋಕ ಪರ್ವತದ ಆಚೆ, ಅಂಧಂತಮಸ್ಸಿನ ಮೇಲಿನ ಭಾಗದಲ್ಲಿ, ಸ್ವರ್ಗ ಲೋಕದ ಅಧೋಭಾಗದಲ್ಲಿ ಇರುವ ಲೋಕಕ್ಕೆ **ಸಾಂತಾನಿಕಲೋಕವೆಂದು** ಹೆಸರು ಲಿಂಗಭಂಗಾನಂತರ ರಜೋಜೀವರ ಆವಾಸಸ್ಥಾನ ಈ ಸಾಂತಾನಿಕ ಲೋಕವು, **ಸಂಚರಿಸುತ್ತಿಪ್ಪರು** = ಸ್ವರ್ಗ–ಭೂ–ನಿರಯಗಳಲ್ಲಿ ಸಂಚರಿಸುತ್ತಿರುವರು. ಇದೇ ಬದ್ಧತ್ವ, **ರಜಸ್ತಾಮಸರು** = ರಜೋಗುಣವು ಮೂರು ಪ್ರಕಾರ ವಿಭಾಗವಾಗುವುದು.

1) ರಜಃ ಸತ್ತ್ವದಿಂದ ಉತ್ಪನ್ನರು–ಸ್ವರ್ಗಪ್ರಚುರರು.

2) ರಜೋರಜದಿಂದ ಉತ್ಪನ್ನರು–ಭೂಪ್ರಚುರರು.

3) ರಸಸ್ತಮದಿಂದ ಉತ್ಪನ್ನರು–ನಿರಯಪ್ರಚುರರು.

ಇವರೇ ರಜಸ್ತಾಮಸರೆಂದು ಕರೆಯಿಸುವರು. ಈ ಪ್ರಕಾರ ತ್ರಿವಿಧ ನಿತ್ಯಸಂಸಾರಿಗಳ ಉತ್ಪತ್ತಿ. ॥೧೮॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಮುಕ್ತಿಯೋಗ್ಯರ, ನಿತ್ಯಸಂಸಾರಿಗಳ ಗುಣತಾರತಮ್ಯ ಹೇಳತಾರೆ.

ಸೃಷ್ಟಿಪ್ರಾರಂಭದಲ್ಲಿ ಅಸಂಸೃಷ್ಟ ಗುಣತ್ರಯಗಳ ತೆಗೆದು, ಒಂದರಲ್ಲಿ ಒಂದಧಿಕ ನ್ಯೂನತೆಗಳಿಂದ ಮೇಳನ ಮಾಡಿ, ಗುಣತ್ರಯಗಳ ವೈಷಮ್ಯ ಐದಿಸಿ, ಸತ್ತ್ವಪ್ರಾಚುರ್ಯಯುಕ್ತ ರಜಗುಣವನ್ನು ಏರ್ಪಡಿಸಿ, ಪ್ರಾಚುರ್ಯ ವಿಶೇಷದಿಂದ ಸತ್ತ್ವಗುಣವನ್ನಾಗಿ ಮಾಡಿದ. ತದ್ವತ್ ರಜಃ ಪ್ರಾಚುರ್ಯದಿಂದ ತಮೋಗುಣವನ್ನಾಗಿ ಮಾಡಿದ.

ಅಂತೂ,ಸೃಷ್ಟಿಗೆ ಯೋಗ್ಯವಾದ ಸತ್ತ್ವಗುಣ, ರಜೋಗುಣ, ತಮೋ ಗುಣ-ಈ ಮೂರು ಗುಣಗಳ ಈ ಪ್ರಕಾರ ಸೃಷ್ಟಿ ಮಾಡೋವನಾದ. ಈ ಒಂದೊಂದರಲ್ಲಿ ಮೂರು ಮೂರು ಪ್ರಕಾರ ವಿಭಾಗ ಮಾಡೋವನಾದ.

ಅದರ ವಿವರ–

| | |
|---|---|
| ಸತ್ತ್ವಗುಣದಲ್ಲಿ ಮೂರುಭಾಗ | 1. ಸತ್ತ್ವ ಸತ್ತ್ವಃ 1. |
| | 1. ಸತ್ತ್ವ ರಜಃ 2. |
| | 1. ಸತ್ತ್ವ ತಮಃ 3. |
| ಮ್ಯಾಲಿನ ರಜೋಗುಣದಲ್ಲಿ ಮೂರು ಭಾಗ | 1. ರಜಃ ಸತ್ತ್ವಃ 4. |
| | 1. ರಜೋ ರಜಃ 5. |
| | 1. ರಜಸ್ತಮಃ 6. |
| ಮ್ಯಾಲಿನ ತಮೋಗುಣದಲ್ಲಿ | 1. ತಮಸ್ಸತ್ತ್ವಃ 7. |
| | 1. ತಮೋರಜಃ 8. |
| | 1. ತಮಸ್ತಮಃ 9. |

**ಅಂತೂ,9 ವಿಭಾಗ.**

ರಜಃ ಸತ್ತ್ವಾಧಿಕಾರಿಗಳೆಂದರೆ-ಸತ್ತ್ವ ಪ್ರಾಚುರ್ಯವಾದ ರಜಃ- ಎಂತ ತಾತ್ಪರ್ಯ. ಏತಾದೃಶ ಸತ್ತ್ವಗುಣದಿಂದ ದೇಹಗಳುಳ್ಳ ಅಧಿಕಾರಿಗಳು ದಾರೆಂದರೆ-ಅವರನ್ನ ಹೇಳತಾರೆ. ಪೂರ್ವೋಕ್ತ ಸತ್ತ್ವಗುಣದಲ್ಲಿ ವಿಭಾಗವಾದ ಸತ್ತ್ವಪ್ರಾಚುರ್ಯವಾದ ಸತ್ತ್ವಶರೀರ ಉಳ್ಳವರು ಬ್ರಹ್ಮಾದಿ ಪುಷ್ಕರಾಂತ ದೇವತೆಗಳು. ಇವರಲ್ಲಿ ಅಂತರಾಂತರ ತಾರತಮ್ಯ ಬಹಳವದೆ. ಪೂರ್ವೋಕ್ತ ಸತ್ತ್ವಗುಣದಲ್ಲಿ ವಿಭಾಗವಾದ ರಜಃಪ್ರಾಚುರ್ಯ ಸತ್ತ್ವಗುಣ ಉಳ್ಳ ಶರೀರ ಉಳ್ಳವರು, ಆಜಾನಜರ ಆರಂಭ ಮಾಡಿ, ದೇವಗಂಧರ್ವಾಂತ ದೇವತೆಗಳು. ಇವರಲ್ಲಿ ಅಂತರಾಂತ ತಾರತಮ್ಯ ಬಹಳವದೆ. ಪೂರ್ವೋಕ್ತ ಸತ್ತ್ವಗುಣ ದಲ್ಲಿ ವಿಭಾಗವಾದ ತಮಃಪ್ರಾಚುರ್ಯ ಸತ್ತ್ವಶರೀರವುಳ್ಳವರು ನಿರಂಶರಾದ ಮಾನುಷಗಂಧರ್ವರಾರಭ್ಯ ತೃಣಾಂತ ಜೀವರು. **ಇವರಲ್ಲಿ ಅಂತರಾಂತ ತಾರತಮ್ಯ ಬಹಳವದೆ.** ಇಲ್ಲಿಗೆ ಸತ್ತ್ವಗುಣದಲ್ಲಿ ವಿಭಾಗ ಮಾಡಿದ ಮೂರು ಭಾಗವೂ ಮುಗಿಯಿತು. ಈ ಮೂರುವಿಧ ಗುಣವುಳ್ಳವರು ಉತ್ತಮ ರೆಂತ ಅರ್ಥ. ಈ ಮೂರು ವಿಧರಾದವರೂ ಸ್ವರೂಪತಃ ಶ್ರೀಪರಮಾತ್ಮನ ಭಕ್ತರೆಂತ ಕರಸೋವರಾಗತಾರೆ. **ರಜೋಗುಣ ಭಾಗತ್ರಯ ವಿಚಾರ ಹೇಳತಾರೆ.** ರಜ,ಎಂದರೆ–ಪೂರ್ವೋಕ್ತ ರಜೋಗುಣದಲ್ಲಿ ವಿಭಾಗವಾದ ಭಾಗತ್ರಯದಿಂದ ಮಿಶ್ರಜ್ಞಾನಿಗಳಾದ ರಜರು, ಎಂದರೆ ನಿತ್ಯಸಂಸಾರಿತ್ರಯರ ಉತ್ಪತ್ತಿ. ನಿತ್ಯಸಂಸಾರಿಗಳೊಂದಿಗೆ ಮೂರು ವಿಧ– ಸ್ವರ್ಗಪ್ರಚುರರು, ನಿರ ಯ ಪ್ರಚುರರು, ಭೂಪ್ರಚುರರು. ಇವರ ವಿಚಾರ–ಭೂಪ್ರಚುರರು ಸ್ವರೂಪ ದಲ್ಲಿ ಸುಖದುಃಖ ಸಮಾನವಾಗುಳ್ಳವರು. ಸ್ವರೂಪದಲ್ಲಿ ಸುಖ ಅಧಿಕ, ದುಃಖ ತದ್ವಿಪಕ್ಷಯಾ ಕಡಿಮಿ, ಇವರು ಸ್ವರ್ಗಪ್ರಚುರರು. ಸ್ವರೂಪದಲ್ಲಿ ದುಃಖ ಅಧಿಕ, ತದ್ವಿಪಕ್ಷಯಾ ಸುಖ ಕಡಿಮಿ, ಇವರು ನಿರಯಪ್ರಚುರರು. ಈ ಪ್ರಕಾರ ಭೂ, ಸ್ವರ್ಗ, ನರಕಾದಿ ಲಿಂಗಭಂಗಾತ್ಪೂರ್ವ ಜೀವನ್ಮುಕ್ತ ದಶಾದಲ್ಲಿ ಅವರವರು ಆಯಾಸ್ಥಾನಗಳಲ್ಲಿದ್ದು, ಭೋಗವಮಾಡತಕ್ಕ ಸ್ವರೂಪ ಸ್ವಭಾವವುಳ್ಳವರು. ತಾರತಮ್ಯಾನುಸಾರ ಸ್ವಭಾವದೊಳು ಸುಖ ದುಃಖ ಮಿಶ್ರರೂಪವಾದ ಬದ್ಧತ್ವ ಅನಾದಿಯಿಂದ ನಿತ್ಯವಾಗಿರೋಣದರಿಂದ ನಿತ್ಯಬದ್ಧ ರೆಂತ ಕರಸತಾರೆ. ಈ ನಿತ್ಯಬದ್ಧತ್ವ ಎಂಬುದು, ಏಕಕಾಲಾವಚ್ಛೇದೇನ

ಭೋಗ ಎಂಬುದು ಲಿಂಗಭಂಗಾತ್ಪೂರ್ವದಲ್ಲಿ ಇಲ್ಲ. ಲಿಂಗಭಂಗಾನಂತರ ನಿತ್ಯ ಬದ್ಧರಾದ ನಿತ್ಯಸಂಸಾರಿಗಳಿಗೆ ಆವಾಸಕ್ಕೆ ಯೋಗ್ಯವಾದ ಸಾಂತಾನಿಕಲೋಕದಲ್ಲಿ ಪ್ರವೇಶ ಮಾಡಿಸಿದ ಕಾಲದಲ್ಲಿ ಏಕಕಾಲಾವಚ್ಛೇದೇನ ಇರೋದಾಗಿರತದೆ. ಆ ಸಾಂತಾನಿಕಲೋಕಗಳು ತ್ರಿವಿಧರ ಸ್ವರೂಪಯೋಗ್ಯತಾನುಸಾರ ತ್ರಿವಿಧಸ್ಥಾನ ಗಳು ಬ್ಯಾರೆ ಬ್ಯಾರೆ ಇರೋವಾಗವೆ. ಆಯಾ ಸ್ಥಾನಗಳಲ್ಲಿ ಅವರವರ ಸ್ವರೂಪಾನುಸಾರ ಮಿಶ್ರಭೋಗ ಯುಕ್ತರಾಗಿರತಾರೆ. ಸಾಂತಾನಿಕಲೋಕ ವೆಂಬುದು ಭೂಲೋಕದಲ್ಲಿ ವಿದ್ಯಮಾನವಾದ ಲೋಕಾಲೋಕ ಪರ್ವತಕ್ಕೆ ಆಚೇಲಿರುವ ಅಂಧಂತಮಸ್ಸಿಗೆ ಮ್ಯಾಲಿನ ಭಾಗದಲ್ಲಿ, ಸ್ವರ್ಗಲೋಕಕ್ಕೆ ಅಧೋ ಭಾಗದಲ್ಲಿ ಈ ಮಧ್ಯಪ್ರದೇಶದಲ್ಲಿ ಸಾಂತಾನಿಕ, ಸಾಂಕೇತಿಕವೆಂಬ ಎರಡು ನಾಮದಿಂದ ಸಾಂಕೇತವಾದ ನಿತ್ಯಸಂಸಾರಿ ಲೋಕವದೆ. ಲಿಂಗಭಂಗಾನಂತರ ಈ ಲೋಕದೊಳು ಸಂಚಾರ ಮಾಡತಾ ಇರತಾರೆ. ಆದ್ದರಿಂದ ಪೃಥ್ವಿಯೊಳು ಎಂದರೆ, ಲಿಂಗಭಂಗಾನಂತರ ಕೂಡಾ ಪೂರ್ವೋಕ್ತ ಪ್ರಕಾರ ಭೂಲೋಕದಲ್ಲೇ ಸಂಚಾರ ಮಾಡತಾರೆಂದು ತಾತ್ಪರ್ಯ. ರಜಸ್ತಾಮಸರೆಂಬ ದಿಕ್ಪ್ರದರ್ಶನ ದಿಂದಲೂ ರಜಃ ಸತ್ತ್ವಃ, ರುಜೋರಜಃ, ರಜಸ್ತಮಃ-ಈ ಮೂರೂ ಗ್ರಾಹ್ಯ. ತ್ರಿವಿಧ ನಿತ್ಯಸಂಸಾರಿಗಳ ಶರೀರ ರಜೋಗುಣದಿಂದ ಉತ್ಪತ್ತಿ. ಅದರ ವಿವರ -ಮ್ಯಾಲಿನ ರಜೋಗುಣದಲ್ಲಿ ವಿಭಾಗವಾದ ಭಾಗತ್ರಯಗಳೊಳಗೆ ರಜಃ ಸತ್ತ್ವದಿಂದ ಉತ್ಪನ್ನರು ಸ್ವರ್ಗಪ್ರಚುರರು, ರಜೋರಜದಿಂದ ಉತ್ಪನ್ನ ರಾದವರು ಭೂಪ್ರಚುರರು, ರಜಸ್ತಮದಿಂದ ಉತ್ಪನ್ನರಾದವರು ನಿರಯ ಪ್ರಚುರರು,- ಇವರೇ ರಜಸ್ತಾಮಸರೆಂದು ಕರಸತಕ್ಕವರು. ಈ ಪ್ರಕಾರ ತ್ರಿವಿಧ ನಿತ್ಯಸಂಸಾರಿಗಳ ಉತ್ಪತ್ತಿಯನ್ನೂ ಹಾಗೂ ಮುಕ್ತಿಯೋಗ್ಯರ ನಿತ್ಯ ಸಂಸಾರಿಗಳ ಉತ್ಪತ್ತಿಯನ್ನೂ ತಿಳಿಯಬೇಕು. ಮುಂದಿನ ಶ್ಲೋಕದಲ್ಲಿ ತಮೋ ಯೋಗ್ಯರ ವಿಚಾರ ಹೇಳತಾರೆ. ಮುಕ್ತಿಯೋಗ್ಯರಿಗೆ ಅವರರು ನಿತ್ಯಸಂಸಾರಿ ಗಳಂತ ತಾತ್ಪರ್ಯ.

**ವಿಶೇಷಾರ್ಥ :–** ಬ್ರಹ್ಮದೇವರಾರಭ್ಯ ಮನುಷ್ಯೋತ್ತಮರವರಿಗೂ ತಾರತಮ್ಯ ಹೇಳಿದರು. ಮನುಷ್ಯೋತ್ತಮರಾರಭ್ಯ ತೃಣಾಂತವರೆಗೂ ಮುಕ್ತಿ

ಯೋಗ್ಯರ ತಾರತಮ್ಯ ಉಂಟು- ಮನುಷ್ಯೋತ್ತಮರಲ್ಲೇ ಅಂತರ್ಭೂತ ಎಂತ ತಿಳಿಯಬೇಕು. ತ್ರಿವಿಧಜೀವರಲ್ಲಿ ತಾರತಮ್ಯ ಎಂಬುದು ಮುಕ್ತಿ ಯೋಗ್ಯಜೀವರಂತೆ ತಿಳಿಯಬೇಕು. ತ್ರಿವಿಧಜೀವರು ದಾರು ದಾರು, ದಾವ ದಾವ ಗುಣ ವಿಶಿಷ್ಟರು ಎಂದರೆ-ಗುಣ ವಿಭಾಗ ವಿಚಾರ ಬಹಳವುಂಟು. ಅದರ ವಿಚಾರ ಮಾಡಬೇಕಾದರೆ ಬಹಳವಾಗತದೆ. ಆದ್ದರಿಂದ ಮೂಲದಲ್ಲಿ ಇದ್ದ ಮಟ್ಟಿಗೆ ವಿವರ- ಸತ್ತ್ವ ಸತ್ತ್ವ ಗುಣದಿಂದ ಮುಕ್ತಿಯೋಗ್ಯರ ಸೃಷ್ಟಿ, ತಮೋ ಗುಣದಿಂದ ತಮೋಯೋಗ್ಯರ ಸೃಷ್ಟಿ ಎಂತ ತಿಳಿಯಬೇಕು. ಸತ್ತ್ವಗುಣದಿಂದ ಮೂರು ಪ್ರಕಾರ ಸೃಷ್ಟಿ. ಸತ್ತ್ವರಲ್ಲಿ ವಿಭಾಗಗಳು ಮೂರು - ಸತ್ತ್ವ ಸತ್ತ್ವರು, ಸತ್ತ್ವ ರಾಜಸರು, ಸತ್ತ್ವ ತಾಮಸರು ಎಂತ ವಿಭಾಗವಾಗಿ ಮೂವರು ಎಂದರೆ– ಮೂರು ವಿಧರಾದ ಮುಕ್ತಿಯೋಗ್ಯಜೀವರಾದರು. ಈ ಸತ್ತ್ವ ಎನ್ನತಕ್ಕದ್ದು ಶುದ್ಧ ಸತ್ತ್ವವಲ್ಲ. ರಜಃ ಸತ್ತ್ವ ಎಂದರೆ, ತ್ರಿಗುಣ ಗಳು ಸೇರಿ ಒಂದು ರಜೋಗುಣವೆಂದು ಕರೆಸಿ, ಅದರಲ್ಲಿ ಸತ್ತ್ವ ಪ್ರಾಚುರ್ಯ ವಿಶಿಷ್ಟವಾಗಿ ಒಂದು ಸತ್ತ್ವ, ರಜಃ ಪ್ರಾಚುರ್ಯ ವಿಶಿಷ್ಟವಾಗಿ ಒಂದು ರಜ, ತಮಃ ಪ್ರಾಚುರ್ಯ ವಿಶಿಷ್ಟವಾಗಿ ಒಂದು ತಮ, ಈ ಮೂರೂ ಅಭಿವ್ಯಕ್ತಿಯಾಗಿ, ರಜೋಗುಣದಿಂದ ಹೊರಟ ಸತ್ತ್ವ ಪ್ರಾಚುರ್ಯ ವಿಶಿಷ್ಟವಾದ ರಜಸ್ಸತ್ತ್ವ ಎಂತ ಕರಸಿದ್ದರೊಳಗೆ, ಪೂರ್ವೋಕ್ತ ಮುಕ್ತಿಯೋಗ್ಯರೊಳಗೆ ಮೂರು ಭಾಗ ವಾಗಿ ಮೂರು ಪ್ರಕಾರ ಸೃಷ್ಟಿ. ಅತಃ ಏವ ರಜಸ್ಸತ್ತ್ವಾಧಿಕಾರಿಗಳು ಭಗವ ದ್ಭಕ್ತರೆನಿಸುವರು ಅಂದರೆ, ರಜಸ್ಸತ್ತ್ವದಿಂದ ಸೃಷ್ಟಿಯಾಗತಕ್ಕ ಅಧಿಕಾರ ಅಂದರೆ ಯೋಗ್ಯತಾ ಎಂತ ತಾತ್ಪರ್ಯ. ಸ್ವರೂಪದಲ್ಲಿ ಪರಮಾತ್ಮನ ಭಕ್ತಿ ದಾರಿಗೆ ಅದೋ, ಅವರ ವ್ಯತಿರಿಕ್ತ ಅನ್ಯರಿಗೆ ರಜಸ್ಸತ್ತ್ವದಿಂದ ಸೃಷ್ಟಿ ಆಗೋ ಅಧಿಕಾರ ಅಂದರೆ ಯೋಗ್ಯತಾ ಇಲ್ಲ ಎಂತ ತಾತ್ಪರ್ಯ. ನಿತ್ಯಬದ್ಧರು ಎಂದರೆ, ನಿತ್ಯವಾದ ಅನಾದಿ ಭೂತವಾದ ಬದ್ಧ ಎಂದರೆ, ಸ್ವರೂಪದಲ್ಲಿ ಸುಖ ದುಃಖ ಗಳೆರಡೂ ಬದ್ಧವಾಗಿರತಕ್ಕ ಸ್ವರೂಪ ಸ್ವಭಾವವುಳ್ಳ ಜೀವರು ದಾವರೋ ಆವರು ನಿತ್ಯಬದ್ಧರೆಂದು ಕರಸತಾರೆ. ಹ್ಯಾಗೆಂದರೆ, ಅವರ ಸ್ವರೂಪವೇ ಸುಖ ದುಃಖ ಮಿಶ್ರದಿಂದ ಬದ್ಧ ಸ್ವರೂಪವಾದ್ದರಿಂದ ನಿತ್ಯ ಬದ್ಧರು. ಅವರೇವೇ ನಿತ್ಯ ಸಂಸಾರಿಗಳು. ಅವರ ಉತ್ಪತ್ತಿ ಎಂಬುದು ರಜೋಗುಣದಿಂದ. ಈ ರಜೋ ಗುಣದಲ್ಲೇನೂ ಮೂರು ಪ್ರಕಾರ ವಿಭಾಗ - ರಜೋರಜಸ್ಸತ್ತ್ವ, ರಜೋ

ರಜಃ ರಜ, ರಜೋ ರಜಸ್ತಮ ಅಂತೂ ಮೂರು. ರಜೋರಜಸ್ಸತ್ತ್ವರು ಸ್ವರ್ಗಪ್ರಚುರರು, ರಜೋರಜರಜರು ಭೂಪ್ರಚುರರು, ರಜೋರಜಸ್ತಮರು ನಿರಯಪ್ರಚುರರು. ಈ ತ್ರಿವಿಧಜೀವರು ಸ್ವರ್ಗ ಭೂ ನರಕಗಳಲ್ಲಿ ಸಂಚಾರ ಮಾಡತಾ ಇರ್ತಾರೆ. ಜೀವನ್ಮುಕ್ತಿಯಾದ ನಂತರದಲ್ಲಿ ಸ್ಥಿತಿಕಾಲದ ಕ್ರಮ ಹ್ಯಾಂಗೆಂದರೆ, ಸ್ವರ್ಗ ಪ್ರಚುರರಿಗೆ ಯಜ್ಞಾಧಿಕಾರ ಉಂಟು. ಭೂಪ್ರಚುರರು ಸ್ವರ್ಗಕ್ಕೆ ಎಂದಿಗೂ ಹೋಗೋದಿಲ್ಲ. ಪುಣ್ಯವಿಶೇಷದಿಂದ ಭೂಲೋಕದಲ್ಲಿ ಖಂಡ ವಿಶೇಷಗಳಲ್ಲಿ ಸುಖಾನುಭವವುಂಟು. ಇವರಿಗೆ ಯಾಗಾದಿಗಳ ಮಾಡೋ ಅಧಿಕಾರವಿಲ್ಲ. ಆದ್ದರಿಂದ ಇವರಿಗೆ ಸ್ವರ್ಗಪ್ರಾಪ್ತಿಯಿಲ್ಲ. ಭೂಪ್ರದೇಶದಲ್ಲಿ ಸುಖ ಅನುಭವಿಸಿ ನರಕಕ್ಕೆ ಹೋಗಿ ಅಲ್ಲಿಂದ ಭರತ ಖಂಡಕ್ಕೆ ಬಂದು ಜನ್ಮ ಎತ್ತತಾರೆ. ನಿರಯಪ್ರಚುರರಿಗೆ ಪುಣ್ಯವಿಶೇಷದಿಂದ ಭರತ ಖಂಡದಲ್ಲಿ ಮಹದೈಶ್ವರ್ಯ, ಸ್ವರ್ಗಸದೃಶ ಎನಿಸತಕ್ಕ ಭೋಗಗಳ ಭೋಗಿಸಿ, ಮೃತರಾಗಿ ನರಕ ಸೇರಿ,ಪುನಃ ಭರತ ಖಂಡದಲ್ಲಿ ಜನಿಸತಾರೆ. ಇವರಿಗೆ ಕ್ವಚಿತ್ ಇತರ ಖಂಡಗಳಲ್ಲಿ ಸುಖ ಪ್ರಾಪ್ತಿಯುಂಟು. ಭೂಪ್ರಚುರರಿಗೆ ಕ್ವಚಿತ್ ಸ್ವರ್ಗ ವ್ಯತಿರಿಕ್ತ, ಸ್ವರ್ಗದ ಅಧೋಭಾಗದಲ್ಲಿ ಇರತಕ್ಕ ಲೋಕಗಳಲ್ಲಿ ಪ್ರವೇಶವುಂಟು. ತ್ರಿವಿಧರಿಗೆ ಪರಿಯವಸಾನಕ್ಕೆ 'ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ'– ಎಂದರೆ, ನಕ್ಷತ್ರಲೋಕ ಪ್ರವೇಶರಾಗಿ, ಅವಶಿಷ್ಟ ಪುಣ್ಯಭೋಗ ಮಾಡಿ, ಅಲ್ಲಿಂದ ಭೂಪತನರಾಗತಾರೆ. ಇದರಲ್ಲಿ ಇನ್ನೂ ವಿಶೇಷ ಬಹಳವುಂಟು. ಗ್ರಂಥಾಂತರದಿಂದ ತಿಳಿಯತಕ್ಕದ್ದು. ಈ ಉಭಯರು ಅಲ್ಲದೆ ರಜಸ್ತಾಮಸರು ಅಂದರೆ, ರಜಸ್ತಮೋಗುಣದಿಂದ ಉತ್ಪನ್ನರಾದ ತಮೋಯೋಗ್ಯರು ಭೂಮಿಯಲ್ಲೇ ಸಂಚಾರ ಮಾಡತಾ ಇರ್ತಾರೆ. ಇವರು ಮಾಡಿದ ಪುಣ್ಯಗಳಿಗೆ ಪ್ರಾಯಶಃ ಭೂಲೋಕದಲ್ಲಿ ಭೋಗವೇ ಹೊರ್ತು, ಇತರ ಸ್ಥಳಗಳಲ್ಲಿ ಭೋಗವಿಲ್ಲ. ಈ ತಮೋಯೋಗ್ಯರಲ್ಲಿ ತ್ರಿವಿಧ ಪ್ರಕಾರ ಉಂಟು. ರಜಸ್ತಮ ಗುಣವು ತ್ರಿವಿಧ ಪ್ರಕಾರ ವಿಭಾಗವಾಗತದೆ. ಇದರ ವಿವರ ಮುಂದಿನ ಶ್ಲೋಕದಲ್ಲಿ ಇರೋದಾಗಿದೆ. ॥೧೮॥

## ೨. ಭಾವಪ್ರಕಾಶಿಕೆ :–

ಸಾತ್ವಿಕರು, ರಾಜಸರು, ತಾಮಸರೆಂದು– ಜೀವರಾಶಿಗಳು ಮೂರು ಪ್ರಕಾರ ಅನಾದಿಕಾಲದಿಂದಲೂ ಇರುವರು. ಈ ಸಾತ್ವಿಕಾದಿ ಒಂದೊಂದರಲ್ಲೂ ಮೂರು ಪ್ರಕಾರ ಉಂಟು. ಸಾತ್ವಿಕರಲ್ಲಿ ಸಾತ್ವಿಕ ಸಾತ್ವಿಕರು, ಸಾತ್ವಿಕ ರಾಜಸರು, ಸಾತ್ವಿಕ ತಾಮಸರೆಂದು ಮೂರು ಪ್ರಕಾರ. ಇದರಂತೆ ರಾಜಸರಲ್ಲೂ ರಾಜಸ ಸಾತ್ವಿಕರು, ರಾಜಸ ರಾಜಸರು, ರಾಜಸ ತಾಮಸರು-ಎಂದು ಮೂರು ಪ್ರಕಾರ ಉಂಟು. ಇವರುಗಳಲ್ಲಿ ಸಾತ್ವಿಕ ಸಾತ್ವಿಕರು, ಸಾತ್ವಿಕ ರಾಜಸರು, ಸಾತ್ವಿಕ ತಾಮಸರು– ಎಂಬ ಮೂರು ವಿಧ ಸಾತ್ವಿಕರೂ, ರಾಜಸರಲ್ಲಿ ರಾಜಸ ಸಾತ್ವಿಕರೂ ಸಹ ಭಗವದ್ಭಕ್ತರಾಗಿರುವರು. ಇವರೆಲ್ಲರೂ ಮುಕ್ತಿಯೋಗ್ಯರು. ರಾಜಸ ರಾಜಸರು ನಿತ್ಯ ಸಂಸಾರಿಗಳೆನಿಸುವರು. ಇವರು ಭೂಮಿಯಲ್ಲಿ ಹುಟ್ಟಿ ಕೆಲವು ಕಾಲ ಸುಖದುಃಖಮಯವಾದ ಸಂಸಾರದಲ್ಲಿ ದುಃಖಮಿಶ್ರವಾದ ಸುಖವನ್ನನುಭವಿಸುವರು. ಮತ್ತು ಸ್ವರ್ಗಕ್ಕೆ ಹೋಗುವರು. ಮತ್ತೂ ಭೂಮಿಯಲ್ಲಿ ಹುಟ್ಟುವರು ಇವರಿಗೆ ನರಕವಾಸವಿಲ್ಲ. ಮುಕ್ತಿಯಲ್ಲೂ ಕೂಡ ಇವರಿಗೆ ಸಾಂತಾನಿಕಲೋಕವು ಬರುವುದು. ಅಲ್ಲೂ ಮಿಶ್ರಸುಖವನ್ನೇ ಅನುಭವಿಸುವರು. ರಾಜಸ ತಾಮಸರು ಭೂಮಿಯಲ್ಲಿ ಹುಟ್ಟುವರು. ನರಕಕ್ಕೆ ಹೋಗುವರು. ಇವರು ಸುಖಮಿಶ್ರವಾದ ದುಃಖವನ್ನೇ ಬಹಳವಾಗಿ ಅನುಭವಿಸುವರು. ॥೧೮॥

## ೩. ಭಾವದರ್ಪಣ :–

ಸತ್ವ ಸತ್ವೇತಿ । ಸತ್ವ ಸತ್ವರು ಬ್ರಹ್ಮಾದಿಗಳು । ಉಕ್ತಂಚ **ಶಾಂಡಿಲ್ಯ ತತ್ವೇ**। "ಸಾಪರೋಕ್ಷಾ ಹರೌ ಹೇತು ನಾನ್ಯಭಾವ ಸಮಾಶ್ರಯಾಃ । ಯೋಗಾದ್ಭಾವಂ ವರ್ಧಯಂತಃ ಶುದ್ಧ ಸತ್ವಾ ಇಮೇ ಮತಾಃ । ತತ್ವಾಭಿಮಾನಿನೋ ದೇವಾ ಬ್ರಹ್ಮಾದ್ಯಾಃ ಪರಿಕೀರ್ತಿತಾಃ " । ಸತ್ವರಾಜಸೇತಿ । ಅತಾತ್ವಿಕರು

ಸಾತ್ವಿಕ ರಾಜಸರು ಎಂದರ್ಥ । ಉಕ್ತಂಚ ದ್ವಿತೀಯ ತಾತ್ಪರ್ಯೇ । "ಅತಾತ್ವಿಕಾಸ್ತಥಾಖ್ಯಾತಾಃ ಸಾತ್ವಿಕತಾಮಸಾಃ"– ಇತಿ ತಾತ್ಪರ್ಯೋಕ್ತೇಃ । ಮಾನುಷೋತ್ತಮರು ಎಂತರ್ಥ । ಉಕ್ತಂಚ ಶಾಂಡಿಲ್ಯತತ್ವೇ । "ರಜೋಮಿಶ್ರ ಸ್ವಭಾವಾಯೇ ಭಜಂತಿ ಜ್ಞಾನಕರ್ಮಭಿಃ । ಪಶ್ಚಾದ್ಗುರುಪ್ರಸಾದೇನ ರುದ್ಧಭಾವ ಮುಪೇಯುಷಃ । ಜೀವಾಸ್ತೇ ರಾಜಸಾ ಪ್ರೋಕ್ತಾ ಮುಕ್ತಿಗಾ ಮಾನುಷೋತ್ತಮಾ"– ಇತಿ । ಈ ನಾಲ್ಕು ಮಂದಿ ಮುಕ್ತಿಯೋಗ್ಯರು ಎಂತರ್ಥ. ಇನ್ನು ನಿತ್ಯಸಂಸಾರಿ ಲಕ್ಷಣ ಹೇಳುತ್ತದೆ. । ರಜೋರಜೇತಿ । ಉಕ್ತಂಚ ಶಾಂಡಿಲ್ಯತತ್ವೇ । ಕ್ವಚಿತ್ತಾಮಸಭಾವಾಶ್ಚ ಕ್ವಚಿನ್ಮಿಶ್ರ ಸ್ವರೂಪಿಣಃ । ಸತ್ವಾರಂಭವಿಹೀನಾ ಏತೇಸ್ಮೃತಾಃ ಶುದ್ಧರಾಜಸಾ"– ಇತಿ । ಕೇವಲ ಪಾಪಕಾರಿಗಳಾದ ಮನುಷ್ಯರು ರಜಸ್ತಾಮಸರು ಎಂತ ಹೇಳುತ್ತದೆ । ರಜಸ್ತಾಮಸೇತಿ । "ಸತ್ಯಶೌಚದಯಾಹೀನಾಃ ಸದಾ ಯೇ ಮಿಶ್ರಬುದ್ಧಯಃ । ಉಚ್ಚಾವಚೇಷು ಲೋಕೇಷು ಭ್ರಮಂತ ಸ್ತಾಮಸಾಃ ಸ್ಮೃತಾಃ"– ರಜಸ್ತಾಮರನ್ನ ತಾಮಸರಲ್ಲೇ ಗಣನೆ-ಎಂದು ಜ್ಞಾನಿಗಳು ಹೇಳುತ್ತಾರೆ. ॥೧೮॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

"ಸತ್ತ" ಇತಿ ॥ ಸಾತ್ವಿಕ ಸಾತ್ವಿಕಾಃ ತಾತ್ವಿಕಾಃ ॥ ಅತಾತ್ವಿಕಾಃ ಸಾತ್ವಿಕ ರಾಜಸಾಃ ॥ ಅನಾಖ್ಯಾತಾಃ ಸಾತ್ವಿಕ ತಾಮಸಾಃ ॥ ರಾಜಸ ಸಾತ್ವಿಕಾಃ ॥ ಮಾನುಷೇಷು ಉತ್ತಮಾಃ ॥ ಗಣಾಃ ॥ ಮಧ್ಯಾಃ (ಮಾಃ) ರಾಜಸ ರಾಜಸಾಃ ಮಾನುಷಾಃ ದುಷ್ಟಚಾರಿಣಃ ರಾಜಸ ತಾಮಸಾಃ ಚೈವ॥ ॥೧೮॥

### ಕನ್ನಡಾರ್ಥ

ತಾತ್ವಿಕ (ತತ್ವಾಭಿಮಾನಿ) ದೇವತೆಗಳು ಸಾತ್ವಿಕ ಸಾತ್ವಿಕರು, ಅತಾತ್ವಿಕ ದೇವತೆಗಳು ಸಾತ್ವಿಕ ರಾಜಸ ದೇವತೆಗಳು. ಅನಾಖ್ಯಾತರಾದ ದೇವತೆಗಳು ಸಾತ್ವಿಕ ತಾಮಸರು. ಮನುಷ್ಯೋತ್ತಮ ಗಣದವರು ರಾಜಸ ಸಾತ್ವಿಕರು, ಮಧ್ಯಮರು ರಜೋರಜ ಗುಣದವರು(ರಾಜಸ ರಾಜರು). ಮಾನುಷಾಧಮರು,

ಮನುಷ್ಯರಲ್ಲಿ ದುಷ್ಕರ್ಮಾಚರಣೆ ನಿರತರು (ತತ್ಸ್ವಭಾವದವರು) ರಾಜಸ ತಾಮಸರು ಎಂದು ಅಭಿಪ್ರಾಯವನ್ನು ತಿಳಿಯಬೇಕು. ॥೧೮॥

**೫. ಶ್ರೀಗುರುಹೃದಯಪ್ರಕಾಶಿಕೆ :-**

ಹೀಗೆ ಸತ್ತ್ವ ಸತ್ತ್ವರೆಂಬ ಬ್ರಹ್ಮಾದಿಗಳನ್ನು, ಸತ್ತ್ವರಾಜಸರೆಂಬ ತತ್ತ್ವೇಶರನ್ನು, ಸತ್ತ್ವತಾಮಸರೆಂಬ ಅನಭಿಮಾನಿದೇವತೆಗಳನ್ನು ತಿಳಿಸಿದ್ದಾಯಿತು. ರಜಸ್ಸತ್ತ್ವರೆಂಬುವರು ಮುಕ್ತಿಯೋಗ್ಯಾಧಿಕಾರಿಗಳು, ಭಗವದ್ಭಕ್ತರೆಂದು ಕರೆಸುವರು. ರಜೋರಜರೆಂಬುವರು ನಿತ್ಯಬದ್ಧರೆನಿಸಿಕೊಳ್ಳುವರು. ಪುಣ್ಯದಿಂದ ಸ್ವರ್ಗ, ಪುಣ್ಯಕ್ಷಯದಿಂದ ಭೂಲೋಕ- ಈ ಎರಡರಲ್ಲಿ ಸಂಚರಿಸುವರು. ರಜಸ್ತಾಮಸರು ನರಕದಲ್ಲೂ,ಭೂಮಿಯಲ್ಲೂ ಸಂಚರಿಸುತ್ತಿರುವರು. ॥೧೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತಪದ್ಯದಿಂದ ಮುಕ್ತಿಯೋಗ್ಯ ಜೀವರ ಮತ್ತು ನಿತ್ಯಸಂಸಾರಿಗಳಾದ ರಜೋಜೀವರ ತಾರತಮ್ಯವನ್ನು ತಿಳಿಸುತ್ತಾರೆ.

ಜೀವರಾಶಿಗಳಲ್ಲಿ – 1) ಸಾತ್ವಿಕರು. 2) ರಾಜಸರು ಮತ್ತು 3) ತಾಮಸರು– ಎಂದು ಮೂರು ಪ್ರಕಾರ. ಈ ವಿಧವಾದ ತ್ರಿವಿಧಜೀವರ ವರ್ಗ ಅನಾದಿಯಾದದ್ದು. ಶ್ರೀಪರಮಾತ್ಮನಿಂದ ಅವರ ಸ್ವರೂಪ ನಿರ್ಮಾಣವಾಗಿಲ್ಲ. ಶ್ರೀಹರಿಯಂತೆಯೇ. ತ್ರಿವಿಧಜೀವರ ಸ್ವರೂಪ ದೇಹವು ಅನಾದಿ ಮತ್ತು ನಿತ್ಯವಾದದ್ದು. ಶ್ರೀಹರಿಯು ಸರ್ವಶಕ್ತನಾದಾಗ್ಯೂ, ಜೀವರ ಸ್ವರೂಪನಾಶವನ್ನು ಎಂದೆಂದಿಗೂ ಮಾಡುವುದಿಲ್ಲ. ಅಂದರೆ, ಅವರ ಸ್ವರೂಪ ವ್ಯತ್ಯಾಸ ಮಾಡುವುದಿಲ್ಲ. ಇದೇ ಆ ಸತ್ಯಸಂಕಲ್ಪನ ಇಚ್ಛೆ.

ಪುನಃ ಸಾತ್ವಿಕರಲ್ಲಿ ಮೂರು ಪ್ರಕಾರ :—

1) ಸಾತ್ವಿಕ ಸಾತ್ವಿಕರು (ಸತ್ತ್ವ ಸತ್ತ್ವರು)

2) ಸಾತ್ವಿಕ ರಾಜಸರು (ಸತ್ತ್ವ ರಾಜಸರು)

3) ಸಾತ್ವಿಕ ತಾಮಸರು (ಸತ್ತ್ವ ತಾಮಸರು)

ಸೃಷ್ಟಿ ಪ್ರಾರಂಭದಲ್ಲಿ. ಶ್ರೀಮನ್ನಾರಾಯಣನು ಗುಣತ್ರಯಗಳಲ್ಲಿ ಒಂದರಲ್ಲಿ ಒಂದಧಿಕ ನ್ಯೂನತೆಗಳಿಂದ ಮೇಳನ ಮಾಡಿದ. ಅದಕ್ಕೆ ಪೂರ್ವರಲ್ಲಿ ಗುಣತ್ರಯಗಳ ಅಸಂಸೃಷ್ಟವಾಗಿದ್ದವು. ಅಂದರೆ ಮಿಳನವಾಗಿರಲಿಲ್ಲ. ಪ್ರಪ್ರಥಮವಾಗಿ 1) ಶುದ್ಧ ಸತ್ತ್ವ (ಶುಕ್ಲವರ್ಗ) ಮತ್ತು 2) ಶುದ್ಧ ತಮ (ಕಪ್ಪುವರ್ಣ) ಹೀಗಿದ್ದವು. ಶ್ರೀಹರಿಯು ತನ್ನ ಇಚ್ಛೆಯಿಂದ ಇವೆರಡರ ಮೇಳನಗೈಸಿದ. ಆಗ ಅನಭಿವ್ಯಕ್ತವಾಗಿದ್ದ ರಜೋಗುಣವು ಅಭಿವ್ಯಕ್ತವಾಯಿತು (ಕೆಂಪುವರ್ಣ). ಇದಕ್ಕೆ **ಗುಣವೈಷಮ್ಯ**ವೆಂದು ಹೆಸರು (ಗುಣಗಳ ಮಿಶ್ರ). ಇದೇ ಸೃಷ್ಟಿಗೆ ಕಾರಣವು.

1) ಸತ್ತ್ವಗುಣ ಮತ್ತು ರಜೋಗುಣಗಳ ಮೇಳನದಿಂದ, ಸತ್ತ್ವ ಪ್ರಾಚುರ್ಯವಾದ ಗುಣವನ್ನುಂಟುಮಾಡಿದ. ಇದೇ **ಸತ್ತ್ವ ಸತ್ತ್ವವು.** (ಶುದ್ಧ ಸತ್ತ್ವದಿಂದ ಸೃಷ್ಟಿಯಿಲ್ಲ).

2) ರಜೋಪ್ರಾಚುರ್ಯದಿಂದ **ಸತ್ತ್ವ ರಜವನ್ನು** ನಿರ್ಮಿಸಿದನು.

3) ತಮಃ ಪ್ರಾಚುರ್ಯದಿಂದ **ಸತ್ತ್ವ ತಮವನ್ನು** ನಿರ್ಮಿಸಿದನು.

ಹೀಗೆ ಸತ್ತ್ವ ಗುಣದಲ್ಲಿ ಮೂರು ಭಾಗ. ಸತ್ತ್ವಪ್ರಾಚುರ್ಯವಾದ ಶರೀರವುಳ್ಳ ಬ್ರಹ್ಮಾದಿ ಪುಷ್ಕರಾಂತ ದೇವತೆಗಳು ಸೃಷ್ಟರಾದರು. ಅವರಲ್ಲಿ ಪರಸ್ಪರ ತಾರತಮ್ಯವಿದೆ. (ಸತ್ತ್ವ, ರಜೋಗುಣಗಳ ವಿಧವಿಧ ಪ್ರಮಾಣಗಳಿಂದ).

ರಜೋಗುಣ ಪ್ರಾಚುರ್ಯವಾದ ಸತ್ತ್ವಗುಣ ಶರೀರವುಳ್ಳವರು— ಅಜಾನಜ ದೇವತೆಗಳಿಂದ ಆರಂಭಿಸಿ, ದೇವಗಂಧರ್ವಾಂತ ದೇವತಾವರ್ಗ,

ಇವರಲ್ಲಿಯೂ ಸಹ ಪರಸ್ಪರ ತಾರತಮ್ಯವಿದೆ. ತಮಃಪ್ರಾಚುರ್ಯವಾದ ಸತ್ತ್ವಗುಣ ಶರೀರವುಳ್ಳವರು ನಿರಂಶರಾದ ಮಾನುಷಗಂಧರ್ವಕಾರಭ್ಯ ತೃಣಾಂತಜೀವರು ಸೇರಿರುವರು. ಇವರಲ್ಲಿಯೂ ಸಹ ಅಂತರಾಂತರ ತಾರ ತಮ್ಯವಿದೆ.

ಪೂರ್ವೋಕ್ತ ಮೂರು ಪ್ರಕಾರದ ಜೀವರೂ ಉತ್ತಮರು. ಸ್ವರೂಪತಃ ಭಗವದ್ಭಕ್ತರೆನಿಸುವರು. ಅವರು ಮುಕ್ತಿಯೋಗ್ಯಚೇತನರು. ವಿರಾಜನದಿಯ ಸ್ನಾನಾನಂತರ, ಅವರಿಗೆ ಲಿಂಗಭಂಗ. ಅದರ ದ್ವಾರಾ ಕರ್ಮವಿಮೋಚನೆ. ನಂತರ ಸ್ವರೂಪಗತ ಆನಂದಾವಿರ್ಭಾವರೂಪವಾದ ಮುಕ್ತಿಯ ಆನಂದಾ ನುಭವ. ವೈಕುಂಠ–ಶ್ವೇತದ್ವೀಪ– ಅನಂತಾಸನಗಳೆಂಬ ಮುಕ್ತಧಾಮತ್ರಯ ಗಳಲ್ಲಿ ನಿತ್ಯಸುಖಾನುಭವ.

ಇನ್ನು ರಜೋಜೀವರಾದ ನಿತ್ಯ ಸಂಸಾರಿಗಳ ವಿಚಾರ :–

ಇವರಲ್ಲಿ ಮೂರು ಪ್ರಕಾರ :–

1) ರಜಃ ಸತ್ತ್ವ ಶರೀರವುಳ್ಳ ಮಧ್ಯಮ ಜೀವರು

2) ರಜಃ ರಜೋ ಶರೀರವುಳ್ಳ ಮಧ್ಯಮ ಜೀವರು

3) ರಜಸ್ತಮೋ ಶರೀರವುಳ್ಳ ಮಧ್ಯಮ ಜೀವರು

ಇವರಲ್ಲಿ ಮೊದಲನೆಯ ವರ್ಗ ಉತ್ತಮರು. ದ್ವಿತೀಯವರ್ಗ ಮಧ್ಯಮ ಮತ್ತು ತೃತೀಯ ವರ್ಗ ಅಧಮರು–ಹೀಗೆ ವರ್ಗ ತಾರತಮ್ಯವಿದೆ.

1) ರಜಃ ಸತ್ತ್ವರಿಗೆ **ಸ್ವರ್ಗಪ್ರಚುರ**ರೆಂದು ಹೆಸರು. ಇವರಿಗೆ ಸ್ವರೂಪರಲ್ಲಿ ಸುಖ ಅಧಿಕ. ತದ್ವಿಪಕ್ಷಯಾ ದುಃಖ ಕಡಿಮೆ. ಇವರಿಗೆ ಯಜ್ಞಾಧಿಕಾರವುಂಟು. ಸಾಂತಾನಿಕಲೋಕಗತ ಊರ್ಧ್ವಭಾಗದಲ್ಲಿ ಸುಖಾ ನುಭವ ಮಾಡುತ್ತಾರೆ. ದುಃಖಾನುಭವ ಸಾಪೇಕ್ಷತ್ವೇನ ಕಡಿಮೆ.

2) ರಜಃ ರಜೋ ಜೀವರು **ಭೂಪ್ರಚುರರು.** ಇವರಿಗೆ ಸ್ವರೂಪದಲ್ಲಿ

ಸುಖ ದುಃಖಗಳು ಸಮ. ಇವರಿಗೆ ಸ್ವರ್ಗ ಪ್ರವೇಶವಿಲ್ಲ, ಮತ್ತು ಯಜ್ಞಾಧಿಕಾರವೂ ಇಲ್ಲ. ಸುಖಪ್ರಾರಬ್ಧದ ದೆಸೆಯಿಂದ ಭೂಪ್ರದೇಶದಲ್ಲಿ ಸುಖ ಅನುಭವಿಸುವರು. ದುಃಖ ಅನುಭೋಗಕ್ಕೆ ನರಕಕ್ಕೆ ಹೋಗಿ, ಪುನಃ ಭರತ ಖಂಡಕ್ಕೆ ಬಂದು ಜನ್ಮವೆತ್ತುವರು.

3) ರಜಸ್ತಾಮಜೀವರಿಗೆ **ನಿರಯಪ್ರಚುರ**ರೆಂದು ಹೆಸರು. ಇವರಿಗೆ ಸ್ವರೂಪದಲ್ಲಿ ಸುಖ ಅಧಿಕ. ಸುಖಾನುಭವ ತದ್ವಿಪಕ್ಷಯಾ ನ್ಯೂನ. ನರಕವಾಸಿಗಳು. ಸುಖಾನುಭೋಗಕ್ಕಾಗಿ ಭರತ ಖಂಡದಲ್ಲಿ ಜನ್ಮ ಪ್ರಾಪ್ತಿ.

ಮೇಲಿನ ಮೂರು ವರ್ಗದವರೂ ಮಧ್ಯಮಜೀವರು. ಅಂದರೆ, ರಜೋಜೀವರು. ಇವರಿಗೆ ಶ್ರೀವಾಯುದೇವರ ಹುಂಕಾರದಿಂದ ಲಿಂಗಭಂಗ. ಲಿಂಗಭಂಗಾನಂತರ ಸಾಂತಾನಿಕಲೋಕಗಳಲ್ಲಿ ವಾಸ. ಈ ಸಾಂತಾನಿಕಲೋಕಗಳು ಭೂಲೋಕದಲ್ಲಿ ವಿದ್ಯಮಾನವಾದ ಲೋಕಾಲೋಕಪರ್ವತಕ್ಕೆ ಆಚೆಯಲ್ಲಿರುವ ಅಂತಂತಮಸ್ಸೆಂಬ ಲೋಕಗಳ ಮೇಲಿನ ಭಾಗದಲ್ಲಿ, ಸ್ವರ್ಗಲೋಕಕ್ಕೆ ಅಧೋಭಾಗದಲ್ಲಿ ಇವೆ. ಮುಕ್ತಿಸ್ಥಾನಗಳಿಗೂ, ಅಂಧಂತಮಸ್ಸಿಗೂ ನಡುವಿನ ಪ್ರದೇಶ. ಈ ಜೀವರು **ನಿತ್ಯಬದ್ಧರು.** ಅಂದರೆ, ಸ್ವರೂಪತಃ ಸುಖ ದುಃಖ ಮಿಶ್ರವುಳ್ಳ ಅನಾದಿಧರ್ಮ ಉಳ್ಳವರು. ॥೧೮॥

★★

## ಪದ್ಯ-೧೯

**ಮೂಲ :–**

**ತನುಸ್ಸಾತ್ವಿಕರೆನಿಸಿಕೊಂಬರು ।**
**ಅಮಿತನಾಖ್ಯಾತಸುರಗಣವಿದೆ ।**
**ತಮೋರಾಜಸವೆನಿಸಿಕೊಂಬರು ದೈತ್ಯಸಮುದಾಯ ॥**

**ತಮುಸ್ತಾಮುಸ ಕಲಿ ಪುರಂಧ್ರಿಯು ।
ಅಮಿತ ದುರ್ಗುಣಪೂರ್ಣ ಸರ್ವಾ ।
ಧಮರೊಳಧಮಾಧಮ ದುರಾತ್ಮನು ಕಲಿಯೆನಿಸಿಕೊಂಬ ॥
॥೧೯॥**

**ಅವತರಣಿಕೆ :-**

ತಮೋಯೋಗ್ಯಜೀವರ ಉತ್ಪತ್ತಿ, ಮತ್ತು ತಾರತಮ್ಯಕ್ರಮ ತಿಳಿಸುತ್ತಾರೆ. ॥೧೯॥

**ಪ್ರತಿಪದಾರ್ಥ :-**

**ತಮುಸ್ಸಾತ್ವಿಕರೆನಿಸಿಕೊಂಬರು** = ತಮೋಗುಣದಲ್ಲಿ ವಿಭಾಗವಾದ ಭಾಗತ್ರಯದಲ್ಲಿ ತಮಃ ಸಾತ್ತ್ವಿಕ ದೇಹದಿಂದ ಉತ್ಪತ್ತಿಯಾದವರು – ಎಂದು ಕರೆಯಿಸುವರು. **ಅಮಿತ** = ಮಿತಿಯಿಲ್ಲದ, **ಅನಾಖ್ಯಾತ** = ಪ್ರಸಿದ್ಧರಲ್ಲದ, **ಅಸುರಗಣವಿದೆ** = ಈ ರೀತಿ ದೈತ್ಯರ ಸಮೂಹ ಇದೆ. **ತಮೋರಾಜಸವೆನಿಸಿಕೊಂಬರು** = ತಮೋಗುಣದಲ್ಲಿ ವಿಭಾಗವಾದ ತಮೋರಜದಿಂದ ಉತ್ಪತ್ತಿಯಾದ ದೇಹವುಳ್ಳ, **ದೈತ್ಯಸಮುದಾಯು** = ದೈತ್ಯರ ಗಣವು ತಮೋರಾಜಸ ಜೀವಿಗಳೆಂದು ಕರೆಯಿಸುವರು (ದೇವತೆಗಳಲ್ಲಿ ಅಜಾನಜರು ಇದ್ದ ಹಾಗೆ), **ತಮುಸ್ತಾಮುಸ** = ತಮೋಗುಣದಲ್ಲಿ ವಿಭಾಗವಾದ ತಮಃ ತಮದಿಂದ ಉತ್ಪತ್ತಿಯಾದ, **ಕಲಿ** = ಕಲಿ, **ಪುರಂಧ್ರಿಯು** = ಕಲಿಪತ್ನಿಯಾದ ಪುರಂಧ್ರೀನಾಮಕ ದೈತ್ಯಳು (ದೇವತೆಗಳಲ್ಲಿ ಬ್ರಹ್ಮಾಂಡ ಪುಷ್ಕರ ಪರ್ಯಂತ ಇದ್ದ ಹಾಗೆ ಈ ವರ್ಗ), **ಅಮಿತ ದುರ್ಗುಣಪೂರ್ಣ** = ಕಲಿಯಾದರೋ ಮಿತಿ ಇಲ್ಲದ ದುರ್ಗುಣಗಳಿಂದ ಕೂಡಿದವನು (ಪರಮ ನೀಚ), **ದುರಾತ್ಮನು** = ಪಾಪಸ್ವರೂಪವುಳ್ಳವನು. (ಸ್ವರೂಪತಃ ತಮೋಯೋಗ್ಯರಲ್ಲಿ ಅತ್ಯಂತ ನೀಚನು), **ಕಲಿಯೆನಿಸಿಕೊಂಬ** = ದೈತ್ಯ ಸಮುದಾಯದಲ್ಲಿ ಕಲಿಯು ಅಧಮರಲ್ಲಿ ಅತ್ಯಂತ ಅಧಮನೆನಿಸಿಕೊಳ್ಳುವನು.
॥೧೯॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ತಮೋಯೋಗ್ಯರ ಉತ್ಪತ್ತಿ ಕ್ರಮ ಹೇಳಿತಾರೆ.

ಹದಿನೆಂಟನೇ ಶ್ಲೋಕದಲ್ಲಿ ತಮೋಗುಣದಲ್ಲಿ ವಿಭಾಗವಾದ ಭಾಗತ್ರಯದೊಳಗೆ ತಮಃ ಸಾತ್ತ್ವಿಕದಿಂದ ಉತ್ಪನ್ನರಾದವರೆಂದು ಎನಿಸಿಕೊಂಬೋವರಾಗತಾರೆ. ಮಿತರಹಿತವಾದ, ಖ್ಯಾತಿಯಿಂದ ರಹಿತರಾದವರು ಅಸಂಖ್ಯಾತರಾಗಿದ್ದಾರೆಂತ ಅರ್ಥ. ಈ ಪ್ರಕಾರ ಅಸುರಗಣ ಇರೋದಾಗಿ ಅದೆ. ತಮಃ ಸಾತ್ತ್ವಿಕದಿಂದ ಉತ್ಪನ್ನರಾದ ಅಸುರರೊಳಗೆ ನಿರಂಶರು ತೃಣಾಂತವರೆಗೂ, ತಮೋಗುಣದಲ್ಲಿ ವಿಭಾಗವಾದ ತಮೋ ರಜದಿಂದ ಉತ್ಪನ್ನರಾದವರೆನಿಸಿಕೊಂಬರು. ದೇವತೆಗಳೊಳಗೆ ಆಜಾನಜರು ಇದ್ದೋಪಾದಿಯಲ್ಲಿ ದೈತ್ಯರಲ್ಲಿ ತದ್ವತ್ ಇರತಕ್ಕ ದೈತ್ಯಸಮುದಾಯ ತಮೋಗುಣದಲ್ಲಿ ವಿಭಾಗವಾದ ತಮಃ ತಮದಿಂದ, ಮುಕ್ತಿಯೋಗ್ಯರಲ್ಲಿ ಬ್ರಹ್ಮ ಆರಂಭ ಮಾಡಿ, ಪುಷ್ಕರಾಂತ ದೇವತೆಗಳಿದ್ದೋಪಾದಿಯಲ್ಲಿ, ತಮೋಯೋಗ್ಯರಲ್ಲಿ ಕಲಿ ಆರಂಭಮಾಡಿ ಇರತಕ್ಕ ದೈತ್ಯರು ತಮಸ್ತಮದಿಂದ ಉತ್ಪನ್ನರಾದವರು. ಕಲಿ ಪತ್ನಿ, ಪುರಂಧ್ರಿ ಎಂತ ನಾಮವುಳ್ಳವಳು. ಈ ಕಲಿ ಎಂಥಾವನೆಂದರೆ, ಮಿತರಹಿತವಾದ ದುರ್ಗುಣದಿಂದ ಪೂರ್ಣನಾದವ. ಅಧಮಳಾದವಳು ಕಲಿಪತ್ನಿ ಪುರಂಧ್ರಿ. ತನ್ನ ಪತ್ನಿ ಪುರಂಧ್ರಿಗಿಂತಲೂ ಅಧಮನಾದವನು. ಪಾಪ ಸ್ವರೂಪವುಳ್ಳವನೆಂದು ಕಲಿ-ಎಂತ ಕರಸತಾನೆ. ಇವರು ನಿತ್ಯ ಸಂಸಾರಿಗಳಿಗಿಂತಲೂ ಅಧಮರಂತ ತಾತ್ಪರ್ಯ. ||೧೮||

## ೨. ಭಾವಪ್ರಕಾಶಿಕೆ: –

ತಾಮಸರು ಪ್ರಾಯಶಃ ದೈತ್ಯರು. ಅವರಲ್ಲಿ ಅನಾಖ್ಯಾತ ದೈತ್ಯಗಣವೆಂದು

ಅಸಂಖ್ಯಾಕರು ಇರುವರು. ಅನಾಖ್ಯಾತರೆಂದರೆ ಅಪ್ರಸಿದ್ಧರೆಂದರ್ಥ. ಇವ ರೆಲ್ಲರು ತಾಮಸ ಸಾತ್ವಿಕರೆನಿಸುವರು. ಪ್ರಧಾನರಾದ ಕಲಿ ಮೊದಲಾದ ದೈತ್ಯರ ಭೃತ್ಯರೆಂದು ಪ್ರಸಿದ್ಧರಾದ ದೈತ್ಯ ಸಮುದಾಯವು ತಾಮಸ ರಾಜಸರೆನಿಸುವರು. ಪ್ರಸಿದ್ಧರಾದ ದಾನವರು ದೈತ್ಯರು ತಾಮಸ ತಾಮಸರೆನಿಸುವರು. ಈ ವಿಷ ಯದಲ್ಲಿ ಭಾಗವತ ದ್ವಿತೀಯಸ್ಕಂಧ 10 ನೆಯ ಅಧ್ಯಾಯದಲ್ಲಿ 41 ನೆಯ ಶ್ಲೋಕದ ವಿಜಯಧ್ವಜೀಯ ವ್ಯಾಖ್ಯಾನದಲ್ಲಿ, "ಕಲ್ಯಾದಿ ಪ್ರಧಾನಾ ಅಸು ರಾಸ್ತಾಮಸ ತಾಮಸಾಃ । ಪ್ರಧಾನಾಸುರಭೃತ್ಯಾಃ ತಾಮಸ ರಾಜಸಾಃ । ಅಪ್ರಸಿದ್ಧಾ ಅಸುರಾಸ್ತಾಮಸ ಸಾತ್ವಿಕಾಃ ।ಕೇವಲ ಪಾಪಚಾರಿಣೋ ಮನುಷ್ಯಾ ರಾಜಸ ತಾಮಸಾಃ । ಮಿಶ್ರಕರ್ಮಕೃತೋ ಮನುಷ್ಯಾ ರಾಜಸ ರಾಜಸಾಃ । ಮನುಷ್ಯೇಷು ಪುಣ್ಯೈಕ ಕರ್ಮಕೃತ ಉತ್ತಮಮನುಷ್ಯಾ ರಾಜಸ ಸಾತ್ವಿಕಾಃ । ಪೃಥಕ್ ಅಪ್ರಸಿದ್ಧಾ ದೇವಾಃ ಸಾತ್ವಿಕ ತಾಮಸಾಃ । ಅತತ್ವಮಾನಿನೋತೋ ಖ್ಯಾತಾ ಸಾತ್ವಿಕ ರಾಜಸಾಃ । ತತ್ವಾಭಿಮಾನಿನೋದೇವಾಃ ಸಾತ್ವಿಕ ಸಾತ್ವಿಕಾಃ । ಸಾತ್ವಿಕೇಭ್ಯೋಪಿ ಸಾತ್ವಿಕಾಃ ಗರುಡಾದಿತ್ರಿಕ ತದ್ಭಾರ್ಯಾಸ್ತೇಭೋಪಿ ಸಾತ್ವಿಕೀ ಬ್ರಹ್ಮಭಾರ್ಯಾ ಸರಸ್ವತೀ । ತತೋಽಪಿ ಸಾತ್ವಿಕೋ ಬ್ರಹ್ಮೇತಿ ॥" ಸತ್ತ್ವಂ ರಜಸ್ತಮ ಇತಿ ತಿಸ್ರಃ ಸುರನ್ಯನಾರಕಾಃ"— ಮೂಲ ವಚನದಿಂದ ಸಾತ್ವಿಕ, ರಾಜಸ, ತಾಮಸರೆಂದು ಮೂವರು ದೇವಲೋಕ, ಮನುಷ್ಯಲೋಕ, ನರಕ ವಾಸಿಗಳೆಂದು ಪ್ರಸಿದ್ಧರಾಗಿರುವರು— ಎಂಬ ವಾಕ್ಯದಿಂದ ದೈತ್ಯರೆಲ್ಲರು ತಾಮ ಸರು, ನರಕವಾಸಿಗಳೆಂದು ಸ್ಪಷ್ಟವಾಗುವುದು. ಅವರಲ್ಲಿ ಅವಾಂತರಭೇಧ ಗಳಿರುವವು. ಕಲಿ ಮೊದಲಾದ ಪ್ರಧಾನದೈತ್ಯರು ತಾಮಸ ತಾಮಸರು. ಪ್ರಧಾನದೈತ್ಯರ ಭೃತ್ಯರು ತಾಮಸ ರಾಜಸರು. ಅಪ್ರಸಿದ್ಧರಾದ ದೈತ್ಯರು ತಾಮಸ ಸಾತ್ವಿಕರು. ರಾಜಸರೆಲ್ಲರೂ ಮನುಷ್ಯರು. ಅವರಲ್ಲಿ ಅವಾಂತರ ಭೇದಗಳು :— ಕೇವಲ ಪಾಪಾಚಾರವುಳ್ಳ ಮನುಷ್ಯರು ರಾಜಸ ತಾಮಸರು. ಪುಣ್ಯ ಪಾಪ ಮಿಶ್ರವಾದ ಕರ್ಮವನ್ನು ಮಾಡುವ ಮನುಷ್ಯರು ರಾಜಸ ರಾಜ ಸರು. ಮನುಷ್ಯರಲ್ಲಿ ಕೇವಲ ಪುಣ್ಯವನ್ನು ಮಾತ್ರ ಅನುಷ್ಠಾನ ಮಾಡಿಕೊಂಡಿ ರುವ ಉತ್ತಮ—ಮನುಷ್ಯರು ರಾಜಸ ಸಾತ್ವಿಕರು. ಸಾತ್ವಿಕರೆಲ್ಲರೂ ದೇವತೆ ಗಳು. ಅವರಲ್ಲಿ ಅವಾಂತರಬೇಧವೆಂತೆನೆ :— ಅಪ್ರಸಿದ್ಧರಾದ ದೇವತೆಗಳು.

ಸಾತ್ವಿಕ ತಾಮಸರು. ತತ್ವಾಭಿಮಾನಿಗಳಲ್ಲದ, ಲೋಕದಲ್ಲಿ ಪ್ರಖ್ಯಾತರಾದ ದೇವತೆಗಳು ಸಾತ್ವಿಕ ರಾಜಸರು. ತತ್ವಾಭಿಮಾನಿಗಳಾದ ದೇವತೆಗಳು ಸಾತ್ವಿಕ ಸಾತ್ವಿಕರು. ಸಾತ್ವಿಕರಲ್ಲೂ ಸಾತ್ವಿಕರಾದವರು ಗರುಡ ಶೇಷ ರುದ್ರರು. ಅವರ ಹೆಂಡರುಗಳು. ಅವರಕಿಂತಲೂ ಸಾತ್ವಿಕರು ಬ್ರಹ್ಮವಾಯುಗಳ ಪತ್ನಿಯರು. ಅವರಗಿಂತಲೂ ಸಾತ್ವಿಕರು ಬ್ರಹ್ಮವಾಯುಗಳೆಂದು ಹೇಳಿರುವರು. ಈ ವಾಕ್ಯಗಳನ್ನನುಸರಿಸಿ, ಈ ಪದ್ಯಕ್ಕೆ ಅರ್ಥವು ಬರೆಯಲ್ಪಟ್ಟಿದೆಯೆಂದು ತಿಳಿಯ ಬೇಕು. ಇದರಂತೆ ತಾಮಸ ತಾಮಸರು ಪ್ರಧಾನದೈತ್ಯರಾದರೂ, ಎಲ್ಲರ ಕಿಂತಲೂ ತಾಮಸ ತಾಮಸಗಳು ಕಲಿ ಭಾರ್ಯಳಾದ ಜ್ಯೇಷ್ಠಾ- ಎಂಬುವಳು ಅವಳಿಗಿಂತಲೂ ಮಹಾ ತಾಮಸನು ಕಲಿಯು. ॥೧೯॥

## ೩. ಭಾವದರ್ಪಣ :-

ತಮಸ್ಸಾತ್ವಿಕೇತಿ । ಮನುಷ್ಯಾಧಮರೇ ಎಂಬಂರ್ಥ । "ಅನಾಖ್ಯಾತಾ ಸುರಾಃ ಪ್ರೋಕ್ತಾ ಮಾನುಷಾ ದುಷ್ಟಚಾರಿಣಃ"— ಇತಿ । ದ್ವಿತೀಯ ತಾತ್ಪ-ರ್ಯೋಕ್ತೇಃ । "ತಾಮಸ ರಾಜಸೇತಿ।ಪ್ರಧಾನಾಸುರರ ಭೃತ್ಯರೇ—ತಾಮಸ ರಾಜ ಸರು ಎಂಬರ್ಥ । ತಮಸ್ತಾಮಸೇತಿ । ಪ್ರಧಾನ ದೈತ್ಯರು ಎಂಬರ್ಥ । ತದುಕ್ತಂ ದ್ವಿತೀಯ ತಾತ್ಪರ್ಯೇ। "ತಾಮಸ ತಾಮಸಾ ದೈತ್ಯಾ ಪ್ರಧಾನಾ ದೇವಶತ್ರವಃ। ತಾಮಸಾ ರಾಜಸಾಸ್ತೇಷಾಮಿತಿ" । ಕಲಿ ಪುರಂಧ್ರಿ ಸರ್ವಾಧಮರೊಳಧಮಾ ಧಮಾಯೆಂದರೆ-ಅತ್ಯಂತ ನೀಚಳೆಂದರ್ಥ । ದುರಾತ್ಮಾ ಪರಮದುಷ್ಟನಾದಂಥ ಆತ್ಮಾ ಮನಸ್ಸು ಉಳ್ಳವ ಕಲಿಯೇ ಎಂಬರ್ಥ. ॥೧೯॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :—

"ತಮ" ಇತಿ ॥ ತೇಷು ಸಾತ್ವಿಕಾಃ ಅನಾಖ್ಯಾತಾಸುರಾಃ ॥ ತಾಮಸ ರಾಜಸಾಃ॥ ತೇಷಾಂ ಅನುಗಾಃ ತಾತ್ವಿಕ ದೈತ್ಯಾನಾಂ ತಾಮಸ ತಾಮಸಾಃ ದೈತ್ಯ ಪ್ರಧಾನಾಃ ಕಲಿಭಾರ್ಯಾಂತಾಃ (ತಾಮಸ ತಾಮಸಾಃ ॥) ॥ "ಪುರಂಧ್ರಿ" ಜಾಯಾ ॥ ಅಮಿತ ದುರ್ಗುಣ ಪೂರ್ಣತ್ವಾದೇವ ದುರ್ಲಕ್ಷಣಯುತಃ ಕಲಿಃ

॥೧೯॥

## ಕನ್ನಡಾರ್ಥ

ತಾಮಸರಲ್ಲಿ ಅನಾಖ್ಯಾತರಾದ ಅಸುರರು ಸಾತ್ವಿಕರು. (ತಾಮಸ ಸಾತ್ವಿಕರು). ಅವರಿಗೆ. ತಾತ್ವಿಕ ದೈತ್ಯರಿಗೆ ಅನುಸರಿಸಿ ನಡೆಯುವ ದೈತ್ಯರು ತಾಮಸ ರಾಜಸರು. ಕಲಿ ಪತ್ನಿಯುವರೆಗಿನ ಪ್ರಧಾನ ದೈತ್ಯರು ತಾಮಸ ತಾಮಸರು ॥ "ಪುರಂಧ್ರಿ" ಅಂದರೆ ಕಲಿ ಹೆಂಡತಿ ಎಂದು ಅರ್ಥ. ಕಲಿಯು ಅನಂತ ದುರ್ಗುಣಗಳುಳ್ಳವನಾದುದರಿಂದ ದುರ್ಲಕ್ಷಣಗಳಿಂದ ಯುಕ್ತನಾಗಿರುತ್ತಾನೆ. ॥೧೯॥

### ೫. ಶ್ರೀಗುರುಹೃದಯ ಪ್ರಕಾಶಿಕೆ :-

ಅಮಿತನಾಖ್ಯಾತಸುರಗಣವೆಂಬ ಅಪ್ರಸಿದ್ಧ ದೈತ್ಯರು ತಮಸ್ಸಾತ್ವಿಕ ತಮೋರಾಜಸರೆಂದು ಕರೆಸುವರು, ತತ್ತ್ವಾಭಿಮಾನಿ ದೈತ್ಯರು. ತಮಸ್ತಾಮಸಳು ಕಲಿ ಪುರಂಧ್ರೀ-ಎಂಬ ಕಲಿ ಪತ್ನಿ; ಕಲಿಯ ಸಹ ಅಮಿತದುರ್ಗುಣಪೂರ್ಣ-ಅಂದರೆ ಅತ್ಯಂತ ಮಿತಿಯಿಲ್ಲದ ದುರ್ಗಣ ಉಳ್ಳವನು. ಸರ್ವಾಧಮರೊಳಧಮನು. ದುಷ್ಟರೂಪನು. ॥೧೯॥

## ಸರ್ವವ್ಯಾಖ್ಯಾನಸಾರಸಂಗ್ರಹ

ಸೃಷ್ಟಿ ಪ್ರಾರಂಭದಲ್ಲಿ ಸರ್ವಶಕ್ತನಾದ ಶ್ರೀಪರಮಾತ್ಮನು ಗುಣವೈಷಮ್ಯ ವಿಧಾನದಲ್ಲಿ ತಮೋಗುಣವನ್ನು ಮೂರು ಪ್ರಕಾರವಾಗಿ ಮಿಶ್ರ ಮಾಡಿದನು—

1) ತಮಃ ಸಾತ್ವಿಕ ಗುಣ. 2) ತಮೋ ರಜ. ಮತ್ತು 3) ತಮಸ್ತಮ.ತಮಃ ಸಾತ್ವಿಕ ಗುಣ ಪ್ರಾಚುರ್ಯವುಳ್ಳ ಅನಾಖ್ಯಾತ ದೈತ್ಯವರ್ಗವನ್ನು ಸೃಷ್ಟಿಸಿದನು. ಇವರ ಗಣ ಅಸಂಖ್ಯಾತವಾಗಿದೆ. ಇವರು ಅಪ್ರಸಿದ್ಧ ದೈತ್ಯರಾದ ಕಾರಣ, **ಅನಾಖ್ಯಾತ**ರೆಂತ ಹೆಸರಾಯಿತು, ಇವರು **ತಾಮಸ ಸಾತ್ವಿಕ ಜೀವರು,** ಇವರು ನಿರಂಶರು,

ತಮೋ ರಜೋ ಗುಣದಿಂದ ಉತ್ಪತ್ತಿಯಾದ ದೈತ್ಯರ ವರ್ಗ ಎರಡನೆಯದು. ಇವರು ದೇವತಾವರ್ಗದಲ್ಲಿ ಅಜಾನಜದೇವತೆಗಳು ಇದ್ದಂತೆ, ದೈತ್ಯವರ್ಗದಲ್ಲಿ ಇದ್ದಾರೆ. ಇವರು **ತಾಮಸ ರಾಜಸ ಜೀವರು.**

ತಮಸ್ತಮಸ್ಸಿನಿಂದ ಸೃಷ್ಟರಾದ ದೈತ್ಯವರ್ಗದವರು. ಮುಕ್ತಿಯೋಗ್ಯರಲ್ಲಿ ಬ್ರಹ್ಮದೇವರಿಂದ ಆರಂಭಿಸಿ ಪುಷ್ಕರಾಂತ ತತ್ತ್ವದೇವತೆಗಳಿದ್ದಂತೆ ಇದ್ಧಾರೆ. ಇವರೆಲ್ಲರೂ ಸಾಂಶರು ಮತ್ತು ತತ್ತ್ವಾಭಿಮಾನಿ ಆಸುರರು.

ಈ ವರ್ಗದಲ್ಲಿ ಪರಮ ನೀಚನೆಂದರೆ **ಕಲಿಯು.** ಅವನಲ್ಲಿ ತಾಮಸ ತಾಮಸ ಗುಣ ಪೂರ್ಣ ಪ್ರಮಾಣದಲ್ಲಿದೆ (ದೇವತಾವರ್ಗದಲ್ಲಿ ಬ್ರಹ್ಮ ವಾಯುಗಳು ಸತ್ತ್ವಪ್ರಚುರರಾಗಿರುವಂತೆ ಕಲಿಯು ತಮಃಪ್ರಚುರನು) ಕಲಿಯು ಮಿತಿಯಿಲ್ಲದ ದುರ್ಗುಣಗಳಿಂದ ಯುಕ್ತನು. ಅಧಮ ಜೀವರಲ್ಲಿ ಅಧಮನು. ಪರಮಪಾಪ ಸ್ವರೂಪವುಳ್ಳವನು **(ದುರಾತ್ಮನು).**

ಕಲಿಯ ನಂತರ ಅವನ ಪತ್ನಿ **ಪುರಂಧ್ರಿಯು** ನೀಚಳು. ಅವಳಿಗೆ **ಜ್ಯೇಷ್ಠಾ**-ಎಂತ ಇನ್ನೊಂದು ಹೆಸರು.

ಮೇಲ್ಕಂಡ–ದೈತ್ಯರ ತ್ರಿವರ್ಗದಲ್ಲಿ ಪ್ರತಿಯೊಂದರಲ್ಲಿಯೂ ಅವಾಂತರ ಬೇಧಗಳಿವೆ. ತಾರತಮ್ಯಾನುಸಾರ ನೀಚತ್ವವಿದೆ. ತೃಣಾಂತದೈತ್ಯರಿಂದ ಪ್ರಾರಂಭಿಸಿ,ನೀಚತ್ವವು ಕಲಿಯ ಕಕ್ಷಕ್ಕೆ ಬಂದಾಗ ಪರಮಾವಧಿಯಾಗುವುದು. ಇದರಿಂದ,ಕಲಿಯು ಅಧಮಾಧಮನೆಂದು–ದಾಸರಾಯರು ಹೇಳಿರುವರು.

ತಾಮಸ ಸಾತ್ವಿಕ ಜೀವರು ತಾಮಸ ರಾಜಸ ಜೀವರಿಗಿಂತ ನೀಚತ್ವ ತಾರತಮ್ಯದಲ್ಲಿ ಕಡಿಮೆ. ಅವರು ತಾಮಸ ರಾಜಸರಿಗೆ ಭೃತ್ಯರು.

ತಾಮಸ ರಾಜಸರು ತಾಮಸ ತಾಮಸ ಜೀವರಿಗಿಂತ ನೀಚತ್ವದಲ್ಲಿ ಕಡಿಮೆ. ಅವರು ಕಲ್ಯಾದಿ ದೈತ್ಯರಿಗೆ ಭೃತ್ಯರೆನಿಸುವರು. ॥೧೯॥

★★

## ಪದ್ಯ-೨೦

**ಮೂಲ :-**

**ಇವನ ಪೋಲುವ ಪಾಪಿ ಜೀವರು ।**
**ಭುವನಮೂರರೊಳಿಲ್ಲ ನೋಡಲು ।**
**ನವವಿಧ ದ್ವೇಷಗಳಿಗಾಕರನೆನಿಸಿಕೊಳುತಿಪ್ಪ ॥**
**ಬವರದಲಿ ಬಂಗಾರದಲಿ ನಟ ।**
**ಯುವತಿ ದ್ಯೂತಾಪೇಯ ವೃಷದಲಿ ।**
**ಕವಿಸಿ ಮೋಹದಿ ಕೆಡಿಸುವನು ಎಂದರಿದು ತ್ಯಜಿಸುವುದು ॥**
**॥೨೦॥**

**ಅವತರಣಿಕೆ :-**

ನೀಚಾಧಮನಾದ ಕಲಿಯ ದುರ್ಗುಣಗಳ ವಿಚಾರ ತಿಳಿಸುತ್ತಾರೆ. ॥೨೦॥

**ಪ್ರತಿಪದಾರ್ಥ :-**

**ಇವನ ಪೋಲುವ** = ಕಲಿಯನ್ನು ಹೋಲುವ (ಅವನಿಗೆ ಸದೃಶನಾದ), **ಪಾಪಿಜೀವರು** = ಸ್ವರೂಪದಲ್ಲಿ ಪಾಪಭೂಯಿಷ್ಠರಾದ ಜೀವರು, **ಭುವನ ಮೂರರೊಳು** = ಈ ಬ್ರಹ್ಮಾಂಡಗತ ಹದಿನಾಲ್ಕು ಲೋಕಗಳಲ್ಲಿ, **ನೋಡಲು ಇಲ್ಲ** = ವಿಚಾರಿಸಿ ನೋಡಲು, ಇನ್ಯಾರೂ ಇಲ್ಲವೇ ಇಲ್ಲ. **ನವವಿಧ ದ್ವೇಷಗಳಿಗೆ** = 1) ಜೀವೇಶ್ವರರಿಗೆ ಅಭೇದ ಚಿಂತನ, 2) ದೇವರು ನಿರ್ಗುಣ, ನಿರಾಕಾರ, ಶೂನ್ಯ-ಎಂದು ಪ್ರತಿಪಾದನೆ. 3) ಶಿವಾದಿಗಳ ಸರ್ವೋತ್ತಮತ್ವ ಹೇಳುವುದು. 4) ಶ್ರೀರಾಮಕೃಷ್ಣಾದ್ಯವತಾರಗಳಲ್ಲಿ

ಭೇದ ಚಿಂತನ 5) ಪೃಥು, ನಾರಾದಿಗಳೆನ್ನು ದೇವರ ಅವತಾರರೆಂಬುವುದು. 6) ಬ್ರಹ್ಮಾದಿಗಳು ಶ್ರೀವಿಷ್ಣುವಿಗೆ ಸಮಾನರೆಂಬುವುದು. 7) ವ್ಯಾಸ, ಕಪಿಲ, ಭೃಗುರಾಮ-ಇವರು ಋಷಿಗಳೆಂತ ತಿಳಿಯುವುದು. 8) ನಿಶ್ಚಯ ಜ್ಞಾನಯುಕ್ತರಾದ ವಿಷ್ಣುಭಕ್ತರ ದ್ವೇಷ. ಮತ್ತು 9) ಭಗವದ್ಭಕ್ತರು ಮಾಡಿದ, ಹೇಳುವ ಸ್ಮೃತಿಗಳು, ಶ್ರುತಿಗಳು ಕಲ್ಪಿತಗಳೆಂದು ದೂಷಿಸುವುದು– ಇವೇ ನವವಿಧವಾದ ದ್ವೇಷಗಳು, **ಆಕರನೆನಿಸಿಕೊಳ್ಳುತಿಪ್ಪ** = ಆಶ್ರಯಭೂತನೆಂದು ಕರೆಯಿಸುವ, **ಬವರದಲಿ** = ಯುದ್ಧದಲ್ಲಿ, **ಬಂಗಾರದಲಿ** = ಚಿನ್ನದಲ್ಲಿ, **ನಟಿ ಯುವತಿ** = ನಾಟ್ಯವಾಡುವ ವೇಶ್ಯಾಸ್ತ್ರೀಯರು, **ದ್ಯೂತ** = ಜೂಜು, **ಅಪೇಯ** = ಪಾನಕ್ಕೆ ಯೋಗ್ಯವಲ್ಲದ ಮದ್ಯಾದಿ ಸೇವನೆ, **ನೃಷದಲಿ** = ಅಪದ್ಧದಲ್ಲಿ (ವಂಚನೆ–ಸುಳ್ಳು ಹೇಳುವುದು), **ಮೋಹದಿ** = ಇತ್ಯಾದಿ ದುರ್ವಿಷಯಗಳಲ್ಲಿ ಮೋಹ ಹುಟ್ಟಿಸಿ, **ಕವಿಸಿ** = ಜನರನ್ನು ಅವುಗಳಿಗೆ ವಶರನ್ನಾಗಿ ಮಾಡಿ (ಅದರಲ್ಲಿ ಮುಳುಗಿಸಿ), **ಕೆಡಿಸುವನು** = ನಾಶಮಾಡುವವನು, **ಎಂದರಿದು** = ಈ ರೀತಿ ತಿಳಿದು, **ತ್ಯಜಿಸುವುದು** = ಕಲಿ ಮಾರ್ಗವನ್ನು ಬಿಡಬೇಕು. ॥೨೦॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಈ ಕಲಿಪುರುಷನ ಅಯೋಗ್ಯತೆ ಗುಣಗಳ ಹೇಳತಾರೆ.

ಇವನ ಹೋಲಿಕೆಗೆ ಹದಿನಾಲ್ಕು ಲೋಕಗಳಲ್ಲಿ ವಿಚಾರಿಸಿ ನೋಡಲು ದಾರು ದಾರೂನೂ ಇಲ್ಲ. ನವವಿಧದ್ವೇಷಗಳಿಗೆ, ನವವಿಧದ್ವೇಷಗಳು ದಾವುವೆಂದರೆ– 1. ಜೀವೇಶ್ವರರಿಗೆ ಅಭೇದ ಚಿಂತನ, 2. ದೇವರು ನಿರ್ಗುಣ ನಿರಾಕಾರ ಶೂನ್ಯ ಎಂಬುವುದು. 3. ಬ್ರಹ್ಮಾದಿಗಳು ಶ್ರೀವಿಷ್ಣುವಿಗೆ ಸಮಾನರೆಂಬುವುದು, 4. ಶಿವಾದಿಗಳು ವಿಷ್ಣುವಿಗಿಂತ ಅಧಿಕರೆಂಬುವುದು,

5. ಶ್ರೀರಾಮ ಕೃಷ್ಣಾದ್ಯವತಾರಗಳ ಭೇದ ಚಿಂತನ. 6, ಪೃಥು-ನಾರಾದಿಗಳನ್ನು ದೇವರ ಅವತಾರರೆಂಬುವುದು. 7. ವ್ಯಾಸ, ಕಪಿಲ, ಭೃಗು-ರಾಮ ಇವರುಗಳು ಋಷಿಗಳೆಂತ ತಿಳಿಯುವುದು. 8. ನಿಶ್ಚಯಜ್ಞಾನರಾದ ವಿಷ್ಣುಭಕ್ತರಲ್ಲಿ ದ್ವೇಷ ಮಾಡುವುದು. 9. ಭಗವದ್ಭಕ್ತರು ಮಾಡಿದ, ಹೇಳುವ ಸ್ಮೃತಿಗಳು ಶ್ರುತಿಗಳು ಕಲ್ಪಿತಗಳೆಂದು ದೂಷಿಸುವುದು,—ಈ ಪ್ರಕಾರ ನವವಿಧದ್ವೇಷಗಳಿಗೆ ಕಲಿಯು ಆಶ್ರಯಭೂತನೆಂದೆನಿಸಿಕೊಳ್ಳುತ್ತಿರುವವನಾಗಿದ್ದಾನೆ. ಎಂದರೆ, ನವವಿಧದ್ವೇಷ ಸ್ವರೂಪನಾಗಿ ಅವುಗಳಿಗೆ ಮಾತ್ರಸ್ಥಾನಾಪನ್ನನಾದವ ಇವನು, ಯುದ್ಧ ಕ್ರಿಯಾದಲ್ಲಿ, ಬಂಗಾರದಲ್ಲಿ, ನಾಟ್ಯವಾಡತಕ್ಕ ವೇಶ್ಯಾಸ್ತ್ರೀ, ಜೂಜು ಮೊದಲಾದ ಆಟಗಳಲ್ಲಿ, ಪಾನಕ್ಕೆ ಭಕ್ಷಣಕ್ಕೆ ಯೋಗ್ಯವಲ್ಲದ ಮದ್ಯಾದಿಗಳಲ್ಲಿ, ಅಪದ್ಧದಲ್ಲಿ-ವಿಶೇಷಾಕಾರವಾಗಿ ಇವುಗಳಲ್ಲಿ ಸನ್ನಿಧಾನದಿಂದ ಯುಕ್ತನಾಗಿದ್ದು, ಇತ್ಯಾದಿಗಳಲ್ಲಿ ಮೋಹ ಹುಟ್ಟಿಸಿ, ಆ ಮೋಹದಿಂದ ಆಸಕ್ತರನ್ನಾಗಿ ಮಾಡಿ ಕೆಡಿಸುವನು. ಆದಕಡಿಯಿಂದ ಇವರನ್ನ ತಿಳಿದು, ಪೂರ್ವೋಕ್ತಗಳಲ್ಲಿ ಆಸೆ ಮಾಡದೆ, ತ್ಯಾಗ ಮಾಡಬೇಕು ಮತ್ತು ಕಲಿ ಮಾರ್ಗದಲ್ಲಿ ಸಂಗತ್ಯಾಗ ಮಾಡಬೇಕಂತ ತಾತ್ಪರ್ಯ. ॥೨೦॥

**೨. ಭಾವಪ್ರಕಾಶಿಕೆ :—**

ಈ ಕಲಿಗೆ ಸಮಾನರಾದ ಪಾಪಿಜೀವರು ಈ ಜಗತ್ತಿನಲ್ಲಿ ಎಲ್ಲೂ ಇಲ್ಲ. **ಪುಣ್ಯ**ವಂತರಲ್ಲಿ ಬ್ರಹ್ಮದೇವರು ಹೇಗೆ ಉತ್ತಮರೋ, ಹಾಗೆ ಪಾಪಿಗಳಲ್ಲಿ ಇವನೇ ಉತ್ತಮನು. ಭಗವಂತನಲ್ಲಿ 9 ವಿಧವಾದ ದ್ವೇಷಗಳಿಗೂ ಇವನು **ಆಶ್ರ**ಯಭೂತನಾಗಿರುವನು. ನವವಿಧ ದ್ವೇಷಗಳ ವಿವರ **ಗರುಡ ಪುರಾಣ ಬ್ರಹ್ಮ**ಕಾಂಡದಲ್ಲಿ "ವಾಭೇದೋ ಹರಿಣಾಪ್ರಾಕೃತೇನ ಸ್ವತಂತ್ರೇಣ ಹ್ಯಸ್ವತಂತ್ರೇಣ ನಿತ್ಯಂ ॥ ಜ್ಞಾನಾನಂದರ್ವಿಧುರತ್ವಾಚ್ಚ ವಿಷ್ಣೂಃ ಸದಾ ಹರಿ ನಿರ್ಗುಣಶ್ಚೇತಿ ಚಿಂತಾ ॥ ಸದಾಕಾಮ್ಯೈಃ ಪರಿಪೂರ್ಣೋ ಹರೌಚ ಗುಹ್ಯೈರ ಪೂರ್ಣೋಹರಿರಿತ್ಯೇವ ಚಿಂತಾ ॥ ಶ್ರೀ ಬ್ರಹ್ಮಾದಿ ದಿವೌಕಸಾಂ ಸದಾ ತಥಾದ್ವಿ ಜಾನಾಂ ಸಾಮ್ಯತಾಂಯಾತ್ಯ ಚಿಂತಾ ॥ ವಿಷ್ಣೋಃ ಸಕಾರಾದ್ಬ್ರಹ್ಮ ರುದ್ರಾದಿ

ಕಾನಾಂ ಸದಾಧಿಕ್ಯಾದೇಶ್ಚಿಂತನಂ ದ್ವೇಷ ಏವ॥ ವಿಷ್ಣೋರ್ದೇಹೇ ಹಸ್ತಪಾದಾದಿ ಕಾನಾಂ ಭೇದಜ್ಞಾನಂ ದ್ವೇಷಮಾಹುರ್ಮಹಾಂತಃ ॥ ಅವತಾರಾಂಬೇಧ ಭೇದಾದಿಕಂ ಚೆತಥೋತ್ಪತ್ತೀರ್ಮರಣಸ್ಯಾಪಿ ಚಿಂತಾ ॥ ತದ್ಭಕ್ತಾನಾಂ ದೂಷಣಂ ಚಾಹುರಾರ್ಯಾ ಸ್ತದ್ವಾಕ್ಯಾನಾಂ ದೂಷಣಂ ದ್ವೇಷ ಏವ ॥ ನವದ್ವೇಷೈಃ ಸಂಯುತಾ ಏವಲೋಕೆ ದೃಶ್ಯಂತೇವೈನತು ಭಕ್ತಾಃ ಕಲೌ ಚ ॥"- ಇವುಗಳ ಅರ್ಥ :- ಸ್ವತಂತ್ರನೂ, ಅಪ್ರಾಕೃತನೂ ಆದ ಪರಮಾತ್ಮನಿಗೂ, ಪ್ರಾಕೃತನೂ ಅಸ್ವತಂತ್ರನೂ ಆದ ಜೀವನಿಗೂ ಅಭೇದವನ್ನು ಹೇಳುವದು 1, ಜ್ಞಾನಾನಂದಾದಿಗಳು ಪರಮಾತ್ಮನಿಗೆ ಇಲ್ಲದಿದುದರಿಂದ ಪರಮಾತ್ಮನು ನಿರ್ಗುಣನೆಂದು ಚಿಂತನೆ ಮಾಡುವುದು. 2. ಪೂರ್ಣಕಾಮನಾದ ಹರಿಯನ್ನು ಅಪೂರ್ಣನೆಂದು ಚಿಂತನೆ ಮಾಡುವುದು, 3. ಲಕ್ಷ್ಮೀದೇವಿಯರು, ಬ್ರಹ್ಮದೇವರು, ದೇವತೆಗಳು, ಮತ್ತು ಬ್ರಾಹ್ಮಣರು, ಇವರುಗಳನ್ನು ಸಮರನ್ನಾಗಿ ತಿಳಿಯುವುದು. 4. ವಿಷ್ಣುವಿಗಿಂತಲೂ ಬ್ರಹ್ಮರುದ್ರಾದಿಗಳು ಉತ್ತಮರೆಂದು ಚಿಂತಿಸುವುದೂ ಒಂದು ದ್ವೇಷವು. 5, ಪರಮಾತ್ಮನ ಕೈಕಾಲು ಮೊದಲಾದ ಅವಯುವಗಳಿಗೆ ಭೇದವನ್ನು ಚಿಂತಿಸುವದೂ ಒಂದು ದ್ವೇಷವೆಂದು ಜ್ಞಾನಿಗಳು ಹೇಳಿವರು, 6, ಪರಮಾತ್ಮನ ಅವತಾರಗಳಲ್ಲಿ ಪರಸ್ಪರ ಭೇದವನ್ನು ಹೇಳುವದು, ಮತ್ತು ಬಾಣಾದಿಗಳಿಂದ ಶರೀರಗಳು ಭಿನ್ನ ಭಿನ್ನವಾಯಿತೆಂದು ತಿಳಿಯುವುದು ಒಂದು ದ್ವೇಷವು 7, ಪರಮಾತ್ಮನಿಗೆ ಜನನ ಮರಣಗಳುಂಟೆಂದು ಚಿಂತಿಸುವುದು ದ್ವೇಷ 8, ಪರಮಾತ್ಮನ ಭಕ್ತರ ದ್ವೇಷ, ಮತ್ತು ಪರಮಾತ್ಮನ ವಾಕ್ಯದಲ್ಲಿ ದ್ವೇಷ 9, ಹೀಗೆ ಒಂಭತ್ತು ಬಗೆಯಾದ ದ್ವೇಷಗಳಿಂದ ಕೂಡಿದ ಜನರೇ ಕಲಿಯುಗದಲ್ಲಿ ಕಾಣುವರೇ ಹೊರತು, ಭಕ್ತರು ಕಾಣುವುದಿಲ್ಲವೆಂದು ಶ್ರೀಪರಮಾತ್ಮನು ಗರುಡನಿಗೆ ಹೇಳಿದ ವಾಕ್ಯವು. ಪ್ರಕೃತ ಈ ಒಂಭತ್ತು ವಿಧವಾದ ದ್ವೇಷಗಳಿಗೂ ಆಶ್ರಯನಾಗಿರುವನು ಈ ಕಲಿಯು. ಕಲಿಯನ್ನು ದಿಗ್ವಿಜಯದಲ್ಲಿ, ಪರೀಕ್ಷಿನ್ಮಹಾರಾಜನು ಜಯಿಸಿದಾಗ, ಕಲಿಯ ಪ್ರಾರ್ಥನೆಯ ಮೇರೆಗೆ ಕಲಿಗೆ ವಾಸ ಮಾಡಲು 5 ಸ್ಥಾನಗಳನ್ನು ಕೊಟ್ಟಿದುದಾಗಿ ಭಾಗವತ ಪ್ರಥಮಸ್ಕಂಧದಲ್ಲಿ "ದ್ಯೂತಂ ಪಾನಂ ಸ್ತ್ರೀಯಃ ಸೂನಾಯತ್ರಾಧರ್ಮಾ ಶ್ಚತುರ್ವಿಧಾಃ ॥ ಪುನಶ್ಚ ಯಾಚಮಾನಾಯ ಜಾತರೂಪಮ

ದಾತ್ ಪ್ರಭುಃ"– ಎಲ್ಲಿ ದ್ಯೂತವೋ ಅಲ್ಲಿ ಒಂದು ರೂಪದಿಂದಲೂ, ಎಲ್ಲಿ ಮದ್ಯಪಾನವೋ ಅಲ್ಲೂ, ಎಲ್ಲಿ ವೇಶ್ಯಾಸ್ತ್ರೀಯರೋ ಅಲ್ಲೂ, ಎಲ್ಲಿ ಪಶು ಹಿಂಸೆಯೋ ಅಲ್ಲೂ– ಹೀಗೆ ನಾಲ್ಕು ಅಧರ್ಮಗಳ ಸ್ಥಳಗಳಿಲ್ಲಿ ನೀನು ವಾಸ ಮಾಡೆಂದು ಅಪ್ಪಣೆ ಇತ್ತನು. ಕಲಿಯು ಈ ಸ್ಥಳಗಳು ಸಾಲದೆಂದು ಮತ್ತೂ ಬೇಡಿಕೊಳ್ಳಲು,ಪರೀಕ್ಷಿದ್ರಾಜನು ಎಲ್ಲಿ ಬಂಗಾರವೋ ಅಲ್ಲಿ ನೀನಿರೆಂದು 5ನೆಯ ಸ್ಥಾನವನ್ನು ಕೊಟ್ಟನು. "ತತೋನೃತಂಮದಃ ಕಾಮೋ ರಜೋ ವೈರಂಚ ಪಂಚಮಂ ॥ ಔತ್ತರೇಯೇಣ ದತ್ತಾನಿನ್ಯವಸತ್ತನ್ನಿದೇಶಕೃತ್."– ಉತ್ತರ ಕುಮಾರನಾದ ಪರೀಕ್ಷಿದ್ರಾಜನು ಕೊಟ್ಟ ಸ್ಥಳಗಳಾದ ಇವು 5ರಲ್ಲಿ. 5 ರೂಪ ಗಳಿಂದ ಕಲಿಯು ಅವನ ಅಪ್ಪಣೆಯಂತೆ ವಾಸಮಾಡುತ್ತಿರುವನು. ಎಲ್ಲೆಲ್ಲಿ ಯಾವ ಯಾವ ರೂಪನಾಗಿರುವನೆಂದರೆ,- ಎಲ್ಲಿ ದ್ಯೂತವೋ ಅಲ್ಲಿ ಸುಳ್ಳು ರೂಪನಾಗಿಯೂ, ಎಲ್ಲಿ ಪಾನವೋ ಅಲ್ಲಿ ಮದರೂಪನಾಗಿಯೂ, ಎಲ್ಲಿ ಸ್ತ್ರೀಯರೋ ಅಲ್ಲಿ ಕಾಮರೂಪಿಯಾಗಿಯೂ, ಎಲ್ಲಿ ಪಾಪರೂಪಿಯಾಗಿಯೂ, ಎಲ್ಲಿ ದ್ರವ್ಯವೋ ಅಲ್ಲಿ ಕಲಹರೂಪಿಯಾಗಿಯೂ ವಾಸಮಾಡುತ್ತಿರುವನು. ಆದ್ದರಿಂದ ಒಳ್ಳೆಯದಾಗಬೇಕೆಂದು ಅಪೇಕ್ಷೆಯುಳ್ಳವರು ಇವು ಐದು ವಿಷಯ ಗಳನ್ನು ಸೇವಿಸಬಾರದೆಂದು ಹೇಳಿರುವರು. ಅದೇ ಅಭಿಪ್ರಾಯವನ್ನೇ ದಾಸಾ ರ್ಯರು ಇಲ್ಲಿ ಹೇಳಿರುತ್ತಾರೆ. ಬವರದಲಿ-ಅಂದರೆ, ಯುದ್ಧದಲ್ಲಿ ಎಂದರ್ಥ ವೆಂದು ಕೆಲವರು ಅಭಿಪ್ರಾಯ ಪಟ್ಟಿರುತ್ತಾರೆ. "ಧರ್ಮೋಯುದ್ಧೇವಧೋದ್ವಿ ಷಾಂ"– ಎಂಬ ಭಾಗವತ ವ್ಯಾಖ್ಯಾನುಸಾರ ಯುದ್ಧದಲ್ಲಿ ಶತ್ರುಗಳನ್ನು ಸಂಹರಿ ಸುವುದು ಕ್ಷತ್ರಿಯಧರ್ಮವೆಂದು ಹೇಳಿರುವುದರಿಂದ, ಇಲ್ಲಿ ಬವರ–ಎನ್ನುವುದಕ್ಕೆ ಯುದ್ಧವೆಂದು ಅರ್ಥ ಮಾಡದೆ, ಭಾಗವತ ವ್ಯಾಖ್ಯಾನುಸಾರವಾಗಿ ಯುದ್ಧಕ್ಕೆ ಸಮಾನಾರ್ಥವಾದ "ಸೂನಾ"- ಎಂಬ ಪದವನ್ನು ತೆಗೆದುಕೊಂಡಿರುವೆವು. ಸೂನಾ-ಎಂದರೆ ಹಿಂಸಿಸುವುದೆಂದರ್ಥ. ಅದಕ್ಕೆ ವ್ಯಾಖ್ಯಾನದ ಪಶುಹಿಂಸೆ ಎಂದರ್ಥ ಮಾಡಿರುವರು. ಅದ್ದರಿಂದ ಅದೇ ಅರ್ಥವನ್ನೇ ಇಲ್ಲಿ ಬರೆದಿರು ತ್ತೇವೆ. ಹೀಗೆ ಮಾಡುವುದರಿಂದ, ಭಾಗವತದಲ್ಲಿ ಹೇಳಿದ ಪ್ರಕಾರ ದ್ಯೂತ, ಪಾನ, ಸ್ತ್ರೀಯರು, ಪಶುಹಿಂಸೆ, ದ್ರವ್ಯ-ಎಂಬರ್ಥವು ಸರಿಹೋಗುತ್ತದೆ.

ವೃಷಕನಿ,ಸಿಎಂದರೆ,ಭಾಗವತ ವಾಕ್ಯದಂತೆ ದ್ಯೂತಾದಿ 5 ಸ್ಥಾನಗಳಲ್ಲಿ ಸುಳ್ಳು, ಮೊದಲಾದ 5ರೂಪಗಳಿಂದ ಆವರಿಸಿಕೊಂಡು ಕೆಡಿಸುವನೆಂದರ್ಥ. ಈ ಪದ್ಯ ದಲ್ಲಿ ದ್ಯೂತಾಪೇಯ ವೃಷದೊಳು ಕವಿಸಿ-ಎಂದು ಕೆಲವು ಪುಸ್ತಕಗಳ ಪಾಠ ವಿದೆ. ಕೆಲವು ಪುಸ್ತಕಗಳಲ್ಲಿ "ದ್ಯೂತಾಪೇಯದೊಳು ವೃಷಕವಿಸಿ"- ಎಂದು ಪಾಠವಿದೆ. ವೃಷದೋಳು-ಎಂಬ ಪಾಠಕ್ಕಿಂತಲೂ ವೃಷಕವಿಸಿ- ಎಂಬ ಪಾಠವೇ ಸಾಧುವಾಗಿ ಕಾಣುತ್ತದೆ. ಹೇಗೆಂದರೆ,ಭಾಗವತದಲ್ಲಿ 5 ಸ್ಥಾನವನ್ನೇ ಕಲಿಗೆ ಕೊಟ್ಟುದುದಾಗಿ ಹೇಳಿ, ದ್ಯೂತದಲ್ಲಿ ಸುಳ್ಳುರೂಪಿಯಾಗಿ ಕಲಿ ಇರುವ ನೆಂದು ಹೇಳಿರುತ್ತಾರೆ. ಇದರಿಂದ ಕಲಿಯ ಸ್ವರೂಪವು ಸುಳ್ಳೆಂದು ಹೇಳಿ ದಂತಾಯಿತು. ಸುಳ್ಳೆ ಪಾಪರೂಪವಾದ ಮೇಲೆ ಅದರಲ್ಲಿ ಕಲಿಪ್ರವೇಶ ವೆಂತಹುದು ? ಇದರಂತೆ ಭಾಗವತವಾಕ್ಯ ಪ್ರಕಾರ 5 ಸ್ಥಳಗಳು. ಇಲ್ಲಿ ಅವು 5 ಸರಿ ಹೋಗಿ ಸುಳ್ಳು ಒಂದು ಜಾಸ್ತಿಯಾಗುವುದು. ಆದ್ದರಿಂದ ಸುಳ್ಳು ಮೊದಲಾದ 5 ರೂಪಗಳಿಂದ ದ್ಯೂತಾದಿ 5ರಲ್ಲಿ ಕಲಿಯಿರುವನೆಂಬ ಅರ್ಥವು ಸಮಂಜಸವಾಗಿ ಕಾಣುವುದು. ॥೨೦॥

## ೩. ಭಾವದರ್ಪಣ :-

ಇವನ ಪೋಲುವ ಪಾಪಿ । ನವವಿಧ ದ್ವೇಷಕ್ಕೆ ಸಂಪೂರ್ಣ ಅಧಿಷ್ಠಾನ ನಾದವ ಕಲಿ ಎಂಬರ್ಥ । ನವವಿಧ ದ್ವೇಷೇತಿ । ತದುಕ್ತಂ ಗರುಡಪುರಾಣ ಬ್ರಹ್ಮಕಾಂಡೇ । ಭಕ್ತಿ ಲಕ್ಷಣ । "ಭಕ್ತೇಃ ಸ್ವರೂಪಂ ತವ ವಕ್ಷ್ಯೇ ಖಗೇಂದ್ರ ಯೋ ಜ್ಞಾನಪೂರ್ವ ಪರಮಃ ಸ್ನೇಹ ಏವ ।ನವದ್ವೇಷೈರ್ವಿಧುರಾ ಭಕ್ತಿರುಕ್ತಾ ನವದ್ವೇಷಾನ್ ಶೃಣು ಭದ್ರಂಚ ಸಮ್ಯಕ್ :- 1) ಜೀವಾಭೇದೋ ಹರಿಣಾ ಪ್ರಾಕೃತೇನ ಸ್ವತಂತ್ರೇನ ನಿತ್ಯಂ । ಜ್ಞಾನಾನಂದ್ಯೈರ್ವಿಧುರತ್ವಾಚ್ಚ ವಿಷ್ಣುಃ ಸದಾ ಹರಿರ್ನಿರ್ಗುಣಶ್ಚೇತಿ ಚಿಂತಾ 2) ಸದಾ ಕಾಮ್ಯೈಃ ಪರಿಪೂರ್ಣೈಃ ಹರೌ ಚ ಗುಣೈರಪೂರ್ಣೋ ಹರಿರಿತ್ಯೇವ ಚಿಂತಾ ॥ ಶ್ರೀ ಬ್ರಹ್ಮಾದಿ ದಿವೌಕಸಾ ಸದಾ ತಥಾ ದ್ವಿಜಾನಾಂ ಸಾಮ್ಯತಾಯಾಶ್ಚ ಚಿಂತಾ 3) ವಿಷ್ಣೋಃ ಸಕಾಶಾದ್ಬ್ರಹ್ಮ ರುದ್ರಾದಿಕಾನಾಂ ಸದಾಧಿಕ್ಯಾದೇಶ್ಚಿಂತನ ದ್ವೇಷ ಏವ॥ ವಿಷ್ಣೋರ್ದೇಹೇ ಹಸ್ತ ಪಾದಾದಿಕಾನಾಂ ಭೇದಜ್ಞಾನಂ ದ್ವೇಷಮಾಹುರ್ಮಹಂತಃ 4) ಅವತಾರಾ

ಣಾಂಭೇದ ಭೇದಾದಿಕಂಚ ತಥೋತ್ಪತ್ತೇರ್ಮರಣಸ್ಯಾಪಿ ಚಿಂತಾ । ತದ್ಭಕ್ತಾನಾಂ ದೂಷಣಂ ಚಾಪರಾರ್ಯಾ ಸ್ತದ್ವ್ಯಾಖ್ಯಾನಾಂ ದೂಷಣಂ ದ್ವೇಷ ಏವ 5) ಏವ ದ್ವೇಷೈಃ ಸಂಯುತಾ ಏವ ಲೋಕೇ ಯೇ ದೃಶ್ಯಂತೇ ನತು ಭಕ್ತಾಃ ಕಲೌ ಚೇತಿ."– ಬವರ = ಯುದ್ಧ, ನಟಿಯುವತಿ = ವೇಶ್ಯಾಸ್ತ್ರೀ, ದ್ಯೂತ = ಪಗಡಿ, ಅಪೇಯ = ಮದ್ಯ, ಮೃಷ = ಸುಳ್ಳು, ಇವುಗಳಲ್ಲಿ, ಕವಿಸಿ-ಎಂದರೆ ವ್ಯಾಪಿಸಿ-ಎಂಬರ್ಥ. ಆಕಾರ = ಆಶ್ರಯ. ॥೨೦॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ವಕ್ಷ್ಯಮಾಣಸ್ಥಲೇಷು ಚಿಂತನೀಯ ತತ್ರೋಪಯೋಗಿ ದುರ್ಲಕ್ಷಣಾನಿ "ಹ್ರದೋದರಃ ಲಂಬೀ (ತ್ಕ) ನಾಭಿಃ (ರೇ) ಏಷಾಮಾತ್ರೋಗ್ನಿ ದಂಷ್ಟ್ರಕಃ ॥ ಅಂಧಕೂಪಗಭೀರಾಕ್ಷಃ ಲಂಬಕರ್ಣೋಽಷ್ಟನಾಸಿಕಃ ॥ ದೀರ್ಘಜಂಘಃ ದೀರ್ಘ ಶಿಶ್ನಃ ಏಕಾಂಡೀ ವಕ್ರಸಂಯುತಃ ॥ ರಕ್ತರೋಮಾ ರಕ್ತಶ್ಮಶ್ರುಃ ವಕ್ರಾಸ್ಯಃ ಪಂಚನಾಸಿಕಃ ॥ ದಗ್ಧಪರ್ವತಸಂಕಾಶಃ ವಕ್ರಪೃಷ್ಠಃ ಕಲಿಃ ಸ್ಮೃತಃ ಅಲೋಮ ಮಸ್ತಕಃ ಪ್ರೋಕ್ತಃ ಗಂಡಶೈಲ ಕಪೋಲಕಃ ॥ ಲಲಾಟೇ ಪಾಂಡುರಃ ನಿತ್ಯಂ ವಾಮಸ್ಕಂಧೇ ಕರೇರವಃ । ಕೂರ್ಮದೃಷ್ಟಿಃ ದೋಷವಾದೀ ತಥಾವೈ ಘರ್ಘರ ಸ್ವನಃ ॥ ಅತ್ಯಾಶನ್ಯೋಽತಿ ಪಾನಶ್ಚ ಸ್ತನೌ ಶಿಗ್ರು ಫಲೇ ಯಥಾ ॥ ವಕ್ಷೋ ನವಾಂಕಿಯೋ ರೋಮ್ಣಿ ತಥಾ ಪೃಷ್ಠೇ ಚ ಮಸ್ತಕೇ ॥ ಲಲಾಟೇ ತ್ರೀಣಿ ದೀರ್ಘೈಕಾ ಸಮೌ ದ್ವೌ ಸಂಪ್ರಕೀರ್ತಿತೌ ॥ ಶೂರ್ಪಾಕಾರಃ ಸ್ತನೇ ಮಚ್ಛಃ ತಥಾ ಶಿಶ್ನೇ ಪ್ರಕೀರ್ತಿತಃ ॥ ಪಾದ ತ್ರಾಣ ಸಮೋ ಮಚ್ಛಃ ರಸನಾಗ್ರೇ ಪ್ರಕೀರ್ತಿತಃ ॥ ಶಿಶ್ನಾಕಾರಸ್ತು ಮಚ್ಛಸ್ಯ ಗುದೇ ತಸ್ಯ ಪ್ರದೃಶ್ಯತೇ ॥ ವೃಶ್ಚಿಕಾಕಾರ ಮಚ್ಛಸ್ತು ಪಾದೇ ತಸ್ಯ ಪ್ರದೃಶ್ಯತು ॥ ಶ್ವಾನಾಕಾರಸ್ತು ಮಚ್ಛಶ್ಚ ಗುದೇ ತಸ್ಯ ಪ್ರದೃಶ್ಯತೇ ॥ ಹಸ್ತೇತ. ಬಹು ರೇಖಾಸ್ತು ನಾಸಿಕೇ ದೀರ್ಘ ಲೋಮಕಃ ॥ ಅತಿ ದೀರ್ಘಂತು ಚಾಮುಂಡಂ ಕನಿಷ್ಠಂ ಚಾತಿ ದೀರ್ಘಕಮ್ ॥ ದುರ್ಲಕ್ಷಣಾನ್ಯೇವ ಮಾದ್ಯಾಃ ಕಲೌ ಸಂತಿ ನ ಸಂಶಯಃ ॥ ಇತಿ **ಗಾರುಡೇ** ಚೋಕ್ತಾನಿ ॥ ಬವರ = ಯುದ್ಧಂ ॥ ದ್ಯೂತಂ ॥ ಅಪೇಯಂ=ಮದ್ಯಂ ॥ ಶ್ರೇಯಸ್ಕಾಮಃ ನ ಸೇವೇಚ ನಿತರಾಂ ಆಶ್ರಮೋತ್ತಮೋ ॥ (ಮಃ) ಇತ್ಯುಕ್ತೇಃ ॥೨೦॥

## ಕನ್ನಡಾರ್ಥ

ಮುಂದೆ ಹೇಳಲ್ಪಡುವ ಸ್ಥಳಗಳಲ್ಲಿ ಚಿಂತನ ಮಾಡುವುದಕ್ಕೆ ಕಲಿಯ ದುರ್ಲಕ್ಷಣಗಳನ್ನು ವಿಶದೀಕರಿಸುತ್ತಾರೆ. ಸರೋವರದಂತೆ ಪೃಥು ಲಂಬೋದರನಾಭಿ. ಅತಿ ದೀರ್ಘವಾದ ಕೋರೆಹಲ್ಲುಗಳು. ಹಾಳು ಭಾವಿಯಂತೆ ಗಂಭೀರವಾದ ಕಣ್ಣುಗಳು, ಉದ್ದ ಕಿವಿ, ಲಂಬವಾದ ತುಟಿ-ಹಾಗೂ ಮೂಗುಗಳು. ಉದ್ದವಾದ ಮೊಣಕಾಲಿನ ಪ್ರದೇಶಗಳು. ದೀರ್ಘವಾದ ಶಿಶ್ನ, ಒಂದೇ ಅಂಡ-ಕೆಂಪು ಕೂದಲುಗಳು, ಕೆಂಪು ಮೀಸೆಗಳು, ವಕ್ರಮುಖ, ಅಗಲವಾದ (ಚಪ್ಪಟೆಯಾಕಾರದ) ಮೂಗು, ಸುಟ್ಟ ಬೆಟ್ಟದಂತೆ ತೋರುವುದು. ವಕ್ರವಾದ ಪೃಷ್ಠಭಾಗ. ಮಸ್ತಕದಲ್ಲಿ ಕೂದಲುಗಳೇ ಇಲ್ಲದಿರುವುದು. ಗಂಡಶೈಲದಂತೆ ಕಪೋಲಗಳು. ಲಲಾಟದಲ್ಲಿ ಪಾಂಡುರವರ್ಣ, ಬಿಳಿಯ ಬಣ್ಣ. ಆಮೆಯಂತೆ ನೋಡುವುದು. ಘೋಷೋದ್ಘಾಟನ ಮಾಡುವುದು, ಘರ್ಘರಧ್ವನಿ. ಅತಿ ಭೋಜನ, ಅತಿ ಪಾನ. ಶಿಗ್ರುಫಲದಂತೆ ಸ್ತನಗಳು. ಶೂರ್ಪಾಕಾರವಾದ (ಮೊರದಂತೆ) ಮಚ್ಚೆವು. ಸ್ತನದಲ್ಲಿ ಅದರಂತೆ,ಶಿಶ್ನದಲ್ಲಿ ಪಾದರಕ್ಷೆ. (ಮಚ್ಚೇ ಅಥವಾ ಚಪ್ಪಲಿಯ) ಆಕಾರದ ಮಚ್ಚೆವು ನಾಲಿಗೆಯ ಮೇಲೆ ಶಿಶ್ನಾಕಾರದ ಮಚ್ಚೆವು. ಗುದದಲ್ಲಿ ಚೇಳಿನ ಆಕಾರದ ಮಚ್ಚೆವು ಪಾದದಲ್ಲಿ. ಗುದದಲ್ಲಿ ಶ್ವಾನ (ನಾಯಿ) ಆಕಾರದ ಮಚ್ಚೆ. ಅಂಗೈಯಲ್ಲಿ ಬಹಳ ರೇಖೆಗಳು. ಮೂಗಿನಲ್ಲಿ ಉದ್ದವಾದ ಕೂದಲುಗಳು ಇವೇ ಮುಂತಾದ ದುರ್ಲಕ್ಷಣಗಳನ್ನು **ಗರುಡಪುರಾಣದಲ್ಲಿ** ಹೇಳಲಾಗಿರುತ್ತದೆ.

ಬವರ = ಯುದ್ಧ, ಮದ್ಯ = ದ್ಯೂತಗಳನ್ನು ಶ್ರೇಯೋಭಿಲಾಷೆಯುಳ್ಳವರು ಸರ್ವದಾ ಬಿಡಬೇಕು,- ಎಂದು ಪುರಾಣಗಳಲ್ಲಿ ಉಕ್ತವಾಗಿರುವುದರಿಂದ,ಕಲಿ ನಿವಾಸಿಗಳಾದ ಈ ಸ್ಥಳಗಳನ್ನು ಬಿಡಬೇಕು. ॥೨೦॥

### ೫. ಶ್ರೀಗುರುಹೃದಯ ಪ್ರಕಾಶಿಕೆ :-

ಈ ಕಲಿಗೆ ಸಮರಾದ [illegible]ಲಿಜೀವರು ಮೂರುಲೋಕದಲ್ಲೂ ಇಲ್ಲ.

ಜೀವೇಶ್ವರರಿಗೆ ಅಭೇದ ಹೇಳುವುದು ಒಂದು, ದೇವರು ಗುಣಗಳೂ ಆಕಾರಗಳೂ ಇಲ್ಲದ ಶೂನ್ಯಕ್ಕೆ ಸದೃಶನೆಂದು ಹೇಳುವುದು ಒಂದು, ದೇವರು ಜ್ಞಾನವ್ಯಾಪ್ತಿ-ಮೊದಲಾದ ಎಂಟೇ ಗುಣಗಳು ಉಳ್ಳವನೆಂದು ಹೇಳುವ ಕುತರ್ಕಮತ ಒಂದು, ಬ್ರಹ್ಮಾದಿಗಳೂ ವಿಷ್ಣುವೂ ಸಮರೆಂದು ಹೇಳುವುದು ಒಂದು, ಶಿವಾದಿಗಳು ವಿಷ್ಣುವಿಗಿಂತ ಅಧಿಕರೆಂದು ಹೇಳುವುದು ಒಂದು, ದೇವರ ರಾಮ ಕೃಷ್ಣಾದ್ಯವತಾರರೂಪಗಳಿಗೆ ಭೇದ ಹೇಳುವುದು ಒಂದು, ಪೃಥು ನಾರದಾದಿಗಳನ್ನು ದೇವರ ಅವತಾರವೆಂದು ಹೇಳುವುದು ಒಂದು, ವ್ಯಾಸ-ಕಪಿಲ-ಪರಶುರಾಮಾದಿರೂಪಗಳು- ದೇವರಲ್ಲಿ ಋಷಿ ಎಂದು ಹೇಳುವುದು ಒಂದು, ಯಥಾರ್ಥಜ್ಞಾನಿಗಳಾದ ವಿಷ್ಣುಭಕ್ತರಲ್ಲಿ ದ್ವೇಷ ಒಂದು, ಅವರು ಹೇಳುವ ಯಥಾರ್ಥವಾದ ಶ್ರುತಿ ಸ್ಮೃತಿಗಳನ್ನು ಕಲ್ಪಿತವೆಂದು ದೂಷಿಸುವುದು ಒಂದು ಸಹ-ಒಂಭತ್ತು ಬಗೆ ಹರಿದ್ವೇಷಕ್ಕೆ ಆಕರ, ಎಂವರೆ ಉತ್ಪತ್ತಿ ಸ್ಥಾನದವನು– **ಕಲಿ.** ಬವರವೆಂಬ ಕಲಹದಲ್ಲೂ, ಬಂಗಾರದಲ್ಲೂ, ನಟಿಯುವತಿ ಎಂಬ ವೇಶ್ಯಾಸ್ತ್ರೀಯಲ್ಲೂ, ದ್ಯೂತವೆಂಬ ಜೂಜಿನಲ್ಲೂ, ಅಪೇಯವೆಂಬ ಮದ್ಯದಲ್ಲೂ, ಮೃಷವೆಂಬ ಸುಳ್ಳಿನಲ್ಲೂ, ಮೋಹವೆಂಬ ಅತ್ಯಾಸಕ್ತಿಯನ್ನು ಕವಿಸಿ ಎಂದರೆ, ಹೊಂದಿಸಿ ಕೆಡಿಸುವನು, ಅಂದರೆ, ದುರ್ಗತಿಗೆ ಗುರಿ ಮಾಡುವನು ಎಂದರಿತು-ಹಿಂದೆ ಹೇಳಿದ ಕಲಹಾದಿಗಳನ್ನು ತ್ಯಜಿಸಬೇಕು. ಅಂದರೆ ಬಂಗಾರವನ್ನು ಜೀವನೋಪಯುಕ್ತ ಮಟ್ಟಿಗೆ ಗ್ರಹಿಸಿ, ಅದರಲ್ಲೂ ಅತ್ಯಾಸಕ್ತಿ ಬಿಟ್ಟು, ಮದ್ಯ ವೇಶ್ಯಾ ದ್ಯೂತಾದಿಗಳನ್ನು ಸರ್ವಥಾ ಬಿಡಬೇಕು. ಸುಳ್ಳು ಕಲಹ ಸಜ್ಜನರ ಪ್ರಾಣರಕ್ಷಣೋಪಯುಕ್ತ ಮಟ್ಟಿಗೆ ಗ್ರಹಿಸಿ, ಅಧಿಕ ತ್ಯಜಿಸಬೇಕೆಂದರ್ಥ. ॥೨೦॥

**ಯತ್ಸತಾಂ ಹಿತಮತ್ಯರ್ಥಂ ತತ್ಸತ್ಯಮಭಿಧೀಯತೇ ॥**

**ಸ್ತ್ರೀಷು ನರ್ಮ ವಿವಾಹೇಷು ವೃತ್ತ್ಯರ್ಥೇ ಪ್ರಾಣಸಂಕಟೇ**

**ಗೋಬ್ರಾಹ್ಮಣಾರ್ಥೇ ಆತ್ಮಾರ್ಥೇ ನಾನೃತಂಸ್ಯಾಜ್ಜುಗುಪ್ಸಿತಂ**

ಎಂಬ **ಭಾಗವತ, ಸ್ಥಾನಾನಿ ಕಲಿಯೇ ದದೌ ದ್ಯೂತಂ ಪಾನಂ ಸ್ತ್ರೀಯ**

**ಸ್ಯೂನಾ ಯತ್ರಾಧರ್ಮಶ್ಚತುರ್ವಿಧಃ || ಮನಶ್ಛಯಾ ಚ ಮಾನಾಯ ಜಾತರೂಪಮುದಾದ್ವಿಭುಃ**-ಎಂಬುದೇ ಮೊದಲಾದ **ಭಾಗವತಾರ್ಥವೂ,**

**ಸತ್ತ್ವಂ ರಜಸ್ತಮ ಇತಿ ತ್ರಿಸ್ತ್ರಸ್ಸರನ್ಯನಾರಕಾಃ |**

**ತ್ರತ್ರಾತ್ರೇಕೈಕಶೋ ರಾಜ್ಞ ಭಿದ್ಯತೇ ಗತಯಸ್ತ್ರೀಧಾ-||** ಎಂಬ ದ್ವಿತೀಯಸ್ಕಂದ ಭಾಗವತ ಸಹ ವಿವರಿಸಿತು. ||೨೦||

## ಸರ್ವವ್ಯಾಖ್ಯಾನಸಾರಸಂಗ್ರಹ

ದೈತ್ಯ ವರ್ಗದಲ್ಲಿ **ಕಲಿಯನ್ನು** ಹೋಲುವ ಪಾಪಿಷ್ಠ ಜೀವರು ಮತ್ತೊಬ್ಬರಿಲ್ಲ. ನೀಚತಮನು. ತಮೋಯೋಗ್ಯರಲ್ಲಿ ಅಧಮಾಧಮನು ಕಲಿಗೆ ಸಮಾನ ಸದೃಶರಾದ ಪರಮ ಪಾಪಿಷ್ಠರು ಈ ಬ್ರಹ್ಮಾಂಡಗತ ಹದಿನಾಲ್ಕುಲೋಕಗಳಲ್ಲಿ ಯಾರೂ ಇಲ್ಲವೇ ಇಲ್ಲ.

ಕಲಿಯು **ನವವಿಧ ದ್ವೇಷಗಳಿಗೆ** ಆಶ್ರಯ ಭೂತನಾಗಿ ಸ್ಥಾನಾಪನ್ನನಾಗಿದ್ದಾನೆ.

**ನವದ್ವೇಷಗಳ ವಿವರ :-**

1) ಜೀವರಿಗೂ ಮತ್ತು ಈಶನಿಗೂ ಅಭೇದ ಚಿಂತನೆ ಮಾಡುವುದು.

2) ಪರಬ್ರಹ್ಮನು ನಿರ್ಗುಣ, ನಿರಾಕಾರ, ಶೂನ್ಯ-ಎಂದು ಪ್ರತಿಪಾದಿಸುವುದು.

3) ಬ್ರಹ್ಮಾದಿಗಳು ಶ್ರೀವಿಷ್ಣುವಿಗೆ ಸಮಾನರೆಂದು ಹೇಳುವುದು.

4) ಶಿವಾದಿಗಳಿಗೆ ಸರ್ವೋತ್ತಮತ್ವವನ್ನು ಸಾಧಿಸುವುದು.

5) ಶ್ರೀರಾಮಕೃಷ್ಣಾದ್ಯವತಾರಗಳಲ್ಲಿ ಬೇಧ ಚಿಂತನೆ ಮಾಡುವುದು.

6) ಪೃಥು ನಾರದಾದಿಗಳನ್ನು ಶ್ರೀಹರಿಯ ಅವತಾರವೆಂದು ತಿಳಿಯುವುದು.

7) ವೇದವ್ಯಾಸ-ಕಪಿಲ-ಭೃಗುರಾಮ-ಇವರು ಕೇವಲ ಸಾಮಾನ್ಯ-ಋಷಿಗಳೆಂದು ತಿಳಿಯುವುದು.

8) ನಿಶ್ಚಯಜ್ಞಾನ, ಪಂಚಭೇದ, ತಾರತಮ್ಯ- ಹೇಳುವ ವಿಷ್ಣು ಭಕ್ತರಲ್ಲಿ ದ್ವೇಷ.

9) ಭಗವದ್ಭಕ್ತರು ಮಾಡಿದ ಸ್ಮೃತಿಗಳು, ಪುರಾಣಗಳು ಇತ್ಯಾದಿ ಕೇವಲ ಕಲ್ಪಿತ ಕೃತಿಗಳೆಂದು ದೂಷಿಸುವುದು.

ಮೇಲ್ಕಂಡ ನವವಿಧ ದ್ವೇಷಗಳ ವಿಷಯವು **ಬ್ರಹ್ಮಾಂಡ ಪುರಾಣ ಮತ್ತು ಗರುಡಪುರಾಣದಲ್ಲಿ** ಉಕ್ತವಾಗಿದೆ. ಪ್ರಮಾಣವಾಕ್ಯಗಳನ್ನು **ಭಾವಪ್ರಕಾಶಿಕಾ ವ್ಯಾಖ್ಯಾನದಲ್ಲಿ** ಕೊಡಲಾಗಿದೆ. ಅಲ್ಲಿ ನೋಡಬೇಕೆಂದು ವಿನಂತಿ.

ಕಲಿಯು 1) ಯುದ್ಧದಲ್ಲಿ **(ಬವರಪಲಿ),** ಅಂದರೆ ಅದಕ್ಕೆ ಸಮಾನಾರ್ಥ ಸೂಚಕವಾದ **ಸೂನಾ**-ಎಂದರೆ ಪರಹಿಂಸೆ ಎಂದು ಇನ್ನೊಂದರ್ಥ.- 2) ಚಿನ್ನದ ಮೇಲಿನ ವ್ಯಾಮೋಹ ಮತ್ತು ಆಸೆ. 2) ನಟಿಯರಾದ ವೇಶ್ಯಾಸ್ತ್ರೀಯರಲ್ಲಿ 4) ಜೂಜು **(ದ್ಯೂತ)**. 5) ಪಾನಕ್ಕೆ ಯೋಗ್ಯವಲ್ಲದ ಮಾದಕ ದ್ರವ್ಯಗಳಲ್ಲಿ **(ಅಪೇಯ)** ಹಾಗೂ ತಿನ್ನುವುದರಲ್ಲಿ ಅಯೋಗ್ಯವಾದ ವಸ್ತುಗಳ ಸೇವನೆ **(ಅಭಕ್ಷಣ),** 6) ಸುಳ್ಳು ಮತ್ತು ವಂಚನೆ :- ಈ ದುರ್ವಿಷಯಗಳಲ್ಲಿ ಜನರನ್ನು ಕೆಡವಿ, ಅವುಗಳಲ್ಲಿ ಅವರ ಮನಸ್ಸನ್ನು ಲೀನಗೊಳಿಸಿ, ವಿಷಯಭೋಗಾದಿಗಳಲ್ಲಿ ಮೋಹವನ್ನುಂಟುಮಾಡುವ, ಪರಮ ನೀಚನು **ಕಲಿ** ಎಂದು ಅರಿತು, ಅವನನ್ನು ತೊರೆಯಬೇಕೆಂದು ದಾಸರ ಎಚ್ಚರಿಕೆಯ ಮಾತು. ಅಂದರೆ. ಕಲಿಮಾರ್ಗವನ್ನು ತ್ಯಜಿಸಬೇಕೆಂದು ತಿಳಿಸುತ್ತಾರೆ. ॥೨೦॥

**

## ಪದ್ಯ-೨೧

**ಮೂಲ :-**

ತ್ರಿವಿಧಜೀವ ಪ್ರತತಿಗಳ ಸ ।
ಗ್ಗವೊಳಿಯಾಣ್ಮಾಲಯನು ನಿರ್ಮಿಸಿ ।
ಯುವತಿಯರ ಒಡಗೂಡಿ ಕ್ರೀಡಿಸುವನು ಕೃಪಾಸಾಂದ್ರ ॥
ದಿವಿಜ ದಾನವ ತಾರತಮ್ಯದ ।
ವಿವರ ತಿಳಿವ ಮಹಾತ್ಮರಿಗೆ ಬಾ ।
ನ್ನವಿರಸಖ ತಾನೊಲಿದು ಉದ್ಧರಿಸುವನು ಭವದಿಂದ ॥ ॥೨೧॥

**ಅವತರಣಿಕೆ :-**

ದೇವ ದೈತ್ಯರಲ್ಲಿರುವ ತಾರತಮ್ಯ ಸಂಬಂಧವಾಗಿ ಜ್ಞಾನವನ್ನು ಹೊಂದಿದವರನ್ನು ಕರುಣಾಸಮುದ್ರನಾದ ಶ್ರೀಹರಿಯು ತಾನೊಲಿದು ಉದ್ಧರಿಸುವನೆಂದು-ತಿಳಿಸಿರುತ್ತಾರೆ. ॥೨೧॥

**ಪ್ರತಿಪದಾರ್ಥ :-**

**ತ್ರಿವಿಧಜೀವ ಪ್ರತತಿಗಳ** = ಸಾತ್ವಿಕರು- ರಾಜಸರು- ತಾಮಸರು ಎಂಬ ಮೂರು ಪ್ರಕಾರವಾದ ಜೀವಸಮೂಹಗಳನ್ನು, **ಸಗ್ಗವೊಳಿಯ** = ಸ್ವರ್ಗದ ನದಿ, ಅಂದರೆ ದೇವನದಿಯಾದ ಗಂಗೆಯನ್ನು (ಸಗ್ಗ + ಹೊಳೆ) **ಆಣ್ಮ** =ಆಳುವ, ಅಂದರೆ ಗಂಗಾಪತಿಯಾದ ವರುಣನನ್ನೇ, **ಆಲಯನು** = ಮನೆಯಾಗಿ ಉಳ್ಳ, ಅಂದರೆ ಕ್ಷೀರಸಮುದ್ರಶಾಯಿಯಾದ ಶ್ರೀಮನ್ನಾರಾಯಣನು, **ಶ್ರೀಸಂಕರ್ಷಣ ಒಡೆಯರ ಪುಸ್ತಕದಲ್ಲಿ-ಸಂಘಾವಳಿಯ.- ಎಂದು ಕೊಟ್ಟಿರುತ್ತಾರೆ. ಇದರ ಅರ್ಥ-ಸಂಘ-ಗುಂಪು. ಆವಳಿ-ಸಮೂಹ**

ಏಕಾರ್ಥವಾಗುವುದು. ಸಂಘಾವಳಿಯ-ಎಂದರೆ, ತ್ರಿವಿಧಜೀವರ ಸಮೂಹದ ಪಂಕ್ತಿ–ಎಂದು ಅರ್ಥ ಮಾಡಿದ್ದಾರೆ. ಆಲಯ–ಅಂದರೆ, ಆಯಾಯಾ ಜೀವರ ದೇಹಗಳನ್ನು (ಸಾತ್ತ್ವಿಕಾದಿ) ನಿರ್ಮಿಸಿ–ಎಂದು ಅರ್ಥೈಯಿಸಿದ್ದಾರೆ), **ನಿರ್ಮಿಸಿ** = ಸೃಷ್ಟಿಗೆ ತಂದು, **ಯುವತಿಯರ ಒಡಗೂಡಿ** = ಶ್ರೀ–ಭೂ–ದುರ್ಗಾರೂಪಳಾದ ಶ್ರೀಲಕ್ಷ್ಮೀದೇವಿಯರಿಂದ ಸಹಿತನಾಗಿ. **ಕೃಪಾ ಸಾಂದ್ರ** = ಕರುಣಾಸಾಗರನಾದ ಶ್ರೀಹರಿಯು, **ಕ್ರೀಡಿಸುವನು** = ರಮಣ ಮಾಡುವನು. **ದಿವಿಜ** = ದೇವತೆಗಳ, **ದಾನವ** = ದೈತ್ಯರ, **ತಾರತಮ್ಯದ** = ತಾರತಮ್ಯಕ್ರಮದ, **ವಿವರವ ತಿಳಿವ** = ವಿವರಗಳನ್ನು ತಿಳಿದಿರುವ, **ಮಹಾತ್ಮರಿಗೆ** = ಭಕ್ತಮಹಾಶಯರಿಗೆ, **ಜಾನ್ನಿವಿರದಸಖ** = ವ್ಯೋಮಕೇಶನಾಮಕರಾದ ರುದ್ರದೇವರ ಸಖನಾದ ಶ್ರೀಹರಿಯು (ಜಾನ್ = ಆಕಾಶ. ನವಿದ = ರೋಮ), **(ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ ಜಾನ್ಹವಿಸಖ**-ನೆಂದು ಹೇಳಿದ್ದಾರೆ), **ತಾನೊಲಿದು** = ತಾನೇ ಅನುಗ್ರಹಿಸಿ, **ಭವದಿಂದ** = ಸಂಸಾರದಿಂದ, **ಉದ್ಧರಿಸುವನು** = ದಾಟಿಸಿ ಸಂರಕ್ಷಿಸುವನು. ॥೨೦॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಪೂರ್ವೋಕ್ತಪ್ರಕಾರ, ತಾರತಮ್ಯ ತಿಳಿದವರನ್ನ ಶ್ರೀಪರಮಾತ್ಮ ಉದ್ಧಾರ ಮಾಡತಾರೆಂತ ಹೇಳತಾರೆ.

ಜೀವರುಗಳ ಸಮೂಹವು ಸಾತ್ತ್ವಿಕಾದಿ ಬೇಧೇನ ಮೂರು ಪ್ರಕಾರ. ಪ್ರಕರ್ಷೇಣ ಸಾತ್ತ್ವಿಕ ಸಮೂಹ ಒಂದು, ರಾಜಸ ಸಮೂಹ ಒಂದು, ತಾಮಸ ಸಮೂಹ ಒಂದು. ಈ ಪ್ರಕಾರ ತ್ರಿವಿಧ ಸಮೂಹಗಳೆಂಬ ಪಂಕ್ತಿಗಳ ವ್ಯವಸ್ಥೆಯಿಂದ ಪೂರ್ವೋಕ್ತ ಪ್ರಕಾರ ಸತ್ತ್ವಾದಿಗುಣಗಳಿಂದ ದೇಹಗಳ

ನಿರ್ಮಾಣಮಾಡಿ, ಪತ್ನೀರಿಂದ ಕೂಡಿಕೊಂಡವನಾಗಿ, ಕೃಪಾಸಮುದ್ರನಾದ ಶ್ರೀಪರಮಾತ್ಮ ಅವರವರ ಸ್ಥೂಲದೇಹೇಂದ್ರಿಯಾದಿಗಳಲ್ಲಿದ್ದು, ಆಟಗಳ ಆಡೋಳವನಾಗತಾನೆ. ದೇವ ದೈತ್ಯರ ನಿತ್ಯಸಂಸಾರಿಗಳ ತಾರತಮ್ಯದ ಕ್ರಮ ವನ್ನು ಚಂದಾಗಿ ಭಕ್ತಿಪೂರ್ವಕ ತಿಳಿದು,ಅನುಷ್ಠಾನ ಮಾಡತಕ್ಕ ತನ್ನ ಭಕ್ತರಾದ ವರಿಗೆ ಭಾಗೀರಥೀದೇವಿಗೆ ಸ್ನೇಹಿತನಾದ ತ್ರಿವಿಕ್ರಮಾಹ್ವಯನಾದ ಶ್ರೀವಾಸು ದೇವರು ತಾನಾಗಿಯೇ ಒಲಿದಂಥವನಾಗಿ, ಸಂಸಾರಸಮುದ್ರದಿಂದ ದಾಟಿಸಿ, ಮುಕ್ತರನ್ನಾಗಿ ಮಾಡಿ ಸ್ವರೂಪಾನಂದವನ್ನು ಉಣಸತಾನಂತ ತಾತ್ಪರ್ಯ. ॥೨೧॥

## ೨. ಭಾವಪ್ರಕಾಶಿಕೆ :–

ದೇವನದಿಯಾದ ಗಂಗೆಗೆ ಪತಿಯಾದ ವರುಣನು ಸಮುದ್ರಾಭಿಮಾನಿ ಯಾದುದರಿಂದ ಸಮುದ್ರನೆಂದು ವ್ಯವಹಾರ. ಎಲ್ಲಾ ಸಮುದ್ರಾತ್ಮಕನು ವರುಣನೇ. ಕ್ಷೀರಸಮುದ್ರದಲ್ಲಿರುವ ಶ್ವೇತದ್ವೀಪದಲ್ಲಿ ವಾಸಮಾಡುತ್ತಿರುವ ಶ್ರೀಹರಿಯು ಈ ಪ್ರಕಾರ ಮೂರುವಿಧ ಜೀವ ಸಂಘಗಳನ್ನು ಸೃಷ್ಟಿಸಿ, ಶ್ರೀ, ಭೂ, ದುರ್ಗೆಯರಿಂದೊಡಗೂಡಿ,ಲೀಲೆಗಳನ್ನು ಮಾಡುತ್ತಿರುವನು. ಆಕಾಶ ಕೇಶವುಳ್ಳವರು ರುದ್ರದೇವರು, ವ್ಯೋಮಕೇಶನೆಂದು- ಸಂಸ್ಕೃತದಲ್ಲಿರುವ ವಾಕ್ಯವನ್ನೇ ದಾಸಾರ್ಯರು **ಬಾನ್ನವಿರ** ಎಂದು ಕನ್ನಡದಲ್ಲಿ ಹೇಳಿರುವರು. ರುದ್ರ ಸಖನಾದ ಶ್ರೀಹರಿಯು, ದೇವ ದೈತ್ಯರ ತಾರತಮ್ಯವನ್ನು ತಿಳಿದು ಉಪಾಸನೆ ಮಾಡುವ ಮಹಾತ್ಮರಿಗೆ ಒಲಿದು, ಅವರನ್ನು ಸಂಸಾರದಿಂದ ಉದ್ಧಾರಮಾಡು ವನು. ॥೨೧॥

## ೩. ಭಾವದರ್ಪಣ :–

ತ್ರಿವಿಧೇತಿ । ತ್ರಿವಿಧಜೀವಸಮೂಹಗಳನ್ನ ಸಗ್ಗವಳೆಯಾಳ್ವಾಲಯನು, ಸಗ್ಗ = ಸ್ವರ್ಗ ಪಳೆಯಾ = ಹೊಳೆಯನ್ನು-ಭಾಗೀರಥಿಯನ್ನು ಆಳ್ವಾ-ಆಳ ತಕ್ಕಂಥಾ ಸಮುದ್ರನಾಥನೇ, ಆಲಯ = ಮನೆಯಾಗಿ ಉಳ್ಳಂಥ ಪರ

ಮಾತ್ಮನು. ಯುವತಿಯರ ಒಡಗೂಡಿ = ಶ್ರೀ, ಭೂ, ದುರ್ಗಾ,-ಇವರಿಂದ ಕೂಡಿಕೊಂಡು ಕ್ರೀಡಿಸುವನು = ವಿಹಾರ ಮಾಡುವನು ಎಂಬರ್ಥ. ಬಾನ್ನವಿರಸಖ, ಬಾನ್ನ =ಆಕಾಶ, ನವಿರ = ಕೇಶ, ಎಂದರೆ ವ್ಯೋಮಕೇಶ = ರುದ್ರ. ಈತಗೆ ಸಖ ಎಂಬರ್ಥ. ॥೨೦॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

ತ್ರಿವಿಧ ಇತಿ ॥ ಸಗ್ಗವೊಳೆ-ಸರಸ್ವತೀ ॥ ಆಣ್ಮ = ಬ್ರಹ್ಮ ॥ ಆಲಯ - ಬ್ರಹ್ಮಾಂಡ ॥ ಬಾನ್ನವಿರ-ವ್ಯೋಮಕೇಶೇ ॥೨೦॥

## ಕನ್ನಡಾರ್ಥ

"ಸಗ್ಗವೊಳೆಯಾಣ್ಮಾಲಯ"- ಸಗ್ಗವೊಳೆ-ಸರಸ್ವತಿ ಆಣ್ಮ = ಅವಳಿಗೆ ಪತಿಯಾದ ಚತುರ್ಮುಖ. ಅವನ ಆಲಯ-ಬ್ರಹ್ಮಾಂಡ. "ಬಾನ್ನವಿರ"- ಆಕಾಶಕೇಶನಾದ ರುದ್ರದೇವರು ಎಂದು ಅರ್ಥ. ದೇವ ದೈತ್ಯರ ತಾರತಮ್ಯದ ಜ್ಞಾನವು ಅತ್ಯಾವಶ್ಯಕವೆಂದು ಫಲನಿರೂಪಣೆಯೊಡನೇ ನಿರೂಪಿಸುತ್ತಾರೆ. ॥೨೦॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ಈ ತಾರತಮ್ಯಜ್ಞಾನಫಲವನ್ನು ಮೂರು ಪದ್ಯದಿಂದ ವಿವರಿಸುತ್ತಾರೆ. ತ್ರಿವಿಧ-ಎಂದು ಮೊದಲು ಮಾಡಿ. ಹೀಗೆ ಸತ್ತ್ವ ರಜ ತಾಮಸವೆಂಬ ತ್ರಿವಿಧ ಜೀವಸಮೂಹಗಳನ್ನು ಸಗ್ಗವೊಳೆ-ಎಂಬ ದೇವ ಗಂಗೆಗೆ ಆಣ್ಮನೆಂದರೆ(ಆಳುವ)-ಅಧಿಪತಿ ಸಮುದ್ರನೇ- ಆಲಯವೆಂಬ ಮನೆಯಾಗುಳ್ಳ ದೇವರು ನಿರ್ಮಿಸಿ, ಯುವತಿ ಎಂಬ ತನ್ನ ಸ್ತ್ರೀಯಾದ ಲಕ್ಷ್ಮಿಯಿಂದ ಕೂಡಿ ವಿಹರಿಸುವನು. ತ್ರಿವಿಧರರಿಗೂ ಸ್ವಯೋಗ್ಯಗತಿ ಕೊಡುವುದರಿಂದ ದೇವರು ಕೃಪಾಪೂರ್ಣನೆಂದು ತಿಳಿದು, ದೇವ ದಾನವರ ತಾರತಮ್ಯವಿವರವನ್ನು ತಿಳಿದ ಮಹಾತ್ಮರಿಗೆ ಬಾನ್ ಎಂಬ ಆಕಾಶವೇ ನವಿರೆಂಬ ರೋಮವಾಗುಳ್ಳ- ಅಂದರೆ, ವ್ಯೋಮಕೇಶನೆಂದು ಹೆಸರುಳ್ಳ,ರುದ್ರದೇವರಿಗೆ ಸಖನಾದ ಶ್ರೀಹರಿ, ತಾನಾಗಿ ಒಲಿದು,ಭವವೆಂಬ ಸಂಸಾರಬಂಧದಿಂದ ಉದ್ಧರಿಸುವನು. ॥೨೦॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜೀವಗಣದಲ್ಲಿ ಸಾತ್ತ್ವಿಕರು–ರಾಜಸರು–ತಾಮಸರು–ಎಂದು- ಮೂರು ಪ್ರಕಾರವಿದೆ. ಜೀವರ ಈ ತ್ರೈವಿಧ್ಯವು ಅನಾದಿ ಮತ್ತು ನಿತ್ಯ. ಜೀವರ ಸ್ವರೂಪದೇಹ ದೇವರಿಂದ ಸೃಷ್ಟಿವಾದದ್ದಲ್ಲ. ಸರ್ವಶಕ್ತನಾದ ಶ್ರೀಹರಿಯು ಬಿಂಬರೂಪದಿಂದ ಸ್ವರೂಪಗತ ಅನಾದಿಸ್ವಭಾವವನ್ನು ಅಭಿವ್ಯಕ್ತಗೊಳಿಸುವನು. 'ಇದೇ ಸತ್ಯಸಂಕಲ್ಪನ ವ್ಯಾಪಾರ.' ಪ್ರತತಿ–ಎಂದರೆ, ಸಮೂಹ ಅಥವಾ ಗುಂಪು–ಎಂದರ್ಥ.

ಸಗ್ಗ–ಎಂದರೆ ಸ್ವರ್ಗ (ಸ್ವರ್ಗ–ತತ್ಸಮ. ಸಗ್ಗ–ಅದರ ತದ್ಭವರೂಪ) ಪೊಳೆ–ಎಂದರೆ ಹೊಳೆ ಅಥವಾ ನದಿ ಎಂದರ್ಥ. ತ್ರಿವಿಕ್ರಮನ ವಾಮ ಪಾದಾಂಗುಷ್ಠನಖಾಗ್ರದಿಂದ ಬ್ರಹ್ಮಾಂಡದ ಖರ್ಪರ ಸೀಳಿ, ರಂಧ್ರದ ದ್ವಾರಾ ಗಂಗಾವತರಣವಾಯಿತು. ಸ್ವರ್ಗದಲ್ಲಿ ಹರಿಯುವ ಗಂಗೆಗೆ ಸ್ವರ್ಗನದೀ (ಅಮರ ತರಂಗಿಣೀ) ಎಂದು ಹೆಸರು. ಇದನ್ನೇ ದಾಸರಾಯರು **ಸಗ್ಗವೊಳೆ**–ಎಂದಿದ್ದಾರೆ. ಆಣ್ಮ–ಎಂದರೆ, ಆಳುವ ಅಥವಾ ಪತಿ- ಎಂದರ್ಥವಾಗುವುದು. ಅಂದರೆ ಗಂಗಾಪತಿ-ಎಂಡರ್ಥ. ಗಂಗಾರಮಣನು ವರುಣನು. ಅವನೇ ಸಮುದ್ರಾಭಿಮಾನಿ ದೇವತಾ, ಆಲಯನು–ಎಂದರೆ. ಕ್ಷೀರಸಮುದ್ರವನ್ನೇ ಮಂದಿರವನ್ನಾಗಿ ಮಾಡಿಕೊಂಡಿರುವ ಶ್ರೀಮನ್ನಾರಾಯಣ- ಎಂದರ್ಥವಾಗುವುದು. ಇದನ್ನೇ ದಾಸವರ್ಯರು **ಸಗ್ಗವೊಳೆಯಣ್ಮಾಲಯ**- ಎಂದಿದ್ದಾರೆ. **(ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದಲ್ಲಿ** ಮೂಲ ಪದ್ಯದಲ್ಲಿ–**ಸಂಘವಳಿಯ ಆಲಯ** –ಎಂದು ಮುದ್ರಿತವಾಗಿದೆ. ಸಂಘ–ಎಂದರೆ, ಗುಂಪು, ಆವಳಿ–ಎಂದರೂ ಗುಂಪು, ಸಮೂಹ ಎಂದರ್ಥವಾಗುವುದು. ಏಕಾರ್ಥ ಪ್ರಯೋಗವಾಗುವುದು. ಈ ಶಬ್ದದ ಅರ್ಥವನ್ನು–ತ್ರಿವಿಧಜೀವರ ಸಮೂಹದ ಪಂಕ್ತಿ-ಎಂದರ್ಥ ಮಾಡಿದ್ದಾರೆ. ಆಲಯ–ಎಂಬ ಶಬ್ದಕ್ಕೆ ಸಾತ್ವಿಕಾದಿ ದೇಹಗಳನ್ನು ನಿರ್ಮಿಸಿ, ಆ ದೇಹೇಂದ್ರಿಯಗಳಲ್ಲಿ ಕ್ರೀಡಿಸುವನು ಎಂದು-ಅರ್ಥೈಸಿದ್ದಾರೆ.)

ಮೂಲಪ್ರಕೃತಿಗೆ ಅಭಿಮಾನಿಯಾದ ಚಿತ್ಪ್ರಕೃತಿರೂಪಳಾದ ಮಹಾಲಕುಮಿ, ಶ್ರೀ–ಭೂ–ದುರ್ಗಾರೂಪಗಳಿಂದ ಕ್ರಮವಾಗಿ ಪ್ರಕೃತಿಯ ಸಹಜ ಧರ್ಮಗಳಾದ ಸತ್ತ್ವ–ರಜ–ತಮ–ಗುಣತ್ರಯಗಳಿಗೆ ಅಭಿಮಾನಿಯಾಗಿದ್ದಾಳೆ. ಶ್ರೀ ಭೂ ದುರ್ಗಾ-ಎಂಬ ರೂಪತ್ರಯಾತ್ಮಕಳಾದ ಶ್ರೀಲಕ್ಷ್ಮೀದೇವಿಯಿಂದ ಸಹಿತನಾಗಿ–ಅಂದರೆ. **ಯುವತಿಯರ ಒಡಗೂಡಿ.** ಜೀವರ ವಿವಕ್ಷಾ ಪರಮಕರುಣಾಮಯನಾದ ಶ್ರೀಹರಿಯು, ತ್ರಿವಿಧಜೀವರ ಸ್ವರೂಪದೇಹ, ಸ್ಥೂಲದೇಹಗತ ಇಂದ್ರಿಯಗಳಲ್ಲಿ ಕ್ರೀಡಿಸುವನು-ಅಂದರೆ, ರಮಣಮಾಡುತ್ತಾನೆ. (ಜೀವಕೃತ ಕರ್ಮಗಳನ್ನು ಮಾಡಿ ಮಾಡಿಸುತ್ತಾನೆ).

ಹೀಗೆ ದೇವತಾವರ್ಗದಲ್ಲಿ ಹಾಗೂ ದೈತ್ಯಗಣದಲ್ಲಿ ಅನಾದಿಯಿಂದ ಸಿದ್ಧವಾಗಿರುವ ತಾರತಮ್ಯದ ವಿವರಗಳನ್ನು ತಿಳಿದ ಭಗವದ್ಭಕ್ತರೇ **ಮಹಾತ್ಮರು.**

**ಬಾನ್ನವಿರಸಖ**–ಎಂಬ ಶಬ್ದ ಪ್ರಯೋಗವಿದೆ. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನದ ಮೂಲಪದ್ಯದಲ್ಲಿ. **ಜಾಹ್ನವಿ ಸಖ**–ಎಂದು ಮುದ್ರಿತವಾಗಿದೆ. ಉಳಿದ ಎಲ್ಲಾ ವ್ಯಾಖ್ಯಾನಗಳಲ್ಲಿಯೂ **ಬಾನ್ನವಿರಸಖ**–ಎಂದಿದೆ. ಬಾನು–ಎಂದರೆ ಆಕಾಶ (ವ್ಯೋಮ). ನವಿರು–ಎಂದರೆ ಕೂದಲು (ಕೇಶ) ಬಾನ್ + ನವಿರ್ = ಬಾನ್ನವಿರ್. ಅಂದರೆ **ವ್ಯೋಮಕೇಶನೆಂದು** ಖ್ಯಾತರಾದ ಮಹಾರುದ್ರದೇವರೆಂದು ಅರ್ಥವಾಗುವುದು. ಶ್ರೀಹರಿಗೆ ದ್ವಿತೀಯಾಂಗಭೂತರಾದ, ವೈಷ್ಣವೋತ್ತಮರಾದ ಶ್ರೀರುದ್ರದೇವರಿಗೆ ಶ್ರೀಹರಿಯು ಸಖನು. ಅಂದರೆ, ಬಾನ್ನವಿರ ಸಖ–ನೆಂದರೆ ರುದ್ರಮಿತ್ರನಾದ ಶ್ರೀಮನ್ನಾರಾಯಣನು. ಶ್ರೀಸಂಕರ್ಷಣಒಡೆಯರ ಅರ್ಥದಂತೆ ಜಾಹ್ನವೀ–ಎಂದರೆ ಗಂಗಾನದಿ. ಜಾಹ್ನವೀ ಸಖ–ಎಂದರೆ ಗಂಗಾಸಖನೆಂದಾಗುತ್ತದೆ. ಗಂಗೆಯು ಶ್ರೀಹರಿಯು ಪಾದೋದ್ಭವೆ' ಸಖ–ಎಂಬ ಶಬ್ದವನ್ನು ಸಂಬಂಧ- ಎಂದಿಟ್ಟು- ಕೊಂಡರೆ ಜಾಹ್ನವೀಸಖ–ನೆಂದರೆ ಗಂಗಾಪಿತನಾದ ಶ್ರೀ ತ್ರಿವಿಕ್ರಮನು–ಎಂದು ದೂರಾನ್ವಯ ಮಾಡಿಕೊಳ್ಳಬಹುದು.

ದಿವಿಜ ದಾನವರ ತಾರತಮ್ಯವನ್ನು ಗುರೂಪದೇಶದ್ವಾರಾ ಹಾಗೂ ಸಚ್ಛಾಸ್ತ್ರ ಅಧ್ಯಯನ ದ್ವಾರಾ ತಿಳಿದ ಮಹಾತ್ಮರನ್ನು ಕೃಪಾಸಾಂದ್ರನಾದ ತಾನೇ ಒಲಿದು, ಅವರನ್ನು ಸಂಸಾರವೆಂಬ ದುಸ್ತರವಾದ ಸಾಗರದಿಂದ (ಭವದಿಂದ) ದಾಟಿಸಿ, ಲಿಂಗಭಂಗ ದ್ವಾರಾ ಕರ್ಮಬಂಧನ ಬಿಡಿಸಿ, ಮೋಕ್ಷಾನಂದವನ್ನಿತ್ತು ಉದ್ಧರಿಸುವನು. ॥೨೦॥

❋❋

## ಪದ್ಯ-೨೨

**ಮೂಲ :–**

**ದೇವ ದೈತ್ಯರ ತಾರತಮ್ಯವು ।**
**ಪಾವಮಾನಿಮತಾನುಗರಿಗಿದು ।**
**ಕೇವಲಾವಶ್ಯಕವು ತಿಳಿವುದು ಸರ್ವಕಾಲದಲಿ ॥**
**ದಾವಶಿಖಿ ಪಾಪಾಟವಿಗೆ ನವ ।**
**ನಾವೆಯೆನಿಪುದು ಭವಸಮುದ್ರಕೆ ।**
**ಪಾವಟಿಗೆ ವೈಕುಂಠಲೋಕಕಿದೆಂದು ಕರೆಸುವುದು ॥ ॥೨೨॥**

**ಅವತರಣಿಕೆ :–**

ದೇವತಾಗಣ ಹಾಗೂ ದೈತ್ಯರ ಸಮೂಹ–ಇವರಲ್ಲಿರುವ ತಾರತಮ್ಯದ ಜ್ಞಾನ-ಮುಕ್ತಿ ಮಾರ್ಗಕ್ಕೆ ಅತ್ಯಗತ್ಯ–ಎಂದು ತಿಳಿಸುತ್ತಾರೆ. ॥೨೨॥

**ಪ್ರತಿಪದಾರ್ಥ :-**

**ದೇವ ದೈತ್ಯರ ತಾರತಮ್ಯವು** = ದೇವತಾಗಣದಲ್ಲಿಯೂ ಮತ್ತು ದೈತ್ಯರ ಸಮುದಾಯದಲ್ಲಿಯೂ ನಿತ್ಯವಾಗಿರುವ ತಾರತಮ್ಯವನ್ನು, **ಪಾವಮಾನಿಮತಾನುಗರಿಗೆ** = ಶ್ರೀವಾಯ್ವಂಶಸಂಭೂತರಾದ ಶ್ರೀಮನ್ಮಧ್ವಮುನಿಗಳ ಮತಾವಲಂಬಿಗಳಿಗೆ, **ಕೇವಲಾವಶ್ಯಕವು** = ಅತ್ಯಗತ್ಯವಾಗಿ ಬೇಕೇ ಬೇಕು, **ಸರ್ವ ಕಾಲದಲಿ** = ಎಲ್ಲಾ ಕಾಲಗಳಲ್ಲಿಯೂ (ಸೃಷ್ಟಿ ಪೂರ್ವ -ಸೃಷ್ಟಿಯ ನಂತರ-ಮೋಕ್ಷ ಸ್ಥಿತಿಯಲ್ಲಿ), **ತಿಳಿವುದು** = ತಿಳಿಯತಕ್ಕದ್ದು ಅತ್ಯಗತ್ಯವು. **ಪಾಪಾಟವಿಗೆ** = ಈ ತಾರತಮ್ಯಜ್ಞಾನವು ಪಾಪಗಳೆಂಬೋ ಅರಣ್ಯಕ್ಕೆ (ಪಾಪ + ಅಟವಿ), **ದಾವಶಿಖಿ** = ಕಾಡ್ಗಿಚ್ಚು (ದಾವಾಗ್ನಿ. ದಾವ-ಅರಣ್ಯವನ್ನು ದಹಿಸುವ, ಶಿಖಿ-ಅಗ್ನಿ), **ಭವ ಸಮುದ್ರಕೆ** = ಸಂಸಾರವೆಂಬ ದುಸ್ತರವಾದ ಸಮುದ್ರಕ್ಕೆ, **ನವ ನಾವೆಯೆನಿಪುದು** = ನೂತನವಾದ ನಾವೆ-ಎಂತ ಕರೆಯಿಸುವುದು. **ವೈಕುಂಠಲೋಕಕೆ** = ಮುಕ್ತಿಸ್ಥಾನವಾದ ವೈಕುಂಠಲೋಕಕ್ಕೆ, **ಪಾವಟಿಗೆ** = ಸೋಪಾನ (ಮೆಟ್ಟಿಲು), **ಎಂದು ಕರೆಸುವುದು** = ಎಂದು ಕರೆಯಿಸುವುದು. ॥೨೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ತಾರತಮ್ಯಜ್ಞಾನದ ಮಹಾತ್ಮ್ಯ ಹೇಳತಾರೆ.

ದೇವ ದೈತ್ಯರ ತಾರತಮ್ಯವೆಂಬುವುದು, ಶ್ರೀವಾಯ್ವಂಶರಾದ ಶ್ರೀ ಮಧ್ವಾಚಾರ್ಯರ ಮತದಲ್ಲಿರತಕ್ಕವರಿಗೆ ಅವಶ್ಯ ತಿಳಕೋಬೇಕಾದ ವಿಷಯವು. ಈ ತಾರತಮ್ಯಜ್ಞಾನ ತಿಳಕೊಂಬೋದರಿಂದ ಆಗತಕ್ಕ ಪ್ರಯೋಜನವೇನೆಂದರೆ, ಪಾಪವೆಂಬೋ ಅಡವಿಗೆ ದಾವಾಗ್ನಿಯು, ಕಾಡ್ಗಿಚ್ಚು, ಸಂಸಾರವೆಂಬ ಸಮು

ದ್ರಕ್ಕೆ ನೂತನವಾದ ನಾವೆ-ಎಂತ ಕರಸತದೆ. ಮುಕ್ತನಾಗಿ ವೈಕುಂಠಲೋಕ ಪ್ರವೇಶಕ್ಕೆ ಸೋಪಾನ-ಇದು ಎಂತ ಎನಿಸೋದಾಗತದೆ.

**ತಾರತಮ್ಯಂ ತತೋಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ ।**

**ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ಕಥಂಚನ ॥**

ಎಂತ **ನಿರ್ಣಯೋಕ್ತಿ** ಇರುವದ್ದರಿಂದ, ತಾರತಮ್ಯಜ್ಞಾನ ಪಾಪವನ್ನು ಸುಡತಕ್ಕದ್ದು, ಸಂಸಾರಸಮುದ್ರ ದಾಟಿಸತಕ್ಕದ್ದು, ವೈಕುಂಠಲೋಕಕ್ಕೆ ಸೋಪಾನ-ಎಂತ ಕರಸತಕ್ಕದ್ದು. ಆದ್ದರಿಂದ ಸದಾ ಸರ್ವಕಾಲದಲ್ಲಿ ಅನು ಸಂಧಾನವಿರಬೇಕು. ॥೨೨॥

**೨. ಭಾವಪ್ರಕಾಶಿಕೆ :–**

ಈ ಸಂಧಿಯಲ್ಲಿ ಹೇಳಿದ ದೇವದೈತ್ಯರ ತಾರತಮ್ಯ ಜ್ಞಾನವು, ಮಧ್ವ ಮತಾವಲಂಬಿಗಳಿಗೆ ಪರಮ ಆವಶ್ಯಕವೆಂದು ಮಧ್ವಾಚಾರ್ಯರ ವಾಕ್ಯವೇ ಇರುವುದು. ಪಂಚಭೇದ ಜ್ಞಾನವು, ತಾರತಮ್ಯಜ್ಞಾನವು ಇಲ್ಲದೆ ಮುಕ್ತಿಯಿಲ್ಲವೆಂಬ ವಿಷಯದಲ್ಲಿ ಶ್ರೀಮಧ್ವಾಚಾರ್ಯರು ಉದಾಹರಿಸಿರುವ ಪ್ರಮಾಣವನ್ನು ಈ ಸಂಧಿಯ ಆರಂಭದಲ್ಲಿ ಬರೆದಿರುವೆವು. ಆದ್ದರಿಂದಲೇ,ದಾಸಾರ್ಯರು ತಾರತಮ್ಯಜ್ಞಾನವು ಅತ್ಯಾವಶ್ಯಕವೆಂದು ಹೇಳಿರುವರು. ಈ ತಾರತಮ್ಯಜ್ಞಾನವು ಪಾಪವೆಂಬ ಅಡವಿಯನ್ನು ಸುಡುವ ವಿಷಯದಲ್ಲಿ ಕಾಡುಕಿಚ್ಚಿನಂತಿರುವುದು. ಸಂಸಾರವೆಂಬ ಸಮುದ್ರವನ್ನು ದಾಟುವುದಕ್ಕೆ ವಾಡೆಯಂತಿರುವುದು. ವೈಕುಂಠ ಲೋಕಕ್ಕೆ ಏರಿ ಹೋಗುವುದಕ್ಕೆ ಪಾವಟಿಗೆಯಂತಿರುವುದು. ಆದ್ದರಿಂದಲೇ, ಮಧ್ವಮತಾವಲಂಬಿಗಳಿಗೆ ತಾರತಮ್ಯಜ್ಞಾನವು ಅವಶ್ಯಕವೆಂದು ಹೇಳಿರುವರು. ॥೨೨॥

**೩. ಭಾವದರ್ಪಣ :–**

ಈ ದೇವ ದೈತ್ಯರ ತಾರತಮ್ಯ ತಿಳಿದಂಥವರು ಸದ್ಗತಿ ಹೊಂದುತ್ತಾರೆ-ಎಂದು ಸದೃಷ್ಟಾಂತ ಹೇಳುತ್ತಾರೆ- ದೇವ ದೈತ್ಯೇತಿ, ॥೨೨॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ಈ ಪದ್ಯದ ತಾತ್ಪರ್ಯವನ್ನು ಮುಂದಿನ ಪದ್ಯದ ಜೊತೆಯಲ್ಲಿ ಕೊಟ್ಟಿದ್ದಾರೆ. ॥೨೨॥

### ೫. ಶ್ರೀಗುರುಹೃದಯ ಪ್ರಕಾಶಿಕೆ :-

ದೇವ ದೈತ್ಯರ ತಾರತಮ್ಯಜ್ಞಾನವು ಪಾವಮಾನಿಯ ಮತವೆಂದರೆ, ಪ್ರಾಣಾವತಾರರೂಪಿ ಮಧ್ವಮತಾವಲಂಬಿಗಳಿಗೆ, ಸದಾ ತಿಳಿಯುವುದಕ್ಕೆ ಅತ್ಯಂತ ಅವಶ್ಯಕವಾದದ್ದು. ಪಾಪವೆಂಬ- ಅಡವಿಗೆ ದಾವಾಶಿಖಿ- ಎಂಬ ಕಾಡ್ಗಿಚ್ಚು. ಭವವೆಂಬ ಜನನ ಮರಣರೂಪ ಸಂಸೃತಿ-ಎಂಬ ಸಮುದ್ರವನ್ನು ದಾಟಿಸುವುದಕ್ಕೆ ಹೊಸದಾದ ಹಡಿಗಿನಂತೆ ತಾರಕವು. ವೈಕುಂಠವೆಂಬ ದೇವರ ಲೋಕವನ್ನು ಹೊಂದುವುದಕ್ಕೆ ಈ ತಾರತಮ್ಯಜ್ಞಾನವು ಪಾವಟಿಗೆಯಂತೆ ಆಶ್ರಯವಾದದ್ದು. ॥೨೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ದೇವತಾಗಣದಲ್ಲಿ ಇರುವ ತಾರತಮ್ಯ, ಹಾಗೆಯೇ ದೈತ್ಯರಲ್ಲಿ ಇರುವ ತಾರತಮ್ಯ–ಇವೆರಡರ ಜ್ಞಾನವು ಮೋಕ್ಷಪ್ರಾಪ್ತಿಗೆ ಅತ್ಯಗತ್ಯವೆಂದು ತಿಳಿಸುತ್ತಾರೆ.

ದೇವ ದೈತ್ಯರ ತಾರತಮ್ಯವು ಅನಾದಿ ಹಾಗೂ ನಿತ್ಯ. ಜೀವರಸ್ವರೂಪ ನಿತ್ಯವಾದ್ದರಿಂದ, ಸ್ವರೂಪಭೂತವಾದ ಗುಣತಾರತಮ್ಯವೂ ಸಹ ನಿತ್ಯವಾದದ್ದೇ.

ಪವಮಾನ–ಎಂದರೆ, ಶ್ರೀಹರಿಯ ಪ್ರಥಮಾಂಗಭೂತರಾದ ಶ್ರೀ ಮುಖ್ಯಪ್ರಾಣದೇವರೆಂದರ್ಥ. ಅಂತಹ ಶ್ರೀವಾಯುದೇವರು ಅತಿರೋಹಿತ ವಿಮಲ ವಿಜ್ಞಾನಿಗಳು. ಸತ್ತ್ವಪ್ರಚುರ ದೇಹವುಳ್ಳವರು. ಕಲಿಯ ಬಾಧೆ ಇವರಿಗೆ ಎಂದೆಂದಿಗೂ ಇಲ್ಲ. ಆಖಣಾಶ್ಮಸಮರು. ಅಂತಹ ಪವಮಾನ ದೇವರ ಸಂಬಂಧವೇ–ಪಾಪವಮಾನಿ. ಅಂದರೆ,ಶ್ರೀವಾಯುದೇವರ ತೃತೀಯಾ ವಾತರಭೂತರಾದ ಶ್ರೀಮನ್ಮಧ್ವಮುನಿಗಳು. ಶ್ರೀಮನ್ಮಧ್ವ ಸಿದ್ಧಾಂತಾವ ಲಂಬಿಗಳಾದ ವೈಷ್ಣವರೇ- ಪಾವಮಾನಿಮತಾನುಗರು.

ಪಾವಮಾನಿಮತಾನುಗರಿಗೆ ಪಂಚಬೇಧಜ್ಞಾನ ಮತ್ತು ತಾರತಮ್ಯಜ್ಞಾನ ಅತ್ಯಗತ್ಯ. ಸರ್ವ ಅವಸ್ಥೆ, ದೇಶ, ಕಾಲಾದಿಗಳಲ್ಲಿ ಇದರ ಜ್ಞಾನ ಕೇವಲಾ ವಶ್ಯವೆಂದು ದಾಸರಾಯರು ತಿಳಿಸುತ್ತಾರೆ.

**ದಾವ**– ಎಂದರೆ ಕಾಡನ್ನು ಸುಡುವ ಬೆಂಕಿ. **ಶಿಖಿ**– ಎಂದರೆ ಅಗ್ನಿ. ಅಂದರೆ ಕಾಡ್ಗಿಚ್ಚು-ಎಂಬುವ ದಾವಾಗ್ನಿಯು ಕಾಡನ್ನು ಸುಟ್ಟು ಬೂದಿ ಮಾಡು ವಂತೆ,ದೇವ ದೈತ್ಯರ ತಾರತಮ್ಯ ಜ್ಞಾನವು ದಾವಾಗ್ನಿ ಸದೃಶವು. ಪಾಪವೆಂಬ ಮಹಾಅರಣ್ಯವನ್ನು ನಾಶಮಾಡುವ ದಾವಾ ಶಿಖಿಯು.

ಜೀವರ ಸ್ವರೂಪಕ್ಕೆ ಆವರ್ಕವಾಗಿ ಅನಾದಿಲಿಂಗದೇಹವಿದೆ. ಲಿಂಗೋಪ ದಾನದಿಂದ, ಜೀವನು ಸಂಸಾರವೆಂಬ ದುಸ್ತರಸಮುದ್ರದಲ್ಲಿ ಸಂಚರಿಸುವನು. ಸಂಸಾರವೆಂದರೆ. ಕರ್ಮಬಂಧನವು. ಈ ದುಸ್ತರವಾದ ಸಂಸಾರ ಸಾಗರ ವನ್ನು (ಭವಸಮುದ್ರಕ್ಕೆ) ದಾಟಲು ನೂತನ ನಾವೆಯಂತಿದೆ. ಈ ತಾರತಮ್ಯ ಜ್ಞಾನ- ಅಂದರೆ, ಅದರ ದ್ವಾರಾ ಕರ್ಮವಿಮೋಚನೆ,ತದ್ವಾರಾ ಮುಕ್ತಿಯ ಆನಂದ ಪ್ರಾಪ್ತಿ.

ವೈಕುಂಠವೆಂಬ ಮುಕ್ತಿಧಾಮಕ್ಕೆ ಮೆಟ್ಟಿಲಿನಂತಿದೆ-ಈ ತಾರತಮ್ಯಜ್ಞಾನ. (ವೈಕುಂಠಕ್ಕೆ ಪಾವಟಿಗೆ ಎನಿಸುವುದು). ಪಾವಟಿಗೆ–ಎಂದರೆ ಮೆಟ್ಟಿಲು ಅಥವಾ

ಸೋಪಾನವು. ತಾರತಮ್ಯಜ್ಞಾನವೆಂಬ ಪಾವಟಿಗೆಗಳನ್ನು ಏರಿದರೆ. ವೈಕುಂಠ ಲೋಕ ಪ್ರಾಪ್ತಿ. ಅಂದರೆ, ನಿತ್ಯವಾದ ಮೋಕ್ಷಾನಂದ ಲಭಿಸುವುದು. ॥೨೨॥

## ಪದ್ಯ-೨೩

**ಮೂಲ :–**

**ತಾರತಮ್ಯಜ್ಞಾನ ಮುಕ್ತಿ ।**
**ದ್ವಾರವೆನಿಪುದು ಭಕ್ತಜನರಿಗೆ ।**
**ತೋರಿ ಪೇಳಿ ಸುಖಾಬ್ಧಿಯೊಳು ಲೋಲಾಡುವುದು ಬುಧರು ॥**
**ಕ್ರೂರ ಮಾನವರಿಗಿದು ಕರ್ಣಕ ।**
**ಠೋರವೆನಿಪುದು ನಿತ್ಯದಲಿ ಅಧಿ ।**
**ಕಾರಿಗಳಿಗಿದನರುಪುವುದು ದುಷ್ಕರ್ಮಗಳ ಬಿಟ್ಟು ॥ ॥೨೩॥**

**ಅವತರಣಿಕೆ :–**

ತಾರತಮ್ಯಜ್ಞಾನವು ಮುಕ್ತಿಗೆ ದ್ವಾರವೆನಿಸುವುದು. ಇದನ್ನು ಅಧಿಕಾರಿಗಳಾದ ಸಜ್ಜನರಿಗೆ ಮಾತ್ರ ಉಪದೇಶಿಸಬೇಕೆಂದು ತಿಳಿಸುತ್ತಾರೆ. ॥೨೩॥

**ಪ್ರತಿಪದಾರ್ಥ :–**

**ತಾರತಮ್ಯಜ್ಞಾನ** = ತ್ರಿವಿಧಜೀವರಲ್ಲಿರುವ ನಿತ್ಯಭೂತವಾದ ತಾರತಮ್ಯವೆಂಬ ಜ್ಞಾನವು, **ಮುಕ್ತಿದ್ವಾರವೆನಿಪುದು** = ದುಃಖರೂಪವಾದ

ಸಂಸಾರದಿಂದ ಮುಕ್ತನಾಗಿ, ನಿತ್ಯಾನಂದರೂಪವಾದ ಮೋಕ್ಷಾಭವವನ್ನು ಹೊಂದುವುದಕ್ಕೆ, ನೇರವಾದ ಮಾರ್ಗ-ಎಂದು ಕರೆಯಿಸುವುದು. **ಭಕ್ತಜನರಿಗೆ** = ಈ ಜ್ಞಾನರೂಪವಾದ ಮಾರ್ಗವನ್ನು, ಭಗವದ್ಭಕ್ತರಾದ ಪಾತ್ರರಿಗೆ, **ತೋರಿ** = ಮನಸ್ಸಿಗೆ ನಾಟುವಂತೆ, **ಪೇಳಿ** = ಉಪದೇಶ ದ್ವಾರಾ ತಿಳಿಸಿ, **ಬುಧರು** = ಜ್ಞಾನಿಗಳು, **ಸುಖಾಬ್ಧಿಯೊಳು** = ಆನಂದ ಸಮುದ್ರದಲ್ಲಿ, **ಲೋಲಾಡುವುದು** = ಆಡುವರು. **ಇದು** = ಈ ತಾರತಮ್ಯಜ್ಞಾನವು, **ಕ್ರೂರಮಾನವರಿಗೆ** = ಭಗವದ್ವೇಷಿಗಳಾದ ಜನರಿಗೆ, **ಕರ್ಣಕಠೋರವೆನಿಪುದು** = ಕಿವಿಗೆ ಶೂಲವೆಂದು ತೋರುವುದು. (ಮನಸ್ಸಿಗೆ ದುಃಖವಾಗುವುದು). **ದುಷ್ಕರ್ಮಗಳ ಬಿಟ್ಟು** = ದುಷ್ಟವಾದ ಕರ್ಮಗಳನ್ನು ತೊರೆದು, **ಇದನು** = ಈ ತಾರತಮ್ಯಜ್ಞಾನವನ್ನು, **ನಿತ್ಯದಲಿ** = ಪ್ರತಿದಿನದಲ್ಲಿ, **ಅಧಿಕಾರಿಗಳಿಗೆ** = ಗ್ರಂಥಸ್ಥವಿಷಯದಲ್ಲಿ ಆಸಕ್ತ ಮನಸ್ಕರಾದ ಭಗವದ್ಭಕ್ತರಾದ ನಿಜವಾದ ಪಾತ್ರರಿಗೆ, **ಅರುಹುವುದು** = ಉಪದೇಶ ಮಾಡತಕ್ಕದ್ದು. (ಅಯೋಗ್ಯರಿಗೆ ತಿಳಿಸಬಾರದೆಂದು ತಾತ್ಪರ್ಯ.

॥೨೩॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಈ ತಾರತಮ್ಯಜ್ಞಾನವನ್ನು ಸಜ್ಜನರಿಗೆ ಉಪದೇಶ ಮಾಡುವುದು-ಎಂತ ಹೇಳತಾರೆ.

ತಾರತಮ್ಯಜ್ಞಾನವೆಂಬುದು-ದುಃಖರೂಪವಾದ ಸಂಸಾರದಿಂದ ಮುಕ್ತನಾಗೋದಕ್ಕೆ ಮಾರ್ಗವೆನಿಸುವುದು. ಈ ಮಾರ್ಗವನ್ನು ಭಗವದ್ಭಕ್ತರಾದ ಜನರಿಗೆ ಸುಮಾರ್ಗವಿದೆಂದು ಮನಸ್ಸಿಗೆ ನಾಟುವಂತೆ, ಈ ತಾರತಮ್ಯಕ್ರಮವನ್ನ ಹೇಳಿ, ತದನುಷ್ಠಾನರೂಪವಾದ ಸುಖವಾದ ಸಮುದ್ರದಲ್ಲಿ ಹೊರಳಾಡುವುದು, ಈಸತಾ ಇರುವುದು, ಧಾರೆಂದರೆ, ಜ್ಞಾನಿಗಳಾದವರು, ಈ

ತಾರತಮ್ಯವನ್ನು ಭಗವದ್ದ್ವೇಷಿಗಳಾದ ಜನರಿಗೆ ಹೇಳಿದರೆ,ಅವರ ಶ್ರವಣೇಂದ್ರಿಯಕ್ಕೆ ಮತ್ತು ಮನಸ್ಸಿಗೆ ಆಯುಧರೂಪವಾದ ಬಾಣದಿಂದ ಹೊಡೆಸಿದರೆ, ಚುಚ್ಚಿದರೆ,ಹ್ಯಾಂಗಿರತದೋ ತದ್ವತ್ ಮನಸ್ಸಿಗೆ ಬಹಳ ದುಃಖವಾಗಿಸತದೆ. ಆದ ಕಡಿಯಿಂದ ದುಷ್ಟ ಪ್ರಯೋಜಕಗಳಾದ ಕರ್ಮಗಳ ತೊರೆದು, ಪ್ರತಿದಿನ ದಿನದಲ್ಲೂ ತಾರತಮ್ಯವನ್ನೂ, ಈ ಗ್ರಂಥವನ್ನೂ, ಭಗವದ್ಭಕ್ತರಾದ ಈ ಗ್ರಂಥವನ್ನು ಆದರದಿಂದ ಪಠನಮಾಡಿ ತಿಳಕೋಬೇಕೆಂತಿದ್ದವರಿಗೆ ಉಪದೇಶ ಮಾಡೋವನಾಗಬೇಕು ಎಂತಲೂ, ಅಧಿಕಾರಿಗಳಿಗೆ ಮತ್ತು ಈ ಗ್ರಂಥದಲ್ಲಿ ಶ್ರದ್ಧೆ ಇಲ್ಲದವರಿಗೆ ಉಪದೇಶ ಮಾಡಕೂಡದೆಂತಲೂ ತಾತ್ಪರ್ಯ. ॥೨೩॥

## ೨. ಭಾವಪ್ರಕಾಶಿಕೆ :-

ಈ ತಾರತಮ್ಯಜ್ಞಾನವು ಯೋಗ್ಯರಿಗೆ ಮಾತ್ರವೇ ಮುಕ್ತಿಗೆ ಮಾರ್ಗವೆಂದು ತೋರುವುದೇ ಹೊರತು, ಮಿಥ್ಯಾಜ್ಞಾನಿಗಳು, ಅನ್ಯಥಾಜ್ಞಾನಿಗಳಿಗೆ ಇದು ಕರ್ಣಕಠೋರವಾಗಿರುವುದು. ಆದ್ದರಿಂದ ಅಂತಹವರಿಗೆ ಇದನ್ನು ಉಪದೇಶ ಮಾಡದೆ, ಇದಕ್ಕೆ ಅಧಿಕಾರಿಗಳು ಯಾರೋ, ಅಂತಹಾ ಮುಕ್ತಿಯೋಗ್ಯರಿಗೆ ಮಾತ್ರ ಉಪದೇಶವನ್ನು ಮಾಡುತ್ತಾ,ತಾನೂ ದೊಡ್ಡವರ ಮುಖದಿಂದ ಶ್ರವಣ ಮಾಡುತ್ತಾ, ಸುಖಸಮುದ್ರದಲ್ಲಿ ತೇಲುತ್ತಾ- ಮುಳುಗುತ್ತಾ ಇರಬೇಕೆಂದು ತಾತ್ಪರ್ಯ. ॥೨೩॥

## ೩. ಭಾವದರ್ಪಣ :-

ತಾರತಮ್ಯ ಸಜ್ಜನರಿಗೆ ತಿಳಿಸಬೇಕೆಂದೂ, ದುರ್ಜನರಿಗೆ ತಿಳಿಸಬೇಡೆಂದೂ- ಹೇಳುತ್ತಾರೆ. ತಾರತಮ್ಯೇತಿ. ॥೨೩॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ದೇವ"-ಇತಿ ॥ ನನು ಕೇವಲಾವಶ್ಯಕತ್ವಂ ಕಥಂ ಅಸ್ಯ ಜ್ಞಾನಸ್ಯ ? ಇತರ ಶಾಸ್ತ್ರಾಧ್ಯಯನೇನ ವಾ ಪವನನಯ ಪ್ರವಚನೇನ ವಾ ಅಪಚ್ಛೇದಕತ್ವ ವ್ಯವಹಾರಾತ್ ಕಿಮ್ ಏತದ್ಧುರಥಿಗಮ ತಾರತಮ್ಯ ವಿಚಾರೇಣ ಆತ್ಯಂತಿಕ

ವಾದಾನುಪಯೋಗಿನಾ ? ಇತಿ ಚೇನ್ ನ ॥ ಏತದ್ಧೀವಿರಹೇsತ್ಯ ಪವಿತ್ರತಾ ॥ ಕು ಪುರುಷವತ್ ನ ಸ್ಪೃಶ್ಯ ಏವತಿ ॥ ಯಥಾ ನೈಯಾಯಿಕೇ ಶಾಸ್ತ್ರೇ ಶಬ್ದ ಶಾಸ್ತ್ರೇ ತಥೈವ ಚ ॥ ಆದರಃ ಹ್ಯಸ್ತಿ ಪಕ್ಷೀಂದ್ರ । ತಥಾ ನಾಸ್ತ್ಯತ್ರ ಚಾದರಃ ॥ ಯಥಾ ಕೌಶಲ್ಯ (ತಾ) (ಕುಶಲತಾ) ಹ್ಯಸ್ತಿ ವ್ಯಾಖ್ಯಾನೇ ಖಗ ಸತ್ತಮ ॥ ತಥಾ ತರತಮ ಜ್ಞಾನೇ ಕೌಶಲ್ಯಂ ನಾಸ್ತಿ ಸರ್ವಥಾ ॥ ವ್ಯಾಖ್ಯಾನ ಕುಶಲಾಃ ತೇsಪಿ ಸ್ವಸಿದ್ಧಾಂತ ವಿಚಾರಣೇ ॥ ನ ವೈಷ್ಣವಾಃ ತೇವಿಜ್ಞೇಯಾಃ ಕ್ರಮ ಜ್ಞಾನಂ ಹ್ಯನಾದರಾಃ ॥ ಇದಂ ತರತಮ ಜ್ಞಾನಂ ದುರ್ಲಭಂ ವೈ ಕಲೌ ನೃಣಾಮ್ ॥ ದ್ವಿಷಡ್ಗುಣಯುತೋ ವಾಪಿ ಚತುರ್ವೇದಯುತೋಪಿ ॥ ತಾರತಮ್ಯಜ್ಞಾನ ಶೂನ್ಯಃ ಸದಾ ಶೂದ್ರಸಮಃ ಮತಃ ॥ ತಾರತಮ್ಯವಿಹೀನಃ ಯಃ ವಿಷ್ಣುಃ ಸರ್ವೋತ್ತಮೇತಿ ಚ ॥ ಪದನ್ನಪಿ ಸವ್ಯೆ ಪಾಪೀ ನ ಪ್ರೇಕಿಣಾತಿ ಹರಿಃ ಸ್ವಯಮ್ ॥ ತಾರತಮ್ಯವಿಹೀನಸ್ಯ ವೇದಾನಾಂ ಪಠನಾದಪಿ ॥ ಫಲಂ ನಾಸ್ತ್ಯೇವ ನಾಸ್ತ್ಯೇವ ಯಥಾ ಸೂತಕಿನಃ ಪರೇ ॥ ವೇದಪಠನ ಪುಣ್ಯಂ ಏತ ದ್ಭೇದವತಃ ಏವ ನಾನ್ಯಸ್ಯ ॥ ಇತಿ **ಗಾರುಡೇ**–ಚೋಕ್ತಮ್ ॥ ನವವಿಧ ದ್ವೇಷಾಃ ॥ 1) ಜೀವಾಭೇಧಃ ॥ 2) ಹರಿಃ ನಿರ್ಗುಣಃ ॥ 3) ಗುಣಾ ಪೂರ್ಣಃ 4) ಶ್ರೀಬ್ರಹ್ಮಾದಿಸಾಮ್ಯಮ್ ॥ 5) ತೇಷಾಂ ಆಧಿಕ್ಯಂ ॥ 6) ಹಸ್ತಪಾದಾದಿ ಬೇಧಃ ॥ 7) ಅವತಾರೇ ಬೇಧ ಬೇಧಾದಿಃ ॥ 8) ತದ್ಭಕ್ತ ನಿಂದನಮ್ ॥ 9) ತದ್ವಾಕ್ಯದೂಷಣಮ್. ॥೨೨॥ ॥೨೩॥

## ಕನ್ನಡಾರ್ಥ

ದೇವದೈತ್ಯರ ತಾರತಮ್ಯದ ಫಲವನ್ನು ಹೇಳಿ-ಅದರ ಯೋಗ್ಯ ಅಧಿಕಾರಿಗಳನ್ನು ನಿರೂಪಿಸುತ್ತಾ-ತಾರತಮ್ಯವನ್ನು ತಿಳಿದುಕೊಳ್ಳಲೇಬೇಕೆಂದು– ವಿಧಿಸುತ್ತಾರೆ- ಈ ಎರಡು ಪದ್ಯಗಳಿಂದ.

ತಾರತಮ್ಯಜ್ಞಾನವು ಕೇವಲ ಆವಶ್ಯಕವೆಂದು ಮೂಲಪದ್ಯದಲ್ಲಿ (೨೨ರಲ್ಲಿ) ಹೇಳಲಾಗಿರುತ್ತದೆ. ಆದರೆ ಇದರ ಬಗ್ಗೆ ಕೆಲವು ಸಂದೇಹಗಳು ಉದಯಿಸುತ್ತವೆ.

"ಇತರ ಶಾಸ್ತ್ರಗಳನ್ನು ಓದುವುದು-ಹೇಳುವುದರಿಂದಾಗಲೀ-ಅಥವಾ ಶ್ರೀ ಮನ್ಮಧ್ವ ಸಿದ್ಧಾಂತ ಪ್ರವಚನದಿಂದಲೇ ಆಗಲೀ ಪಾರಭಾಷಿಕ-ಶಬ್ದಗಳನ್ನು (ಅವಚ್ಛೇದಕ ಮುಂತಾದ ಪದಗಳನ್ನು) ಪ್ರಯೋಗಿಸಬಹುದು. ಅಂದರೆ ಶ್ರೀ ಮನ್‌ಮಧ್ವಶಾಸ್ತ್ರೋಕ್ತವಾದ ಅಧಿಕರಣ ಮುಂತಾದವುಗಳ ಪಾಠಪ್ರವಚನಕ್ಕಾಗಿ ಇತರ ತರ್ಕಾದಿ ಶಾಸ್ತ್ರಗಳ ಪಾರಿಭಾಷಿಕಃಶಬ್ದಗಳನ್ನು ಸಂಗ್ರಹಿಸಬಹುದು. ಅದು ದೋಷವೆನಿಸಲಿಕ್ಕಿಲ್ಲ. ಆದುದರಿಂದ ಇಂಥ ಸಿದ್ಧಾಂತದಲ್ಲಿರುವ ಅಧಿಕರಣದ ವಿಷಯವನ್ನಾಗಲೀ-ಅದಕ್ಕೆ ಉಪಯೋಗ ಮಾಡುವ ದರ್ಶನಾಂತರಗಳ ರಹಸ್ಯಗಳನ್ನಾಗಲೀ ಪ್ರವಚನ ಮಾಡಿದರೆ,ಸ್ವಮತಸ್ಥಾಪನವಾದರೂ ಆದೀತು. ತಿಳಿಯಲು ದುಃಸಾಧ್ಯವಾದ ಈ ತಾರತಮ್ಯ ಪ್ರಕ್ರಿಯೆಯು-ಪರವಾದಿಗಳೊಡನೆ ನಡೆಯುವ ವಾದಾದಿಗಳಲ್ಲಿ ಅಷ್ಟೊಂದು ಉಪಯುಕ್ತವಾಗುವುದಿಲ್ಲವಾದುದರಿಂದ, ಯಾಕೆ ಈ ತಾರತಮ್ಯವಿಚಾರವು ಅವಶ್ಯಬೇಕು ? ಆದುದರಿಂದ ಕೇವಲಾವಶ್ಯಕವೆಂದು ದಾಸರಾಯರು ಹೇಳಿದುದು ಸರಿಯೆನಿಸಲಿಕ್ಕಿಲ್ಲ."– ಎಂದು ಸಂಶಯವು ಬರುವುದು.

"ಆದರೆ ಇದು ಸರಿಯಲ್ಲ. ತಾರತಮ್ಯವನ್ನು ತಿಳಿದುಕೊಳ್ಳದಿದ್ದರೆ, ಮಹಾ ಅನರ್ಥ ಬರುವುದೆಂದು ಪುರಾಣಾದಿಶಾಸ್ತ್ರಗಳಲ್ಲಿ ನಿರೂಪಿಸಲಾಗಿರುತ್ತದೆ. ಅಷ್ಟೇ ಅಲ್ಲದೇ ತಾರತಮ್ಯಜ್ಞಾನವಿಲ್ಲದವನು ಕುಪುರುಷ (ಚಾಂಡಲ) ನಂತೆ ಅಸ್ಪೃಶ್ಯನೆಂದೂ ಹೇಳಲಾಗಿರುತ್ತದೆ. ನೈಯಾಯಿಕ ಶಬ್ದಶಾಸ್ತ್ರಗಳಲ್ಲಿ ಆಧಾರವಿರುವಂತೆ, ಶ್ರೀಮಧ್ವಶಾಸ್ತ್ರದ- ತಾರತಮ್ಯದಲ್ಲಿ ಆದರವಿರುವದಿಲ್ಲ. ಆ ಶಾಸ್ತ್ರಗಳಲ್ಲಿರುವಷ್ಟು ಕೌಶಲ್ಯವನ್ನು ಈ ತಾರತಮ್ಯಪ್ರಕ್ರಿಯೆಯಲ್ಲಿ, ಹೊಂದಲೂ ಇಚ್ಛಿಸುವುದಿಲ್ಲ. ಇಂಥವರು ಶಾಸ್ತ್ರಾರ್ಥಕುಶಲರಾಗಿದ್ದರೂ ಸಿದ್ಧಾಂತದಪ್ರಮಾಣ ವಿಚಾರದಲ್ಲಿ ಮುಂದುವರೆದಿದ್ದರೂ-ತಾರತಮ್ಯ ಪ್ರಕ್ರಿಯೆಯಲ್ಲಿ ಅನಾದರವುಳ್ಳವರು ವೈಷ್ಣವರೆಂಬ ಹೆಸರಿಗೂ ಅನರ್ಹರು. ಹೇ ಗರುಡ ! ಈ ತಾರತಮ್ಯಜ್ಞಾನವು ಎಲ್ಲ ಮನುಷ್ಯರಿಗೂ ಸುಲಭವಲ್ಲ. ಬಹಳ ದುರ್ಲಭವಾದುದು. ಹನ್ನೆರಡು ಗುಣವುಳ್ಳವನೂ ನಾಲ್ಕು ವೇದಪಾರಂಗತನೂ ಆದ ಬ್ರಾಹ್ಮಣನು ಸಹ ತಾರತಮ್ಯಜ್ಞಾನರಹಿತನಾದರೆ,ಶೂದ್ರಸಮನೆಂದು ಜ್ಞಾನಿಗಳ ಅಭಿಪ್ರಾಯವಿರುತ್ತದೆ. ತಾರತಮ್ಯಪ್ರಕ್ರಿಯಾ ಜ್ಞಾನವಿಲ್ಲದ ಕೇವಲ

ವಿಷ್ಣು ಸರ್ವೋತ್ತಮತ್ವವನ್ನು ಹೇಳುವವನೂ ಪಾಪಿಯು. ಅವನಿಗೆ ಶ್ರೀಹರಿಯು ಪ್ರಸನ್ನನಾಗುವುದಿಲ್ಲ. ತಾರತಮ್ಯಜ್ಞಾನವಿಹೀನನಿಗೆ ವೇದಪಠನದಿಂದಲೂ ಸಹ ಸೂತಕವಿದ್ದವರಿಗೆ ಹೇಗೋ ಹಾಗೆ ಫಲವು ದೊರೆಯುವುದಿಲ್ಲ. ತಾರತಮ್ಯಜ್ಞಾನವುಳ್ಳವನಿಗೇ ವೇದಪಠನ ಪಾರಾಯಣದ ಫಲವು ಬರುವದು. ಮಿಕ್ಕವರಿಗೆ ಬರುವುದಿಲ್ಲ."– ಎಂದು **ಗರುಡಪುರಾಣದಲ್ಲಿ** ಹೇಳಲಾಗಿರುತ್ತದೆ.

ಕಲಿಯ ಸ್ವಭಾವವನ್ನು ವರ್ಣಿಸುವಾಗ, ನವವಿಧದ್ವೇಷಗಳಿಗಾಕರನೆಂದು-ದಾಸರು ನಿರೂಪಿಸಿರುತ್ತಾರೆ.

ಆ ನವವಿಧ ದ್ವೇಷಗಳನ್ನು ಪ್ರಾಸಂಗಿಕವಾಗಿ ಇಲ್ಲಿ ನಿರೂಪಿಸಿರುತ್ತಾರೆ. ಯಾಕೆಂದರೆ,ಈ ಕ್ರಮದಿಂದ ತಾರತಮ್ಯಜ್ಞಾನವಿಲ್ಲದಿರುವದೂ ಒಂದು ದ್ವೇಷದಲ್ಲಿ ಅಂತರ್ಗತವಾಗುವದು. ಆದುದರಿಂದ ಈ ಪದ್ಯದಲ್ಲಿ ಇದರ ಪ್ರಸಂಗವು ಸ್ಫುಟಿಕವಾಗಿಲ್ಲದಿದ್ದರೂ ಪ್ರಸಂಗವಿರುವುದರಿಂದ,ಇಲ್ಲಿ ವ್ಯಾಖ್ಯಾನಕಾರರು ನವವಿಧ ದ್ವೇಷಗಳನ್ನು ವಿಶದಪಡಿಸುತ್ತಾರೆ. 1) ಜೀವ ಜೀವರಿಗೂ, ಜೀವ ಪರಮಾತ್ಮನಿಗೂ ಅಬೇಧ 2) ಹರಿಯು ಗುಣರಹಿತನು. 3) ಗುಣಗಳಿರುವವೆಂದು ತಿಳಿದರೂ ಅಲ್ಪ-ಸ್ವಲ್ಪೇ ಗುಣಗಳಿರುವವು, ಸಕಲ ಗುಣಪರಿಪೂರ್ಣನಲ್ಲ- ಎಂದು ತಿಳಿಸುವುದು. 5) ಬ್ರಹ್ಮಾದಿಗಳಿಂದ ಪರಮಾತ್ಮನು ಕಡಿಮೆಯವನೆಂದು ತಿಳಿಯುವುದು. 6) ಪರಮಾತ್ಮನಿಗೂ-ಅವನ ಜ್ಞಾನಾನಂದಾತ್ಮಕ ಅವಯವಗಳಿಗೂ-ಗುಣಕ್ರಿಯಾಗಳಿಗೂ ಬೇಧವನ್ನು ತಿಳಿಯುವದು. 7, ಹರಿಯ ಅವತಾರಗಳಲ್ಲಿ -ಬೇಧವಾಯಿತು. ಲಿಂಗಬೇಧವಾಯಿತು. ದೇಹದಿಂದ ದುಃಖಾದಿಗಳಾಗುವವು- ಎಂದು ತಿಳಿಯುವದು. 8) ಭಗವದ್ಭಕ್ತರನ್ನು ನಿಂದಿಸುವದು. 9) ಶ್ರೀಹರಿಯ ಆಜ್ಞಾರೂಪವಾದ ಶಾಸ್ತ್ರಗಳನ್ನು ದೂಷಿಸುವುದು."– ಹೀಗೆ ಒಂಭತ್ತು ದ್ವೇಷಗಳನ್ನು ತಿಳಿಯಬೇಕು. ॥೨೩॥

## ೫. ಶ್ರೀಗುರುಹೃದಯ ಪ್ರಕಾಶಿಕೆ :–

ಈ ತಾರತಮ್ಯಜ್ಞಾನವು ಮುಕ್ತಿ ಹೊಂದುವುದಕ್ಕೆ ತೆರೆದ ಬಾಗಿಲಿನಂತೆ ಆಸ್ಪದವಾಗಿರುವುದು. ಬುಧರೆಂಬ ಸದ್ಭಕ್ತರಿಗೆ ಇದನ್ನು ತಿಳಿಹೇಳಿ ಸುಖ

ಸಮುದ್ರದಲ್ಲಿ ವಿಹರಿಸುವರು. ಇತರ ಮತಸ್ಥರಾದ ಕ್ರೂರಮಾನವರೆಂಬ ವಿಪರೀತಜ್ಞಾನಿಗಳಿಗೆ ಈ ತಾರತಮ್ಯಜ್ಞಾನವು ಕರ್ಣಕಠೋರವಾಗಿರುವುದು. ಆದ್ದರಿಂದ,ಕುಯುಕ್ತಿಗಳುಳ್ಳ ಜನರನ್ನು ಬಿಟ್ಟು,ಈ ಜ್ಞಾನಕ್ಕೆ ಪಾತ್ರರಾದವರಿಗೆ ಮಾತ್ರ ತಿಳಿಸುವುದು: ॥೨೩॥

# ಸರ್ವವ್ಯಾಖ್ಯಾನಸಾರಸಂಗ್ರಹ

ಜಗತ್ತಿನಲ್ಲಿ ವಿದ್ಯಮಾನವಾಗಿರುವ ಪಂಚಭೇಧ ಮತ್ತು ತಾರತಮ್ಯ ಜ್ಞಾನವು ಮುಮುಕ್ಷುಗಳಿಗೆ ಅತ್ಯಗತ್ಯ. ಅನ್ಯಮತದವರು ಒಪ್ಪಲೀ- ಒಪ್ಪದಿರಲೀ, ತಾರತಮ್ಯ ಇರುವುದು ನಮ್ಮ ಅನುಭವ ಸಿದ್ಧವಾದ ವಿಷಯವು. ಸಮಾಜದ ಪ್ರತಿ ಪ್ರತಿ ಹಂತದಲ್ಲಿ, ಕುಟುಂಬಜೀವನದಲ್ಲಿ ಈ ನೀಚೋಚ್ಚ ಭಾವವು ನಮ್ಮ ಪ್ರತ್ಯಕ್ಷಕ್ಕೆ ವಿಷಯವಾಗಿದೆ. ಹೀಗೆ ಅನುಭವಸಿದ್ಧವಾದ ವಿಷಯವಾದರೂ, ಅನ್ಯಮತೀಯರು ದುರಾಗ್ರಹದಿಂದ ಒಪ್ಪುತ್ತಿಲ್ಲ. ಜಗತ್ತಿನಲ್ಲಿರುವ ಸಕಲಜೀವರೂ ಸಮಾನರು—ಎಂಬ ಭಾವನೆಯೇ ಸತ್ಯಕ್ಕೆ ಅತ್ಯಂತ ದೂರವಾದದ್ದು. ಎಲ್ಲರಿಗೂ ಸಮಾನಾವಕಾಶವಿರುವುದೇ ಹೊರತು, ಜೀವರ ಸಾಮರ್ಥ್ಯ, ಭಿನ್ನ ಭಿನ್ನವಾಗಿಯೇ ಇರುವುದು. ಈ ಪರಸ್ಪರ ವೈಲಕ್ಷಣ್ಯ ಸ್ವಭಾವ ನಿತ್ಯವಾದದ್ದು. ಯಾವ ರೀತಿಯಿಂದಲೂ ಬದಲಾಯಿಸಲು ಸಾಧ್ಯವಿಲ್ಲ. ತ್ರಿವಿಧಜೀವರ ವೈವಿಧ್ಯ ಸಹಜವಾದದ್ದು. ಸ್ವರೂಪತಃ ತಮೋಯೋಗ್ಯರು ಎಂದೆಂದಿಗೂ ಸಾತ್ವಿಕರಾಗಲು ಸಾಧ್ಯವೇ ಇಲ್ಲ. ಸಾತ್ವಿಕ ಚೇತನರು ತಮೋಜೀವರಂತೆ ಪಾಪಕರ್ಮಗಳನ್ನು ಮಾಡುವುದು, ಇದು ಅವರ ಕರ್ಮದಲ್ಲಿರುವ ತಾಮಸಗುಣದ ಪ್ರಾಚುರ್ಯವು. ಮೂಲತಃ ಅವರು ಸತ್ತ್ವಗುಣಸಂಪನ್ನರು. ಕರ್ಮವಶದಿಂದಲಾಗಲೀ, ಶಾಪನಿಮಿತ್ತದಿಂದಲಾಗಲೀ, ಅಜ್ಞಾನದಿಂದಲಾಗಲೀ, ಅಸುರಾವೇಶದಿಂದಲಾಗಲೀ- ತಮೋಗುಣ ಪ್ರಾಚುರ್ಯರೂಪವಾದ ಪಾಪಕರ್ಮಗಳು ನಡೆಯುವುವು. ಈ ತಮೋಗುಣದ ಆವರಣ ವಿಮೋಚನೆಯಾದ ನಂತರ, ರಜೋಗುಣದ ಪ್ರಾಚುರ್ಯ,

ಅದೂ ತಪ್ಪಲು, ಕೇವಲ ಸತ್ತ್ವಗುಣವು ಪ್ರಧಾನವಾಗಿರುವುದು. ಅಂತೆಯೇ, ತಮೋಗುಣ ಜೀವರು ಯಾಗ, ದಾನ, ಯಾತ್ರೆ, ಗುರುಹಿರಿಯರ ಶೂಶ್ರೂಷೆ, ಪೂಜೆ-ಇತ್ಯಾದಿ ಸತ್ಕಾರ್ಯಗಳನ್ನು ಆಚರಿಸುವರು. ಕೇವಲ ಇದರಿಂದಲೇ ಅವರು ಸಾತ್ವಿಕರೆಂದು ನಿರ್ಧರಿಸಲಾಗದು. ಅವರಿಗೆ ಸತ್ವ ಗುಣಾವರಣವು ಕನಿಷ್ಠಪ್ರಮಾಣದಲ್ಲಿರುವುದು. ಅದು ಸವೆಯುವ ಪರ್ಯಂತ ಪುಣ್ಯಕರ್ಮಗಳು ನಡೆಯುವಂತೆ ಕಾಣಿಸುವುದು. ಸ್ವರೂಪತಃ ಅವರು ತಮೋಯೋಗ್ಯರು. ಪುಣ್ಯಕರ್ಮಗಳ ಹಿನ್ನೆಲೆಯಲ್ಲಿ ಅವರಿಗೆ ದುರಾಗ್ರಹ-ಅಹಂಕಾರ-ಅಹಂಕರ್ತೃತ್ವ–ದುರುದ್ದೇಶ ಇದ್ದೇ ಇರುವುದು. ಸಾತ್ವಿಕರಿಗಿರುವಂತೆ ಪಶ್ಚಾತ್ತಾಪ ಬುದ್ಧಿ ಅವರಿಗೆ ಎಂದೆಂದಿಗೂ ಹುಟ್ಟುವುದೇ ಇಲ್ಲ. ಭಗವಂತನ ದ್ವೇಷ–ಭಗವದ್ಭಕ್ತರ ದ್ವೇಷದಿಂದಲೇ ಅವರ ಪುಣ್ಯಕಾರ್ಯಗಳೆಲ್ಲವೂ ನಡೆಯುತ್ತಿರುವುವು. ಇದರಿಂದ ಬಾಹ್ಯಲಕ್ಷಣಗಳಿಂದ ಜೀವರ ಸ್ವರೂಪ ಯೋಗ್ಯತೆ (ಅಂತರಂಗ) ಗೋಚರಿಸುವುದಿಲ್ಲ. ನಾವು ಅವರ ಬಾಹ್ಯ ಗುಣಗಳ ಪ್ರದರ್ಶನದಿಂದ ವಂಚಿಸಲ್ಪಡುತ್ತೇವೆ.

1) ಈಶ–ಜೀವರಿಗಿರುವ ಬೇಧ: 2) ಈಶ–ಜಡ ಬೇಧ. 3) ಜೀವ–ಜೀವರ ಬೇಧ. 4) ಜಡ-ಜಡ ಬೇಧ ಮತ್ತು 5) ಜೀವ–ಜಡ ಬೇಧ– ಈ ಪಂಚಬೇಧಗಳು ಅನಾದಿ ನಿತ್ಯ–ಇದು ಭಗವಂತನಿಂದ ಸೃಷ್ಠವಾದದ್ದಲ್ಲ. ಸರ್ವಶಕ್ತನಾದ ಬಿಂಬನು ಅದನ್ನು ಅಭಿವ್ಯಕ್ತಿಗೊಳಿಸುವನು. ಶ್ರೀಹರಿಯು ಸತ್ಯಸಂಕಲ್ಪನು. ಇದರಿಂದ ಅವನಿಗೆ **ಅನ್ಯಥಾ ಕರ್ತೃತ್ವ ಶಕ್ತಿ** ಇದ್ದರೂ, ಅನಾದಿನಿತ್ಯವಾದ ಸ್ವರೂಪವನ್ನು ಹಾನಿಗೈಸುವುದಿಲ್ಲ.

ಶ್ರೀಹರಿವಾಯುಗುರುಗಳಲ್ಲಿ ಅನನ್ಯ ಭಕ್ತಿ–ಸಚ್ಛಾಸ್ತ್ರಗಳ ಅಧ್ಯಯನ ದ್ವಾರಾ ಸತ್ಕರ್ಮಗಳ ಆಚರಣೆ–ಶ್ರೀಹರಿಯ ಆಜ್ಞಾರೂಪವಾದ ವಿಧಿ ನಿಷೇಧಗಳ ಆಚರಣೆ-ಅಹಂಕರ್ತೃತ್ವ ಭಾವವನ್ನು ತೊರೆದು, ಸರ್ವಕ್ಕೂ ಶ್ರೀಹರಿಯೇ ಮುಖ್ಯಕರ್ತನೆಂಬ ಅನುಸಂಧಾನ–ಈ ಸನ್ಮಾರ್ಗ ದ್ವಾರಾ ಬಿಂಬಾರೋಕ್ಷ ಜ್ಞಾನ ಪ್ರಾಪ್ತಿ-ತದ್ವಾರಾ ಅವಶಿಷ್ಠ ಪ್ರಾರಬ್ಧಕರ್ಮಭೋಗ-ತದನಂತರ ಜೀವನ್ಮುಕ್ತ ಸ್ಥಿತಿ-ಪ್ರಾಕೃತ ಗುಣಗಳ ಲೇಪದಿಂದ ದೂರನಾಗಿ, ನಿರ್ಗುಣತ್ವ

ಭಾವ-ವಿರಜಾನದಿಯ ಸ್ನಾನ ದ್ವಾರಾ ಲಿಂಗಭಂಗ. ತದ್ವಾರಾ ಕರ್ಮವಿಮೋಚನೆ-ಈ ರೀತಿಯಲ್ಲಿ ಸುವ್ಯವಸ್ಥಿತವಾದ ಸನ್ಮಾರ್ಗದಲ್ಲಿ ನಡೆಯಲು, ಪಂಚಬೇಧ ಮತ್ತು ತಾರತಮ್ಯ ಅತ್ಯಗತ್ಯ. ಈ ಸನ್ಮಾರ್ಗವೇ ಮುಕ್ತಿಪ್ರಾಪ್ತಿಗೆ ಕಾರಣವು. ನಿತ್ಯಾನಂದರೂಪವಾದ ಮೋಕ್ಷಸುಖಾನುಭವಕ್ಕೆ ತಾರತಮ್ಯ ಜ್ಞಾನ ಅತ್ಯವಶ್ಯ.

ಇದು ಅತ್ಯಂತ ಗಹನವಾದ ವಿಷಯು. ಕೇವಲ ಮುಕ್ತಿಯೋಗ್ಯಚೇತನರಿಗೆ ಮಾತ್ರ ತಿಳಿಯುವುದು. ಅನ್ಯರಾದ ಕ್ರೂರರೂ, ದುರಾಗ್ರಹಿಗಳೂ, ಕಪಟಸ್ವಭಾವದವರೂ ಆದ ಜೀವರಿಗೆ ಎಂದೆಂದಿಗೂ ಸಿದ್ಧಿಸುವುದಿಲ್ಲ. ಅವರು ಪ್ರಯತ್ನಿಸಿದರೂ, ಸ್ವರೂಪ ಪ್ರತಿಬಂಧಕದ ನಿಮಿತ್ತ ಅವರು ಒಪ್ಪುವುದಿಲ್ಲ. ಜೀವರಲ್ಲಿ ತಾರತಮ್ಯವಿದೆ. ಎಂಬ ವಿಷಯವು ಅವರಿಗೆ ಕರ್ಣಕಠೋರವಾಗಿರುವುದು. ಜೀವರಲ್ಲಿ ಸಮಾನವು. ಈಶನಲ್ಲಿ ಐಕ್ಯ–ಇದನ್ನು ಅನುಮೋದಿಸುವ ಅನ್ಯಥಾಜ್ಞಾನವುಳ್ಳ ಜೀವರೇ ಬಹುಮಂದಿ. "ವಸುಮತಿಯ ಮೇರಿ ಅಸುರ ಜನರೇ ಬಹಳ"- ಎಂಬ **ಶ್ರೀಗೋಪಾಲದಾಸವರ್ಯರ** ವಚನದಂತೆ, ಇದು ನಮ್ಮ ನಿತ್ಯ ಜೀವನದ ಅನುಭವದ ವಿಷಯು.

ತಾರತಮ್ಯದ ಜ್ಞಾನರಹಸ್ಯವನ್ನು ಭಗವದ್ಭಕ್ತರಿಗೆ ಮಾತ್ರ ತಿಳಿಸತಕ್ಕದ್ದು. –ಎಂದು ದಾಸವರ್ಯರು ಎಚ್ಚರಿಸಿದ್ದಾರೆ. ಅನ್ಯರು ಅಯೋಗ್ಯರು. ಇದಕ್ಕೆ ಅಪಾತ್ರರು. ಅವರಿಗೆ ಉಪದೇಶಿಸಿದರೂ, ಫಲ ನಿಷ್ಪ್ರಯೋಜಕ. ನಮ್ಮ ಅತ್ಯಮೂಲ್ಯವಾದ ಸಮಯ ನಷ್ಟವಾಗುವುದು. ನಿಜವಾದ ಅಧಿಕಾರಿಗಳಿಗೆ ಮಾತ್ರ ಹೇಳಿ, ಅದರಂತೆ ತಾವೂ ಆಚರಿಸತಕ್ಕದ್ದೆಂದು ತಿಳಿಸುತ್ತಾರೆ– ಮುಕ್ತಿಪಥವನ್ನು-ಪರಮಜ್ಞಾನಿಗಳಾದ ದಾಸವರೇಣ್ಯರು. ॥೨೩॥

## ಪದ್ಯ-೨೪

ಮೂಲ :-

ಹರಿ ಸಿರಿ ವಿರಿಂಚೀರ ಭಾರತಿ ।
ಗರುಡ ಫಣಿಪತಿ ಷಣ್ಮಹಿಷಿಯರು ।
ಗಿರಿಜ ನಾಕೇಶ ಸ್ಮರ ಪ್ರಾಣಾನಿರುದ್ಧ ಶಚಿ ॥
ಗುರು ರತೀ ಮನು ದಕ್ಷ ಪ್ರವಹಾ ।
ಮರುತ ಮಾನವಿ ಯಮ ಶಶಿ ದಿವಾ ।
ಕರ ವರುಣ ನಾರದ ಸುರಾಸ್ಯ ಪ್ರಸೂತಿ ಭೃಗುಮುನಿಪ ॥
॥೨೪॥

ಅವತರಣಿಕೆ :-

ಪೂರ್ವೋಕ್ತ ತಾರತಮ್ಯ ವಿಚಾರವನ್ನು ಸಂಪುಟಾಕಾರವಾಗಿ ತಿಳಿಸುತ್ತಾರೆ.
॥೨೪॥

ಪ್ರತಿಪದಾರ್ಥ :-

**ಹರಿ** = ಗುಣಪೂರ್ಣನಾದ ಶ್ರೀಪರಮಾತ್ಮ ಪ್ರಥಮ ಕಕ್ಷ-ಸರ್ವೋತ್ತಮನು. **ಸಿರಿ** = ರಮಾದೇವಿಯರು ದ್ವಿತೀಯ ಕಕ್ಷ. **ವಿರಿಂಚಿ** = ಬ್ರಹ್ಮದೇವರು. **ಈರ** = ವಾಯುದೇವರು ತೃತೀಯ ಕಕ್ಷಾಪನ್ನರು. **ಭಾರತೀ** = ವಾಯುಪತ್ನೀ ಭಾರತೀದೇವಿ. ಅಂತೆಯೇ. ಬ್ರಹ್ಮಪತ್ನೀ ಸರಸ್ವತೀದೇವಿಯರೂ ಗ್ರ್ರಾಹ್ಯ-ಚತುರ್ಥ ಕಕ್ಷಾಪನ್ನರು. **ಗರುಡ** = ಗರುಡದೇವರು, **ಫಣಿಪತಿ** = ಸರ್ವಶ್ರೇಷ್ಠರಾದ ಶೇಷದೇವರು, ಈ ಗಣರಿಂದ ಶ್ರೀ ರುದ್ರದೇವರೂ

ಗ್ರಾಹ್ಯ—ಇವರು ಮುಂದಿನ ಹಂತ. **ಷಣ್ಮಹಿಷಿಯರು** = ನೀಲಾದಿ ಶ್ರೀ ಕೃಷ್ಣನ 6 ಮಂದಿ ಪತ್ನಿಯರು. **ಗಿರಿಜ** = ರುದ್ರಪತ್ನೀ ಪಾರ್ವತೀ. ಇದರಿಂದ ಗರುಡಪತ್ನೀ ಸೌಪರ್ಣೀ ಮತ್ತು ಶೇಷಪತ್ನೀ ವಾರುಣೀ- ಗ್ರಾಹ್ಯರು. **ನಾಕೇಶ** = ಸ್ವರ್ಗಾಧಿಪತಿಯಾದ ಇಂದ್ರದೇವರು, **ಸ್ಮರ** = ಮನ್ಮಥ, **ಪ್ರಾಣ** = ತ್ವಗಭಿಮಾನಿ ಅಹಂಕಾರಿಕ ಪ್ರಾಣದೇವರು, **ಅನಿರುದ್ಧ** = ಪ್ರದ್ಯುಮ್ನ ಪುತ್ರ ಅನಿರುದ್ಧನು, **ಶಚೀ** = ಇಂದ್ರಪತ್ನೀ ಶಚೀದೇವಿ. **ಗುರು** = ಬೃಹಸ್ಪತ್ಯಾಚಾರ್ಯರು, **ರತೀ** = ಮನ್ಮಥನಪತ್ನೀ ರತೀದೇವಿ, **ಮನು** = ಸ್ವಾಯಂಭುವಮನು, **ದಕ್ಷ** = ದಕ್ಷ ಪ್ರಜಾಪತಿ, **ಪ್ರವಹಾ ಮರುತ** = ಪ್ರವಹವಾಯು, **ಮಾನವಿ** = ಸ್ವಾಯಂಭುವಮನುವಿನ ಪತ್ನೀ ಶತರೂಪಾದೇವಿ, **ಯಮ** = ಯಮದೇವರು, **ಶಶಿ** = ಚಂದ್ರ, **ದಿವಾಕರ** = ವಿವಸ್ವಾನ್ ಸೂರ್ಯ, **ವರುಣ** = ಜಲಾಭಿಮಾನಿ ವರುಣನು, **ನಾರದ** = ನಾರದ ಮಹರ್ಷಿಗಳು, **ಸುರಾಸ್ಯ** = ದೇವಮುಖನೆಂಬ ಅಗ್ನಿ, **ಪ್ರಸೂತಿ** = ದಕ್ಷಪ್ರಜಾಪತಿಯ ಪತ್ನೀ ಪ್ರಸೂತಿದೇವಿ, **ಭೃಗುಮುನಿಪ** = ಭೃಗು ಋಷಿಗಳು— ಇಲ್ಲಿಗೆ 15 ನೆಯ ಕಕ್ಷಾಪನ್ನದವರ ತಾರತಮ್ಯ ವಿಷಯವಾಯಿತು. ॥೨೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :—

**ಸಂಕ್ಷಿಪ್ತವಾಗಿ ಅಥವಾ ಸಂಪುಟಾಕಾರದಿಂದ ತಾರತಮ್ಯ ಹೇಳತಾರೆ.**

ಗುಣಪೂರ್ಣನಾದ ಶ್ರೀಪರಮಾತ್ಮ ಪ್ರಥಮ ಕಕ್ಷ-1 ನೇ ಕಕ್ಷ; ರಮಾದೇವೇರು 2; ಬ್ರಹ್ಮದೇವರು, ವಾಯುದೇವರು 3; ಭಾರತೀದೇವರು— 4; ಗರುಡದೇವರು, ಶೇಷದೇವರು 5; ನೀಲಾದಿ ಷಣ್ಮಹಿಷಿಯರು 6; ಪಾರ್ವತೀದೇವೇರು 7; ಇಂದ್ರ, 8; ಅಹಂಕಾರಿಕ ಪ್ರಾಣದೇವರು 9;

ಅನಿರುದ್ಧ, ಇಂದ್ರದೇವರ ಪತ್ನಿ ಶಚೀದೇವೇರು, ಬೃಹಸ್ಪತಿ, ರತೀ ದೇವೇರು, ಸ್ವಾಯಂಭುವಮನು, ದಕ್ಷಪ್ರಜಾಪತಿ 10; ಪ್ರವಹವಾಯು 11; ಸ್ವಾಯಂಭುವಮನುವಿನ ಪತ್ನಿ ಶತರೂಪಾದೇವೇರು, ಚಂದ್ರ, ವಿವಸ್ವಾನ್ ಸೂರ್ಯ 12; ವರುಣದೇವರು 13; ನಾರದ ಋಷಿಗಳು 14; ಅಗ್ನಿ, ದಕ್ಷಪತ್ನಿ ಪ್ರಸೂತೀದೇವೇರು, ಹರಿ ಸರ್ವೋತ್ತಮನೆಂದು ಯಜ್ಞ ಮಾಡುವ ಋಷಿಗಳಿಗೆ ತಿಳಿಸಿ, ಯಜ್ಞವನ್ನು ಪಾಲನಿಮಾಡಿದ ಭೃಗುಋಷಿಗಳು 15; ಇಲ್ಲಿಗೆ 15 ಕಕ್ಷದವರಾಯಿತು. ॥೨೪॥

## ೨. ಭಾವಪ್ರಕಾಶಿಕೆ :–

ವ್ಯಾಖ್ಯಾನ ಇಲ್ಲ.

## ೩. ಭಾವದರ್ಪಣ :–

ಸಂಕೋಚವಾಗಿ ತಾರತಮ್ಯ ಹೇಳುತ್ತಾರೆ- ಹರಿರಿತಿ. ॥೨೪॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

ಉಕ್ತಂ ಅರ್ಥಂ ಬುಧ್ಯಾರೋಹಾಯ ಕ್ರೋಡೀಕರೋತಿ-"ಹರಿ" ಇತಿ ॥ ಪ್ರಾಣಃ ಆಹಂಕಾರಿಕಾಃ ॥ "ಸುರಾಸ್ಯಃ"–ಅಗ್ನಿಃ ॥೨೪॥

## ಕನ್ನಡಾರ್ಥ

ವಿಸ್ತಾರದಿಂದ ಹೇಳಲಾಗಿರುವ ಹಿಂದಿನ ಪ್ರಮೇಯಗಳನ್ನು ಸುಲಭವಾಗಿ ಸರ್ವರ ಬುದ್ಧಿಯಲ್ಲಿ ನಿವೇಶಿಸುವಂತೆ, ಸಂಕ್ಷೇಪದಿಂದ ಸಂಗ್ರಹಿಸಿ ತಿಳಿಸುತ್ತಾರೆ.– "ಹರಿ" ಎಂದು ಮುಂತಾದ ಪದ್ಯಗಳಿಂದ.– "ಪ್ರಾಣ"-ಎಂದರೆ, "ಆಹಂಕಾರಿಕ ಪ್ರಾಣ"– ಎಂದು ಭಾವಿಸಬೇಕು. "ಸುರಾಸ್ಯ"-ದೇವತೆಗಳಿಗೆ

ಮುಖನಾದ ಅಗ್ನಿ. ಅಗ್ನಿಯ ಮುಖಾಂತರವಾಗಿ ದೇವತೆಗಳು ಸ್ವಾಹಾ ಆಹುತಿಯನ್ನು ಸ್ವೀಕರಿಸುವುದರಿಂದ**ಅಗ್ನಿಯು** ದೇವಮುಖನೆನಿಸಿಕೊಳ್ಳುತ್ತಾನೆ. ॥೨೪॥

## ೫. ಶ್ರೀಗುರುಹೃದಯ ಪ್ರಕಾಶಿಕೆ :-

ತಾರತಮ್ಯಜ್ಞಾನ ಹೀಗೆ ತಿಳಿಸಿದನಂತರ ಸಂಗ್ರಹಿಸಿ ಸ್ತುತಿಸಿ ನಮಸ್ಕರಿಸುವ ಬಗೆಯನ್ನು ಆರು ಪದ್ಯಗಳಿಂದ ತಿಳಿಸುತ್ತಾರೆ. ಈ ಪೈಕಿ, ಹರಿ ಸಿರಿ, ವ್ರತತಿಜಾಸನ ಎಂಬ ಎರಡು ಪದ್ಯಗಳಿಗೂ ಏಕಾನ್ವಯ. ಶ್ರೀವಿಷ್ಣು, ಶ್ರೀದೇವಿ, ವಿರಿಂಚಿ ಎಂಬ ಬ್ರಹ್ಮದೇವರು, ಈಶನೆಂಬ ಪ್ರಾಣದೇವರು. ಭಾರತೀ, ಗರುಡ, ಶೇಷ, ಜಾಂಬವತೀ ಮೊದಲಾದ ಕೃಷ್ಣನ ಷಣ್ಮಹಿಷಿಯರು, ಗಿರಿಜಾ ಎಂಬ ಪಾರ್ವತೀ, ನಾಕೇಶನೆಂಬ ಇಂದ್ರ, ಸ್ಮರನೆಂಬ ಕಾಮ, ಪ್ರಾಣನೆಂಬ ತ್ವಗಭಿಮಾನಿ ವಾಯುವು, ಅನಿರುದ್ಧನೆಂಬ ಕಾಮಪುತ್ರ, ಶಚೀ ಎಂಬ ಇಂದ್ರಪತ್ನಿ, ಗುರುವೆಂಬ ಬೃಹಸ್ಪತಿ, ರತಿ ಎಂಬ ಕಾಮಪತ್ನಿ, ಮನುವೆಂಬ ಸ್ವಾಯಂಭುವಮನುವು, ದಕ್ಷಪ್ರಜೇಶ್ವರ, ಬೀಸುವ ಗಾಳಿಗೆ ಅಭಿಮಾನಿ ಪ್ರವಹವಾಯುದೇವರು, ಮಾನವಿ-ಎಂಬ ಶತರೂಪಾದೇವಿ, ಶಶಿ ಎಂಬ ಚಂದ್ರ, ದಿವಾಕರನೆಂಬ ಸೂರ್ಯ, ವರುಣದೇವರು, ನಾರದಋಷಿ, ಸರಾಸ್ಯನೆಂಬ ದೇವತೆಗಳಿಗೆ ಮುಖವೆಂದು ಕರೆಸುವ ಅಗ್ನಿ, ಪ್ರಸೂತೀ-ಎಂಬ ದಕ್ಷಪತ್ನೀ, ಭೃಗುಋಷಿ. ॥೨೪॥

# ಸರ್ವವ್ಯಾಖ್ಯಾನಸಾರಸಂಗ್ರಹ

ಪೂರ್ವೋಕ್ತ ಪದ್ಯಗಳಲ್ಲಿ ವಿವರಿಸಿರುವ ತಾರತಮ್ಯವಿಷಯವನ್ನು ಪ್ರಸಕ್ತಪದ್ಯದಲ್ಲಿ ಸಂಕ್ಷಿಪ್ತವಾಗಿ ಮತ್ತು ಸಂಪುಟಾಕಾರವಾಗಿ ತಿಳಿಸುತ್ತಾರೆ.

1. ಸರ್ವೋತ್ತಮನಾದ, ಸಕಲಜೀವರ ಬಿಂಬರೂಪನಾದ ಸಜ್ಜನರ ಪಾಪ ಪ್ರಕ್ಷಾಳಕನಾದ **ಶ್ರೀಹರಿ,**

2. ನಿತ್ಯಮುಕ್ತಳೂ, ನಿರ್ವಿಕಾರಳೂ, ಶ್ರೀಹರಿಯ ನಿತ್ಯಾವಿಯೋಗಿನಿಯೂ, ದೇಶತಃ ಮತ್ತು ಕಾಲತಃ ಶ್ರೀಹರಿಗೆ ಸಮಳೂ ಮತ್ತು ಗುಣತ. ಅನಂತಾನಂತ ಅಸಮಳೂ ಆದ **ಸಿರಿ ನಾಮಕಳಾದ ಶ್ರೀಲಕ್ಷ್ಮೀದೇವಿ.**

3. ಸೂಕ್ಷ್ಮಸೃಷ್ಟಿಯಲ್ಲಿ ವಾಸುದೇವನಿಂದ ಮಾಯಾದೇವಿಯಲ್ಲಿ ಜನಿಸಿದ ಜೇಷ್ಠಪುತ್ರರೂ ಮತ್ತು ಋಜುಗಣೋತ್ತಮರೂ ಆದ **ವಿರಿಂಚಿನಾಮಕ ಚತುರ್ಮುಖ ಬ್ರಹ್ಮದೇವರು.** ಮತ್ತು ಜೀವೋತ್ತಮರೂ ಅತಿರೋಹಿತ ವಿಮಲವಿಜ್ಞಾನಿಗಳೂ, ವಿಜ್ಞಾನತತ್ತ್ವಾಭಿಮಾನಿಗಳೂ ಆದ ಶ್ರೀಹರಿಯ ಪ್ರಥಮಾಂಗಭೂತರೂ. ತ್ರೈಲೋಕಾಚಾರ್ಯರೂ ಆದ **ಈರ ನಾಮಕ ಶ್ರೀ ವಾಯುದೇವರು.**

4. ಶ್ರೀವಾಯುದೇವರ ಪತ್ನೀ–ಭಕ್ತ್ಯಾಭಿಮಾನಿಗಳೂ, ಬುದ್ಧ್ಯಾಭಿಮಾನಿಗಳೂ, ಆದ **ಶ್ರೀಭಾರತಿದೇವಿ.** ಅಂತೆಯೇ, ಬ್ರಹ್ಮದೇವರ ಪತ್ನಿ, ವಾಗಭಿಮಾನಿಯೂ. ವೇದಾಭಿಮಾನಿಯೂ ಆದ **ಶ್ರೀಸರಸ್ವತೀದೇವಿ.**

5. ಚಿತ್ತಾಭಿಮಾನಿಗಳೂ, ಕಾಲನಾಮಕರೂ ಆದ ತೈಜಸಾಹಂಕಾಭಿಮಾನಿಗಳಾದ **ಗರುಡದೇವರು.**

ಅದೇ ಕಕ್ಷದಲ್ಲಿ, ಜೀವನಾಮಕರಾದ, ವೈಕಾರಿಕಾಂಹಕಾರಭಿಮಾನಿಗಳಾದ, ಸರ್ವಶ್ರೇಷ್ಠರಾದ **ಶ್ರೀಶೇಷದೇವರು (ಫಣಿಪತಿ).**

ಅದೇ ಕಕ್ಷಾಪನ್ನರಾದ ಮನೋಭಿಮಾನಿಗಳೂ, ತಾಮಸಾಂಹಕಾಭಿಮಾನಿಗಳಾದ ಭವನಾಮಕರಾದ **ಶ್ರೀರುದ್ರದೇವರು.**

6. ನೀಲಾದಿ ಶ್ರೀಕೃಷ್ಣನ ಆರು ಮಂದಿ ಪತ್ನಿಯರಾದ **ಷಣ್ಮಹಿಷಿಯರು.**

7. ರುದ್ರದೇವರಪತ್ನೀ, ಗಿರಿಜಾನಾಮಕಳಾದ **ಶ್ರೀಪಾರ್ವತೀದೇವಿ.** ಅದೇ ಕಕ್ಷದಲ್ಲಿ ಗರುಡಪತ್ನೀ **ಸೌಪರ್ಣೀ,** ಶೇಶಪತ್ನೀ **ವಾರುಣೀದೇವಿಯರು.**

8: ಸ್ವರ್ಗಾಧಿಪತಿಯಾದ (**ನಾಕೇಶ**) ಮನೋಭಿಮಾನಿ **ಇಂದ್ರ ದೇವರು** ಸಮಕಕ್ಷಾಪನ್ನನಾದ **ಮನ್ಮಥನು (ಸ್ಮರ).**

9. ತ್ವಗಭಿಮಾನಿಯಾದ, 49 ಮರುದ್ಗಣ ವಿಶಿಷ್ಟನಾದ **ಅಹಂಕಾರಿಕ ಪ್ರಾಣ.**

10. ಕಾಮಪುತ್ರ**ಅನಿರುದ್ಧ**, – ಮನ್ಮಥನ ಪತ್ನೀ **ರತೀದೇವಿ**-ಉಪಸ್ಥತತ್ತ್ವಾಭಿಮಾನಿಯಾದ **ಸ್ವಾಯಂಭುವಮನು**– ಹಸ್ತಾಭಿಮಾನಿಯಾದ **ದಕ್ಷ ಪ್ರಜಾಪತೀ**-ಸುರಗುರುಗಳಾದ ಶ್ರೀ**ಬೃಹಸ್ಪತ್ಯಾಚಾರ್ಯರು**-ಇಂದ್ರಪತ್ನೀ **ಶಚೀದೇವಿ**–ಈ ಆರು ಮಂದಿ ಸಮಾನಕಕ್ಷಾಪನ್ನರು.

11. ಭೂತವಾಯ್ವಾಭಿಮಾನಿಯೂ, 49 ಮರುದ್ಗಣಗಳಲ್ಲಿ ಸೇರಿದವನೂ ಆದ **ಪ್ರವಹಮಾರುತನು.**

12. ಸ್ವಾಯಂಭುವಮನುವಿನ ಪತ್ನಿ **ಶತರೂಪಾದೇವಿ (ಮಾನವಿ)** –ದಕ್ಷಿಣ ದಿಕ್ಪಾಲಕರಾದ **ಯಮಧರ್ಮ** –ದಿಗ್ದೇವತೆಯಾದ **ಚಂದ್ರ**(ಶಶಿ)–ವಿವಸ್ವಾನ್‌ನಾಮಕ ಸೂರ್ಯ (**ದಿವಾಕರ**)-ಈ ನಾಲ್ವರು ಸಮಾನರು.

13. ಉದಕಾಭಿಮಾನಿಯೂ, ರಸಾಭಿಮಾನಿಯೂ, ಸಮುದ್ರ ರಾಜನು ಆದ **ವರುಣದೇವರು.**

14. ದೇವರ್ಷಿಗಳಾದ **ನಾರದರು.**

15. ದೇವಮುಖನಾಮಕನಾದ **ಅಗ್ನಿ (ಸುರಾಸ್ಯ)**-ದಕ್ಷ ಪ್ರಜಾಪತಿಯ ಪತ್ನೀ **ಪ್ರಸೂತಿ**-ಶ್ರೀಹರಿ ಸರ್ವೋತ್ತಮತ್ವವನ್ನು ಜಗತ್ತಿಗೆ ಸಾರಿದ ಮಹಾಜ್ಞಾನಿ **ಭೃಗುಋಷಿ**-ಈ ಮೂವರೂ ಸಮಕಕ್ಷಾಪನ್ನರು.

ಇಲ್ಲಿಗೆ 15 ನೆಯಕಕ್ಷಾಪನ್ನರ ವಿಷಯವಾಯಿತು. ॥೨೪॥

**

## ಪದ್ಯ-೨೫

**ಮೂಲ :–**

**ವ್ರತತಿಜಾಸನ ಪುತ್ರರೆನಿಸುವ ।**
**ವ್ರತಿವರತ್ರಿ ಮರೀಚಿ ವೈವ ।**
**ಸ್ವತನು ತಾರಮಿತ್ರ ನಿರಋುತಿ ಪ್ರವಹಮಾರುತನ ॥**
**ಸತಿ ಧನೇಶಾಶ್ವಿನಿಗಳಿರ್ಗಣ ।**
**ಪತಿಯು ವಿಷ್ವಕ್ಸೇನ ಶೇಷಸು ।**
**ಶತರು ಮನುಗಳುಚಿಥ್ಯ ಚ್ಯವನಮುನಿಗಳಿಗೆ ನಮಿಪ ॥ ॥೨೫॥**

**ಅವತರಣಿಕೆ :–**

ಮರೀಚ್ಯಾದಿ ಚ್ಯವನಋುಷಿಗಳ ಪರ್ಯಂತ ತಾರತಮ್ಯಕ್ರಮವನ್ನು ಕ್ರಮಾಗತವಾಗಿ ತಿಳಿಸುತ್ತಾರೆ. ॥೨೫॥

**ಪ್ರತಿಪದಾರ್ಥ :–**

**ವ್ರತತಿಜಾಸನ** = ಶ್ರೀಹರಿಯ ನಾಭೀಕಮಲೋದ್ಭವರಾದ ಚತುರ್ಮುಖ ಬ್ರಹ್ಮದೇವರ, **ಪುತ್ರರೆನಿಸುವ** = ಮಕ್ಕಳಾದ, **ವ್ರತಿವರ** = ಭಗವನ್ನಿಷ್ಠರಾದ ವ್ರತಾನುಷ್ಠಾನರಾದ, **ಅತ್ರಿ ಮರೀಚಿ ವೈವಸ್ವತನು** = ಅತ್ರಿಋುಷಿ–ಮರೀಚಿ ಮುನಿ–ವೈವಸ್ವತಮನು. **ತಾರ** = ತಾರಾದೇವಿ, **ಮಿತ್ರ** = ಮಿತ್ರನಾಮಕ ಸೂರ್ಯ, **ನಿರಋುತಿ** = ನೈರುತ್ಯದಿಕ್ಕಿನ ಅಧಿಪತಿ ನಿರಋುತಿಯು, **ಪ್ರವಹಮಾರುತನ ಸತಿ** = ಪ್ರವಹವಾಯುವಿನ ಪತ್ನೀ ಪ್ರಾವಹೀದೇವಿ,– ಇವರೆಲ್ಲರೂ 17 ನೆಯ ಕಕ್ಷಾಪನ್ನರು. **ಧನೇಶ**

= ಧನಾಧಿಪತಿಯಾದ ಕುಬೇರ, **ಅಶ್ವಿನಿಗಳಿರ್** = ನಾಸತ್ಯ ಮತ್ತು ದಸ್ರ-ಎಂಬ ಇಬ್ಬರೂ ಅಶ್ವಿನೀದೇವತೆಗಳು. (ಯಮಳರು), **ಗಣಪತಿಯು** = ವಿಘ್ನೇಶ್ವರನು, **ವಿಷ್ವಕ್ಸೇನ** = ವಾಯುಪುತ್ರ ವಿಷ್ವಕ್ಸೇನನು, **ಶೇಷ ಸುಶತರು** = 100 ಮಂದಿ ಸೋಮಪಾನಾರ್ಹರಾದ ಗಣದಲ್ಲಿ ಉತ್ತಮ ಕಕ್ಷದವರಾದ 15 ಮಂದಿ ಕಳೆದು, ಉಳಿದ 85 ಮಂದಿ ಶೇಷಶತಸ್ಥರು, **ಮನುಗಳು** = ಮನುಗಣಕ್ಕೆ ಸೇರಿದ, **ಉಚಿಥ್ಯ ಚ್ಯವನ ಮುನಿಗಳಿಗೆ** = ಉಚಿಥ್ಯ ಮತ್ತು ಚ್ಯವನಋಷಿಗಳಿಗೆ, **ನಮಿಪ** = ವಂದಿಸುತ್ತೇನೆ. ||೨೫||

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನೂ ಸಂಕೋಚದಿಂದಲೇ ತಾರತಮ್ಯವನ್ನು ಹೇಳತಾರೆ.

ಬ್ರಹ್ಮದೇವರ ಮಕ್ಕಳೆನಿಸುವ ಭಗವನ್ನಿಷ್ಠವಾದ ವ್ರತಶ್ರೇಷ್ಠಉಳ್ಳವರಾದ ಅತ್ರಿ, ಮರೀಚಿ, ವೈವಸ್ವತಮನು 16; ತಾರಾದೇವಿಯರು, ಮಿತ್ರನಾಮಕ ಸೂರ್ಯ, ನಿರಋುತಿ. ಪ್ರವಹವಾಯುದೇವರಪತ್ನಿ ಪ್ರಾವಹೀದೇವಿಯರು. ಇವರುಗಳು 17 ನೇ ಕಕ್ಷದವರು. ಕುಬೇರ, ಅಶ್ವಿನೀದೇವತೆಗಳಿಬ್ಬರು, ವಿಘ್ನೇಶ್ವರ, ವಾಯುಪುತ್ರ ವಿಷ್ವಕ್ಸೇನ, 85 ಮಂದಿ ಸೋಮಪಾನಾರ್ಹರಾದ 100 ಮಂದಿ ಒಳಗೆ ಉತ್ತಮ ಕಕ್ಷದವರು ಹೋಗತಾ ಉಳಿದ, ಶೇಷರು 85 ಮಂದಿ, ಮನುಗಳು ದಾರೆಂದರೆ,ದಕ್ಷ, ಸ್ವಾಯಂಭುವ, ವೈವಸ್ವತ-ಈ ಮೂರು ಮಂದಿ ಹೋಗತಾ, ಉಳಿದ 11 ಮಂದಿ ಮನುಗಳು, ಉಚಿಥ್ಯ-ಚ್ಯವನ,ಇವರೇ ಮೊದಲಾದ ಮುನಿಗಳಿಗೆ ನಮಸ್ಕಾರ ಮಾಡುವೆ.

||೨೫||

## ೨. ಭಾವಪ್ರಕಾಶಿಕೆ :-

ವ್ಯಾಖ್ಯಾನ ಇಲ್ಲ.

## ೩. ಭಾವದರ್ಪಣ :-

ವ್ರತತಿಜಾಸನೇತಿ । "ವ್ರತತಿರ್ಲತಾ ಇತ್ಯಮರಃ"- । ಲತೆಯಿಂದ ಹುಟ್ಟಿದಂಥ ಕಮಲವೇ ಆಸನವಾಗಿ ಉಳ್ಳ-ಬ್ರಹ್ಮ ಎಂಬರ್ಥ । ವ್ರತಿವರ = ವ್ರತ ಮಾಡೋದರಲ್ಲಿ ಶ್ರೇಷ್ಠರು-ಎಂಬರ್ಥ. ॥೨೫॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

"ವ್ರತತಿಜಾಸನ"-ಇತಿ ॥ ಲತಾಜಂ-ಪದ್ಮಮ್ ॥
ಶೇಷ-ಪಂಚಾಶೀತಿ ॥ ಮನುಗಳು-ಏಕಾದಶ. ॥೨೫॥

## ಕನ್ನಡಾರ್ಥ

"ವ್ರತತಿಜಾಸನ"-ವ್ರತತಿ ಎಂದರೆ, ಲತಾ-ಲತೆಯಲ್ಲಿ ಹುಟ್ಟಿದುದು ಪದ್ಮ ಪದ್ಮಾಸನ-ಎಂದರೆ,ಚತುರ್ಮುಖ ಬ್ರಹ್ಮನೆಂದು ಅರ್ಥ. ಅವನ ಪುತ್ರರು ಮರೀಚಿ-ಮುಂತಾದವರು ಎಂದು ತಿಳಿಯಬೇಕು.

ಶೇಷಶತರು-ಎಂದರೆ 85 ದೇವತೆಗಳೆಂದು ತಿಳಿಯಬೇಕು. ಹಿಂದೆ "ಉಕ್ತಶೇಷರು"-ಎಂಬಲ್ಲಿ ಈ ವಿಷಯವು ನಿರೂಪಿತವಾಗಿರುತ್ತದೆ.

ಮನುಗಳು ಹನ್ನೊಂದು- ಎಂದು ತಿಳಿಯಬೇಕು. ಸ್ವಾಯಂಭುವ, ಸ್ವಾರೋಚಿಷ, ವೈವಸ್ವತರನ್ನು-ಈ ಕ್ರಮದಲ್ಲಿ ಪರಿಗಣಿಸಬಾರದು. ॥೨೫॥

೫. ಶ್ರೀಗುರುಹೃದಯ ಪ್ರಕಾಶಿಕೆ :-

ವ್ರತತಿಜಾಸನ-ಎಂಬ ತಾವರೇ ಬಳ್ಳಿಯಲ್ಲಿ ಹುಟ್ಟಿದ ಕಮಲವೇ ಪೀಠವಾಗಿರುವ ಬ್ರಹ್ಮನ ಮಕ್ಕಳಾದ ವ್ರತಶ್ರೇಷ್ಠ ಅತ್ರಿಋಷಿ, ಮರೀಚಿಋಷಿ, ವೈವಸತಮನು, ಬೃಹಸ್ಪತಿಪತ್ನಿ ತಾರಾದೇವಿ, ಮಿತ್ರನಾಮಕ ಸೂರ್ಯ, ನಿರಋತಿ ಎಂಬ ದಿಕ್ಪತಿ, ಪ್ರವಹವಾಯುವಿನ ಪತ್ನಿ ಪ್ರಾವಹೀದೇವಿ, ಧನಪತಿ ಕುಬೇರ, ಅಶ್ವಿನೀದೇವತೆಗಳಿಬ್ಬರು, ಗಣಪತಿ, ವಿಷ್ವಕ್ಸೇನನೆಂಬ ದೇವರ ದ್ವಾರಪಾಲಾಧಿಪತಿ, ಎಂಭತ್ತೇಳು ಜನ ಶೇಷಶತಸ್ಥ ದೇವತೆಗಳು, ಉಚಿಥ್ಯ ಋಷಿ, ಚ್ಯವನಋಷಿ-ಮೊದಲಾದವರಿಗೆ ನಮಸ್ಕರಿಸುವೆನು. ॥೨೫॥

## ಸರ್ವವ್ಯಾಖ್ಯಾನಸಾರಸಂಗ್ರಹ

**ವ್ರತತಿ**-ಎಂದರೆ ಲತಾ ಅಥವಾ ಬಳ್ಳಿ ಎಂದರ್ಥ. "ವ್ರತತಿ ಲತಾ"-**ಇತ್ಯಮರಃ.** ಪದ್ಮನಾಭೀರೂಪಿಯಾದ ಶ್ರೀಪರಮಾತ್ಮನ ಸ್ವಇಚ್ಛೆಯಿಂದ ನಾಭಿಯಲ್ಲಿ ಉತ್ಪನ್ನವಾದ ಸುವರ್ಣಾತ್ಮಕವಾದ ಕಮಲದ ಬಳ್ಳಿಯಲ್ಲಿ ಉಂಟಾದ ಕಮಲವನ್ನೇ ತನ್ನ ಆಸನವನ್ನಾಗಿ ಉಳ್ಳವರು ಚತುರ್ಮುಖ ಬ್ರಹ್ಮದೇವರು. ಕಮಲಾಸನರಾದ ಬ್ರಹ್ಮದೇವರನ್ನು **ವ್ರತತಿಜಾಸನ**-ಎಂದಿದ್ದಾರೆ ದಾಸರಾಯರು.

ಬ್ರಹ್ಮನ ಪುತ್ರರು-ವ್ರತನಿಷ್ಠನಾದ ಅತ್ರಿಋಷಿ – ಮರೀಚಿ – ವೈವಸ್ವತ ಮನುಗಳು.

**ಅತ್ರಿಋಷಿ :-**

ಮನ್ವಂತರದ ಸಪ್ತರ್ಷಿಗಳಲ್ಲಿ ಒಬ್ಬನು. ಬ್ರಹ್ಮಮಾನಸಪುತ್ರನು. ಕರ್ದಮನ ಪುತ್ರಿ-ಅನುಸೂಯ ಈತನ ಪತ್ನಿ. ಶ್ರೀಹರಿಯು ದತ್ತಾತ್ರೇಯ

ನೆಂಬ ಹೆಸರಿನಿಂದ ಅತ್ರಿಪುತ್ರನಾಗಿ ಅವತರಿಸಿದನು. ಈತನ ಕಣ್ಣಿನಿಂದ ಚಂದ್ರನು ಜನಿಸಿದನು. ಅದರಿಂದ ಚಂದ್ರನಿಗೆ "ಅತ್ರಿಜ"–ಎಂಬ ಹೆಸರು. ಮಂತ್ರದಷ್ಟನಾದ ಮಹರ್ಷಿ.

**ಮರೀಚಿ :–**

ಸ್ವಾಯಂಭುವಮನ್ವಂತರದಲ್ಲಿ ಬ್ರಹ್ಮಮಾನಸಪುತ್ರರಲ್ಲಿ ಒಬ್ಬ. ಈತನ ಪುತ್ರ ಕಶ್ಯಪ ಮಹಾಮುನಿ. ಕರ್ದಮಮುನಿಯ ಪುತ್ರಿ ಕಲಾದೇವಿ ಈತನ ಹಿರಿಯ ಪತ್ನಿ. ಊರ್ಣೇ ಎಂಬುವಳು ಈತನ ಕಿರಿಯ ಪತ್ನಿ. ಮಂತ್ರ ದ್ರಷ್ಟನಾದ ಮಹರ್ಷಿ.

**ವೈವಸ್ವತಮನು :–**

ವಿವಸ್ವಂತನೆಂಬ ಆದಿತ್ಯನಿಂದ ತ್ವಷ್ಟೃವಿನ ಪುತ್ರ ಸಂಜ್ಞಾದೇವಿಯಲ್ಲಿ ಜನಿಸಿದವ. ಇವನಿಗೆ ಶ್ರಾದ್ಧದೇವ, ಮನು-ಎಂಬ ಹೆಸರುಗಳಿವೆ. ಪ್ರಸಕ್ತ ಮನ್ವಂತರಾಧಿಪನು ವೈವಸ್ವತಮನುವು. ಈತನು ಬ್ರಹ್ಮನ ವಂಶೋದ್ಭವ.

ಮುಂದಿನ ಕಕ್ಷಾಪನ್ನರು–**ತಾರಾದೇವಿ**–ಸುರುಗುರು ಬೃಹಸ್ಪತ್ಯಾಚಾರ್ಯರ ಪತ್ನೀ. ಶಂಯು, ನಿಶ್ಚ್ಯವನ, ವಿಶ್ವಜಿತ, ವಿಶ್ವಭುಕ್, ಬಡಬಾಗ್ನಿ ಮತ್ತು ಸ್ವಿಷ್ಟಕೃತ-ಎಂಬ ಆರು ಮಂದಿ ಈಕೆಯ ಪುತ್ರರು. ಚಂದ್ರನು ಗುರುಪತ್ನೀ ಗಮನ ಮಾಡಿದ ದೋಷಕ್ಕೆ ಗುರಿಯಾದ. ಚಂದ್ರನಿಂದ ಈಕೆಯಲ್ಲಿ ಬುಧನು ಜನಿಸಿದನು.

**ಮಿತ್ರ**-ಮಿತ್ರನಾಮಕ ಸೂರ್ಯನು ದ್ವಾದಶಾದಿತ್ಯದಲ್ಲಿ ಒಬ್ಬನು. ಇವನು ಗುದೇಂದ್ರಿಯಾಧಿಪತಿ. ತತ್ತ್ವಾಭಿಮಾನಿ ದೇವತೆ.

**ನಿರ‌ಋತಿ** –ನೈರುತ್ಯದಿಕ್ಕಿನ ಅಧಿಪತಿ. ಈತನ ಪತ್ನಿ ದೀರ್ಘಾದೇವಿ. ದೈತ್ಯಯೋನಿಜನಾದರೂ, ಪ್ರಹ್ಲಾದ– ವಿಭೀಷಣರಂತೆ ಭಾಗವತೋತ್ತಮನು.

**ಪ್ರವಹ ಮಾರುತನ ಸತಿ**–ಭೂತಪಂಚಕಗಳಲ್ಲಿ ಒಂದಾದ ವಾಯು ತತ್ತ್ವದ ಅಭಿಮಾನಿ ಪ್ರವಹವಾಯುವು. ಈತನ ಪತ್ನಿಯು ಪ್ರಾವಹೀದೇವಿ.

ಮೇಲ್ಕಂಡ ತಾರಾ–ಮಿತ್ರ–ನಿಋತಿ–ಪ್ರಾವಹೀ–ಈ ನಾಲ್ಕು ಮಂದಿ 17 ನೆಯ ಕಕ್ಷಾಪನ್ನರು. ತದನಂತರ, **ಧನೇಶ**–ಧನಾಧಿಪತಿಯಾದ ಕುಬೇರನು. ಈತನು ಉತ್ತರ ದಿಕ್ಕಿನ ಅಧಿಪತಿ. ವಿಶ್ರವಸನೆಂಬ ಬ್ರಹ್ಮನಿಂದ ಇಲಬಲೆಯಲ್ಲಿ ಜನಿಸಿದವನು. ಇವನಿಗೆ "ಸೋಮ"–ನೆಂತಲೂ ಹೆಸರು. ಈ ಕಾರಣದಿಂದ ಉತ್ತರ ದಿಕ್ಕಿಗೆ "ಸೌಮ್ಯ"-ಎಂದು ಹೆಸರು ಬಂದಿದೆ. ಯಕ್ಷರು ಈತನ ಪ್ರಜೆಗಳು. ನರವಾಹನನು. ಪತ್ನಿ ಋದ್ಧಿಯು. ನಳಕೂಬರನು ಕುಬೇರನ ಪುತ್ರ. ಮಹಾರೂಪವಂತನು. ಅಲಕಾವತಿ- ಈತನ ರಾಜಧಾನಿ, ರುದ್ರದೇವರಿಗೆ ಆಪ್ತಮಿತ್ರನು.

**ಅಶ್ವಿನಿಗಳು**–ಸುರವೈದ್ಯರು. ಯಮಳರು. ನಾಸಿಕೇಂದ್ರಿಯಾಭಿಮಾನಿಗಳು. ನಾಸತ್ಯ ಮತ್ತು ದಸ್ರ–ಎಂದು ಈ ಅವಳಿಗಳ ಹೆಸರು. ಸೂರ್ಯಪತ್ನಿಯಾದ ಸಂಜ್ಞಾದೇವಿಯು ಕುದುರೆ ರೂಪದಿಂದ್ದಾಗ, ಸೂರ್ಯನಿಂದ ಜನಿಸಿದ ಅವಳಿ ಮಕ್ಕಳು. ಇದರಿಂದ ಅವರಿಗೆ "ಅಶ್ವಿನೀದೇವತೆ"–ಗಳೆಂದು ಹೆಸರಾಯಿತು. ಪಾಂಡುರಾಜನ ದ್ವಿತೀಯ ಪತ್ನಿ ಮಾದ್ರಿಯು ಇವರ ಮಂತ್ರಬಲದಿಂದ ನಕುಲ- ಸಹದೇವರನ್ನು ಪಡೆದಳು. ಶೂದ್ರಜಾತಿಗೆ ಸೇರಿದ ದೇವತೆಗಳು.

**ಗಣಪತಿ**–ಪಾರ್ವತೀಪುತ್ರನಾದ ವಿನಾಯಕನು. ಭೂತಾಕಾಶಾಧಿಪತಿ. ಶಬ್ದಗುಣಗ್ರಹಕನು. ವಿಘ್ನೇಶ್ವರನೆಂಬ ನಾಮಾಂತರ. ಸಮಸ್ತಕಾರ್ಯಗಳಲ್ಲೂ ಆದಿಪೂಜಿತನು.

**ವಿಷ್ವಕ್ಸೇನ**-ವಾಯುದೇವರ ಪುತ್ರನು. ನೈವೇದ್ಯಕಾಲದಲ್ಲಿ ಅಡ್ಡಲಾಗಿ ಹಿಡಿಯುವ ವಸ್ತ್ರರೂಪದಲ್ಲಿದ್ದಾನೆ.

**ಶೇಷಸಂಶತರು**–85 ಮಂದಿ ಶೇಷಶತಸ್ಥರು. ಸೋಮಪಾನಾರ್ಹರಾದ 100 ಮಂದಿ ದೇವತೆಗಳಿದ್ದಾರೆ. ಇವರಲ್ಲಿ ಉತ್ತಮಕಕ್ಷಕ್ಕೆ ಸೇರಿದ 85 ಜನ ಹೋಗತಾ, ಉಳಿದವರು 85 ಮಂದಿ ಶೇಷಶತಸ್ಥರೆನಿಸುವರು.

**ಮನುಗಳು**–ಬ್ರಹ್ಮದೇವರ ಒಂದು ಹಗಲಿನಲ್ಲಿ ಸ್ವರ್ಗದಲ್ಲಿ 14 ಮಂದಿ ಇಂದ್ರರೂ, ಭೂಮಿಯಲ್ಲಿ 14 ಮಂದಿ ಮನುಗಳೂ ರಾಜ್ಯವಾಳುವರು. ಈ 14 ಮಂದಿ ಮನುಗಳಲ್ಲಿ ದಕ್ಷ– ಸ್ವಾಯಂಭುವಮನು– ವೈವಸತಮನು– ಈ ಮೂರು ಮಂದಿ ಹೋಗತಾ-ಉಳಿದ 11 ಮಂದಿ ಮನುಗಳು.

**ಉಚಿಥ್ಯ**–ಒಬ್ಬ ಮಹರ್ಷಿ. ಅಂಗಿರಸನ ಪುತ್ರ. ಬೃಹಸ್ಪತಿ ಮತ್ತು ಸಂವರ್ತರು-ಈತನ ತಮ್ಮಂದಿರು. ಚಂದ್ರನ ಪುತ್ರಿ-ಭದ್ರೆ-ಎಂಬುವಳು ಈತನ ಪತ್ನೀ.

**ಚ್ಯವನ**–ವರುಣಪುತ್ರನಾದ ಭೃಗುಮಹರ್ಷಿಯ ಪುತ್ರ. ಪುಲೋಮೆ ಈತನ ತಾಯಿ. ಪುಲೋಮಯ ಗರ್ಭದಲ್ಲಿರುವಾಗ ಒಬ್ಬ ರಾಕ್ಷಸನು ಪುಲೋಮೆಯನ್ನು ಅಪಹರಿಸಿದ. ಆಗ ಆಕೆ ಭಯಗ್ರಸ್ತಳಾಗಿ, ಗರ್ಭದಿಂದ ಶಿಶುವು ಚ್ಯುತವಾಯಿತು. ಈ ಕಾರಣದಿಂದ "**ಚ್ಯವನ**"-ನೆಂಬ ಹೆಸರಾಯಿತು. ಶಿಶು ಆ ರಾಕ್ಷಸನನ್ನು ಕ್ರೂರದೃಷ್ಟಿಯಿಂದ ನೋಡಿತು. ಕೂಡಲೇ ರಾಕ್ಷಸನು ಸುಟ್ಟು ಬೂದಿಯಾದನು. ದೈತ್ಯಗುರುಗಳಾದ ಶುಕ್ರಾಚಾರ್ಯರು ಈತನ ಸಹೋದರರು. ಶರ್ಯಾತಿಯ ಪುತ್ರಿ ಸುಕನ್ಯೆಯನ್ನು ಲಗ್ನವಾಗಿ, ಪ್ರಮತಿ ಎಂಬ ಪುತ್ರನನ್ನು ಪಡೆದ.

ಪೂರ್ವೋಕ್ತದೇವತೆಗಳ ತಾರತಮ್ಯವಿಚಾರವು 11 ಮತ್ತು 12 ನೆಯ ಪದ್ಯಗಳಲ್ಲಿ ವಿವರಿಸಲ್ಪಟ್ಟಿದೆ. ಅಲ್ಲಿ ನೋಡುವುದು. ॥೨೫॥

❋❋

## ಪದ್ಯ-೨೬

**ಮೂಲ :-**

**ಶತಸುಪುಣ್ಯಶ್ಲೋಕರೆನಿಸುವ |**
**ಕ್ಷಿತಿಪರಿಗೆ ನಮಿಸುವೆನು ಭಾಗೀ |**
**ರಥಿ ವಿರಾಟ್ ಪರ್ಜನ್ಯ ರೋಹಿಣಿ ಶಾಮಲಾ ಸಂಜ್ಞಾ ||**
**ಹುತವಹನ ಮಹಿಳಾ ಬುಧೋಷಾ |**
**ಕ್ಷಿತಿ ಶನೈಶ್ಚರ ಪುಷ್ಕರರಿಗಾ |**
**ನತಿಸಿ ಬಿನ್ನೈಸುವೆನು ಭಕ್ತಿ ಜ್ಞಾನವೀಯಲೆಂದು || ||೨೬||**

**ಅವತರಣಿಕೆ :-**

ಅವಶಿಷ್ಟತಾರತಮ್ಯವನ್ನು ಸಂಕ್ಷೇಪವಾಗಿ ತಿಳಿಸುತ್ತಾರೆ. ||೨೬||

**ಪ್ರತಿಪದಾರ್ಥ :-**

**ಶತಸುಪುಣ್ಯಶ್ಲೋಕರೆನಿಸುವ** = ಪುಣ್ಯಶ್ಲೋಕರೆನಿಸುವ 100 ಸಂಖ್ಯಾತರಾದ ಕ್ಷಿತಿಪರಿಗೆ ನಮಿಸುವೆನು. ಇವರು 19 ನೆಯ ಕಕ್ಷಾಪನ್ನರು. **ಭಾಗೀರಥಿ** = ಗಂಗಾದೇವಿ, **ವಿರಾಟ್** = ವಿರಾಟ್, **ಪರ್ಜನ್ಯ** = ಪರ್ಜನ್ಯನಾಮಕ ಸೂರ್ಯ, **ರೋಹಿಣಿ**= ಚಂದ್ರನ ಪತ್ನಿ ರೋಹಿಣೀದೇವಿ, **ಶಾಮಲಾ** = ಯಮಧರ್ಮನ ಪತ್ನಿ ಶ್ಯಾಮಲಾದೇವಿ, **ಸಂಜ್ಞಾ** = ಸೂರ್ಯಪತ್ನಿ ಸಂಜ್ಞಾದೇವಿ.- ಈ ಆರು ಮಂದಿ 20 ನೆಯ ಕಕ್ಷಕ್ಕೆ ಸೇರಿದವರು. **ಹುತವಹನ ಮಹಿಳಾ** = ಅಗ್ನಿಪತ್ನಿ ಸ್ವಾಹಾದೇವಿ, (22 **ನೆಯ ಕಕ್ಷ), ಬುಧ** = ಚಂದ್ರನ ಪುತ್ರ ಬುಧ **(23ನೆಯ ಕಕ್ಷ), ಉಷಾ**

= ಅಶ್ವಿನೀದೇವತೆಗಳ ಪತ್ನೀ ಉಷಾದೇವಿ, ಮತ್ತು **ಕ್ಷಿತಿ** = ಭೂದೇವಿ- ಈರ್ವರೂ 24ನೆಯ ಕಕ್ಷಾಪನ್ನರು. **ಶನೈಶ್ಚರ** = ಸೂರ್ಯಪುತ್ರ ಶನಿ ದೇವ, (25ನೆಯ ಕಕ್ಷ) ಮತ್ತು **ಪುಷ್ಕರರಿಗೆ** = ಕರ್ಮಾಭಿಮಾನಿ ಪುಷ್ಕರ ಇವರೆಲ್ಲರಿಗೂ, **ಆನತಿಸಿ** = ಚೆನ್ನಾಗಿ ವಂದನೆ ಮಾಡಿ, **ಭಕ್ತಿ ಜ್ಞಾನ ನೀಯಲೆಂದು** = ಭಗವದ್ವಿಷಯಕವಾದ ನಿಶ್ಚಲಭಕ್ತಿ ಮತ್ತು ಸಮೀಚೀನ ವಾದ ಜ್ಞಾನಗಳನ್ನು ಕೊಡಲಿ–ಎಂದು, **ಬಿನ್ನೈಸುವೆನು** = ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಇಲ್ಲಿಗೆ 26ನೆಯ ಕಕ್ಷ ತಾರತಮ್ಯ ವಿಷಯ ಮುಗಿಯಿತು.

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಇನ್ನೂ ಅವಶಿಷ್ಟದಿಂದ ಸಂಕೋಚವಾಗಿ ತಾರತಮ್ಯ ಹೇಳುತಾರೆ.

ಪುಣ್ಯಶ್ಲೋಕರೆನಿಸತಕ್ಕ 100 ಸಂಖ್ಯಾತರಾದ 19ನೇ ಕಕ್ಷದವರಾದ ಭೂಪಾಲಕರಾದವರಿಗೆ ವಂದನೆಯ ಮಾಡುವೆನು. 19; ಗಂಗಾದೇವಿ ವಿರಾಟ್ 20; ಪರ್ಜನ್ಯನಾಮಕಸೂರ್ಯ, ರೋಹಿಣಿ, ಶ್ಯಾಮಲಾದೇವಿ, ಸಂಜ್ಞಾದೇವಿ, 21; ಅಗ್ನಿದೇವರ ಪತ್ನಿ ಸ್ವಾಹಾದೇವಿ 22; ಬುಧನು 23; ಉಷಾದೇವಿ, ಭೂದೇವಿ 24; ಶನಿದೇವ 25; ಕರ್ಮಾಭಿಮಾನಿ ಪುಷ್ಕರ 26;–ಮೊದಲಾದ ಈ ಯಾವತ್ತೂ ಮಂದಿಗೆ ನಾನು ಚಂದಾಗಿ ವಂದನ ಮಾಡಿ, ಭಗವದ್ವಿಷಯಕವಾದ ಭಕ್ತಿ ಏನು,- ಜ್ಞಾನವೇನು– ಇವುಗಳನ್ನು ಕೊಡಲೆಂದು ವಿಜ್ಞಾಪನೆ ಮಾಡಿಕೊಂಬೆನು- ಎಂತ ತಾತ್ಪರ್ಯ. ಇಲ್ಲಿಗೆ 26ನೇ ಕಕ್ಷ ಆಯಿತು. ॥೨೬॥

### ೨. ಭಾವಪ್ರಕಾಶಿಕೆ :–

ವ್ಯಾಖ್ಯಾನ ಇಲ್ಲ.

### ೩. ಭಾವದರ್ಪಣ :–

ಶತಸುಪುಣ್ಯೇತಿ. ॥೨೬॥

### ೪. ಶ್ರೀವ್ಯಾಸದಾಸ ಸಿದ್ಧಾಂತಕೌಮುದೀ :–

"ಶತ"–ಇತಿ ॥ "ಈಯಲಿ"-ಕೊಡಲಿ. ॥೨೬॥

### ಕನ್ನಡಾರ್ಥ

ಈ ಪದಾರ್ಥವು ಸುಗಮವಿರುವುದರಿಂದ ವ್ಯಾಖ್ಯಾನಿಸಿರುವುದಿಲ್ಲ. "ಈಯಲಿ"–"ಕೊಡಲಿ"- ॥೨೬॥

### ೫. ಶ್ರೀಗುರುಹೃದಯಪ್ರಕಾಶಿಕೆ :–

ಶತಸುಪುಣ್ಯಶ್ಲೋಕರೆನಿಸುವ, ಧರ್ಮಕೀರ್ತಿಯುಳ್ಳ ಪ್ರಿಯವ್ರತಾದಿ ದೊರೆಗಳಿಗೆ ನಮಸ್ಕರಿಸುವೆನು. ಭಾಗೀರಥೀ, ಬ್ರಹ್ಮಾಂಡಾಭಿಮಾನಿ ವಿರಾಟ್ ದೇವಿಯರು, ಪರ್ಜನ್ಯನೆಂಬ ಸೂರ್ಯ, ರೋಹಿಣೀ ಎಂಬ ಚಂದ್ರನಹೆಂಡತಿ, ಸಂಜ್ಞಾ ಎಂಬ ಸೂರ್ಯಪತ್ನಿ, ಹುತವಹನೆಂಬ ಅಗ್ನಿಯಪತ್ನಿ ಸ್ವಾಹಾದೇವಿ, ಬುಧನೆಂಬ ಚಂದ್ರನ ಪುತ್ರ, ಉಷಾ ಎಂಬ ಅಶ್ವಿನೀಪತ್ನಿ, ಕ್ಷಿತಿ ಎಂಬ ಭೂದೇವಿ, ಶನೈಶ್ಚರ, ಪುಷ್ಕರನೆಂಬ ಸತ್ಕರ್ಮಾಭಿಮಾನಿ– ಇವರುಗಳಿಗೆಲ್ಲಾ ನಮಸ್ಕರಿಸಿ, ದೇವರಲ್ಲಿಯೂ, ನಿಮ್ಮಲ್ಲಿಯೂ ಸಹ ಈ ರೀತಿ ಜ್ಞಾನ ಭಕ್ತಿ ಕೊಸಿಡಿ-ಎಂದು ವಿಜ್ಞಾಪಿಸುವೆನು. ॥೨೬॥

## ಸರ್ವವ್ಯಾಖ್ಯಾನಸಾರಸಂಗ್ರಹ

ಮುಂದಿನ ಕಕ್ಷಾಪನ್ನರಾದವರ ತಾರತಮ್ಯವಿಚಾರವನ್ನು ಪ್ರಸಕ್ತಪದ್ಯದಿಂದ ಸಂಕ್ಷೇಪವಾಗಿ ತಿಳಿಸುತ್ತಾರೆ.

1, ಶತಪುಣ್ಯಶ್ಲೋಕರೆನಿಸುವ, ಧರ್ಮಕೀರ್ತಿಯುತರಾದ ಪ್ರಿಯ ವ್ರತಾದಿ 100 ಸಂಖ್ಯಾಕರಾದ ಚಕ್ರವರ್ತಿಗಳಿಗೆ ನಮಿಸುತ್ತಾರೆ. ಇವರು 19 ನೆಯ ಕಕ್ಷಾಪನ್ನರು.

2. **ಭಾಗೀರಥಿ :-**

ಶ್ರೀಹರಿಯ ಪಾದೋದ್ಭವೆಯಾದ ಗಂಗೆಯನ್ನು ಭಗೀರಥ ಮಹಾರಾಜನು ತನ್ನ ಪೂರ್ವಿಕರ ಸದ್ಗತಿ ಪ್ರಾಪ್ತಿಗಾಗಿ ಭೂಲೋಕಕ್ಕೆ ಕರೆತಂದ ಕಾರಣದಿಂದ **ಭಾಗೀರಥಿ**–ಎಂದು ಕರೆಯುವರು.

3. **ವಿರಾಟ್ :–**

ಬ್ರಹ್ಮಾಂಡಾಭಿಮಾನಿಯಯದ **ವಿರಾಟ್‌ದೇವಿ.** ಕಾಮಪುತ್ರ ಅನಿರುದ್ಧನ ಹೆಂಡತಿ.

4. **ಪರ್ಜನ್ಯ :-**

ಪರ್ಜನ್ಯನಾಮಕ ಸೂರ್ಯ. ಈತನಿಂದಲೇ ಪರ್ಜನ್ಯದೇವತೆಗಳು (ಮೇಘಾಭಿಮಾನಿ ದೇವತೆಗಳು) ಮಳೆ ಸುರಿಸುವರು.

5. **ರೋಹಿಣೀ :–**

ಚಂದ್ರನ ಪತ್ನಿಯು ರೋಹಿಣಿಯು. ದಕ್ಷಪ್ರಜಾಪತಿಯ ಪುತ್ರಿ. 27 ನಕ್ಷತ್ರಗಳಿಗೆ ಅಧಿಪತಿಯಾದ ಚಂದ್ರನ ಪ್ರೇಮದ ಪತ್ನಿ.

6. **ಶ್ಯಾಮಲಾ :–**

ಯಮಧರ್ಮನ ಪತ್ನಿಗೆ ಶ್ಯಾಮಲಾದೇವಿ-ಎಂದು ಹೆಸರು.

7. **ಸಂಜ್ಞಾ :-**

ಸೂರ್ಯನ ಪತ್ನೀ–ಸಂಜ್ಞಾದೇವಿ. ವೈವಸ್ವತ ಮತ್ತು ಯಮ ಎಂಬು ವರು ಇವಳ ಪುತ್ರರು. ಯಮುನೆ ಈಕೆಯ ಪುತ್ರಿ. ಸಂಜ್ಞಾದೇವಿಯು

ಸೂರ್ಯನ ತೇಜಸ್ಸನ್ನು ತಾಳಲಾರದೆ. ತನ್ನಂತೆಯೇ ಇದ್ದ ಒಬ್ಬ ಸ್ತ್ರೀಯನ್ನು ನಿರ್ಮಿಸಿ ಸೂರ್ಯನ ಬಳಿ ಇಟ್ಟು, ತನ್ನ ತೌರುಮನೆಗೆ ಹೋದಳು. ಅವಳೇ ಛಾಯಾದೇವಿ. ಅವಳಲ್ಲಿ ಸೂರ್ಯನು ಸಾವರ್ಣೀಮನು ಮತ್ತು ಶನಿಯನ್ನು ಪುತ್ರರನ್ನಾಗಿ ಪಡೆದನು.

8. **ಹುತವಹನ ಮಹಿಳಾ :–**

ಯಜ್ಞಗಳಲ್ಲಿ ಹವಿಸ್ಸನ್ನು ದೇವತೆಗಳಿಗೆ ಸೇರಿಸುವ, ಹಾಗೂ ಯಜ್ಞ ಶೇಷವನ್ನು ಭುಂಜಿಸುವ ಅಗ್ನಿಗೆ **ಹುತವಹನೆಂದು** ಹೆಸರು. ಅಗ್ನಿಯ ಪತ್ನೀ ಸ್ವಾಹಾದೇವಿ. ಸ್ವಾಹಾದೇವಿಯೇ ಹುತವಹನ ಮಹಿಳಾ-ಎನಿಸುವಳು. ಈಕೆಯೂ ಸಹ ದಕ್ಷನಪುತ್ರಿ.

9. **ಬುಧ –**

ಚಂದ್ರನ ಪುತ್ರನೇ ಬುಧನು–ನವಗ್ರಹಗಳಲ್ಲಿ ಒಬ್ಬನು. ಚಂದ್ರನಿಂದ ಬೃಹಸ್ಪತಿಯ ಪತ್ನಿ–ತಾರಾದೇವಿಯಲ್ಲಿ ಜನಿಸಿದವನು. ಜಲಾಭಿಮಾನಿಯು.

10. **ಉಷಾ :–**

ಅಶ್ವಿನೀದೇವತೆಗಳ ಪತ್ನಿಯು ಉಷಾದೇವಿ. ನಾಸಿಕೇಂದ್ರಿಯಾದ ಅಭಿಮಾನಿ ದೇವತೆ.

11. **ಕ್ಷಿತಿ –**

ಭೂದೇವಿಗೆ ಕ್ಷಿತಿ ಎಂದು ಹೆಸರು. ಭೂತತ್ತ್ವಕ್ಕೆ ಅಭಿಮಾನಿ.

12. **ಶನ್ಯೈಶ್ಚರ :–**

ಸೂರ್ಯಪುತ್ರನಾದ ಶನಿ. ನವಗ್ರಹಗಳಲ್ಲಿ ಒಬ್ಬ. ಛಾಯಾಪುತ್ರ. ಭೂತತ್ತ್ವಕ್ಕೆ ಅಭಿಮಾನಿ.

13. **ಪುಷ್ಕರ :—**

ಸತ್ಕರ್ಮಾಭಿಮಾನಿ ದೇವತೆ.

ಪೂರ್ವೋಕ್ತಗಣದಲ್ಲಿ-

ಗಂಗಾದೇವಿ (ಭಾಗೀರಥಿ) -ವಿರಾಟ್‌ದೇವಿ– ಪರ್ಜನ್ಯ– ರೋಹಿಣೀ-ಶ್ಯಾಮಲಾದೇವಿ-ಸಂಜ್ಞಾ -ಈ ಆರು ಮಂದಿ 20ನೆಯ ಕಕ್ಷಾಪನ್ನರು. ಇವರು 19ನೆಯ ಕಕ್ಷದವರಿಗಿಂತ ಎರಡು ವಿಜಾತೀಯ ಗುಣದಿಂದ ಅಧಮರು.

ಸ್ವಾಹಾದೇವಿ (ಹುತವಹನ ಮಹಿಳೆ) -21ನೆಯ ಕಕ್ಷಕ್ಕೆ ಸೇರಿದವಳು. 20ನೆಯ ಕಕ್ಷಾಪನ್ನರಾದ ಗಂಗಾ ಪರ್ಜನ್ಯಾದಿಗಳಿಗಿಂತ ಎರಡು ವಿಜಾತಿ ಗುಣಾಧಮಳು.

ಬುಧನು 22ನೆಯ ಕಕ್ಷೆ. ಸ್ವಾಹಾದೇವಿಗಿಂತ ಒಂದು ಗುಣ ಅಧಮನು.

ಉಷಾ-23ನೆಯ ಕಕ್ಷ. ಬುಧನಿಗಿಂತ ಎರಡು ವಿಜಾತಿಗುಣಾಧಮಳು.

ಕ್ಷಿತಿ (ಭೂದೇವಿ)–24ನೆಯ ಕಕ್ಷ. ಉಷೆಗಿಂತ ಎರಡು ವಿಜಾತಿಗುಣ ಹೀನಳು.

ಶನೈಶ್ಚರನು 25ನೆಯ ಕಕ್ಷ. ಕ್ಷಿತಿಗಿಂತಲೂ ಎರಡು ವಿಜಾತಿಗುಣಾಧಮನು.

ಪುಷ್ಕರನು 26ನೆಯ ಕಕ್ಷ. ಶನೈಶ್ಚರನಿಗಿಂತಲೂ ಎರಡು ಗುಣ ಕಡಿಮೆ.

ಇಲ್ಲಿಯ ಪರ್ಯಂತ, 26ನೆಯ ಕಕ್ಷಾಪನ್ನರಾದವರ ತಾರತಮ್ಯವಿಚಾರ ಮುಗಿಯಿತು. ॥೨೬॥

**

## ಪದ್ಯ–೨೭

**ಮೂಲ :–**

**ನೂರಧಿಕವಾಗಿಪ್ಪ ಮತ್ತ ದಿ ।**
**ನಾರುಸಾವಿರ ನಂದಗೋಪ ಕು ।**
**ಮಾರನರ್ಧಾಂಗಿಯರಗಸ್ತ್ಯಕಥಿ ಮುನೀಶ್ವರರು ॥**
**ಊರ್ವಶೀ ಮೊದಲಾದ ಅಪ್ಸರ ।**
**ನಾರಿಯರು ಶತ ತುಂಬುರರು ಕಂ ।**
**ಸಾರಿ ಗುಣಗಳ ಕೀರ್ತನೆಯ ಮಾಡಿಸಲಿ ಎನ್ನಿಂದ ॥ ॥೨೭॥**

**ಅವತರಣಿಕೆ :-**

ಅವಶಿಷ್ಟ ತಾರತಮ್ಯವಿಚಾರವನ್ನು ಇನ್ನೂ ಸಂಕ್ಷಿಪ್ತವಾಗಿ ತಿಳಿಸುತ್ತಾರೆ. ॥೨೭॥

**ಪ್ರತಿಪದಾರ್ಥ :-**

**ನೂರಧಿಕವಾಗಿಪ್ಪ** = 100 ಹೆಚ್ಚಾಗಿರುವ, **ಮತ್ತ ದಿನಾರು ಸಾವಿರ** = ಮತ್ತೆ 16,000, ಅಂದರೆ. 16000 + 100 = 16,100 (ಹದಿನಾರುಸಾವಿರದ ಒಂದುನೂರು), **ನಂದಗೋಪಕುಮಾರನ** = ನಂದ ಗೋಪನ ಸಾಕುಪುತ್ರನಾದ ಶ್ರೀಕೃಷ್ಣನ, **ಅರ್ಧಾಂಗಿಯರು** = ಪತ್ನಿಯರು (27ನೆಯ ಕಕ್ಷಾಪನ್ನರು), **ಊರ್ವಶೀ-ಮೊದಲಾದ ಅಪ್ಸರನಾರಿಯರು** = 908 ಸಂಖ್ಯಾಕವಾದ ಊರ್ವಶೀ ಮೊದಲಾದ ಅಪ್ಸರಸ್ತ್ರೀಯರು ಸಾವಿರದ ಒಳಗೆ ಕರ್ಮಜರಲ್ಲಿ ಸೇರಿದವರು ಹೋಗತಾ ಉಳಿದ, **ಶತ ತುಂಬರರು** =

92 ತುಂಬುರಾದಿ ಗಂಧರ್ವರು-100 ಮಂದಿ ಒಳಗೆ ಕರ್ಮಜರಲ್ಲಿ ಸೇರಿದವರು ಹೋಗತಾ, ಉಳಿದ ಗಂಧರ್ವಗಣ (ಆಖ್ಯಾತಅಜಾನಜರು) 28 ನೆಯ ಕಕ್ಷಕ್ಕೆ ಸೇರಿದವರು, **ಅಗಸ್ತ್ಯಾದಿ ಮುನೀಶ್ವರರು** = ನೂರು ಕೋಟಿ- ಅದರಲ್ಲಿ 100 ಮಂದಿ ಕರ್ಮಜರಲ್ಲಿ ಸೇರಿದವರು ಹೋಗತಾ, ಉಳಿದ ಋಷಿ ವರ್ಗ 29 ನೆಯ ಕಕ್ಷಾಪನ್ನರು. **ನನ್ನಿಂದ** = ನನ್ನ ದ್ವಾರಾ, **ಕಂಸಾರಿ ಗುಣಗಳ** = ಕಂಸಧ್ವಂಸಿಯಾದ ಶ್ರೀಕೃಷ್ಣನ ಅನಂತಕಲ್ಯಾಣಗುಣಗಳನ್ನು **ಕೀರ್ತನೆ ಮಾಡಿಸಲಿ** = ಗಾಯನ ಮಾಡಿಸಲಿ- ಎಂದು ದಾಸರಾಯರು ಪ್ರಾರ್ಥಿಸುತ್ತಾರೆ. ॥೨೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :-

ಇನ್ನೂ ಸಂಕ್ಷಿಪ್ತವಾಗಿ ಅವಶಿಷ್ಟ ತಾರತಮ್ಯ ಹೇಳತಾರೆ.

ನೂರೇ ಅಧಿಕದಾಗಿರುವ ಮತ್ತು ಹದಿನಾರುಸಾವಿರ, ನಂದಗೋಪನ ಕುಮಾರ-ಎಂದರೆ ಶ್ರೀಕೃಷ್ಣದೇವರ 16,100 ಮಂದಿ ಹೆಂಡಂದಿರು 27; 908 ಮಂದಿ ಊರ್ವಶೀ ಮೊದಲಾದ ಅಪ್ಸರಸ್ತ್ರೀಯರು ಸಾವಿರದ ಒಳಗೆ ಕರ್ಮಜ ರಲ್ಲಿ ಸೇರಿದವರು ಹೋಗತಾ,ಉಳಿದ 92 ಮಂದಿ, ತುಂಬುರಾದಿ ಗಂಧರ್ವರು ನೂರು ಮಂದಿ ಒಳಗೆ ಕರ್ಮಜರಲ್ಲಿ ಸೇರಿದವರು ಹೋಗತಾ ಉಳಿದ ಗಂಧರ್ವರು ಇವರೇ ಮೊದಲಾದವರು, ಆಖ್ಯಾತ ಆಜಾನಜರು, ವಿಬುಧಾದಿಗಳು 28; ನೂರುಕೋಟಿ, ಅದರಲ್ಲಿ ನೂರು ಮಂದಿ ಕರ್ಮಜರಲ್ಲಿ ಸೇರಿದವರು ಹೋಗತಾ, ಉಳಿದ ಋಷಿಗಳು 28, 29 ನೇ ಎರಡು ಕಕ್ಷದವರು, ಅನಾಖ್ಯಾತ ಆಜಾ ನಜರು-ಈ ಯಾಪತ್ತೂ ಮಂದಿ ನನ್ನಿಂದ ಕಂಸನಿಗೆ ಶತ್ರುವಾದ ಶ್ರೀಕೃಷ್ಣನ ಕಲ್ಯಾಣಗುಣಗಳನ್ನುಗಾಯನ ಮಾಡಿಸಲಿ- ಎಂತ ಪ್ರಾರ್ಥನಾ ಮಾಡೋವರಾಗಿ ದ್ದಾರೆಂದು ತಾತ್ಪರ್ಯ. ॥೨೭॥

### ೨. ಭಾವಪ್ರಕಾಶಿಕೆ: –

ವ್ಯಾಖ್ಯಾನ ಇಲ್ಲ.

### ೩. ಭಾವದರ್ಪಣ :–

ನೂರ. ॥೨೭॥

### ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

"ನೂರು"–ಇತಿ ॥ "ತುಂಬರುರು"-ಇತ್ಯನೇನ ಏತೇಷಾಂ ಆಜಾನತ್ವಂ ಕೇಷಾಂಚಿತ್"-ಪಕ್ಷ ಮಭಿಪ್ರೈತಿ. ॥೨೭॥

### ಕನ್ನಡಾರ್ಥ

"ತುಂಬುರುರು"–ಎಂಬ ಪದಪ್ರಯೋಗದಿಂದ, ಈ ತುಂಬುರರಿಗೆ ಆಜಾನಜದೇವತೆಗಳೆಂದು ಹೇಳುವ ಕೆಲವರ ಪಕ್ಷವೊಂದು ಇರುತ್ತದೆ, ಎಂದು ಸೂಚಿತವಾಗುತ್ತದೆ. ॥೨೭॥

### ೫. ಶ್ರೀಗುರುಹೃದಯ ಪ್ರಕಾಶಿಕೆ :–

ಹದಿನಾರುಸಾವಿರದ ನೂರು ಜನ ಶ್ರೀಕೃಷ್ಣಪತ್ನಿಯರು, ಅಗಸ್ತ್ಯಾದಿ ಋಷೀಶ್ವರರು, ಊರ್ವಶೀ-ಮೊದಲಾದ ಅಪ್ಸರಸ್ತ್ರೀಯರು, ನೂರು ಮಂದಿ ಗಂಧರ್ವರು, ತುಂಬುರರು ಸಹ ಕಂಸಾರಿಯಾದ ಶ್ರೀಕೃಷ್ಣನ ಗುಣಕೀರ್ತನೆಯನ್ನು ನನ್ನ ಕಡೆಯಿಂದ ಮಾಡಿಸಲಿ-ಎಂದು ನಮಸ್ಕರಿಸಿ ಪ್ರಾರ್ಥಿಸುವೆನು. ॥೨೭॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಶ್ರೀಕೃಷ್ಣನು ನಂದಗೋಪನ ಸಾಕುಮಗ. ಇದರಿಂದ **ನಂದ ಗೋಪಕುಮಾರ**-ನೆಂದರೆ ಶ್ರೀಕೃಷ್ಣನೆಂದರ್ಥ. ಶ್ರೀಕೃಷ್ಣನ ಪತ್ನಿಯರು 16,100 ಮಂದಿಯರು. ಈ ಸಂಖ್ಯೆಯನ್ನು ದಾಸವರ್ಯರು **ನೂರಧಿಕವಾಗಿಪ್ಪಮತ್ತದಿನಾರುಸಾವಿರ**- ಎಂದಿದ್ದಾರೆ. 27ನೆಯ ಕಕ್ಷ.

ಅಂದರೆ,ಹದಿನಾರು ಸಾವಿರ = 16,000
ನೂರಧಿಕವಾಗಿಪ್ಪ = 100
= 16,100 (ಹದಿನಾರುಸಾವಿರದ ಒಂದು ನೂರು).

2. ಇವರ ನಂತರ ಅಗಸ್ತ್ಯನೇ-ಮೊದಲಾದ ಮುನಿಶ್ರೇಷ್ಠರು.

3. ಊರ್ವಶೀ- ಮೊದಲಾದ ಅಪ್ಸರಸ್ತ್ರೀಯರ ಗಣ 92 ಮಂದಿ (ಸಾವಿರ ಒಳಗೆ ಕರ್ಮಜರಲ್ಲಿ ಸೇರಿದವರು-ಹೋಗತಾ ಅವಶಿಷ್ಟ ವರ್ಗ).

ಇವರು 28 ಮತ್ತು 29ನೆಯ ಕಕ್ಷಕ್ಕೆ ಸೇರಿದವರು.

4. ನೂರು ಮಂದಿ ತುಂಬುರರು-ಮೊದಲಾದ ದೇವಗಂಧರ್ವರು- 30ನೆಯ ಕಕ್ಷ. ಪೂರ್ವೋಕ್ತ ಮಹನೀಯರೆಲ್ಲರೂ ನನ್ನಲ್ಲಿ ನಿಂತು, ಕಂಸಾರಿಯಾದ ಶ್ರೀಕೃಷ್ಣನ ಗುಣಗಾನ ಮಾಡಲೆಂದು– ದಾಸರಾಯರು ಅವರಲ್ಲಿ ಪ್ರಾರ್ಥನೆ ಮಾಡಿರುತ್ತಾರೆ.

## ವಿಶೇಷವಿಚಾರ :–

### 1. ಅಗಸ್ತ್ಯಋಷಿ :–

ಅಗ + ಸ್ತ್ಯ-ಬೆಟ್ಟದ ಬೆಳವಣಿಗೆಯನ್ನು ಅಡ್ಡಗಿಸಿದವನು. ಒಮ್ಮೆ ಮಿತ್ರಾವರುಣನೆಂಬ ಋಷಿಗಳು ಊರ್ವಶಿಯ ರೂಪಲಾವಣ್ಯಗಳನ್ನು ಕಂಡು, ಮೋಹಪರವಶರಾದರು. ಆಗ ವೀರ್ಯಸ್ಖಲನವಾಯಿತು. ಆ ವೀರ್ಯ ವನ್ನು ಊರ್ವಶಿಯು ಒಂದು ಕುಂಭದಲ್ಲಿ ಇರಿಸಿದಳು. ಆ ವೀರ್ಯದಿಂದ ಅಗ ಸ್ತ್ಯನೂ ಮತ್ತು ವಸಿಷ್ಠನೂ ಜನಿಸಿದರು. ಈ ಕಾರಣದಿಂದ ಇವರಿಬ್ಬರಿಗೂ ಮೈತ್ರಾವರುಣಿ– ಎಂತಲೂ, ಕುಂಭಸಂಭವನೆಂತಲೂ– ಹೆಸರಾಯಿತು. ವಿಧರ್ಭರಾಜಕುಮಾರಿಯಾದ ಲೋಪಾಮುದ್ರೆ ಅಗಸ್ತ್ಯನ ಪತ್ನೀ. ದೃಢಸ್ಯು ಈತನ ಪುತ್ರ. ಸಮುದ್ರವನ್ನೇ ಏಕಾಪೋಶನವಾಗಿ ತೆಗೆದುಕೊಂಡ ಮಹಾತ್ಮ.

### 2. ಊರ್ವಶೀ :–

ನರ ನಾರಾಯಣರು ಬದರಿಕಾಶ್ರಮದಲ್ಲಿ ತಪಸ್ಸು ಮಾಡುತ್ತಿದ್ದಾಗ, ಕೆಲವು ದೇವವಿಲಾಸಿನಿಯರು ಅವರ ತಪೋಭಂಗಗೊಳಿಸಲು ಬಂದರು. ಆಗ ನಾರಾಯಣನು ತನ್ನ ತೊಡೆಯಿಂದ ಲೋಕೋತ್ತರಸುಂದರಳಾದ ಊರ್ವಶಿ ಯನ್ನು ಸೃಷ್ಠಿಸಿದನು. ಊರು–ಎಂದರೆ, ತೊಡೆ. ತೊಡೆಯಿಂದ ಜನಿಸಿ ದವಳಾದ್ದರಿಂದ, **ಊರ್ವಶೀ**-ಎಂತ ನಾಮ. ಅವಳ ಸೌಂದರ್ಯಾತಿಶಯ ವನ್ನು ಕಂಡ, ಆ ದೇವವಿಲಾಸಿನಿಯರು ನಾಚಿಕೆಯಿಂದ ಹಿಂದಿರುಗಿದರು.

### 3. ತುಂಬುರು :–

ಕಶ್ಯಪಮುನಿಯಿಂದ **ಅರಿಷ್ಟಿ** ಎಂಬ ಪತ್ನಿಯಲ್ಲಿ ಜನಿಸಿದ ದೇವಗಂಧರ್ವ ಸ್ವರ್ಗಲೋಕದ ಅತ್ಯುತ್ತಮ ಗಾಯಕ. ಕುದುರೆಮುಖವುಳ್ಳವನು. ಕುಬೇರನ ಶಾಪದಿಂದ ವಿರಾಧನೆಂಬ ಕುರೂಪೀ ರಾಕ್ಷಸನಾಗಿ ಹುಟ್ಟಿ, ರಾಮ ಲಕ್ಷಣರಿಂದ ಹತನಾಗಿ, ನಿಜರೂಪವನ್ನು ಹೊಂದಿದನು.

ಇಲ್ಲಿಗೆ 30 ಕಕ್ಷಗಳು ಮುಕ್ತಾಯವಾದುವು. ॥೨೭॥

★★

## ಪದ್ಯ-೨೮

**ಮೂಲ :–**

**ಪಾವನರು ಶುಚಿ ಶುದ್ಧನಾಮಕ |**
**ದೇವತೆಗಳಜಾನ ಚಿರಪಿತೃ |**
**ದೇವ ನರಗಂಧರ್ವವನಿಪ ಮಾನುಷೋತ್ತಮರು ||**
**ಈ ವಸುಮತಿಯೊಳ್ಳುಳ್ಳ ವೈಷ್ಣವ |**
**ರಾವಳಿಯೊಳಿಹನೆಂದು ನಿತ್ಯದಿ |**
**ಸೇವಿಪುದು ಸಂತೋಷದಿಂ ಸರ್ವಪ್ರಕಾರದಲಿ || ||೨೮||**

**ಅವತರಣಿಕೆ :–**

ಅವಶಿಷ್ಟತಾರತಮ್ಯವಿಚಾರವನ್ನು– ಸಂಕ್ಷಿಪ್ತವಾಗಿ ತಿಳಿಸುತ್ತಾರೆ. ||೨೮||

**ಪ್ರತಿಪದಾರ್ಥ :–**

**ಪಾವನರು** = ಪವಿತ್ರರಾದ, **ಶುಚಿಶುದ್ಧನಾಮಕ** = ಪಾವನ-ಶುಚಿ-ಶುದ್ಧ ಇತ್ಯಾದಿ ಹೆಸರುಳ್ಳ, **ದೇವತೆಗಳಾಜಾನ** = ಇತರ ಅಜಾನಜ ದೇವತೆಗಳು, **ಚಿರಪಿತೃ** = ಚಿರಪಿತೃನಾಮಕರಾದ ದೇವತೆಗಳು (ಪಿತೃ ದೇವತಾಗಣ), **ದೇವ ನರಗಂಧರ್ವರು** = ದೇವ, ಮನುಷ್ಯಗಂಧರ್ವರು. **ಅವನಿಪ** = ಮಾನುಷಚಕ್ರವರ್ತಿಗಳು, **ಮಾನುಷೋತ್ತಮರು** = ಮಾನುಷೋತ್ತಮರಾದ ಜೀವರು, **ಈ ವಸುಮತಿಯೊಳುಳ್ಳ** = ಈ ಭೂಮಿಯೊಳಗಿರುವ, **ವೈಷ್ಣವರ** = ಮಧ್ವಮತಾವಲಂಬಿಗಳಾದ ವೈಷ್ಣ

ವರ, **ಆವಳಿಯೊಳು ಇಹನೆಂದು** = ವರ್ಗದವರಲ್ಲಿ ಶ್ರೀಪರಮಾತ್ಮನು ಅಂತರ್ಗತನಾಗಿದ್ದಾನೆಂದು ತಿಳಿದು, **ಸಂತೋಷದಿಂ** = ಆನಂದದಿಂದ, **ಸರ್ವಪ್ರಕಾರದಲಿ** = ಎಲ್ಲಾ ವಿಧಗಳಿಂದಲೂ, **ನಿತ್ಯದಿ ಸೇವಿಪುದು** = ಪ್ರತಿದಿನದಲ್ಲೂ ಸೇವೆಮಾಡಬೇಕೆಂದು ತಿಳಿಸುತ್ತಾರೆ. ॥೨೮॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ :–

ಇನ್ನೂ ಸಂಕ್ಷಿಪ್ತವಾಗಿ ಅವಶಿಷ್ಠತಾರತಮ್ಯವನ್ನು ಹೇಳುತಾರೆ.

ಪಾವನ, ಶುಚಿ, ಶುದ್ಧ - ಏತಾದೃಶರಾದ ನಾಮ ಪಡೆದು ಇರುವ ಅನೇಕ ದೇವತೆಗಳು-29; ಚಿರಪಿತ್ರಾಖ್ಯ ದೇವತೆಗಳು– 30; ದೇವಗಂಧರ್ವರು– 31; ಆಜಾನಜರ ಪತ್ನೀರುಗಳು, ಮಾನುಷಗಂಧರ್ವರು– 32; ಮಾನುಷಚಕ್ರವರ್ತಿಗಳು, ಅವರ ಪತ್ನೀರು– 33; ಮಾನುಷೋತ್ತಮರು 34; ಈ ಭೂಮಿಯೊಳಗಿರುವ ಮಧ್ವಮತಾವಲಂಬಿಗಳಾದ ವೈಷ್ಣವರ ತಾರತಮ್ಯರೂಪವಾದ ದೇವಮಾನುಷರ ಪಂಕ್ತಿಯೊಳಗೆ ಶ್ರೀಪರಮಾತ್ಮ ಅಂತರ್ಗತನಾಗಿದ್ದಾನೆಂದು ತಿಳಿದು,ಸಂತೋಷದಿಂದ ಸರ್ವಪ್ರಕಾರದಿಂದಲೂ, ಪ್ರತಿದಿನದಲ್ಲೂ ಸೇವೆ ಮಾಡೋವನಾಗಬೇಕು. 28ನೇ ಕಕ್ಷ ಆರಂಭಮಾಡಿ, 33ನೇ ಕಕ್ಷದವರಿಗೂ ಅನಾಖ್ಯಾತ ಆಜಾರಜರೆಂದು ತಾತ್ಪರ್ಯ. ॥೨೮॥

## ೨. ಭಾವಪ್ರಕಾಶಿಕೆ :–

ಮನುಷ್ಯೋತ್ತಮರಲ್ಲಿ ಸೇರಿದವರು ಈ ಕಾಲದಲ್ಲೂ ಎಷ್ಟೋ ಮಂದಿ ಭಾಗವತೋತ್ತಮರು ಇರುವರೆಂದು ತಿಳಿದು ತಾರತಮ್ಯಪ್ರಕಾರ, ಸರ್ವರನ್ನೂ ಸರ್ವಪ್ರಕಾರದಿಂದಲೂ, ನಿತ್ಯದಲ್ಲೂ ಸೇವೆಮಾಡುವುದರಿಂದ ಮುಕ್ತಿಗೆ ಸಾಧನವಾಗುವುದೆಂದು ತಾತ್ಪರ್ಯ. ॥೩೮॥

೩. ಭಾವದರ್ಪಣ :–

ಪಾವನೇತಿ. ॥೨೮॥

೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :–

"ಪಾವನ"–ಇತಿ ॥ ಏತೇ ಆಜಾನಜಾಃ ॥ ಅಥಾಗ್ನಿಜಾಃ-ಶುಚಿಃ ಶುಂಧ್ಯಃ ಪವಮಾನಃ"–ಇತಿ ತ್ರಯಃ ॥ ಅನ್ಯೇ ಷೋಡಶಸಾಹಸ್ರಾಃ ಯೇ ಕೃಷ್ಣಸ್ತ್ರೀತ್ವ ಮಾಪಿರೇ ॥ ತುಂಬುರು ಪ್ರಮುಖಂ ಯಚ್ಚ ಗಂಧರ್ವಾಣಾಂ ಶತಂ ತಥಾ ॥ ವಿದ್ಯಾಧರಾಃ ಅಪ್ಸರಸಃ ಊರ್ವಶ್ಯಾದ್ಯಾಃ ತಥಾರ್ಷಯಃ ॥ ವಸಿಷ್ಠಾದೀನ್ ವಿನಾ ಯೇಯೇ ರಾಜಾನಃ ॥ ಇತಿ ಚೋಕ್ತೇಃ ॥ ವಿಸ್ತೃತ ಭಯಂ ಕುಕ್ಷಿಗತ ಮತಿ ಪ್ರತಿಜ್ಞಾಯ (ಜ್ಞಯಾ) ಉಕ್ತ್ವಾ ಪುರೋಭಾಗಿನಃ ದೂರೀಕುರ್ವಂತಿ ॥ ತಸ್ಮಾದುದಾಹೃತಮೇತತ್. ॥೨೮॥

## ಕನ್ನಡಾರ್ಥ

"ಶುಚಿ,-ಶುಂಧ್ಯ (ಶುದ್ಧ) **ಪವಮಾನನಾಮಕ ಅಗ್ನಿಪುತ್ರರು** ಆಜಾನಜದೇವತೆಗಳು. ಉಳಿದ ಅಗ್ನಿಪುತ್ರರು–16 ಸಹಸ್ರ ಶ್ರೀಕೃಷ್ಣ .ಪತ್ನಿತ್ವವನ್ನು ತಪಸ್ಸಿನಿಂದ ಹೊಂದಿದರು. ತುಂಬುರನೇ ಪ್ರಧಾನವಾಗಿ ಉಳ ನೂರು ಮಂದಿ ಗಂಧರ್ವರು, ವಿದ್ಯಾಧರರು, ಊರ್ವಶೀ–ಮುಂತಾದ ಅಪ್ಸರೆಯರು, ವಸಿಷ್ಠಾದಿಗಳನ್ನು ಬಿಟ್ಟು ಮಿಕ್ಕ ಋಷಿಗಳು,–ಹಾಗೂ ರಾಜ ರುಗಳು,"–ಇವರೆಲ್ಲರೂ ತಾರತಮ್ಯದಿಂದ ಇರುವರು ಎಂದು ಹೇಳಲಾಗಿ ರುತ್ತದೆ.

ಇದೆಲ್ಲವನ್ನೂ ಇಲ್ಲಿ ವಿವರವಾಗಿ ತಿಳಿಸದೇ, ಕೇವಲ ಪ್ರತಿಜ್ಞಾರೂಪವಾಗಿ ಹೇಳಿದರೆ,ದೊಷೈಕ ದೃಷ್ಟಿಗಳಾದ ಬುಧರು ನಿಂದಿಸುವರು- ಆದುದರಿಂದ ಈಗ ಸಂಕ್ಷೇಪವಾಗಿ ನಿರೂಪಿಸುವದಿದ್ದರೂ, ವಿಸ್ತಾರದಿಂದ ಇದೆಲ್ಲವನ್ನೂ ವಿಶ ದೀಕರಿಸಲಾಗಿರುತ್ತದೆ. ॥೨೮॥

**೫. ಶ್ರೀಗುರುಹೃದಯ ಪ್ರಕಾಶಿಕೆ :-**

ಪವಿತ್ರ ಮಾಡುವ ಶುಚಿಸ್ವರೂಪರಾದ್ದರಿಂದ **ಶುದ್ಧ ರೆಂದು**-ಹೆಸರುಳ್ಳ-ಆಜಾನಜದೇವತೆಗಳು, ಚಿರಪಿತೃಗಳು, ದೇವಗಂಧರ್ವರು, ನರಗಂಧ ರ್ವರು, ಅವನಿಪರೆಂಬ ಮಧ್ಯಮ ದೊರೆಗಳು, ಮನುಷ್ಯೋತ್ತಮರು-ಈ ವಸುಮತಿ ಎಂಬ ಭೂಮಿಯಲ್ಲಿರುವ ಸದ್ವೈಷ್ಣವರು ಎಲ್ಲೆಲ್ಲಿದ್ದಾರೋ,ತಿಳಿದು ಸದಾ ಸಂತೋಷದಿಂದ ಸರ್ವಪ್ರಕಾರವಾಗಿ ಸೇವೆ ಮಾಡಬೇಕು. ॥೨೮॥

# ಸರ್ವವ್ಯಾಖ್ಯಾನಸಾರಸಂಗ್ರಹ

1. ಪಾವನ-ಶುಚಿ-ಶುದ್ಧ ಎಂಬ ಹೆಸರುಗಳಿಂದ ವಿಖ್ಯಾತರಾದ ಅಜಾನಜದೇವತೆಗಳು. ಇವರೇ ಪಾವನ, ಎಂದರೆ ಪವಮಾನನಾಮಕ ಅಗ್ನಿ ಪುತ್ರರು. ಶುಂಧ್ಯ (ಶುದ್ಧ) ಮತ್ತು ಶುಚಿ (ಪವಿತ್ರ ಸ್ವಭಾವಯುತರು) ಎಂಬ ನಾಮಕರಾದ ಆಜಾನಜದೇವತೆಗಳು. ಉಳಿದ ಅಗ್ನಿಪುತ್ರರು-16 ಸಾವಿರ ಶ್ರೀಕೃಷ್ಣನ ಪತ್ನಿತ್ವವನ್ನು ತಮ್ಮ ತಪಸ್ಸಿನಿಂದ ಹೊಂದಿದವರು.

2, ಚಿರಪಿತೃದೇವತಾಗಣ.

3. ತುಂಬುರರೇ ಪ್ರಧಾನವಾಗಿ ಉಳ್ಳ 100 ಮಂದಿ ದೇವಗಂಧರ್ವ ವರ್ಗ.

4. ಅಜಾನಜದೇವತೆಗಳ ಪತ್ನಿಯರು ಮತ್ತು ಮಾನುಷಗಂಧರ್ವರು **(ನರಗಂಧರ್ವ)**.

5. ಊರ್ವಶೀ- ಮೊದಲಾದ ಅಪ್ಸರೆಯರು, ವಸಿಷ್ಠಾದಿಗಳನ್ನು ಬಿಟ್ಟು,ಮಿಕ್ಕ ಋಷಿವರ್ಗ ಮತ್ತು ಚಕ್ರವರ್ತಿಗಳು **(ಅವನಿಪ)**.

6. ಮಾನುಷೋತ್ತಮರ ವರ್ಗ, ಈ ಭೂಮಿಯ ಮೇಲೆ ವಿದ್ಯಮಾನ ವಾಗಿರುವ ಶ್ರೀಮನ್ಮಧ್ವಮತಾವಲಂಬಿಗಳಾದ ವೈಷ್ಣವರ ಸಮೂಹದಲ್ಲಿ ಸೇರಿ ದವರು-ಮಾನುಷೋತ್ತಮರು.

-ಈ ರೀತಿಯಲ್ಲಿ, ತಾರತಮ್ಯ ಜ್ಞಾನಾನುಸಂಧಾನಪೂರ್ವಕವಾಗಿ ತಿಳಿದು, ಪ್ರತಿನಿತ್ಯದಲ್ಲೂ ಆ ಪ್ರಾರ್ತ-ಸ್ಮರಣೀಯರಾದ ಮಹಾತ್ಮರನ್ನು ನಾನಾವಿಧಗಳಲ್ಲಿ ಸೇವೆ ಮಾಡಬೇಕೆಂದು ದಾಸರಾಯರು ತಿಳಿಸುತ್ತಾರೆ. ॥೨೮॥

**

## ಪದ್ಯ-೨೯

**ಮೂಲ :-**

**ಮಾನುಷೋತ್ತಮರನುವಿಡಿದು ಚತು ।**
**ರಾನನಾಂತ ಶತೋತ್ತಮುತ್ತ ಕ್ರ ।**
**ಮೇಣ ಚಿಂತಿಪ ಭಕ್ತರಿಗೆ ಚತುರವಿಧ ಪುರುಷಾರ್ಥ ॥**
**ಶ್ರೀನಿಧಿ ಜಗನ್ನಾಥವಿಠ್ಠಲ ।**
**ತಾನೆ ಒಲಿದೀವನು ನಿರಂತರ ।**
**ಸಾನುರಾಗದಿ ಪಠಿಸುವುದು ಪ್ರಾಜ್ಞರಿದ ಮರೆಯದಲೆ ॥**
**॥೨೯॥**

**ಅವತರಣಿಕೆ :-**

ತಾರತಮ್ಯಜ್ಞಾನದ ಫಲಸ್ತುತಿಯಿಂದ ಪ್ರಸಕ್ತಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ. ॥೨೯॥

**ಪ್ರತಿಪದಾರ್ಥ :-**

**ಮಾನುಷೋತ್ತಮರನುವಿಡಿದು** = ಮಾನುಷೋತ್ತಮರ ಮೊದಲುಗೊಂಡು, **ಚತುರಾನನಾಂತ** = ಶ್ರೀಚತುರ್ಮುಖಬ್ರಹ್ಮದೇವರ ಪರ್ಯಂತ,

**ಕ್ರಮೇಣ** = ತಾರತಮ್ಯಕ್ರಮದಿಂದ, **ಶತೋತ್ತಮತ್ವ** = ನೂರು ನೂರು ಗುಣಗಳಿಂದ ಅಧಿಕರು ಎಂದು, **ಚಿಂತಿಪ ಭಕ್ತರಿಗೆ** = ಧ್ಯಾನ ಪೂರ್ವಕ ಚಿಂತನೆ ಮಾಡುವ ಭಗವದ್ಭಕ್ತರಿಗೆ, **ಶ್ರೀನಿಧಿ**= ಕಾಂತಿ, ಐಶ್ವರ್ಯ ಸಂಪನ್ನನಾದ, **ಜಗನ್ನಾಥವಿಠ್ಠಲ** = ದಾಸರಾಯರ ಅಂಕಿತನಾಮಕನಾದ ಜಗತ್ಪತಿಯು, **ತಾನೆ ಒಲಿದು** = ಸ್ವಯಂ ಅನುಗ್ರಹಮಾಡಿ, **ಚತುರ ವಿಧ ಪುರುಷಾರ್ಥ** = ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕು ವಿಧವಾದ ಇಷ್ಟಾರ್ಥಗಳನ್ನು (ಸಾಯುಜ್ಯ-ಸಾರೂಪ್ಯ- ಸಾಮೀಪ್ಯ- ಸಾಲೋಕ್ಯ-ಎಂಬ ಚತುರ್ವಿಧಮುಕ್ತಿಗಳನ್ನು), **ಈವನು** =ಕೊಡುವನು. **ಪ್ರಾಜ್ಞರು** = ಈ ಕಾರಣದಿಂದ ಜ್ಞಾನಿಗಳು, **ಇದ** = ಈ ತಾರತಮ್ಯ ಕ್ರಮವನ್ನು, **ಮರೆಯದಲೆ** = ಮರೆಯದಂತೆ, **ನಿರಂತರ** = ಪ್ರತಿ ನಿತ್ಯದಲ್ಲೂ, **ಸಾನುರಾಗದಿ** = ಅತ್ಯಂತ ಆದರದಿಂದ, **ಪಠಿಸುವುದು** = ಪಠನಮಾಡಬೇಕು (ಅಧ್ಯಯನ ಮಾಡಬೇಕು). ॥೨೯॥

**॥ ಇಲ್ಲಿಗೆ ೨೯ ನೆಯ ಪದ್ಯದಿಂದ ಪ್ರಸಕ್ತಸಂಧಿಗತ ವಿಷಯವು ಮುಗಿಯಿತು ॥**

॥ ಶ್ರೀಮಧ್ವೇಶಾರ್ಪಣಮಸ್ತು ॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ :-

ತಾರತಮ್ಯಫಲಸ್ತುತಿ ಹೇಳತಾರೆ.

ಮಾನುಷೋತ್ತಮರ ಮೊದಲುಗೊಂಡು,ಬ್ರಹ್ಮದೇವರವರಿಗೂ ಆರೋಹಣ, ತಾರತಮ್ಯಕ್ರಮದಿಂದ ನೂರು ನೂರು ಗುಣದಿಂದ ಅಧಿಕರು- ಎಂತ ಚಿಂತನಾಮಾಡತಕ್ಕ ಭಗವದ್ಭಕ್ತರಿಗೆ, ಕಾಂತಿ,ಐಶ್ವರ್ಯ-ಇವುಗಳೇ ಸಮುದ್ರ ವಾಗುಳ್ಳ, ಜಗತ್ತಿಗೆ ಸ್ವಾಮಿಯಾದ ವಿಠ್ಠಲಸಾಂಕೇತನಾದ ಶ್ರೀಪರಮಾತ್ಮ

ತನಗೆ ತಾನೇ ಒಲಿದು ಸಾಯುಜ್ಯ, ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ ಎಂಬ ನಾಲ್ಕು ವಿಧ ಪುರುಷಾರ್ಥಗಳ ಅವರವರ ಯೋಗ್ಯತಾಕ್ಕೆ ಅನುಸರಿಸಿದ್ದನ್ನು ಕೊಡೋವನಾಗತಾನೆ. ಆದ್ದರಿಂದ ಜ್ಞಾನಿಗಳಾದವರು ಈ ತಾರತಮ್ಯವನ್ನು ಮರೆಯಧಾಂಗೆ ಪ್ರತಿದಿನದಲ್ಲೂ ಆದರದಿಂದ ಸಹಿತರಾಗಿ ಪಠನ ಮಾಡುವುದು-ಎಂತ ತಾತ್ಪರ್ಯ. ॥೨೯॥

ಈ ಸಂಧಿಯಲ್ಲಿ ನಿರೂಪಿಸಲ್ಪಟ್ಟಿರುವ ತಾರತಮ್ಯವಿಷಯ ಕ್ರೋಢೀಕರಿಸಲ್ಪಟ್ಟು ಇಲ್ಲಿ ಬರೆದಿದೆ. ಝಡಿತ್ಯಾ ಬೋಧಾರ್ಥ ವಿವರ.

| ಕಕ್ಷಸಂಖ್ಯೆ. | ದೇವತೆಗಳ ಹೆಸರು. | ಗುಣತಾರತಮ್ಯ ಸಂಖ್ಯೆ. |
|---|---|---|
| 1. .... | ಶ್ರೀವಿಷ್ಣುಃ ......... | ಸಮಸ್ತಗುಣದಿಂದ ಪೂರ್ಣನು. |
| 2. .... | ಶ್ರೀರಮಾದೇವಿ ......... | ಅನಂತಗುಣ ಅಧಮರು. |
| 3. .... | ಬ್ರಹ್ಮ-ವಾಯು ......... | ಕೋಟಿಗುಣಾಧಮರು. |
| 4. .... | ಸರಸ್ವತೀ-ಭಾರತ್ಯೌ ......... | ಶತಗುಣಾಧಮರು. -100 ಗುಣ. |
| 5. .... | ಗರುಡ-ಶೇಷ-ರುದ್ರಾಃ ......... | ಶತಗುಣಾಧಮರು. -100 ಗುಣ. |
| 6. .... | ಲಕ್ಷಣಾದಿ ಷಣ್ಮಹಿಷ್ಯಃ......... | ಪಂಚಗುಣಾಧಮಾಃ -5ಗುಣ |
| 7. .... | ಸೌಪರ್ಣೀ,ವಾರುಣೀ, ಪಾರ್ವತೀ ......... | ದ್ವಿಗುಣಾಧಮಾಃ -2ಗುಣ. |
| 8. .... | ಇಂದ್ರ, ಕಾಮ ......... | ದಶಗುಣಾಧಮಾಃ -10ಗುಣ. |
| 9. .... | ಅಹಂಕಾರಪ್ರಾಣಃ ......... | ದಶಗುಣಾಧಮಾಃ -10ಗುಣ. |

10. ..... ಅನಿರುದ್ಧಃ–ಗುರುಃ,
ಸ್ವಾಯಂಭುವಮನುಃ, ದಕ್ಷ
ಪ್ರಜಾಪತಿಃ,ಶಚೀಃ,
ರತೀ ......... ಪಂಚಗುಣಾಧಮಾಃ-5ಗುಣ.

11. .... ಪ್ರವಹವಾಯು ........ ಪಂಚಗುಣಾಧಮಃ -5ಗುಣ.

12. .... ಸೂರ್ಯಃ,ಚಂದ್ರಃ,
ಶತರೂಪಾ,ಯಮಃ–
ಇತಿ ಚತ್ವಾರಃ ........ ದ್ವಿಗುಣಾಧಮಾಃ –2ಗುಣ.

13. .... ವರುಣಃ ..... ... ಸಾರ್ಧಪಾದ್ಯೈಕ ಗುಣಾಧಮಃ -1/2 ಗುಣ.

14. . .. ನಾಗದ ......... ಪಾದಾರ್ಧಗುಣಾಧಮಃ-1/2 ಗುಣ.

15. .... ಅಗ್ನಿಃ,ಭೃಗುಃ,ಪ್ರಸೂತಿಃ–
ಇತಿ ತ್ರಯಃ-ಕಿಂಚಿದ್ಗುಣಾಧಮಾಃ
ವರುಣಾತ್
ಪಾದಗುಣಾಧಮಾಃ .......... ಪಾದಾರ್ಧಗುಣಾಧಮಾಃ –1/2 ಗುಣ.

16. ..... ಮರೀಚ್ಯಾದಿ ಸಪ್ತ
ರ್ಷಯಃ-ವೈವಸ್ವತಮನುಃ,
ವಿಶ್ವಾಮಿತ್ರಃ-ಇತ್ಯೇತೇ ........ ದ್ವಿಗುಣಾಧಮಾಃ –2ಗುಣ.

17. ಮಿತ್ರನಾಮಕಸೂರ್ಯಃ.–
ಕೋಣಾಧಿಪತಿಃ ನಿರುತಿಃ,-
ಗುರುಭಾರ್ಯಾತಾರಾ,ಪ್ರಾವಹೀ-
ಇತ್ಯೈತೇ ........ ಕಿಂಚಿದುಣಾಧಮಾಃ ಕೇಚಿತ್ಸಾಂಕೇತಃ ಪಾದೇಚತುರ್ಥಾಂಶಃ–1/4 ಗುಣ.

18. ಧನಪ,ವಿಷ್ವಕ್ಸೇನ,ಗಜಾನನಾದಿ
ಶತಸ್ಥ ಕಕ್ಷ ಮಧ್ಯೇ ಉಕ್ತಾಃ,
ಉಕ್ತಶೇಷಾಃ ಗಣನೀಯಾಃ– ........ ಪೂರ್ವವತ್

| | | |
|---|---|---|
| 19. | ಕರ್ಮಜಾಃ,ಕರ್ಮಜ ಮಧ್ಯೇ ಗಣಿತಾಃ ಶತಸಂಖ್ಯಾಕಾಃ– ಋಷ್ಯುತ್ತಮಾ–ಏತೇಃ ಋಷಯಃ ಶತಕೋಟಿ ಋಷೀಣಾಂ ಮಧ್ಯೇ ಪಠಿತಾಃ ಋಷಯಃ, ತನ್ಮಧ್ಯೇ ವರ್ತಮಾನ ಕರ್ಮಜಮಧ್ಯೇ ಗಣಿತಾಃ ಋಷಯಃ ಕೇಚಿತ್. ತದನ್ಯೇ ಉತ್ತಮ ತಾರತಮ್ಯ ಮಧ್ಯೇ ಗಣಿತಾಃ ಋಷಯಃ ಕೇಚಿತ್. ತದ್ವಿವರಣಂ–1. ನಾರದಃ, 2. ಭೃಗುಃ, 3. ಪುಲಹಃ, 4. ಅತ್ರಿಃ,5. ಅಂಗಿರಾಃ, 6.ಪುಲಸ್ತ್ಯಃ, 7. ಕ್ರತುಃ,8. ವಸಿಷ್ಠಃ, 9. ವಿಶ್ವಾಮಿತ್ರಃ.- ಅವಶಿಷ್ಟ ಶತಕೋಟಿ ಋಷಯಃ– ಆಜಾನಜಮಧ್ಯೇ ಪಠಿತಾಃ-ಇತ್ಯೇತಾನ್, ಋಷ್ಯುತ್ತಮಾನ್, ವಿಹಾಯ ಅವಶಿಷ್ಟ ನವತಿಸಂಖ್ಯಾಕಾಃ ಚ್ಯವದೋಚಥ್ಯ ಪೂರ್ವಾಃ ಋಷ್ಯುತ್ತಮಾಃ ಕರ್ಮಜ ಮಧ್ಯೇ ಪಠಿತಾಃ ........ | ಅಗ್ನ್ಯಾದಿ ತಾತ್ತ್ವಿಕ ದೇವೇಭ್ಯಃ ಶತಗುಣಾಧಮಾಃ, ಧನಪ ವಿಷ್ವಕ್ಸೇನಾದಿ ದ್ವಿಗುಣಾಧಮಾಃ- –2 ಗುಣ. |
| 20. | ಕರ್ಮಜದೇವೇಭ್ಯಃ ಪರ್ಜನ್ಯಾದಿ ಷಟ್ ........ | ಚತುರ್ಗುಣಾಧಮಾಃ -4 ಗುಣ. |
| 21. | ಬ್ರಹ್ಮಾದಿ ಪುಷ್ಕರಾಂತ ನವಕೋಟಿ ದೇವೇಷು ಮಧ್ಯೇ ಅಪ್ರಸಿದ್ಧ್ಯಾದಿ ಕಾರಿಣಃ ಕೇಚನದೇವಾಃ ........ | ಕಿಂಚಿದ್ಗುಣಾಧಮಾಃ –1/4 ಗುಣ. |

22. ಸ್ವಾಹಾ ......... ಕಿಂಚಿದ್ಗುಣಾಧಮಾಃ –1/4 ಗುಣ.

23. ಬುಧಃ ........ ಕಿಂಚಿದ್ಗುಣಾಧಮಾಃ –1/4 ಗುಣ.

24. ಅಶ್ವಿನೀಭಾರ್ಯಾ ಉಷಾ ........ ಕಿಂಚಿದ್ಗುಣಾಧಮಾಃ –1/4 ಗುಣ.

25. ಶನಿಃ ಕಿಂಚಿದ್ಗುಣಾಧಮಾಃ 1/4 ಗುಣ.

26. ಪುಷ್ಕರ ಕಿಂಚಿದ್ಗುಣಾಧಮಾಃ –1/4 ಗುಣ.

27. ಆಖ್ಯಾತಾ ಆಜಾನಜಾಃ ತದ್ವಿವರಣಂ–
ಅಗ್ನೇಃ ಜ್ಯೇಷ್ಠಪುತ್ರಂ ಪಾವಕಂ,
ವಿಹಾಯ,ಹರೇಃ ಶತದ್ವ್ಯಷ್ಟಸಾಹಸ್ರ
ಪತ್ನಿತ್ವಂ ಗತಾಃ ಜ್ವಲನಸುತ ಗುಣಃ, ಶತ
ಗಂಧರ್ವಾಃ ಆಖ್ಯಾತಾಃ ........ ಇತ್ಯೇತೇ ಕಿಂಚಿತ್ ಗುಣಾಧಮಾಃ-1/4 ಗುಣ.

28. .........ಕಾಞ್ಚನ ಅಪ್ಸರಸಃ ವಿಭು
ದಾಯಃ ........ ಇತ್ಯೇತೇ ಕಿಂಚಿದ್ಗುಣಾಧಮಾಃ–1/2ಗುಣ.

29. .........ಶತಕೋಟಿ ಸಂಖ್ಯಾಕಾಃ ಋಷಯಃ
ತೇಷು ಶತಸಂಖ್ಯಾನ್ ಋಷ್ಯುತ್ತಮಾನ್
ವಿಹಾಯ, ಅವಶಿಷ್ಟಾ ಋಷಯಃ,
ಅನಾಖ್ಯಾತಃ ಆಜಾನಜಾಃ ಇತ್ಯೇತೇ ಕಿಂಚಿದ್ಗುಧಮಾಃ –1/2 ಗುಣ.

30. ........ಚಿರಪಿತರಃ, ಚಿರಪಿತೃಭ್ಯೋನ್ಯಃ
ಚಿರಪಿತಃ ........ ಶತಗುಣಾಧಮಾಃ -100 ಗುಣ.

31. ........ಅಷ್ಟೋತ್ತರ ಶತಸಂಖ್ಯಾನ್ ದೇವ ಗಂಧರ್ವಾನ್ ವಿಹಾಯ, ಅವಶಿಷ್ಟದೇವ ಗಂಧರ್ವ,ಸಿದ್ಧ,ಚಾರಣಾಃ,ವಿದ್ಯಾಧರಾಃ, ಕಿನ್ನರಾಃ, ಕಿಂಪುರುಷಾಃ ........ ಶತಗುಣಾಧಮಾಃ-100 ಗುಣ.

32. ........ಮನುಷ್ಯಗಂಧರ್ವಾಃ ........ ಶತಗುಣಾಧಮಾಃ-100 ಗುಣ.

33. ........ಚಕ್ರವರ್ತಿನಃ ........ ಶತಗುಣಾಧಮಾಃ-100 ಗುಣ.

34. ........ಮನುಷ್ಯೋತ್ತಮ ಬ್ರಾಹ್ಮಣಾಃ–ಶತಗುಣಾಧಮಾಃ-100ಗುಣ.

**ಯತಯಃ**

35. ಪರಮಹಂಸಾಃ ........ ಪಾದಗುಣನ್ಯೂನಾಃ ಶಿಖಾ ಯಜ್ಞೋಪವೀತ ವಿಹೀನಾಃ, ಏಕದಂಡಿನಃ ಪರಮಹಂಸಾಃ –1/4 ಗುಣ.

36. ಹಂಸಾಃ ........ ಪಾದಗುಣನ್ಯೂನಾಃ ಯಜ್ಞೋಪವೀತವಂತಃ–ಏಕದಂಡಿನಃ ಹಂಸಾಃ– 1/4 ಗುಣ.

37. ........ಬಹುದಾಃ ........ ತ್ರಿಕಾಲೇ ಸ್ನಾನನಿಯಮಹೀನಾಃ ಅಕಾಲಜಲ ಸ್ನಾನಾಃ ತ್ರಿದಂಡಿನಃ ಬಹುದಾಃ-1/4 ಗುಣ.

38. ........ಕಟೀಚಕಾಃ ಪಾದಗುಣ ನ್ಯೂನಾಃ ಸ್ವಗೃಹೇ ಸ್ಥಿತ್ವಾ,ಪುತ್ರಾದಿನಾ ದತ್ತಾನ್ನೇನ ಜೀವನಕರ್ತಾರಃ–ಕುಟೀಚಕಾಃ– 10 ಗುಣ.

## ವೈಖಾನಸಾಃ

39. ........ಫೇನಾಃ ......... ಪಾದಗುಣನ್ಯೂನಾಃ ವತ್ಸ ಫೇನಭಕ್ಷಾಃ ಫೇನಾಃ–1/4 ಗುಣ.

40. ........ಔದುಂಬರಾಃ ........ ಪಾದಗುಣನ್ಯೂನಾಃ ಮೂಲ ಭಕ್ಷಕಾಃ ಔದುಂಬರಾಃ–1/4 ಗುಣ.

41. ........ವಾಲಖಿಲ್ಯಾಃ ........ ಪಾದಗುಣನ್ಯೂನಾಃ ಫಲ ಭಕ್ಷಕಾಃ ವಾಲಿಖಿಲ್ಯಾಃ-1/4 ಗುಣ.

42. ........ವೈಖಾನಸಾಃ ........ ಪಾದಗುಣನ್ಯೂನಃ ಸರ್ವ ಭಕ್ಷಕಾಃ ವೈಖಾನಸಾಶ್ಚೇತಿ –1/4 ಗುಣ.

## ಗೃಹಿಣಃ

43. ........ಶಿಲೋಂಛಾಃ ........ ಪಾದಗುಣನ್ಯೂನಾಃ,ಸಸ್ಯ ಕ್ಷೇತ್ರೇಷು ಗಳಿತೈಃ ವ್ರೀಹ್ಯಾದಿ ಧಾನ್ಯೈಃ ಜೀವನ ಕರ್ತಾರಃ ಶಿಲೋಂಛಾಃ-1/4 ಗುಣ.

44. ........ಶಾಲೀನಾಃ ........ ಪಾದಗುಣನ್ಯೂನಾಃ, ಏಕ ವರ್ಷಪರ್ಯಂತ ಧಾನ್ಯ ಸಂಗ್ರಹಕಾರಿಣಃಶಾಲೀನಾಃ- -1/4ಗುಣ.

45. ........ಅಸಂಚಯಾಃ ........ ಪಾದಗುಣನ್ಯೂನಾಃ ಏಕಾ ಹಿವ್ರತೇಸ್ಥಿತಾಃ- ಅಸಂಚಯಾಃ –1/4 ಗುಣ.

46. ........ವಾರ್ತಾಃ ........ ಪಾದಗುಣನ್ಯೂನಾಃ, ಯಾಯಿ ವಾರೇಷು ಜೀವನಾಃ- ವಾರ್ತಾ –1/4 ಗುಣ.

ಬ್ರಹ್ಮಚಾರಿಣಃ

47. ........ಬೃಹತ್ತರಾಃ ........ ದ್ವಿಗುಣನ್ಯೂನಾಃ. ನೈಷ್ಠಿಕ ಸಂಜ್ಞಿತೇವ್ರತೇ ಯಾವಜ್ಜೀವ ಬ್ರಹ್ಮಚರ್ಯೇ ಸ್ಥಿತಾಃ-ಬೃಹತ್ತಾರಾಃ -2 ಗುಣ.

48. ........ಬ್ರಾಹ್ಮಾಃ ದ್ವಿಗುಣನ್ಯೂನಾಃ. ಯಾವದ್ವಿವಾಹಕಾಲ ಪರ್ಯಂತಂ ವೇದಾಧ್ಯಯನ ಕರ್ತಾರಃ-ಬ್ರಾಹ್ಮಾಃ –2 ಗುಣ.

49. ........ತೇಭ್ಯಃ ಪ್ರಾಜಾಪತ್ಯಾಃ ........ ದ್ವಿಗುಣನ್ಯೂನಾಃ. ಏಕಭಾರ್ಯಾಃ ಋತುಗಾಮಿನಃಪ್ರಾಜಾಪತ್ಯಾಃ -2 ಗುಣ.

50. ........ತೇಭ್ಯಃ ಸಾವಿತ್ರಾಃ ........ ದ್ವಾದಶವರ್ಷಪರ್ಯಂತಂ ಗುರುಕುಲವಾಸ ಪೂರ್ವಕಂ ವೇದಾಧ್ಯಯನ ಕರ್ತಾರಃ- ಸಾವಿತಾಃ -2 ಗುಣ.

ಈ ಮೇಲಿನವು ಬ್ರಾಹ್ಮಣರಲ್ಲಿ ವಿಧಗಳು ಮತ್ತು ವಿಶೇಷಗಳು :–

51. ........ಸಾವಿತ್ರೇಭ್ಯಃ ಕ್ಷತ್ರಿಯಾಃ ........ ಚತುರ್ಗುಣಾಧಮಾಃ–4ಗುಣ.

52. ........ತೇಭ್ಯಃ ವೈಶ್ಯಾಃ ........ ಪಂಚಗುಣಾಧಮಾಃ-5ಗುಣ.

53. ........ತೇಭ್ಯಃ ಶೂದ್ರಾಃ ........ ಷಡ್ಗುಣಾಧಮಾಃ–6 ಗುಣ.

54. ........ತೇಭ್ಯಃ ಅನುಲೋಮಾಃ ........ ಸಪ್ತಗುಣಾಧಮಾಃ–2ಗುಣ.

55. ........ತೇಭ್ಯಃ ಪ್ರತಿಲೋಮಾಃ ........ ಅಷ್ಟಗುಣಾಧಮಾಃ-8ಗುಣ.

56. ........ತೇಭ್ಯಃ ಅಂತ್ಯಜಾಃ ........ ದ್ವಿಗುಣಾಧಮಾಃ-9ಗುಣ.

57. ........ತೇಭ್ಯಃ ಗಜಾಃ ........ ದಶಗುಣಾಧಮಾಃ –10ಗುಣ.
58. ........ತೇಭ್ಯಃ ಅಶ್ವಾಃ ........ ದ್ವಿಗುಣಾಧಮಾಃ –2ಗುಣ.
59. ........ತೇಭ್ಯಃ ಮೃಗಾಃ ........ ದ್ವಿಗುಣಾಧಮಾಃ –2ಗುಣ.
60. ........ತೇಭ್ಯಃ ಮೃಗೇಭ್ಯಃ ಪಶು ಭಿಶ್ಚ ಜಲಚರಾಃ ........ ದ್ವಿಗುಣಾಧಮಾಃ –2ಗುಣ.
61. ........ಪಕ್ಷಿಭ್ಯಃ ಜಲಚರೇಭ್ಯಶ್ಚ ಕ್ಷುದ್ರಜೀವಾಃ ........ ದ್ವಿಗುಣಾಧಮಾಃ –2ಗುಣ.
62. ........ತೇಭ್ಯಃ ವೃಕ್ಷಾಃ ........ ದ್ವಿಗುಣಾಧಮಾಃ –2ಗುಣ
63. ........ತೇಭ್ಯಃ ಲತಾಃ ........ ದ್ವಿಗುಣಾಧಮಾಃ –2ಗುಣ.
64. ........ತೇಭ್ಯಃ ಗುಲ್ಮಾಃ ........ ದ್ವಿಗುಣಾಧಮಾಃ –2ಗುಣ.
65. ........ತೇಭ್ಯಃ ಓಷಧಯಃ ........ ದ್ವಿಗುಣಾಧಮಾಃ –2ಗುಣ.
66. ........ಓಷಧೀಭ್ಯಃ ತೃಣಜೀವಾಃ........ ದ್ವಿಗುಣಾಧಮಾಃ –2ಗುಣ.
67. ........ತೃಣಜೀವಾತ್ ಜಡಾಃ ನೀಚಾಃ ........ ........

ಕ್ರಮೇಣ ಗೃಹಸ್ಥ ಚಾತುರ್ವಿಧ್ಯ ಪರಿಯಂತಂ ಪಾದಗುಣಾಧಮತ್ವಂ, ತತ್ರ ವಾರ್ತೇಭ್ಯಃ ಬೃಹತ್ತಾರಾಃ ದ್ವಿಗುಣಾಧಮಾಃ । ಬೃಹತ್ತಾರೇಭ್ಯಃ ಬ್ರಾಹ್ಮಾಃ ದ್ವಿಗುಣಾಧಮಾಃ । ತೇಭ್ಯಃ ಪ್ರಾಜಾಪತ್ಯಾಃ ದ್ವಿಗುಣಾಧಮಾಃ । ತೇಭ್ಯ ಸಾವಿತ್ರಾಃ ದ್ವಿಗುಣಾಧಮಾಃ ॥ ಏವಂ ಕ್ಷತ್ರಿಯೇಷು ವೈಶ್ಯೇಷ್ವಪಿ ದ್ರಷ್ಟವ್ಯಂ ॥ ಸಾವಿತ್ರೇಭ್ಯಃ ಕ್ಷತ್ರಿಯಾಃ ಚತುಗುರ್ಣಾಧಮಾಃ– ತೇಭ್ಯಃ ವೈಶ್ಯಾಃ ಪಂಚಗುಣಾಧಮಾಃ– ತೇಭ್ಯಃ ಶೂದ್ರಾಃ ಷಡ್ಗುಣಾಧಮಾಃ– ತೇಭ್ಯಃ ಅನುಲೋಮಾಃ ಅಧಮಾಃ– ತೇಭ್ಯಃ ಪ್ರತಿಲೋಮಾಃ ಅಧಮಾಃ–ತೇಭ್ಯಃ ಅಂತ್ಯಜಾಃ ದ್ವಿಗುಣಾಧಮಾಃ–ತೇಭ್ಯಃ ಗಜಾಃ ಬಹುಳಾಂಶೇನ ಅಧಮಾಃ–ತೇಭ್ಯ ಅಶ್ವಾಃ ದ್ವಿಗುಣಾಧಮಾಃ–ತೇಭ್ಯಃ ಮೃಗಾಃ

ಪಶವಶ್ಚ ದ್ವಿಗುಣಾಧಮಾಃ–ತೇಭ್ಯಃ ಮೃಗೇಭ್ಯಃ ಪಶುಭಿಶ್ಚ ಪಕ್ಷಿಣೋ ಜಲಚರಾಶ್ಚ ದ್ವಿಗುಣಾಧಮಾಃ– ಪಕ್ಷಿಭ್ಯಃ ಜಲಚರೇಭ್ಯಶ್ಚ ಕ್ಷುದ್ರ ಜೀವಾಃ ದ್ವಿಗುಣಾಧಮಾಃ–ತೇಭ್ಯಃ ವೃಕ್ಷಾಃ ದ್ವಿಗುಣಾಧಮಾಃ– ತೇಭ್ಯಃ ಲತಾಃ ದ್ವಿಗುಣಾಧಮಾಃ–ತೇಭ್ಯಃ ಗುಲ್ಮಾಃದ್ವಿಗುಣಾಧಮಾಃ- ತೇಭ್ಯಓಷಧಯಃ ದ್ವಿಗುಣಾಧಮಾಃ–ತೇಭ್ಯಃ ತೃಣಜೀವಾಃ ದ್ವಿಗುಣಾ ಧಮಾಃ ||–ಇತಿ ಗುಣ ತಾರತಮ್ಯಪ್ರಕರಣಂ ||

## ೩೩ ಕೋಟಿ ದೇವತೆಗಳ ವಿವರ

ಬ್ರಹ್ಮದೇವರಾರಭ್ಯ ಶತಸ್ಥಪರಿಯಂತ ತ್ರಿಶತೋತ್ತರ ತ್ರಿಸಾಹಸ್ರ ಸಂಖ್ಯಾಕಾದೇವಾಃ ಮುಖ್ಯತಃ ತತ್ವಾಭಿಮಾನಿತ್ವಾತ್ತ್ರಿಕಾ ಇತ್ಯುಚ್ಯಂತೇ। ಸೃಷ್ಟ್ಯಾದಾವೇವ ದೇವತ್ವ ಪ್ರಾಪ್ತೇಃ ನಹ್ಯೇಷಾಂ ಕಾರ್ಮಿಕಾಣಾಮಿವ ಅಂತರಾ ದೇವತ್ವಪ್ರಾಪ್ತಿಃ || 2,200.

ಪಾವಕ ಪಾವಮಾನಾದಿ ಕರ್ಮಜದೇವಾನ್ ಆರಭ್ಯ ತನ್ಯಂತಾಃ ತ್ರಿಶತೋತ್ತರ ತ್ರಿಸಹಸ್ರ ನ್ಯೂನತ್ರಯ ತ್ರಿಶಂತ್ ಸಹಸ್ರ ಸಂಖ್ಯಾಃ ದೇವಾಃ ಅಮುಖ್ಯತಃ ತತ್ವಾಭಿಮಾನಿನಃ–೨೯,೭೦೦.

ತತಃ ಬುಧಶನಿಭಾರ್ಯಾದಯಃ ಸಾರ್ಧತ್ರಿಕೋಟಿತೀರ್ಥಾಭಿಮಾನಿ ದೇವಾತಾಃ ಪುಷ್ಕರಾದಯಃ ತ್ರಯತ್ರಿಂತತ್ಸಹಸ್ರನ್ಯೂನ ನವ ಕೋಟಿ ಸಂಖ್ಯಾಃ ದೇವಾಃ ಸರ್ವದಾ ತತ್ತ್ವಾಭಿಮಾನರಹಿತಾಃ ನ ಪ್ರಸಿದ್ಧಾಧಿಕಾರಿಣಃ ||

೮,೯೯,೬೭,೦೦೦

ಅಂತೂ ೯,೦೦,೦೦,೦೦೦

ತತಃ ಏತೇಭ್ಯಃ ಅಧಮಾಃ ಅಧಿಕಾರಿತ್ವರಹಿತಾನ್ ಅನಾಖ್ಯಾ

ತಾನ್ ಚತುರ್ಸ್ತ್ರಿಂಶಂತಿ ಕೋಟಿ ಸಂಖ್ಯಾನ್ ದೇವಾಃ-೨೪,೦೦,೦೦,೦೦೦

ಅಂತೂ ೩೩,00,00,000

ಮೂವತ್ತುಮೂರುಕೋಟಿ ಆಜಾನಜರಲ್ಲಿ ಪಠಿತರಾದ ನೂರು ಕಡಿಮೆ ನೂರುಕೋಟಿ ಋಷಿಗಳು ಮೂವತ್ತುಮೂರುಕೋಟಿ ಒಳಗೆ ಸೇರಲಿಲ್ಲ. ಇವರು ಅನ್ಯರು.

## ೨. ಭಾವಪ್ರಕಾಶಿಕೆ :-

ಮನುಷ್ಯೋತ್ತಮರು ಮೊದಲು ಬ್ರಹ್ಮದೇವರವರೆಗೂ ಒಬ್ಬರಕಿಂತಲೂ ಒಬ್ಬರು ೧೦೦ ಗುಣ ಉತ್ತಮರೆಂಬ ಕ್ರಮದಿಂದ-ಅಂದರೆ, ಸತಿ ಮೊದಲಾದ ಕೆಲವರಿಗೆ 10 ಗುಣಗಳು ಉತ್ತಮ- ನೀಚತ್ವಕ್ರಮವೂ ಹೇಳಿರುವರು. ಆ ಕ್ರಮಾನುಸಾರವೆಂದರ್ಥ. 100 ಗುಣ ಉತ್ತಮರೆಂದು ಹೇಳಿದುದು,- ಪ್ರಾಯಶಃ ಎಂದು ಭಾವಿಸಬೇಕು. ಅಂತು, ಈ ಸಂಧಿಯಲ್ಲಿ ಹೇಳಿದ ಕ್ರಮ ದಿಂದ ನಿತ್ಯದಲ್ಲೂ ಯಾರು ಚಿಂತಿಸುವರೋ, ಅವರಿಗೆ ಶ್ರೀಹರಿಯು ಪ್ರೀತನಾಗಿ ಚತುರ್ವಿಧಪುರುಷಾರ್ಥಗಳನ್ನು ಕೊಡುವನು. ಆದ್ದರಿಂದ ಮರೆಯದೆ, ನಿತ್ಯ ದಲ್ಲೂ ಈ ಸಂಧಿಯನ್ನು ಅಭಿಮಾನಪೂರ್ವಕವಾಗಿ ಪಠಿಸಬೇಕು. ॥೨೯॥

॥ ಇತಿ ಗುಣತಾರತಮ್ಯಸಂಧಿ ಸಂಪೂರ್ಣಂ ॥

## ೩. ಭಾವದರ್ಪಣ :-

ತಾರತಮ್ಯರೀತಿಯಿಂದ ಚಿಂತನ ಮಾಡತಕ್ಕವರಿಗೆ ಚತುರ್ವಿಧಪುರು ಷಾರ್ಥಪ್ರಾಪ್ತಿ ಆಗುವದೆಂದು ಸಂಧಿ ಉಪಸಂಹಾರ ಮಾಡುತ್ತಾರೆ । ಮಾನು ಷೋತ್ತಮೇತಿ. ॥೨೯॥

॥ ಇತಿ ಭಾವದರ್ಪಣ ಟೀಕಾಯಾಂ ಗುಣತಾರತಮ್ಯಸಂಧಿಃ ಪರ್ಯವಸಿತಃ ॥

## ೪. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ :-

ಉಪಸಂಹರತಿ- "ಮಾನುಷೋತ್ತಮರು" - ಇತಿ ॥ ಶ್ರೀನಿಧಿಃ ಓಂ ॥ ಕ್ರತುಂ ಪುನತ ಆನುಷಕ್ ಯಸ್ಮೈ ಸಾಧಿಷ್ಠೋವಸೇ ತೇ ಸ್ಯಾಮ ಭರೇಷು ತೇ

ತೇ ವಯಂ ಹೋತ್ರಾಭಿರುತ ದೇವಹೂತಿಭಿಃ ॥ ॥ ಓಂ ॥ ಶ್ರಯತೇ ಇತಿ ಶ್ರೀಃ ॥ ಅವನವನ್-ತತ್ ನಿಧಾಪಯತಿ ಭಕ್ತೇಷು ಸ್ಥಾಪಯತಿ-ಇತಿ ತಥೋಕ್ತಃ॥

ಇತಿ ಶ್ರೀಮದ್ ಹರಿಕಥಾಮೃತಸಾರ ಟೀಕಾಯಾಂ ಗುಣತಾರತಮ್ಯ ಸಂಧಿಃ ಸಮಾಪ್ತಃ ॥ ಶ್ರೀರಸ್ತು. ॥೨೯॥

## ಕನ್ನಡಾರ್ಥ

ಸಂಧಿಯನ್ನು ಉಪಸಂಹರಿಸುತ್ತಾರೆ– "ಮಾನುಷೋತ್ತಮರು"–ಎಂಬ ಪದ್ಯದಿಂದ.

"ಶ್ರೀನಿಧಿಃ"– "ಭಕ್ತರಲ್ಲಿ– ಸಂರಕ್ಷಣ ಸಂಪತ್ತನ್ನು ಸ್ಥಾಪಿಸುವನು."– ಎಂದು ಬೃಹತೀ-ಮಂತ್ರಾನುಗುಣವಾದ ಅರ್ಥ. ॥೨೯॥

ಇಲ್ಲಿಗೆ ಶ್ರೀಹರಿಕಥಾಮೃತಸಾರಟೀಕಾ ಶ್ರೀವ್ಯಾಸದಾಸಸಿದ್ಧಾಂತ ಕೌಮುದಿಯ ಕನ್ನಡಅರ್ಥಾನುವಾದದಲ್ಲಿ ಗುಣತಾರತಮ್ಯಸಂಧಿಯು ಮುಗಿದುದು. ॥೨೯॥

### ೫. ಶ್ರೀಗುರುಹೃದಯ ಪ್ರಕಾಶಿಕೆ :–

ಮನುಷ್ಯೋತ್ತಮರನ್ನು ಮೊದಲು ಮಾಡಿ,ಬ್ರಹ್ಮಾಂಡ ಶತವೆಂಬ ನೂರು ಗುಣದಿಂದ ಕ್ರಮೇಣ ಉತ್ತಮತ್ವವನ್ನು ಚಿಂತಿಸುವ ಭಕ್ತರಿಗೆ ಶ್ರೀನಿಧಿಯಾದ ಜಗನ್ನಾಥವಿಠಲನಾದ ಜ್ಞಾನಪ್ರದಸ್ವಾಮಿಯು ತಾನು ಒಲಿದು, ಚತುರ್ವಿಧ ಧರ್ಮಾರ್ಥ ಕಾಮ ಮೋಕ್ಷಗಳೆಂಬುವುದನ್ನು ಕೊಡುವನು. ಆದ್ದರಿಂದ, ಸದಾ ಅನುರಾಗವೆಂಬ ಪರಮಪ್ರೇಮದಿಂದ ಪ್ರಾಜ್ಞರು ಇದನ್ನು ಮರೆಯದೆ ಪಠಿಸ ಬೇಕು.

**ವಿಷ್ಣು ಸರ್ವೋತ್ತಮೋಥ ಪ್ರಕೃತಿರಥ ವಿಧಿಪ್ರಾಣನಾಥಾವ ಥೋಕ್ತೌ ಬ್ರಹ್ಮಾಣೀ ಭಾರತೀ ಚ ದ್ವಿಜ ಫಣಿಪ ಮೃಡಾಸ್ತ್ರೀಯಃಷಟ್ಕ ವಿಷ್ಣೋಃ**– ಎಂಬುದೇ ಮೊದಲಾದ ತಾರತಮ್ಯಸ್ತೋತ್ರವೂ, ಗುಣತಾರ ತಮ್ಯವೂ ಸಹ ವಿವರಿಸಲ್ಪಟ್ಟಿತು. ॥೨೯॥

# ಸರ್ವವ್ಯಾಖ್ಯಾನಸಾರಸಂಗ್ರಹ

ಮಾನುಷೋತ್ತಮರಿಂದ ಪ್ರಾರಂಭಿಸಿ, ಚತುರ್ಮುಖ ಬ್ರಹ್ಮದೇವರ ಪರ್ಯಂತ (**ಚತುರಾನನಾಂತ**) ಆರೋಹಣ ತಾರತಮ್ಯಕ್ರಮದಲ್ಲಿ ಕ್ರಮ ಕ್ರಮವಾಗಿ ಒಬ್ಬರಿಗಿಂತ ಮೇಲಿನವರು 100 ಗುಣ ಉತ್ತಮರೆಂಬ ಉತ್ತಮಾನುಸಂಧಾನಕ್ರಮದಿಂದ ಚಿಂತಿಸಬೇಕೆಂದು ಹೇಳುತ್ತಾರೆ.

ಅವರವರ ಪತ್ನಿ ಮೊದಲಾದ ಕೆಲವರಿಗೆ ಉತ್ತಮ-ನೀಚತ್ವ ಕ್ರಮವನ್ನು ಹೇಳಿದೆ.

ಪೂರ್ವೋಕ್ತಕ್ರಮದಿಂದ ಚಿಂತಿಸಿ, ಧ್ಯಾನಮಾಳ್ಪ ಭಗವದ್ಭಕ್ತರಿಗೆ ಅನಂತಕಲ್ಯಾಣ ಗುಣಗಣ ಧಾಮನಾದ (**ಶ್ರೀನಿಧಿ**) ಶ್ರೀಪರಮಾತ್ಮನು ಧರ್ಮ, ಅರ್ಥ, ಕಾಮ, ಮತ್ತು ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳನ್ನು ಕೊಡುವನು.

ಅಲ್ಲದೆ, ಆಯಾಯಾ ಜೀವರ ಯೋಗ್ಯತೆಗನುಗುಣವಾಗಿ, ಮೋಕ್ಷಸ್ಥಿತಿಯಲ್ಲಿ ಸಾಯುಜ್ಯ-ಸಾರೂಪ್ಯ-ಸಾಮೀಪ್ಯ ಮತ್ತು ಸಾಲೋಕ್ಯ-ಎಂಬ ಚತುರ್ವಿಧ ಮುಕ್ತಿಯನ್ನು ಕರುಣಿಸುವನು.

ಜಗತ್ತಿಗೆ ಸ್ವಾಮಿಯಾದ ದಾಸವರ್ಯರ ಉಪಾಸ್ಯಮೂರ್ತಿಯಾದ ಗರುಡವಾಹನ ಶ್ರೀಲಕ್ಷ್ಮೀನಾರಸಿಂಹಾಭಿನ್ನ **ಜಗನ್ನಾಥವಿಠ್ಠಲಸ್ವಾಮಿಯು,** ಅತ್ಯಂತ ಧ್ಯಾನೋಪಾಸಕರಿಗೆ ಸ್ವಯಂ ಒಲಿದು,ಅನುಗ್ರಹಿಸುವನು. ಶ್ರೀಹರಿಯ ಅನುಗ್ರಹಪ್ರಾಪ್ತಿಗಾಗಿ, ವೇದೋಕ್ತವಾದ ಶ್ರೀಮನ್ಮಧ್ವಮತಸಿದ್ಧಾಂತ ರೂಪವಾದ ಈ ತಾರತಮ್ಯಕ್ರಮವನ್ನು ಸಕಲಜ್ಞಾನಿಗಳೂ (**ಸ್ರಾಜ್ಞರು ಇದ**) ಮರೆಯದೇ, ಪ್ರತಿನಿತ್ಯದಲ್ಲೂ ಭಕ್ತ್ಯಾದರಗಳಿಂದ (**ಸಾನುರಾಗದಿ**) ಅಧ್ಯಯನಮಾಡಿ, ಕೃತಾರ್ಥರಾಗಬೇಕೆಂದು ಪರಮಜ್ಞಾನಿಗಳಾದ ಶ್ರೀಜಗನ್ನಾಥ ದಾಸವರ್ಯರು ತಿಳಿಸುತ್ತಾ, ಪ್ರಸಕ್ತ ಸಂಧಿಗತ ವಿಷಯವನ್ನು 29ನೆಯ ಈ ಅಂತ್ಯಪದ್ಯದಿಂದ ಉಪಸಂಹಾರಮಾಡುತ್ತಾರೆ. ॥೨೯॥

॥ ಇಂತು, **ಗುಣತಾರತಮ್ಯಸಂಧಿ**- ಎಂಬ 20ನೆಯ ಸಂಧಿಗತ 29 ನೆಯ ಅಂತ್ಯ ಪದ್ಯದಿಂದ **ಸರ್ವವ್ಯಾಖ್ಯಾನಸಾರಸಂಗ್ರಹವು** ಮುಗಿಯಿತು ॥

॥ ಶ್ರೀಲಕ್ಷ್ಮೀನರಸಿಂಹಾರ್ಪಣಮಸ್ತು ॥

★★

॥ ಶ್ರೀಃ ಹರಿಃ ಓಂ ॥

**ಅವರೋಹಣ ಕ್ರಮದಲ್ಲಿ ತಾರತಮ್ಯಗಳ ವಿವರಣಾತ್ಮಕವಾದ ಪಟ್ಟಿ :-**

ಮೋಕ್ಷಾಪೇಕ್ಷಿಗಳಾದ ಭಗವದ್ಭಕ್ತರ ಅವಗಾಹನೆಗಾಗಿ, ತಾರತಮ ಕಮದ ಸಂಪೂರ್ಣ ವಿವರಗಳನ್ನು ಅವರೋಹಣಕಮದಲ್ಲಿ ಈ ಕೆಳಗಿನ್ನ ಪಟ್ಟಿಯಲ್ಲಿ ಕೊಟ್ಟಿದೆ :-

| ಕಕ್ಷೆ ಸಂಖ್ಯೆ | ಶೀರ್ಷಿಕೆ | ತಾರತಮ್ಯದ ವಿವರಗಳು |
|---|---|---|
| 1. | ಶ್ರೀಮನ್ನಾರಾಯಣನು. | ಸರ್ವೋತ್ತಮ ಕ್ಷರಾಕ್ಷರ ಪೂಜಿತಪಾದ. ರಮಾಬ್ರಹ್ಮಾದಿವಂದ್ಯ. ಶ್ರೀರಮಾದೇವಿಯರಿಗಿಂತ ಅನಂತಾನಂತಕೋಟಿ ಗುಣಗಳಿಂದ ಅಧಿಕನು. ಸರ್ವತಂತ್ರಸ್ವತಂತ್ರ ಸರ್ವಸಾರಭೋಕ್ತ – ಸ್ವರಮಣ- ಸ್ವಗತ ಬೇಧವಿವರ್ಜಿತ-ಸಗುಣ–ಸಾಕಾರ. ಪ್ರಾಕೃತ ತ್ರಿಗುಣಗಳಿಂದ ದೂರ-ಜೀವ ಜಡರುಗಳಿಂದ ಅತ್ಯಂತ ಭಿನ್ನ ಸರ್ವೋತ್ಕೃಷ್ಟ ವಸ್ತು. |
| 2. | ಶ್ರೀಲಕ್ಷ್ಮೀದೇವಿಯರು. | ಈಶಕೋಟಿ ಪ್ರವಿಷ್ಟ–ನಿತ್ಯಮುಕ್ತಳು-ನಿರ್ವಿಕಾರಳು – ತ್ರಿಗುಣಸಂಬಂಧರಹಿತೆ ಶ್ರೀಹರಿಗೆ ದೇಶತಃ ಕಾಲತಃ ಸಮಳು–ಗುಣತಃ |

| | | |
|---|---|---|
| | | ಅನಂತಾನಂತಕೋಟಿ ಅಧಮಳು– ಶ್ರೀಹರಿಯ ನಿತ್ಯಾವಿಯೋಗಿ–ವಕ್ಷಸ್ಥಳ ನಿವಾಸಿನಿತ್ರಿ ಗುಣಾಭಿಮಾನಿ(ಶ್ರೀ-ಭೂ-ದುರ್ಗಾ) ಪರಶುಕ್ಲತ್ರಯಳು– ಅವ್ಯಕ್ತತತ್ತ್ವಾಭಿಮಾನಿ. |
| 3. | **ಬ್ರಹ್ಮ–ವಾಯುಗಳು** | ಜೀವಕೋಟಿ ಪ್ರವಿಷ್ಟರು. ಶ್ರೀರಮಾಗಿಂತ **ಕೋಟಿಗುಣಾಧಮರು.** ಋಜುಗುಣಾಧಿಪರಾದ ಬ್ರಹ್ಮದೇವರು ಪದವಿಯಿಂದ ವಾಯುದೇವರಿಗೆ ಕಿಂಚಿತ್ ಅಧಿಕರು. ಪರಿಶುಕ್ಲತ್ರಯರು. ಅಖಿಣಾತ್ಮಸಮರು. ಮಹತತ್ತ್ವಾಭಿಮಾನಿಗಳು– ವಿಜ್ಞಾನಕೋಶಾದಿಪತಿಗಳು. |
| 4. | **ಸರಸ್ವತಿ-ಭಾರತೀದೇವಿಯರು** | ತಮ್ಮ ತಮ್ಮ ಪತಿಯರಿಗಿಂತ **ಶತಗುಣಾಧಮರು– (100 ಗುಣನ್ಯೂನ)** ಪರಶುಕ್ಲತ್ರಯರು – ಅತಿರೋಹಿತವಿಮಲವಿಜ್ಞಾನಿಗಳು. ಮಹತ್ತತ್ವಾಭಿಮಾನಿಗಳು. |
| 5. | **ಗರುಡ–ಶೇಷ–ರುದ್ರರು** | ಸರಸ್ವತೀ ಭಾರತಿಯರಿಗಿಂತ **ಶತಗುಣಾಧಮರು (100 ಗುಣ ಕನಿಷ್ಠ ).** ಅಹಂಕಾರತತ್ತ್ವಾಭಿಮಾನಿಗಳು. ಮನೋಕೋಶಾಭಿಮಾನಿಗಳು. 1)ಶೇಷ–ಬುದ್ಧ್ಯಾಭಿಮಾನಿ–ಜೀವನಾಮಕನು 2) ಗರುಡ–ಚಿತ್ತಾಭಿಮಾನಿ–ಕಾಲನಾಮಕನು 3) ರುದ್ರ–ಮನೋಭಿಮಾನಿ–ಭವನಾಮಕನು ರುದ್ರನಿಗೆ ಶೇಷಪದವಿಯಿಂದ ಮುಕ್ತಿ. |

6. **ನೀಲಾದಿ ಶ್ರೀಕೃಷ್ಣನ ಷಣ್ಮಹಿಷಿಯರು**

1) ನೀಲಾ, 2) ಭದ್ರಾ, 3) ಮಿತ್ರವಿಂದಾ, 4) ಲಕ್ಷಣಾ, 5) ಕಾಳಿಂದೀ, 6) ಜಾಂಬವತೀ–ಇವರು ಶ್ರೀಕೃಷ್ಣನಷಣ್ಮಹಿಷಿಯರು. ಇವರು ಗರುಡ ಶೇಷ ರುದ್ರರಿಗಿಂತ **ಪಂಚ ಗುಣಾಧಮರು (5 ಗುಣಗಳಿಂದ ಕಮ್ಮಿ)** ಇವರಲ್ಲಿ **ಜಾಂಬವತೀ** ಶ್ರೇಷ್ಠಳು ನಿತ್ಯ ರಮಾ ಸನ್ನಿಧಾನಯುಕ್ತಳು. ಇವಳೇ **ಶ್ರೀ ತುಲಸಿಯು.** ಜೈಗೀಷವ್ಯ ಎಂಬ ರುದ್ರದೇವರ ಅವತಾರ ದ್ವಾರಾ ಉಪದೇಶ.

7. **ಸೌಪರ್ಣೀ–ಗರುಡಪತ್ನೀ**
**ವಾರುಣೀ–ಶೇಷಪತ್ನೀ**
**ಪಾರ್ವತೀ–ರುದ್ರಪತ್ನೀ**

ಈ ಮೂರು ಮಂದಿ ಷಣ್ಮಹಿಷಿಯರಿಗಿಂತ **ದ್ವಿಗುಣಾಧಮರು (2 ಗುಣಗಳಿಂದ ಕಮ್ಮಿ),** ಪದವಿ ದೃಷ್ಟಿಯಿಂದ ವಾರುಣೀ ಪಾರ್ವತಿಗಿಂತ ಕಿಂಚಿದುತ್ತಮಳು. ಅಹಂಕಾರತತ್ತ್ವಾಭಿಮಾನಿಗಳು. ಪಾರ್ವತೀ–ಮತಿಗೆ ಅಭಿಮಾನಿ. ತಮ್ಮ ತಮ್ಮ ಪತಿಗಳಿಗಿಂತ **ದಶಗುಣಾಧಮರು.**

8. **ಇಂದ್ರ ಮತ್ತು ಕಾಮರು** ಸೌಪರ್ಣೀ– ವಾರುಣೀ– ಪಾರ್ವತಿಗಳಿಗಿಂತ **ದಶಗುಣಾಧಮರು (10 ಗುಣಗಳಿಂದ ಕಮ್ಮಿ)** 1) ಇಂದ್ರ– ಭೋಗಾಭಿಮಾನಿ 2) ಕಾಮ–ಮನಸ್ಸಿನ ಕಾಮನೆಗಳಿಗೆ ಅಭಿಮಾನಿ-ಇಬ್ಬರೂ ಮನಸ್ಸಿನಅಭಿಮಾನಿಗಳೇ.

ಇಂದ್ರನು ಕಾಮನಿಗಿಂತ ಪದವಿಪ್ರಯುಕ್ತ ಕಿಂಚಿದಧಿಕನು. ಕಾಮನಿಗೆ ಇಂದ್ರಪದವಿಯಿಂದ ಮುಕ್ತಿ.

9. **ಅಹಂಕಾರಿಕ ಪ್ರಾಣ** — ಇಂದ್ರ ಕಾಮರಿಗಿಂತ **ದಶಗುಣಾಧಮನು (10 ಗುಣ ಕಮ್ಮಿ)** 1) ತ್ವಗಿಂದ್ರಿಯರ ಅಭಿಮಾನಿ 2) ಸ್ಪರ್ಶ ಗುಣಗ್ರಹಕನು. 3) 49 ಮರುದ್ಗಣದಲ್ಲಿ ಸೇರಿದವನು.

10. **ಅನಿರುದ್ಧ-ಗುರು-ಸ್ವಾಯಂಭುವಮನು-ದಕ್ಷ-ಶಚೀ-ರತೀ-ಈ ಆರು ಮಂದಿ.** — 1)ಅನಿರುದ್ಧ-ಕಾಮಪುತ್ರ. ಉಷಾಪತಿ 2) ಗುರು- ಬೃಹಸ್ಪತ್ಯಾಚಾರ್ಯರು - ಸುರಗುರುಗಳು. 3) ಸ್ವಾಯಂಭುವಮನು_ದಕ್ಷಪುತ್ರ ಉಪಸ್ಥೇಂದ್ರಿಯಾಭಿಮಾನಿ. 14 ಮನುಗಳಲ್ಲಿ ಒಬ್ಬ. 4) ದಕ್ಷಪ್ರಜಾಪತಿ- ಬ್ರಹ್ಮಪುತ್ರ - ಹಸ್ತೇಂದ್ರಿಯಾಭಿಮಾನಿ - ರುದ್ರದೇವರ ಮಾವ. 5) ಶಚೀ-ಇಂದ್ರನಪತ್ನೀ-ಮನೋಭಿಮಾನಿ. 6) ರತೀ-ಮನ್ಮಥನ ಪತ್ನೀ- ಮನೋಭಿಮಾನಿ. ಈ **ಆರು ಮಂದಿಯೂ** ಸಮಾನಕಕ್ಷಾಪನ್ನರು.ಅಹಂಕಾರಿಕ ಪ್ರಾಣನಿಗಿಂತ**ದಶಗುಣಾಧಮರು.**

11. **ಪ್ರವಹವಾಯು** — ಪ್ರವಹ-ಪ್ರವಾಹವಾಯು ವಾಯು.ತತ್ತ್ವಾಭಿಮಾನಿ-49 ಮರುದ್ಗಣದಲ್ಲಿ ಒಬ್ಬನು ವಾಯುವ್ಯಕೋಣಾಧಿಪತಿ - ಅನಿರುದ್ಧಾದಿಗಳಿಗಿಂತ **ಪಂಚಗುಣಾಧಮನು.**

12. **ಸೂರ್ಯ-ಚಂದ್ರ-ಯಮ ಮತ್ತು ಶತರೂಪಾದೇವಿ-ಈ ನಾಲ್ವರು.**

1) ವಿವಸ್ವಾನ್ ನಾಮಕಸೂರ್ಯ (ಇನ)- ಚಕ್ಷುರಿಂದ್ರಿಯಾಭಿಮಾನಿ. 2) ಚಂದ್ರ- ವನಸ್ಪತಿರಾಜ-ನಕ್ಷತ್ರಾಧಿಪತಿ- ದಿಗ್ದೇವತೆ- ಶ್ರವಣೇಂದ್ರಿಯಾಭಿಮಾನಿ 3) ಯಮ- ಯಮಧರ್ಮರಾಯ - ಧರ್ಮಾಧರ್ಮಗಳ ನಿರ್ಣಯಾಧಿಕಾರಿ-ನಿರಯಾಧಿಪತಿ. ದಕ್ಷಿಣ ದಿಕ್ಕಿನ ದಿಕ್ಪಾಲಕ. 4) ಶತರೂಪಾದೇವಿ- ಸ್ವಾಯಂಭುವಮನುವಿನ ಪತ್ನೀ - ಉಪಸ್ಥೇಂದ್ರಿಯಾಭಿಮಾನಿ. ಈ ನಾಲ್ವರೂ ಸಮಾನಕಕ್ಷಾಪನ್ನರು. ಪ್ರವಹವಾಯುವಿಗಿಂತ **ದ್ವಿಗುಣಾಧಮರು.**

13. **ವರುಣ**

ವರುಣ-ಜಲಾಭಿಮಾನಿ - ಅಪತತ್ತ್ವಅಭಿಮಾನಿ-ರಸಸೇಂದ್ರಿಯಕ್ಕೆ ಅಭಿಮಾನಿ. ಸಮುದರಾಜ-ಗಂಗಾಪತಿ. ಸೂರ್ಯಾದಿ ನಾಲ್ವರಿಗಿಂತ **ಸಾರ್ಧಪಾದೈಕ ಗುಣಾಧಮನು.** ಅಂದರೆ ಪಾದದಲ್ಲಿ ಅರ್ಧ = ಕಾಲುಭಾಗದಲ್ಲಿ ಅರ್ಧ = 1/8 ಭಾಗ ಕಡಿಮೆ.

14. **ನಾರದರು**

ನಾರದ-ಬ್ರಹ್ಮರ್ಷಿ- ಬ್ರಹ್ಮದೇವರ ಅಂಕದಿಂದ ಜನಿಸಿದವರು. ತ್ರಿಲೋಕಸಂಚಾರಿಗಳು. ಉತ್ತಮ ಹರಿಭಕ್ತರು. **ವರುಣನಿಗಿಂತ ಪಾದಾರ್ಧಗುಣಾಧಮರು 1/8 ಗುಣ.**

15. **ಅಗ್ನಿ-ಭೃಗು-ಪ್ರಸೂತೀ ಈ ಮೂರು ಮಂದಿ-**

1) ಅಗ್ನಿ-ದೇವಮುಖನು. ಇವನ ದ್ವಾರವೇ

ದೇವತೆಗಳು ಹವಿಸ್ಸನ್ನು ಸ್ವೀಕರಿಸುವರು–ವಾಗಿಂದ್ರಿಯಾಭಿಮಾನಿ- ತೇಜೋತತ್ತ್ವಾಭಿಮಾನಿ 2)ಭೃಗು-ನಾರದರ ನಂತರ ಭೃಗು ಉತ್ತಮ ಋಷಿ-ಹರಿಸರ್ವೋತ್ತಮತ್ವವನ್ನು ಸಾರಿದ ಧೀರ. 3) ಪ್ರಸೂತೀ-ದಕ್ಷಪ್ರಜಾಪತಿಯ ಪತ್ನಿ-ಪ್ರಾಣೇಂದ್ರಿಯಾಭಿಮಾನಿ. **ಈ ಮೂವರು** ಸಮಾನಕಕ್ಷಾಪನ್ನರು. **ನಾರದರಿಗಿಂತ ಪಾದಾರ್ಧಗುಣಾಧಮರು (1/8).**

**16. ಸಪ್ತರ್ಷಿಗಳು ಮತ್ತು ವೈವಸ್ವತಮನು-ವಿಶ್ವಾಮಿತ್ರ- ಈ 9 ಮಂದಿ.**

1) ಮರೀಚಿ 2) ಅತ್ರಿ 3) ಅಂಗಿರಸ 4) ಪುಲಸ್ತ್ಯ 5) ಪುಲಹ 6) ಕ್ರತು ಮತ್ತು 7) ವಸಿಷ್ಠ–ಈ ಸಪ್ತರ್ಷಿಗಳು ಮತ್ತು 1) ವೈವಸ್ವತಮನು (ಪ್ರಸಕ್ತಮನ್ವಂತರಾಧಿಪತಿ) ಮತ್ತು 2) ವಿಶ್ವಾಮಿತ್ರ–ಈ 9 ಮಂದಿ ಅಗ್ನ್ಯಾದಿಗಳಿಗಿಂತ **ದ್ವಿಗುಣಾಧಮರು.**

**17. ಮಿತ್ರ-ನಿರಋತಿ-ತಾರಾ-ಪ್ರಾವಹೀ- ಈ ನಾಲ್ಕು ಮಂದಿ**

1) ಮಿತ್ರನಾಮಕಸೂರ್ಯ (ಗುದೇಂದ್ರಿಭಿಮಾನಿ) 2) ನಿರಋತಿ–ದೈತ್ಯವಂಶಜಾತ–ನೈರುತ್ಯಕೋಣಾಧಿಪತಿ. 3) ತಾರಾ–ಬೃಹಸ್ಪತ್ಯಾಚಾರ್ಯರ ಪತ್ನೀ ಮತ್ತು 4) ಪ್ರಾವಹೀ–ಪ್ರವಹವಾಯುವಿನ ಪತ್ನೀ–ಭೂಶವಾಯುತತ್ತ್ವದ ಅಭಿಮಾನಿ.–ಈ

ನಾಲ್ವರು ಮೇಲಿನವರಿಗಿಂತ **ಪಾದೇ ಚತು ರ್ಥಾಂಶ ಗುಣಾಧಮರು.**

$\left\{ \frac{1}{16} \text{ ನೇ ಭಾಗ} \right\}$

18\. **ಕುಬೇರ-ವಿಷಕ್ಸೇನ-ಗಣಪತಿ ಶತಸ್ಥರು-6 ಮಂದಿ ಆದಿತ್ಯರು-47 ಮರುತ್ತರು-ಏಳು ಮಂದಿ ವಸುಗಳು 100 ಮಂದಿ ರುದ್ರಗಣ-10 ಮಂದಿ ವಿಶ್ವೇ ದೇವತೆಗಳು-ಋಭು-ಅಶ್ವಿನೀದೇವತೆಗಳು ದ್ಯಾವಾ-ಪೃಥಿವಿ-18 ನೆಯ ಕಕ್ಷದಲ್ಲಿ 100 ಮಂದಿಗಳ ವಿವರ**

| | | |
|---|---|---|
| 1) ಆದಿತ್ಯರು | = | 12 |
| ೨) ಮರುತ್ತರು (ಪ್ರಧಾನವಾಯುಸೇರಿ) | = | 50 |
| 3) ವಸುಗಳು | = | 8 |
| 4) ರುದ್ರರು | = | 11 |
| 5) ವಿಶ್ವೇದೇವತೆಗಳು | = | 10 |
| 6) ಋಭು | = | 1 |
| 7) ಅಶ್ವಿನೀದೇವತೆಗಳು | = | 2 |
| 8) ದ್ಯಾವಾ—ಪೃಥಿವೀ | = | 2 |
| 9) ಕವ್ಯವಹ ಪಿತೃಗಳು | = | 4 |
| ಒಟ್ಟು | = | 100 |

1) ಕುಬೇರ- ಧನಾಧಿಪತಿ- ಉತ್ತರ ದಿಕ್ಕಿನ ದಿಕ್ಪಾಲಕ 2) ವಿಷಕ್ಸೇನ—ವಾಯುಪುತ್ರ 3) ಗಣಪತಿ—ಭೂತಾಕಾಶಾಧಿಪತಿ- ಶಬ್ದಗುಣಗ್ರಹಕ—ಆದಿಪೂಜಿತ.4)6 ಮಂದಿ ಆದಿತ್ಯರು -ಉರುಕ್ರಮ-ಪುರಂದರನೆಂಬ ಇಂದ್ರ ಮಿತ್ರನಾಮಕಸೂರ್ಯ-ವರುಣನಾಮಕ ಸೂರ್ಯ-ಪರ್ಜನ್ಯನಾಮಕಸೂರ್ಯ ಈ ಆರು ಮಂದಿ ಆದಿತ್ಯರು ಉತ್ತಮ ಕಕ್ಷಾಪನ್ನರು.5) 10 ಮಂದಿ ರುದ್ರಗಣ- ರೈವತ- ಓಜ-ಭವ- ಭೀಮ-ವಾಯು-ಉಗ್ರ- ವೃಷಾಕಪಿ- ಅಜೈಪಾತ-ಅಹಿರ್ಬುಧ್ನ್ಯ- ಬಹುರೂಪ 6) 10 ಮಂದಿ ವಿಶ್ವೇದೇವತೆಗಳು—ಪುರೂರವಾ— ಅಥವಾ-ಕಾಲ—ಕಾಮ, ಧುರಿ—ಲೋಚನ—ಸತ್ಯ—ವಸು—ದಕ್ಷ—ಕ್ರಮ7) 7 ಮಂದಿ ವಸುಗಳು—ದ್ರೋಣ—ಪ್ರಾಣ —ಧ್ರುವ— ಅರ್ಕ—ದೋಷ— ವಸು— ದ್ಯುನಾಮಕನು. 8) ಅಶ್ವಿನೀದೇವತೆಗಳು = 2 ನಾಸತ್ಯ—ದಸ್ರ 9) ಋಭುಗಣ

10) ದ್ಯಾವಾ ಮತ್ತು 11) ಪೃಥಿವೀ. 11) 47 ಮರುದ್ಗಣ– ಇವರೆಲ್ಲರೂ ಮೇಲಿನವರಿಗಿಂತ **ಕಿಂಚಿತ್ ಗುಣಾಧಮರು–**

ಇವರಲ್ಲಿ 15 ಜನ ಹೋಗತಾ ಉಳಿದ 85 ಮಂದಿ **ಶೇಷ ಶಸ್ಥತರು**

**15ರ ವಿವರ :–** 1) ಆದಿತ್ಯರು = 6 + 1 = 7 (12–5)

2) ಪ್ರವಹವಾಯು = 1
3) ಪ್ರಧಾನವಾಯು = 1 } (3 ಮರುದ್ಗಣ) (50–47)
4) ಅಹಂಕಾರಿಕಪ್ರಾಣ = 1
5) ಅಗ್ನಿ = 1–ವಸುಗಣ (8–1)
6) ಕೈಲಾಸಪತಿ ರುದ್ರ = 1–ರುದ್ರಗಣ (11–10)
7) ಯಮ–ಸೋಮ = 2–ಪಿತೃಗಣ
8) ಬೃಹಸ್ಪತಿ = 1

19. **ಕರ್ಮಜದೇವತೆಗಳು. ಚ್ಯವನ-ಸನಕಾದಿಗಳು ಪಾವಕ–ಶುಕ್ರಾಚಾರ್ಯರು–ಉಚಿಥ್ಯ ಮುನಿ–ಜಯಂತ–ಕಶ್ಯಪ–11 ಮಂದಿ ಮನುಗಳು–ಧ್ರುವ–ನಹುಷ–ಶಶಿಬಿಂದು–ಹೈಹಯ–ದೌಷ್ಯಂತಿ-ಬಲಿ–7 ಮಂದಿ ಇಂದ್ರರು–ಕಕುಸ್ಥ–ಗಯ ಇತ್ಯಾದಿ.**

1) ಚ್ಯವನ ಮಹರ್ಷಿ 2) ಸನಕ–ಸನಂದನ - ಸನಾತನ–ಸನತ್ಕುಮಾರ. 3) ಅಗ್ನಿಪುತ್ರ ಪಾವಕ 4) ಕವಿ–ದೈತ್ಯರ ಗುರು ಶುಕ್ರಾಚಾರ್ಯರು 5)ಉಚಿಥ್ಯಮುನಿ6) ಜಯಂತ –ಇಂದ್ರಪುತ್ರ–ಪಾದಾಭಿಮಾನಿ. 7) ಕಶ್ಯಪ ಮಹಾಮುನಿ 8) 11 ಮನುಗಳು(14 ಮನುಗಳಲ್ಲಿ 3 ಮಂದಿ ಉತ್ತಮ ಕಕ್ಷಕ್ಕೆ ಸೇರಿರುವರು) ಅವರು ಕ್ರಮವಾಗಿ, ಸ್ವಾರೋಚಿಷ–ಉತ್ತಮ–ರೈವತ- ಚಾಕ್ಷುಷ –ಸಾವರ್ಣೀ–ದಕ್ಷಸಾವರ್ಣೀ–ಬ್ರಹ್ಮಸಾವರ್ಣೀ–ಧರ್ಮಸಾವರ್ಣೀ-ದೇವ

| | |
|---|---|
| **ಅಲ್ಲದೇ ಪೃಥು ಆದಿಯಾಗಿ ಉತ್ತಾನಪಾದ ರಾಯನೇ-ಮೊದಲಾದ ಕರ್ಮಜದೇವತಾ ವರ್ಗ.** | ಸಾವರ್ಣೀ-ರುದ್ರಸಾವರ್ಣೀ-ಮತ್ತು ಈ11 ಮಂದಿ ಮನುಗಳು. 9) ಧೃವರಾಯ–ಉತ್ತಾನಪಾದ ಪುತ್ರ 10) ನಹುಷಚಕ್ರವರ್ತಿ 11)ಶಶಿಬಿಂದುರಾಯ 12) ಹೈಹಯರಾಯ 13) ದೌಷ್ಯಂತಿ–ದುಷ್ಯಂತ ರಾಜನ ಪುತ್ರ, 14)ಬಲಿ–ವಿರೋಚನನಪುತ್ರ 15) ಕಕುಸ್ಥರಾಯ 16) ಗಯರಾಜ 17) ಪೃಥುಚಕ್ರವರ್ತಿ 18) ಮಾಧಾಂತಚಕ್ರವರ್ತಿ 19) ಪ್ರಿಯವ್ರತರಾಜನು 20) ಭರತಚಕ್ರವರ್ತಿ 21) ಮರುತರಾಯ 22) ಪ್ರಹ್ಲಾದರಾಜರು 23)ಪರೀಕ್ಷಿದ್ರಾಜ 24) ಹರಿಶ್ಚಂದ್ರ 25) ಅಂಬರೀಷಚಕ್ರವರ್ತಿ 26) ಉತ್ತನಪಾದರಾಯ- ಇತ್ಯಾದಿ ನೂರು ಮಂದಿ ಪುಣ್ಯಶ್ಲೋಕರಾದ ಕರ್ಮಜರು. ಇವರು ಗಣೇಶಾದಿಗಳಿಗಿಂತ **ದ್ವಿಗುಣಾಧಮರು.** |
| **20. ಗಂಗಾದೇವಿ–ಪ್ರಾರಂಭಿಸಿ ಪರ್ಜನ್ಯ ಪರ್ಯಂತ 6 ಮಂದಿ** | 1) ಗಂಗಾದೇವಿ-ಶ್ರೀಹರಿಯಪಾದೋದ್ಭವೆ ವರುಣಪತ್ನೀ– 2) ಸಂಜ್ಞಾದೇವಿ— ಸೂರ್ಯನ ಪತ್ನೀ3) ಶ್ಯಾಮಲಾದೇವಿ –ಯಮನ ಧರ್ಮಪತ್ನೀ 4) ವಿರಾಟ್-ಕಾಮಪುತ್ರ ಅನಿರುದ್ಧನ ಪತ್ನೀ— ಬ್ರಹ್ಮಾಂಡಾಭಿಮಾನಿದೇವತಾ 5) ರೋಹಿಣೀ–ಚಂದ್ರಪತ್ನೀ- ದಿಗ್ದೇವತೆ– –ಶ್ರವಣೇಂದ್ರಿಯಾಭಿಮಾನಿ 6) ಪರ್ಜನ್ಯ ನಾಮಕ ಸೂರ್ಯ–ಈ **ಆರು ಮಂದಿ 19ನೆಯ ಕಕ್ಷದವರಿಗಿಂತ ದ್ವಿಗುಣಾಧಮರು.** |

| | |
|---|---|
| 21. **ಸ್ವಾಹಾದೇವಿ** | ಅಗ್ನಿಪತ್ನಿಯಾದ ಸ್ವಾಹಾದೇವಿ (ಎಲರ ಮಿತ್ರನ ಮಡದಿ) ಗಂಗಾದಿಗಳಿಗಿಂತ **ದ್ವಿಗುಣಾಧಮಳು.** |
| 22. **ಬುಧ** | ಬುಧನು ಜಲಾಭಿಮಾನಿಯು. ಚಂದ್ರನಿಂದ ತಾರಾದೇವಿಯಲ್ಲಿ ಜನಿಸಿದನು. ನವಗ್ರಹಗಳಲ್ಲಿ ಒಬ್ಬನು.ಬುಧನು ಸ್ವಾಹಾದೇವಿಗಿಂತ **ಒಂದು ಗುಣದಿಂದ ಅಧಮನು.** |
| 23. **ಉಷಾದೇವಿ** | ಅಶ್ವಿನೀದೇವತೆಗಳ ಭಾರ್ಯಾ ಉಷಾದೇವಿ ನಾಸಿಕೇಂದ್ರಿಯಾಭಿಮಾನಿ. ಉಷಾ ಬುಧನಿಗಿಂತ **ದ್ವಿಗುಣಾಧಮಳು.** |
| 24. **ಧರಣೀದೇವಿ** | ಪೃಥಿವೀ ಅಭಿಮಾನಿಯಾದ ಧರಣೀದೇವಿ ಉಷಾಗಿಂತ **ದ್ವಿಗುಣಾಧಮಳು.** |
| 25. **ಶನಿ** | ಶನೈಶ್ಚರನು. (ಶನಿದೇವರು) ಸೂರ್ಯಪುತ್ರನು. ಛಾಯಾಗರ್ಭ ಸಂಭೂತನು. ನವಗ್ರಹಗಳಲ್ಲಿ ಒಬ್ಬ. ಭೂತತ್ತ್ವಕ್ಕೆ ಅಭಿಮಾನಿ. ಶನಿಯು ಧರಣೀದೇವಿಗಿಂತ **ದ್ವಿಗುಣಾಧಮನು.** |
| 26. **ಪುಷ್ಕರ** | ಸುಕರ್ಮಾಭಿಮಾನಿಯಾದ ಪುಷ್ಕರನು ಶನಿಗಿಂತ **ದ್ವಿಗುಣಾಧಮನು.** |
| 27. **ಅಜಾನಜ ದೇವತೆಗಳು ದೇವಗಂಧರ್ವರ ಪರ್ಯಂತ** | 1) ಆಖ್ಯಾತ ಅಜಾನಜದೇವತಾವರ್ಗ. ಇವರು ಕರ್ಮಜರಿಂದ ಜನಿತರು. ಇವರು ಪುಷ್ಕರನಿಗಿಂತ **ಕಿಂಚಿತ್ ಗುಣಾಧಮರು** { $\frac{1}{4}$ **ಭಾಗ.** } |
| 28. **ಅಜಾನರು** | 2) ಅನಾಖ್ಯಾತ ಅಜಾನಜದೇವತಾವರ್ಗ ಇವರು ಆಖ್ಯಾತಅಜಾನಜರಿಂದ ಜನ್ಯರು. ಈ ವರ್ಗ ಅಖ್ಯಾತವರ್ಗದವರಿಗಿಂತ **ಕಿಂಚಿತ್ ಅವರರು.** ಇವರಲ್ಲಿ 1) ವಿಬು |

| | | |
|---|---|---|
| | | ಧರು 2) ಅಸುರರು, ಚಾರಣರು, 3ನೆಯ ವರ್ಗ ಮೊದಲನೆಯವರಿಗಿಂತ **ಏಕ ಗುಣ ಕಡಿಮೆ.** |
| 29. | **ನೂರು ಕಡಿಮೆ ನೂರು ಕೋಟಿ ಋಷಿಗಳು** | ಇವರೂ ಸಹ ಅನಾಖ್ಯಾತಅಜಾನಜರ ವರ್ಗಕ್ಕೆ ಸೇರಿದವರು. ಈ ವರ್ಗವು ಮೇಲಿನವರಿಗಿಂತ **2 ಗುಣ ಕಡಿಮೆ.** |
| 30. | **ಚಿರಪಿತೃಗಳು** | ಚಿರಪಿತೃವರ್ಗದವರು ಮೇಲಿನವರಿಗಿಂತ **ದ್ವಿಗುಣಾಧಮರು.** |
| 31. | **ದೇವಗಂಧರ್ವರು** | ಚಿರಪಿತೃಗಳಿಗಿಂತ **ನಾಲ್ಕುಗುಣಾಧಮರು** ಇವರು ಸುರಪನಾಲಯದ ಗಾಯಕೋತ್ತಮರು. ಇಂದ್ರನ ಸಭಾಗಾಯಕರು. ಅಷ್ಟೋತ್ತರಶತ (108) ಸಂಖ್ಯಾಕರಾದ ದೇವಗಂಧರ್ವರು. ಸಿದ್ಧ, ಚಾರಣ, ವಿದ್ಯಾಧರ, ಕಿನ್ನರರು, ಕಿಂಪುರುಷರೆಂಬ ದೇವತಾಗಣ. |
| 32. | **ಮನುಷ್ಯಗಂಧರ್ವರು** | ದೇವಗಂಧರ್ವರಿಗಿಂತ **ದ್ವಿಷಡ್ಗುಣಾಧಮರು (12 ಗುಣಗಳಿಂದ ನ್ಯೂನರು)** |
| 33. | **ಚಕ್ರವರ್ತಿಗಳು** | ಕುವಲಯಾಧಿಪರೆಂದೆನಿಸುವ ಚಕ್ರವರ್ತಿಗಳು ಮನುಷ್ಯಗಂಧರ್ವರಿಗಿಂತ **ದಶಗುಣಾಧಮರು (ಈರೈದು ಗುಣಗಳು = 10).** |
| 34. | **ಮಾನುಷೋತ್ತಮರು** | ಚಕ್ರವರ್ತಿಗಳಿಗಿಂತ ಮಾನುಷೋತ್ತಮರು 100 ಗುಣಗಳಿಂದ ಅಧಮರು **(ದಶೋತ್ತರ ನವತಿ = 90 + 10 = 100)** |

**॥ ಶ್ರೀಮಧ್ವೇಶಾರ್ಪಣಮಸ್ತು ॥**

ಮುಂದಿನ ಪ್ರಕಟಣೆ

ಬೃಹತ್ತಾರತಮ್ಯಸಂಧಿ (ಸಂಧಿ–೨೧)

(ಮುದ್ರಣದಲ್ಲಿದೆ)

॥ ಶ್ರೀಃ ಹರಿಃ ಓಂ ॥

## ಗುಣತಾರತಮ್ಯಸಂಧಿ-(ಸಂಧಿ-೨೦)

### ತಪ್ಪೋಲೆ

| ಕ್ರಮ ಸಂಖ್ಯೆ | ಪುಟ ಸಂಖ್ಯೆ | ಸಾಲಿನ ಸಂಖ್ಯೆ | ತಪ್ಪಾಗಿ ಮುದ್ರಿತ | ಸರಿಯಾಗಿರಬೇಕಾದದು |
|---|---|---|---|---|
| 1 | 2 | 14 | ಸರ್ವಶ್ರೇಷ್ಠರಾದ | ಸರ್ವಶ್ರೇಷ್ಠರಾದ |
| 2 | 10 | 2 | ಪ್ರತಿಪಾದಯಿಷುಃ | ಪ್ರತಿಪಾದಯಿತಾಃ |
| 3 | 15 | 17 | ಆಧಿಶೇಷ | ಆದಿಶೇಷ |
| 4 | 16 | 15 | ಸತ್ಸಧನಾ | ಸತ್ಸಧನಾ |
| 5 | 20 | 3 | ಸ್ವೇಚ್ಛಾಪ್ರವರ್ತಕರು | ಸ್ವೇಚ್ಛಾಪ್ರವರ್ತಕನು |
| 6 | 25 | 9 | ನಿತ್ಯೇಚ್ಛವುಳ್ಳ | ನಿತೀಚ್ಛವುಳ್ಳ |
| 7 | 28 | 8 | ಭಕ್ತರಲ್ಲಿ | ಭಕ್ತರಲ್ಲಿ |
| 8 | 31 | 19 | ಪಟ್ಟದರಸಿಯಾದ | ಪಟ್ಟದರಸಿಯಾದ |
| 9 | 39 | 8 | ಅದಾದ್ಯನಂತಕಾಲಕ್ಕೂ | ಅನಾದ್ಯನಂತಕಾಲಕ್ಕೂ |
| 10 | 39 | 12 | ಅಸುರಾವೇ | ಅಸುರಾವೇಶ |
| 11 | 42 | 11 | ಅನಂತೌ | ಅನಂತಾ |
| 12 | 51 | 16 | ಸಜಾತ್ವವು | ಸಜಾತತ್ವವು |
| 13 | 60 | 12 | ಕಡಿಮೆಯೆವರು | ಕಡಿಮೆಯುವರು |
| 14 | 65 | 15 | ವೇನಕೆ ಮದಳು | ವೇನಸಕ ಮಗಳು |
| 15 | 65 | ಕೊನೆಯ ಸಾಲು | ಉತ್ತಮರೆಂದರ್ಥ | ಅವರರೆಂದರ್ಥ |
| 16 | 66 | 7 | ಸರಸ್ವತ್ರಿ | ಸರಸ್ವತೀ |

| | | | | |
|---|---|---|---|---|
| 17 | 66 | 8 | ನೇತೇವುಳ್ಳವದ | ನೇತ್ರವುಳ್ಳವರೆ |
| 18 | 69 | 4 | ಹಿಮವೇನ | ಹಿಮವಂತ |
| 19 | 74 | 2 | ವಾರುಣಿಗ | ವಾರುಣಿಗೆ |
| 20 | 75 | 12 | ರುರದ್ರರಕಿಂತಲೂ | ರುದ್ರರಕ್ಕಿಂತಲೂ |
| 21 | 75 | 15 | ಪಾರ್ವತೀದೇವಿಯಕಿಂತಲೂ | ಪಾರ್ವತೀದೇವಿಯರಿಗಿಂತಲೂ |
| 22 | 82 | 5 | ಮುಮುಷು ಭಾರ್ಗ | ಮುಮುಕ್ಷುಭರ್ಗ |
| 23 | 86 | 2 | ಪ್ರಸೂಪಗಳ | ಪ್ರಸೂತಿಗಳ |
| 24 | 86 | 6 | ಸ್ವಯಂಭುವಮನು | ಸ್ವಾಯಂಭುವಮನು |
| 25 | 94 | 3 | $\frac{7}{8}$ | $\frac{3}{8}$ |
| 26 | 95 | ಪದ್ಯ—11 5ನೆಯ ಸಾಲು | ಋತ | ಋತಿ |
| 27 | 95 | 8 | ನಿರಋತಿ | ನಿರಋತಿ |
| 28 | 96 | 5 | ಪ್ರತಿಪರ | ಪ್ರತಿವರ |
| 29 | 98 | 2 | ವಶಿಷ್ಠ | ವಸಿಷ್ಠ |
| 30 | 101 | 5 | ನಿರಋತ | ನಿರಋತಿ |
| 31 | 104 | 10 | ಋಬು | ಋಭು |
| 32 | 104 | 12 | ಎಂಬತ್ತೈದು | ಎಂಭತ್ತೈದು |
| 33 | 114 | 14 | ಋಬುದ್ಯಾ | ಋಭುದ್ಯಾ |
| 34 | 120 | 4 | ಚ್ಯವನಋಷಿ | ಚ್ಯವನಋಷಿ |
| 35 | 123 | 3 | ಚಷನೇತಿ | ಚ್ಯವನೇತಿ |
| 36 | 126 | 20 | ಪಾತಿವ್ರತಿಯ | ಪಾತಿವ್ರತ್ಯೆಯ |
| 37 | 130 | 16 | ಕರುತ್ | ಕಕುತ್ |
| 38 | 133 | 18 | ದುಷ್ಟ ಶಿಕ್ಷ | ದುಷ್ಟ ಶಿಕ್ಷಣ |

| | | | | |
|---|---|---|---|---|
| 39 | 134 | 2 | ವಿಷರೀತಜ್ಞಾನ | ವಿಪರೀತ ಜ್ಞಾನ |
| 40 | 140 | 10 | ಭಾಗವ ಶಿಖಾಮಣಿ | ಭಾಗವತ ಶಿಖಾಮಣಿ |
| 41 | 140 | 14 | ರುಗ್ಮಶಯ್ಯ | ರುಗ್ಣಶಯ್ಯ |
| 42 | 146 | 8 | ಎಂದು | ಖಂಬ |
| 43 | 149 | 15 | ಉಷಾದೇವಿಗೆ | ಉಷಾದೇವಿಗೆ |
| 44 | 107 | 11 | 89999900 | 9,99,99,000 |
| 45 | 158 | 8 | ವಿನಿಸುವರು | ಎನಿಸುವರು |
| 46 | 158 | 10 | ತುಂಬರ | ತುಂಬುರ |
| 47 | 163 | 15 | ಉಳದವರು | ಉಳಿದವರು |
| 48 | 163 | 19 | ಅಮರರು | ಅವರರು |
| 49 | 165 | 22 | ವರಗಿಂಶಲೂ | ವರಗಿಂತಲೂ |
| 50 | 180 | 6 | ಪೂರ್ವರಲ್ಲಿ | ಪೂರ್ವದಲ್ಲಿ |
| 51 | 180 | 8 | (ಶುಕ್ಲವರ್ಗ) | (ಶುಕ್ಲವರ್ಣ) |
| 52 | 180 | 13 | ಸತ್ತ್ವಪ್ರಾಚುರ್ಯವಾದ | ಸತ್ತ್ವಪ್ರಾಚುರ್ಯವಾದ |
| 53 | 180 | 15 | ಸತ್ತ್ವರಜವನ್ನು | ಸತ್ತ್ವರಜವನ್ನು |
| 54 | 180 | 16 | ಸತ್ತ್ವತಮವನ್ನು | ಸತ್ತ್ವತಮವನ್ನು |
| 55 | 178 | ಕೊನೆಯ ಸಾಲು | ಮಾನುಷಾಧಮರು | ಮನುಷ್ಯಾಧಮರು |
| 56 | 198 | 7 | ತಪೋಯೋಗ್ಯರಲ್ಲಿ | ತಮೋಯೋಗ್ಯರಲ್ಲಿ |
| 57 | 212 | 1 | ಮೋಕ್ಷಾಭವವನ್ನು | ಮೋಕ್ಷಾನುಭವವನ್ನು |
| 58 | 215 | 4 | ಮಧ್ವಶಾಸ್ತ್ರೋಕ್ತವಾದ | ಮಧ್ವಶಾಸ್ತ್ರೋಕ್ತವಾದ |
| 59 | 218 | 23 | ಬಿಂಬಾರೋಧ್ಧ | ಬಿಂಬಾಪರೋಕ್ಷ |
| 60 | 219 | 12 | ಮೇರಿ | ಮೇಲಿನ್ನು |
| 61 | 220 | 7 | ಸರ್ವಶ್ರೇಷ್ಠರಾದ | ಸರ್ವಶ್ರೇಷ್ಠನಾದ |

| | | | | |
|---|---|---|---|---|
| 62 | 224 | ಕೊನೆಯ ಸಾಲು | ಶೇಶಪತ್ನೀ | ಶೇಷಪತ್ನೀ |
| 63 | 226 | ಪದ್ಯ-25 | ನಮಿಪ | ನಮಿಪೆ |
| 64 | 240 | 10 | ಅಧಿಕದಾಗಿರುವ | ಅಧಿಕವಾಗಿರುವ |
| 65 | 241 | 5 | ತುಂಬುರುರು | ತುಂಬುರರು |
| 66 | 246 | 11 | ಉಳಿ | ಉಳ್ಳ |
| 67 | 251 | 12 | $\frac{1}{2}$ ಗುಣ | $\frac{1}{8}$ ಗುಣ |
| 68 | 251 | 18 | $\frac{1}{2}$ ಗುಣ | $\frac{1}{8}$ ಗುಣ |
| 69 | 252 | 18 | ಚ್ಯವದೋಚಥ್ಯ | ಚ್ಯವನೋಚಥ್ಯ |
| 70 | 262 | 18 | ಪ್ರವಿಷ್ಠ | ಪ್ರವಿಷ್ಠಳು |
| 71 | 266 | 17 | ಸಮುದರಾಜ | ಸಮುದ್ರರಾಜ |

|| ಶ್ರೀ ಲಕ್ಷ್ಮೀನಾರಸಿಂಹಾರ್ಪಣಮಸ್ತು ||